# ಚಿಂತನ ಬಯಲು

ತ್ರೈಮಾಸಿಕ ISSN 2278-2192

ಸಂಪುಟ : 12, ಸಂಚಿಕೆ : 4 ಎಪ್ರಿಲ್–ಜೂನ್ 2024

Volume : 12, Issue : 4 April-June 2024



# ಚಿಂತನ ಬಯಲು

ಸಂಪಾದಕಿ
**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ
**ಡಾ. ಅಜಕ್ಕಳ ಗಿರೀಶ ಭಟ್**
**ಡಾ. ಶ್ರೀಧರ್ ಹೆಚ್.ಜಿ.**
**ಡಾ. ವರದರಾಜ ಚಂದ್ರಗಿರಿ**
**ಡಾ. ಜಿ.ಬಿ. ಹರೀಶ**
**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

**CHINTHANA BAYALU**
Kannada Quarterly; A Peer Reviewed Journal ISSN: 2278-2192
Included in UGC - CARE List
Volume 12, Issue 4, April-June 2024

Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574 219
Karnataka
Mobile : 8217703698
Email : chinthanabayalu@gmail.com
website: www.chinthanabayalu.in

© : Reserved

Size : Dy 1/8

Paper Used : 70 GSM

Pages : 128

Price : Rs. 50

Cover Photo : **Girish Bhat**

Cover Design : **Kallur Nagesh**

Designed & Printed at :
**Aakrithi Prints**
Maximus Complex
Light House Hill Road
Mangaluru - 575 001
Tel. : 0824 2972002 / 7019225774

---

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ

**1.** **ಅಭಿನವಗುಪ್ತನ ಸಪ್ತ ರಸವಿಘ್ನಗಳು**
❖ ಡಾ.ಎಂ.ಎಸ್. ಮಾಗಣಗೇರಿ / 6

**2.** **ಹೊಯ್ಸಳ ಬಿಟ್ಟಿದೇವನ ಕಾಲದ ಶಾಸನೋಕ್ತ ಶೈವ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ**
❖ ಡಾ.ಮೋಹನ್ ಕೆ.ಎನ್.
❖ ಡಾ.ಸುರೇಶ ಬಿ.ಸಿ.
❖ ಡಾ.ರಾಜೇಶ್ ಕಣ್ ಎಂ.ಆರ್. / 13

3. **ಜಾನಪದ : ಬೆಟಗೇರಿಯವರ ದೃಷ್ಟಿ**
❖ ಡಾ.ಮೋಹನ ಕುಂಟಾರ್ / 21

**4.** **ತತ್ವಪದಗಳಲ್ಲಿ ಸಮ ಸಮಾಜದ ಪರಿಕಲ್ಪನೆ**
❖ ಡಾ.ಪ್ರತಿಮಾ ಕೆ.ಪಿ. / 27

**5.** **ವಿ.ಎಂ. ಇನಾಂದಾರರ ಸ್ತ್ರೀಪಾತ್ರ ಪ್ರಧಾನ ಕಾದಂಬರಿಗಳು ಒಂದು ವಿಶ್ಲೇಷಣೆ**
❖ ಡಾ.ಸೀತಾ ಹೆಚ್.ಎನ್. / 33

**6.** **ಕನ್ನಡ ಕಥಾ ಪರಂಪರೆ ಮತ್ತು ಕುವೆಂಪು**
❖ ಶಿವರಾಜು ಎನ್. / 39

**7.** **ಕುವೆಂಪು ಮಹಾಕಾವ್ಯದಲ್ಲಿ ಭಾರತೀಯ ದರ್ಶನ**
❖ ಡಾ.ವಿಜಯಕುಮಾರ ಹೆಚ್ ವಿಶ್ವಮಾನವ
❖ ಡಾ.ಮಹಾಂತ ಗೌಡ
❖ ಡಾ.ಆಶಾರಾಣಿ ಎಂ.ಪಿ.
❖ ಡಾ.ಧನಂಜಯ ಪಿ.ಕೆ. / 45

**8.** **ಆಧುನಿಕ ಕನ್ನಡ ಸಾಹಿತ್ಯ ಮತ್ತು ಭಾಷಾಂತರ ಮೀಮಾಂಸೆಯ ವಿನ್ಯಾಸಗಳು**
❖ ಡಾ.ವಿಜಯೇಂದ್ರ ಕುಮಾರ್ ಜಿ.ಎಲ್. / 49

**9.** **ಪರತತ್ವ ಲಿಂಗ ಪ್ರಕಾಶ ಸ್ಥಲ – ನವಲಿಂಗ ಪೂಜಾ ವಿಧಾನ ಸ್ಥಲ ಮಂತ್ರಗೋಪ್ಯಗಳ ಅವಲೋಕನ**
❖ ಡಾ.ಆರ್.ವಿ. ಪಾಟೀಲ / 56

**10.** **ವಿಷ್ಣುಪುರಾಣ ಮತ್ತು ಮತ್ಸ್ಯ ಪುರಾಣಗಳಲ್ಲಿ ಕಂಡು ಬಂದಿರುವಂತೆ ಶಿಕ್ಷಣ ವ್ಯವಸ್ಥೆ**
❖ ರಹಿಮಾನ್ ಸಾಬ್ ಎಲ್ / 63

**11.** **ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಸ್ತ್ರೀ ಸಂವೇದನೆ**

❖ ಡಾ.ಎಸ್. ಶಶಿರೇಖಾ / 68

**12.** **ಸ್ವಾತಂತ್ರ್ಯ ಹೋರಾಟದಲ್ಲಿ ಖಾದಿಯೆಂಬ ಸ್ವಾವಲಂಬನೆಯ ಸಂಸ್ಕೃತಿ**

❖ ಡಾ.ಸುಂದ್ರೇಶ ಎನ್. / 73

**13.** **ಬಳ್ಳಾರಿ ಸೀಮೆಯ ನವೋದಯ ಕವಿ ಜೋಳದರಾಶಿ ದೊಡ್ಡನಗೌಡರು**

❖ ಡಾ.ಜಾಜಿ ದೇವೇಂದ್ರಪ್ಪ / 78

**14.** **'ಬೆಳಗು ಜಾವ' ಕವಿತೆಯ ಒಳನೋಟ**

❖ ಡಾ.ಸಿ.ಎಸ್.ಕೆಂಡಗಣ್ಣೇಗೌಡ / 87

**15.** **ಹಳಗನ್ನಡ ವ್ಯಾಕರಣಾಂಶಗಳು : ಒಂದು ಅನುಸಂಧಾನ**

❖ ಡಾ.ಕೆ.ಚಂದ್ರಕಾಂತ್ / 90

**16.** **ದಿಟ್ಟ ನಿಲುವಿನ ವೈಚಾರಿಕ ಚಿಂತಕ : ಕಿನ್ನರಿ ಬೊಮ್ಮಯ್ಯ**

❖ ಡಾ.ಗೋವಿಂದರಾಯ ಎಂ. / 96

**17.** **ವಸಾಹತುಶಾಹಿ ಕಾಲದ ಕರ್ನಾಟಕದಲ್ಲಿ ಕೃಷಿಸಂಸ್ಕೃತಿ ಎದುರಿಸಿದ ಸವಾಲುಗಳು**

❖ ಡಾ.ರಮೇಶ ಟಿ. / 101

**18.** **ಬೇಡ ಬುಡಕಟ್ಟು ಮಹಿಳೆಯರ ಆಹಾರ ಕ್ರಮಗಳು**

❖ ಡಾ.ವಿಜಯಕುಮಾರ ಹೆಚ್ ವಿಶ್ವಮಾನವ

❖ ಡಾ.ಮಹಾಂತ ಗೌಡ

❖ ಡಾ.ಆಶಾರಾಣಿ ಎಂ. ಪಿ.

❖ ಡಾ.ಧನಂಜಯ ಪಿ.ಕೆ. / 108

**19.** **ಕುಮಾರವ್ಯಾಸ ಭಾರತದಲ್ಲಿ ಸ್ತ್ರೀತ್ವದ ಪ್ರತಿನಿಧಿಯಾಗಿ ಕುಂತಿ**

❖ ಡಾ.ಅರುಣಕುಮಾರಿ ಬಿ.ಎನ್. / 112

**20.** **ಜಾನಪದ ಸಾಹಿತ್ಯದಲ್ಲಿ ರಾಣಿ ಚೆನ್ನಮ್ಮಾಜಿ ಶೌರ್ಯ ಮತ್ತು ಸ್ವಾತಂತ್ರ್ಯ ಹೋರಾಟ**

❖ ಡಾ.ಫಕೀರನಾಯ್ಕ ಡಿ. ಗಡ್ಡಿಗೌಡರ / 115

**21.** **ಸಂಸ್ಕೃತಿಯ ಬಿಂಬವಾಗಿ ಗಾದೆ**

❖ ಡಾ.ಜಯಪ್ಪ ಎನ್. / 120

**22.** **'ಕಥಾನಂತರ' ಹೊಸ ಕಾಲದ ಆಶಯಗಳನ್ನು ಹೊತ್ತ ಕಥಾಗುಚ್ಛ**

❖ ಹನಮಂತಪ್ಪ ಬನ್ನಿ / 124

# ಸಂಪಾದಕೀಯ

ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಚಿಂತನೆ– ಇಂತಹ ವಿಷಯಗಳ ಕುರಿತಾದ ಉತ್ತಮ ಸಂಶೋಧನ ಲೇಖನಗಳನ್ನು ಪ್ರಕಟಿಸಬೇಕು ಎನ್ನುವುದು 'ಚಿಂತನ ಬಯಲು' ಪತ್ರಿಕೆಯ ಇರಾದೆ. ಆದರೂ ಎಲ್ಲ ಲೇಖಕರೂ ಆರಂಭದಲ್ಲಿಯೇ ಅತ್ಯುತ್ತಮವಾದುದನ್ನೇ ಬರೆಯಲು ಸಾಧ್ಯವಾಗುವುದಿಲ್ಲ ಎನ್ನುವ ವಾಸ್ತವದ ಅರಿವು ನಮಗಿದೆ. ಅಲ್ಲದೆ, ವಿಮರ್ಶೆ – ಸಂಶೋಧನೆಗೆಂದೇ ಮೀಸಲಾದ ನಿಯತಕಾಲಿಕೆಗಳು ಕನ್ನಡದಲ್ಲಿ ಅತಿ ಕಡಿಮೆ ಇರುವಾಗ ಹೊಸ ಸಂಶೋಧಕರ ಬರಹಗಳನ್ನು ಪ್ರಕಟಿಸುವ ಮೂಲಕ ಅವರನ್ನು ಪ್ರೋತ್ಸಾಹಿಸುವುದು ಕೂಡ ಅಗತ್ಯ. ಆದ್ದರಿಂದ ತಕ್ಕಮಟ್ಟಿಗೆ ಚೆನ್ನಾಗಿರುವ ಲೇಖನಗಳನ್ನು ಪರಿಶೀಲಕರ ಸಲಹೆಯಂತೆ ಪರಿಷ್ಕರಿಸಲು ತಿಳಿಸಿ ಬಳಿಕ ಪ್ರಕಟಿಸುವುದಿದೆ. ನಮ್ಮ ಗಮನದಲ್ಲಿರುವ ಇನ್ನೊಂದು ಮುಖ್ಯ ಸಂಗತಿಯೇನೆಂದರೆ ಕನ್ನಡ/ ಕರ್ನಾಟಕದ ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ವೈವಿಧ್ಯಮಯ ಲೇಖನಗಳು ಪ್ರಕಟವಾಗಬೇಕು ಎನ್ನುವುದು. ಈಚಿನ ವರ್ಷಗಳಲ್ಲಿ ಹಳೆಗನ್ನಡ, ವ್ಯಾಕರಣ, ಕಾವ್ಯಮೀಮಾಂಸೆ, ಶಾಸನಗಳು ಮುಂತಾದ ವಿಷಯಗಳನ್ನು ಅಧ್ಯಯನಕ್ಕೆ ಅಥವಾ ಸಂಶೋಧನೆಗೆ ಆಯ್ದುಕೊಳ್ಳುವವರ ಸಂಖ್ಯೆ ತೀರ ಕಡಿಮೆಯಾಗುತ್ತಿದೆ. ಈ ಸಂಚಿಕೆಯಲ್ಲಿ ಇಂತಹ ವಿವಿಧ ವಿಷಯಗಳಿಗೆ ಸಂಬಂಧಿಸಿದ ವೈವಿಧ್ಯಮಯ ಲೇಖನಗಳಿವೆ. ಓದುಗರ ಪ್ರತಿಕ್ರಿಯೆಗೆ ಸ್ವಾಗತ.

**–ಸಂ.**

# ಅಭಿನವಗುಪ್ತನ ಸಪ್ತ ರಸವಿಘ್ನಗಳು

**ಡಾ. ಎಂ.ಎಸ್. ಮಾಗಣಗೇರಿ**
ಸಹಾಯಕ ಪ್ರಾಧ್ಯಾಪಕರು
ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ, ವಿಜಯಪುರ ಜಿಲ್ಲೆ

ಅಭಿನವಗುಪ್ತನ ರಸವಿಘ್ನಗಳ ಕಲ್ಪನೆಯೇ ವಿಶಿಷ್ಟವಾದುದು. ರಸಾನುಭವದ ಸಹಜ ಸ್ವರೂಪವನ್ನು ಅತ್ಯಂತ ಸಮರ್ಥವಾದ ರೀತಿಯಲ್ಲಿ ಇದು ಅನಾವರಣಗೊಳಿಸಿದೆ. ಸಪ್ತ ವಿಘ್ನಗಳ ಆವರಣವನ್ನು ತೆಗೆದು ಹಾಕಿದರೆ 'ರಸ' ಸಹಜವಾಗಿಯೇ ಅನುಭವ ವೇದ್ಯವಾಗುತ್ತದೆ. ಅದು ಹೊರಗಡೆಯಿಂದ ಬರುವಂತಹುದಲ್ಲ, ಒಳಗಿನಿಂದಲೇ ಮೂಡುವಂತಹುದೆಂಬುದನ್ನು ಈ ರಸವಿಘ್ನಗಳ ವಿವರಣೆಯ ಕೊನೆಯಲ್ಲಿ ಮನಗಾಣುತ್ತೇವೆ. ಅಭಿನವಗುಪ್ತ ಹೇಳುವ ಏಳು ರಸವಿಘ್ನಗಳೆಂದರೆ ಸಂಭಾವನಾ ವಿರಹ, ದೇಶಕಾಲ ವಿಶೇಷಾವೇಶ, ನಿಜಸುಖಾದಿವಿವಶೀಭಾವ, ಪ್ರತೀತ್ಯುಪಾಯವೈಕಲ್ಯ, ಸ್ಫುಸ್ಪುಟಿತ್ವಾಭಾವ, ಅಪ್ರಧಾನತಾ ಮತ್ತು ಸಂಶಯಯೋಗ.

**ಸಂಭಾವನಾ ವಿರಹ**

ನಾಟಕ ಅಥವಾ ಕಾವ್ಯದ ಘಟನೆಗಳಲ್ಲಿ ಪ್ರೇಕ್ಷಕ ಅಥವಾ ಓದುಗ ಮಗ್ನನಾಗುವುದು ಸಾಧ್ಯವಿಲ್ಲದೆ ಹೋದಾಗ, ಅವುಗಳ ಅನುಭವದಿಂದ ಹೊರಗುಳಿಯುತ್ತಾನೆ. ಆತನಿಗೆ ಅದು ಸಂವೇದ್ಯವಾಗುವುದಿಲ್ಲ. ಆಗ ಅವುಗಳಲ್ಲಿ ವಿಶ್ರಾಂತವಾಗುವುದು ಆತನಿಗೆ ಅಸಾಧ್ಯವಾಗುತ್ತದೆ. ಇದೇ ಮೊದಲನೆಯ ರಸವಿಘ್ನ 'ಸಂಭಾವನಾ ವಿರಹ'. ಕೃತಿಯಲ್ಲಿ ಸಂಭವನೀಯವಾದ ಘಟನೆಗಳಿಂದ ಆತ ದೂರನಾಗುವುದರಿಂದ 'ಸಂಭಾವನಾ ವಿರಹ' ಎಂದು ಈ ವಿಘ್ನವನ್ನು ಕರೆದಿದ್ದಾನೆ. ಸಹೃದಯನಿಗೆ ಸಂಭವನೀಯವೆಂದು ತೋರುವ ರೀತಿಯಲ್ಲಿ ಘಟನೆಗಳು ಚಿತ್ರಿತವಾಗಿರಬೇಕೆಂಬ ಅಂಶವನ್ನು ಇಲ್ಲಿ ಗಮನಿಸಬೇಕು. ಪ್ರೇಕ್ಷಕ ಅಥವಾ ಓದುಗನ ದೌರ್ಬಲ್ಯವೊಂದೇ ಇದಕ್ಕೆ ಕಾರಣವಲ್ಲ, ಕವಿಯ ರಚನಾ ದೋಷವೂ ಇದಕ್ಕೆ ಕಾರಣವಾಗಿರಬಹುದು. ಸನ್ನಿವೇಶ, ಭಾವನೆ, ಅನುಭವಗಳನ್ನು ಚಿತ್ರಿಸುವಾಗ ಸಾಮಾನ್ಯ ಓದುಗನ ಕಲ್ಪನೆಗೆ ಎಟುಕದ ಅಥವಾ ಅನುಭವದ ಪರಿಧಿಗೆ ಒಳಗಾಗದ ರೀತಿಯನ್ನು ಅನುಸರಿಸಿದರೆ ಈ ದೋಷ ಸಂಭವಿಸುತ್ತದೆ. 'ಲೋಕ ಸಾಮಾನ್ಯ'ವಾದುದನ್ನು ಸಂಭವನೀಯವಾದ ರೀತಿಯಲ್ಲಿ ಚಿತ್ರಿಸಿದರೆ ಸಾಮಾನ್ಯ ಪ್ರೇಕ್ಷಕರೂ ಇದನ್ನು ಗ್ರಹಿಸುತ್ತಾರೆ. ಆಗ 'ಸಂಭವನೀಯ ವಿರಹ'ವೆಂಬ ರಸವಿಘ್ನ ಸಂಭವಿಸುವುದಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಕೃತಿಯಲ್ಲಿ ನಿರೂಪಿತವಾದ ಅಂಶಗಳು ಅಸಂಭವವೆಂಬ ಭಾವನೆಯನ್ನು ಉಂಟು ಮಾಡಿದರೆ ಅದರಿಂದ ಸಹೃದಯ ಕೃತಿಯ ಅನುಭವದಲ್ಲಿ ತನ್ನನ್ನು ಏಕೀರ್ಭವಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಈ ದೋಷಕ್ಕೆ ಪ್ರೇಕ್ಷಕ ಅಥವಾ ಓದುಗ, ಕವಿ ಅಥವಾ ನಾಟಕಕಾರ ಈ ಯಾರೇ ಕಾರಣವಾಗಿದ್ದರೂ, ದೋಷ ಎಲ್ಲೇ ಇದ್ದರೂ ಅದು 'ಸಂಭಾವನಾ ವಿರಹ' ಎಂಬ ರಸವಿಘ್ನ ಅಗತ್ಯ ಎನ್ನುತ್ತಾನೆ ಅಭಿನವಗುಪ್ತ.

**ದೇಶಕಾಲ ವಿಶೇಷಾವೇಶ**

ನಾಟಕದ ಘಟನೆಗಳಿಗೂ ಮತ್ತು ಸಾಮಾಜಿಕನಿಗೂ ಮಧ್ಯೆ ಅಗತ್ಯವಾದ ಒಂದು ಅಂತರ ಏರ್ಪಡದೆ ಇರುವಾಗ ಉಂಟಾಗುವ ವಿಘ್ನವೇ 'ದೇಶಕಾಲ ವಿಶೇಷಾವೇಶ'. ರಂಗದ ಮೇಲೆ ಬರುವ ಸನ್ನಿವೇಶಗಳೊಡನೆ ಸಾಮಾಜಿಕ ಅನನ್ಯ ಸಂಬಂಧವನ್ನು ಪಡೆದು ಅಲ್ಲಿನ ಸುಖದುಃಖಗಳನ್ನು ತಾನೇ ಅನುಭವಿಸುವುದು ಇದಕ್ಕೆ ಕಾರಣವಾಗುತ್ತದೆ. ಅಲ್ಲಿ ಬರುವ ವಿಭಾವಾದಿಗಳನ್ನು ತನಗೇ ಅನ್ವಯಿಸಿಕೊಂಡು ಅದರಿಂದ ಆತ ಲೌಕಿಕ ಪ್ರತಿಕ್ರಿಯೆಯನ್ನು ಪಡೆಯುತ್ತಾ ಹೋದರೆ ರಸಾನುಭವದಿಂದ ಆತ ವಂಚಿತನಾಗಿ ಲೋಕಾನುಭವದಲ್ಲಿಯೇ ನಿಲ್ಲುತ್ತಾನೆ. ಆ ಅನುಭವ ಸಂತೋಷದಾಯಕವಾದರೆ ಉಳಿಸಿಕೊಳ್ಳುವ, ದುಃಖದಾಯಕವಾದರೆ ಪರಿಹರಿಸಕೊಳ್ಳುವ, ಅದಕ್ಕೆ ಸುಮುಖನಾಗುವ ಅಥವಾ ವಿಮುಖನಾಗುವ ಲೋಕ ಧರ್ಮ ಆತನಲ್ಲಿ ಜಾಗ್ರತವಾಗುತ್ತದೆ. ಇದು ಕಲಾನುಭವಕ್ಕೆ ಮಾರಕವಾಗುತ್ತದೆ. ಅಲ್ಲಿರುವ ಪಾತ್ರಗಳು ತಮ್ಮ ವೈಯಕ್ತಿಕತೆಯನ್ನು ಕಳೆದುಕೊಂಡು 'ಸಾಧಾರಣೀಕರಣ'ಗೊಳ್ಳದೆ ದೇಶ ಕಾಲಗಳ ಪರಿಮಿತಿಯ ವಿಶೇಷವಾದ ಆವೇಶಕ್ಕೆ ಒಳಗಾಗುತ್ತವೆ. ಇದರಿಂದ ಸಾಮಾಜಿಕ ಅಲ್ಲಿನ ಸುಖದುಃಖಗಳನ್ನು ತಾನೇ ವೈಯಕ್ತಿಕವಾಗಿ ಅನ್ವಯಿಸಿಕೊಳ್ಳಬಹುದು; ಅಥವಾ ಇತರರು, ಅಂದರೆ, ಪಾತ್ರಗಳು ಆ ಸುಖದುಃಖಗಳನ್ನು ನಿಜವಾಗಿಯೂ ಅನುಭವಿಸುತ್ತಾರೆಂಬ ಭಾವನೆಯಿಂದ ಪ್ರತಿಕ್ರಿಯೆಯನ್ನು ತೊರಬಹುದು. ಈ ಎರಡೂ ಸಂದರ್ಭಗಳಲ್ಲಿಯೂ ಉಂಟಾಗುವ ಅನುಭವ ರಸಾನುಭವವಲ್ಲ; ಭಾವಾನುಭವ. ಅವರ ನೋವು ನಲಿವು ಮೊದಲಾದ ಮಾನಸಿಕ ಸ್ಥಿತಿಗಳನ್ನೆಲ್ಲಾ ವಿಭಾವದ ಮಟ್ಟದಲ್ಲಿ ಗ್ರಹಿಸದೆ ನಿಜವೆಂದು ಭಾವಿಸಿ ಪ್ರತಿಕ್ರಿಯೆ ತೋರಿಸುತ್ತಾನೆ. ಇದು ರಸಾನುಭವಕ್ಕಿರುವ ಮುಖ್ಯವಾದ ವಿಘ್ನ.

ಇದನ್ನು ಪರಿಹರಿಸುವುದಕ್ಕಾಗಿ ಕಲೆ ಕೆಲವು ಉಪಾಯಗಳನ್ನು ಕೈಕೊಂಡಿದೆ. ನಾಟಕದಲ್ಲಿ ಪಾತ್ರಧಾರಿಗಳು ತಮ್ಮ ವೈಯಕ್ತಿಕತೆಯನ್ನು ಕಳೆದುಕೊಳ್ಳುವುದಕ್ಕಾಗಿ ಮೂಲ ಪಾತ್ರಗಳ ಆಕಾರವನ್ನು ಹೋಲುವ ಉಡುಗೆತೊಡುಗೆಗಳನ್ನೇ ಧರಿಸುತ್ತಾರೆ. ನಾಟಕದ ಪೂರ್ವರಂಗ ಪ್ರಸ್ತಾವನೆಗಳು ಇದನ್ನು ಇನ್ನೂ ಹೆಚ್ಚು ಖಚಿತಗೊಳಿಸುತ್ತವೆ. ಅಲ್ಲದೆ ರಸಾನುಭವವಾಗಬೇಕಾದರೆ ಮೂಲ ಪಾತ್ರಗಳ ವೈಯಕ್ತಿಕತೆ ಅಳಿದು ಸಾಧಾರಣೀಕರಣಗೊಳ್ಳಬೇಕು. ಅಂದರೆ ರಾಮನೂ ಅಲ್ಲಿ ಕೇವಲ ವ್ಯಕ್ತಿಯಾಗಿ ಉಳಿಯದೆ ಒಂದು ಅನುಭವದ ಸಾಂಕೇತಿಕ ಪ್ರತಿನಿಧಿಯಾಗಿ ಸಾರ್ವತ್ರಿಕಗೊಳ್ಳುತ್ತಾನೆ. ಅಲ್ಲಿ ಬರುವ ವಿಭಾವಾನುಭಾವಾದಿಗಳು ಇದನ್ನು ಸಾಧಿಸುವಂತಿರಬೇಕು, ಅದಕ್ಕನುಗುಣವಾಗಿ ರಂಗಸಜ್ಜಿಕೆ ಮೊದಲಾದವುಗಳು ಏರ್ಪಡಬೇಕು. ಇದನ್ನು ಅಭಿನವಗುಪ್ತ 'ನಾಟ್ಯಧರ್ಮಿ' ಎಂದು ಕರೆದಿದ್ದಾನೆ. ರಂಗಮಂಟಪದ ರಚನೆ, ರಂಗಪೀಠ ನಿರ್ಮಾಣ ಈ ಮೊದಲಾದುವಲ್ಲದೆ ನಾಟಕದ ಭಾಷೆ, ಅಭಿನಯಾದಿಗಳೂ ಕೇವಲ ಲೋಕ–ಧರ್ಮಿಯಾಗಿರದೆ ಅವುಗಳನ್ನು ಮೀರುವಂತಿರಬೇಕು. ಇದು ಪಾತ್ರಧಾರಿ ತನ್ನ ವೈಯಕ್ತಿಕತೆಯನ್ನು ಮತ್ತು ತಾನು ಅನುಭವಿಸುತ್ತಿರುವ ಪಾತ್ರದ ಪರಿಮಿತಿಯನ್ನು ಮೀರಿ ಬೆಳೆಯಲು ಸಹಾಯಕವಾಗುತ್ತದೆ. ಸಂಗೀತ, ನರ್ತನ ಮೊದಲಾದವುಗಳನ್ನು ನಾಟಕದಲ್ಲಿ ತರುವುದು ಈ ಕಾರಣಕ್ಕಾಗಿಯೇ. ಇದು ಲೋಕ ಘಟನೆಗಳ ಯಥಾವತ್ತಾದ ರೂಪ ಅಲ್ಲವೆನ್ನುವುದನ್ನು ಕಂಡುಕೊಳ್ಳಲು ಇವು ನೆರವಾಗುತ್ತವೆ. ಇಂತಹ ನರ್ತನಗಳು ಲೋಕ ಘಟನೆಗಳಲ್ಲಿ ನಡೆಯುವುದಿಲ್ಲ.

ಲೋಕದಲ್ಲಿ ಕೋಪ ದುಃಖ ಮೊದಲಾದ ಭಾವಗಳು ಉಲ್ಬಣಗೊಂಡಾಗ ಯಾರೂ ಹಾಡುವುದಿಲ್ಲ. ಆದರೆ ನಾಟಕದಲ್ಲಿ ಹಾಡುತ್ತಾರೆ. ಏಕೆಂದರೆ ಅದು ಲೋಕಜ್ಞಾನಕ್ಕೆ ಒಡ್ಡಿದ ಕಲಾರೂಪವೇ ಹೊರತು, ಲೋಕಭಾವಗಳ ಯಥಾವತ್ತಾದ ಆಚರಣೆಯಲ್ಲ. ಈ ಕಲಾತ್ಮಕವಾದ ಪರಿಕರಗಳಿಂದ ಕಲಾಕೃತಿಯಲ್ಲಿ ಲೋಕಭಾವಗಳು ವಿಭಾವಗಳಾಗಿ ಪರಿವರ್ತನೆಗೊಳ್ಳುತ್ತವೆ. ವಾಸ್ತವವಾಗಿ ಕಲಾಕೃತಿಗಳಲ್ಲಿ (ಕಾವ್ಯನಾಟಕಾದಿಗಳಲ್ಲಿ) ಬರಬೇಕಾದುದು ಈ ವಿಭಾವವೇ ಹೊರತು ಲೋಕಭಾವವಲ್ಲ. ಲೋಕ ಭಾವ ಮೂಲ ಸಾಮಾಗ್ರಿ; ಅದು ವಿಭಾವವಾಗಿ ಕಲಾಲೋಕದಲ್ಲಿ ಬರಬೇಕಾಗುತ್ತದೆ. ಕೇವಲ ಲೋಕಭಾವದ ಉದ್ರಿಕ್ತ ಸ್ಥಿತಿ ಕಾವ್ಯವಾಗುವುದಿಲ್ಲ. ‘Poetry is not turning loose of emotion, it is escape from emotion’ ಎಂಬ ಟಿ.ಎಸ್. ಎಲಿಯಟ್‌ನ ಮಾತಿನಲ್ಲಿರುವುದು ಇದೇ ತತ್ತ್ವ. ಯಾವುದೇ ಕಲಾಕೃತಿಯನ್ನು ಕುರಿತ ಈ ಮೂಲಭೂತ ಅಂಶವನ್ನು ನಮ್ಮ ಆದಿ ಅಲಂಕಾರಿಕ ಭರತನೇ ಕಂಡುಕೊಂಡು ಅದನ್ನೇ ಕಲಾಸೃಷ್ಟಿಯ ಮತ್ತು ಕಲಾನುಭವದ ತಳಹದಿಯನ್ನಾಗಿ ಮಾಡಿದ್ದಾನೆ. ಅದನ್ನು ಅಭಿನವಗುಪ್ತ ಇಲ್ಲಿ ಸ್ಪಷ್ಟವಾಗಿ ವಿವೇಚಿಸುತ್ತಿದ್ದಾನೆ. ‘ದೇಶ ಕಾಲ ವಿಶೇಷಾವೇಶ’ ಎಂಬ ಈ ವಿಘ್ನವನ್ನು ಪರಿಹರಿಸಿಕೊಳ್ಳುವ ಮೂಲ ಸೂತ್ರವೇ ಅದು; ಭಾವಗಳು ವೈಯಕ್ತಿಕತೆಯನ್ನು ಕಳೆದುಕೊಂಡು ಸಾಧರಣೀಕರಣಗೊಳ್ಳಬೇಕೆಂಬುದು. ಇದನ್ನೆ ‘Psychical Distance’ ಎಂಬ ಹೊಸ ಪರಿಭಾಷೆಯಲ್ಲಿ ಹೇಳಲು ಬುಲ್ಲೋ ಪ್ರಯತ್ನಿಸಿದ್ದಾನೆ.

**ನಿಜಸುಖಾದಿ ವಿವಶೀಭಾವ**

ಕಲೆಯಲ್ಲಿ ಬರುವ ಭಾವ, ದೇಶ ಕಾಲಗಳ ಪರಿಮಿತಿಯನ್ನು ಮೀರಬೇಕೆಂಬುದನ್ನು ಹಿಂದಿನ ವಿಘ್ನದ ವಿವೇಚನೆಯಲ್ಲಿ ಎತ್ತಿ ಹೇಳಿದರೆ, ಇಲ್ಲಿ ಸಾಮಾಜಿಕ ತನ್ನ ವೈಯಕ್ತಿಕತೆಯಿಂದ ಪಾರಾಗಬೇಕೆಂಬುದನ್ನು ಮುಖ್ಯವಾಗಿ ಹೇಳುತ್ತಾನೆ. ಹಿಂದಿನವರ ಅಭಿಪ್ರಾಯವೇ ಇಲ್ಲಿ ಮುಂದುವರಿದಿದೆ. ನಾಟಕದ ವಿಭಾವಾನುಭಾವಾದಿಗಳಿಂದ ಸಾಮಾಜಿಕ ಪಡೆಯುವುದು ತನ್ನ ಸ್ವಂತ ಸುಖದುಃಖಗಳ ಅನುಭವಗಳನ್ನಲ್ಲ. ಅವುಗಳಿಂದ ದೂರ ನಿಂತು ನೋಡುವ ಸಾಮರ್ಥ್ಯವನ್ನು ಆತ ಪಡೆಯಬೇಕು. ಇಲ್ಲವಾದರೆ ತನ್ನ ವೈಯಕ್ತಿಕ ಪ್ರಪಂಚದಲ್ಲೇ ಆತ ಮುಳುಗಿ ಹೋಗಿ, ನಾಟಕದ ಘಟನೆಗಳಿಂದ ಲೌಕಿಕ ಪ್ರತಿಕ್ರಿಯೆಯನ್ನೇ ಪಡೆಯುತ್ತಾನೆ. ಅದರಿಂದ ಬರುವ ಅನುಭವ ರಸಾನುಭವವಲ್ಲ. ಶೃಂಗಾರ ರಸಕ್ಕೆ ಬದಲಾಗಿ ರತಿಭಾವವೇ ಬರುತ್ತದೆ; ಕರುಣ ರಸಕ್ಕೆ ಬದಲಾಗಿ ಶೋಕಕ್ಕೇ ಗುರಿಯಾಗುತ್ತಾನೆ. ಇದನ್ನೇ ‘ನಿಜ ಸುಖಾದಿ ವಿವಶೀಭಾವ’ ಎಂದು ಕರೆದಿದ್ದಾನೆ ಅಭಿನವಗುಪ್ತ ಈ ವಿಘ್ನವನ್ನು ನಿವಾರಿಸಿಕೊಳ್ಳಬೇಕು. ಇದು ಸಂಭವಿಸದೇ ಇರುವಂತಹ ರೀತಿಯಲ್ಲಿ ಕಲಾಕೃತಿ ರಚಿತವಾಗಿರಬೇಕು. ನಾಟಕದಲ್ಲಿ ಬರುವ ವರ್ಣವಿನ್ಯಾಸ, ವಾದ್ಯಗಳು ಬೇರೆ ಬೇರೆ ರೀತಿಯ ಸಂಗೀತದ ಹಿನ್ನೆಲೆ ಈ ಮೊದಲಾದವುಗಳು ಸಾಮಾಜಿಕನಲ್ಲಿ ವೈಯಕ್ತಿಕತೆಯ ಭಾವವನ್ನು ಹೋಗಲಾಡಿಸಲು ಸಹಾಯಕವಾಗುತ್ತವೆ. ವರ್ಣನೆ, ನಿರೂಪಣೆಗಳಿಂದ ಕಾವ್ಯ ಇದನ್ನು ಸಾಧಿಸಿಕೊಳ್ಳುತ್ತದೆ. ಕಲಾಕೃತಿ ಸಮರ್ಥವಾದಷ್ಟೂ, ಈ ವಿಘ್ನವನ್ನು ಪರಿಹರಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತದೆ. ಸೌಂದರ್ಯ ಪ್ರಜ್ಞೆಯೇ ಇಲ್ಲದಿರುವ ‘ಅಹೃದಯ’ನನ್ನು ಕೂಡ ಇಂತಹ ಕಲಾಕೃತಿಗಳು ‘ಸಹೃದಯ’ನನ್ನಾಗಿ ಮಾಡುತ್ತವೆನ್ನುತ್ತಾನೆ ಅಭಿನವಗುಪ್ತ. ತನ್ನ ಸ್ವಂತ ಸುಖದುಃಖಗಳಿಗೆ ಅತೀತವಾಗಿ

ನಿಲ್ಲುವ ಈ ಶಕ್ತಿಯನ್ನು ಕವಿ ಸಾಧಾರಣೀಕರಣಗೊಳಿಸುವುದರ ಮೂಲಕ ಸಹೃದಯನಿಗೆ ತಂದುಕೊಟ್ಟು ಆತನಿಗೆ ಅಂಟಿದ ಈ ವಿಘ್ನವನ್ನು ಪರಿಹರಿಸುತ್ತಾನೆ.

**ಪ್ರತೀತ್ಯುಪಾಯ ವೈಕಲ್ಯ ಹಾಗೂ ಸ್ಫುಟಿತ್ವಾಭಾವ**

ಈ ಎರಡು ವಿಘ್ನಗಳ ಸ್ವರೂಪದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸಾಮ್ಯವಿರುವುದರಿಂದ ಇವೆರಡನ್ನು ಒಟ್ಟಿಗೇ ತೆಗೆದುಕೊಂಡು ಚರ್ಚಿಸುತ್ತಾನೆ ಅಭಿನವಗುಪ್ತ. ರಸಪ್ರತೀತಿಗೆ ಕಾರಣವಾದ ಮಾಧ್ಯಮದಲ್ಲಿರುವ ದೋಷಗಳನ್ನೂ ಅರ್ಥಸ್ಪಷ್ಟತೆಯ ಅಭಾವವನ್ನು ಕ್ರಮವಾಗಿ ಇವು ಸೂಚಿಸುತ್ತವೆ. ರಸಪ್ರತೀತಿಗೆ ಕಾರಣವಾಗುವ ಮಾಧ್ಯಮ ದುರ್ಬಲವಾಗಿದ್ದಾಗ ರಸಾನುಭವ ಸಾಧ್ಯವಾಗುವುದಿಲ್ಲ. ಕೆಲವೇ ವೇಳೆ ಭಾಷೆ ಸಮರ್ಥವಾಗಿದ್ದರೂ ಭಾವವನ್ನು ಗ್ರಹಿಸುವುದಕ್ಕೆ ಸಾಕಾಷ್ಟು ಕಷ್ಟ. ಕಾರಣ ಸಾಮಾಗ್ರಿಯನ್ನು ಅದು ಒದಗಿಸದೇ ಹೋಗಬಹುದು. ವಸ್ತುವನ್ನು ನೇರವಾಗಿ ನೋಡಿ ಗ್ರಹಿಸುವುದರಿಂದ ಮಾತ್ರ ಅದರ ಜ್ಞಾನ ಸ್ಪಷ್ಟವಾಗುತ್ತದೆ. ನೇರವಾಗಿ ಕಂಡು ಪಡೆದುದರ ಜ್ಞಾನವನ್ನು ಯಾವ ಶಾಸ್ತ್ರ, ಆಗಮ, ಊಹೆಗಳೂ ಬದಲಾಯಿಸಲಾರವೆಂಬುದು 'ಸ್ವ ಸಂವೇದನೆ'ಯ ಸಾಮಾನ್ಯ ನಿಯಮವೆಂಬುದನ್ನು ಅಭಿನವಗುಪ್ತ ಸ್ಪಷ್ಟಪಡಿಸುತ್ತಾನೆ. ಉರಿಯುತ್ತಿರುವ ಕೊಳ್ಳಿಯೊಂದನ್ನು ವೇಗವಾಗಿ ತಿರುಗಿಸಿದರೆ ಅದು ಬೆಂಕಿಯ ಚಕ್ರದಂತೆಯೆ ಕಾಣುತ್ತದೆ. ಆದರೆ ನೇರವಾಗಿ ಅದು ನಮ್ಮೆದುರಾಗೇ ಇರುವುದರಿಂದ ಅದರ ಸ್ವರೂಪವೇನೆಂಬುದನ್ನು ಸ್ಪಷ್ಟವಾಗಿ ಗ್ರಹಿಸುತ್ತೇವೆ. ಕಲಾಕೃತಿಯ ಅನುಭವವನ್ನು ಗ್ರಹಿಸುವುದಕ್ಕೆ ಇಂತಹ ಪ್ರತ್ಯಕ್ಷಾನುಭವವನ್ನುಂಟು ಮಾಡುವ ಕಲಾ ಮಾಧ್ಯಮ ಅಗತ್ಯ. ಈ ಎರಡು ವಿಘ್ನಗಳು ಅದಕ್ಕೆ ಅಡ್ಡಿಯಾಗುತ್ತವೆ. ಇವುಗಳನ್ನು ಪರಿಹರಿಸಿಕೊಳ್ಳಲು ಕಲಾವಿದ ಪ್ರಯತ್ನಿಸುತ್ತಾನೆ. ನಾಲ್ಕು ಬಗೆಯ ಅಭಿನಯ ಅಥವಾ ಅಭಿವ್ಯಕ್ತಿ ವಿಧಾನಗಳಿಂದ ಮತ್ತು ಶೈಲಿಯ ಸೌಂದರ್ಯಕ್ಕೆ ಕಾರಣವಾದ 'ವೃತ್ತಿ'ಗಳಿಂದ ಇದನ್ನು ಆತ ಸಾಧಿಸುತ್ತಾನೆ. ವಾಚಿಕಾಭಿನಯ, ಸಾತ್ವಿಕಾಭಿನಯ, ಆಂಗಿಕಾಭಿನಯ ಮತ್ತು ಆಹಾರಾಭಿನಯ ಎಂದು ಭರತ ನಾಲ್ಕು ಬಗೆಯ ಅಭಿನಯಗಳನ್ನು ಹೇಳಿದ್ದಾನೆ. ಮತ್ತು 'ಕೈಶಕೀ', 'ಸಾತ್ವತೀ', 'ಆರಭಟೀ' ಮತ್ತು 'ಭಾರತೀ' ಎಂಬ ನಾಲ್ಕು ಪ್ರವೃತ್ತಿಗಳು ಪ್ರಸಿದ್ಧವಾಗಿವೆ. ಶೃಂಗಾರದಲ್ಲಿ 'ಕೈಶಕೀ', 'ವೀರರಸಪ್ರತಿಪಾದನೆಯ ಸಾಲಂಕೃತ ಶೈಲಿಯಲ್ಲಿ 'ಸಾತ್ವಕೀ' ರೌದ್ರ ಅದ್ಭುತಾದಿಗಳಲ್ಲಿ 'ಆರಭಟೀ', ಹಾಗೂ 'ಭಾರತೀ' ವಾಕ್ಸಂಪತ್ತಿನ ಸಹಜ ಅಭಿವ್ಯಕ್ತಿಯ ಎಲ್ಲ ಕಡೆಗಳಲ್ಲಿಯೂ ಉಕ್ತವಾಗಿದೆ. ಇವುಗಳನ್ನು ಸಮರ್ಥವಾಗಿ ಬಳಸಿಕೊಂಡು ರಸಪ್ರತೀತಿಗೆ ಇರುವ ವೈಕಲ್ಯವನ್ನು 'ಸ್ಫುಟತ್ವದ ಅಭಾವ'ವನ್ನು ಪರಿಹರಿಸಕೊಳ್ಳಬೇಕು. ನಿರೂಪಣೆ ಸಹಜವೆಂಬಂತೆ 'ಲೋಕ–ಧರ್ಮಿ'ಯವಾಗಿ ಮೂಡಿಬರಬೇಕು. ಇದು ಭಾಷೆಯ ಬಳಕೆಯೊಂದರಿಂದಲೇ ಸಾಧ್ಯವಾಗುವುದಿಲ್ಲ. ಧ್ವನಿ ಸಂಕೇತ ನಿರೂಪಣೆ ಅನುಭವವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲು ಸಮರ್ಥವಾಗಬೇಕು. 'ಪ್ರತ್ಯಕ್ಷ ವ್ಯಾಪಾರಕಲ್ಲ' ಎಂದು ಇದನ್ನು ಅಭಿನವಗುಪ್ತ ಕರೆದು ಈ ಎರಡು ವಿಘ್ನಗಳ ನಿವಾರಣೆಯಲ್ಲಿ ಇದಕ್ಕೆ ಮಹತ್ವದ ಸ್ಥಾನ ಕೊಡುತ್ತಾನೆ.

**ಅಪ್ರಧಾನತಾ**

ಇದು ಸ್ಥಾಯಿಭಾವದ ಅಪ್ರಧಾನತೆಯಿಂದ ಸಂಭವಿಸುತ್ತದೆ. ಕಲಾವಿದ ಸ್ಥಾಯಿ

ಭಾವಗಳಿಗೂ ಮತ್ತು ಕಲಾಕೃತಿಯಲ್ಲಿ ಅದು ಅಭಿವ್ಯಕ್ತಿಗೊಳ್ಳುವ ವಿಭಾವಾನುಭಾವ ವ್ಯಭಿಚಾರಿಭಾವಗಳಿಗೂ ಕೊಡುವ ಪ್ರಾಧಾನ್ಯತೆಯಲ್ಲಿ ಒಂದು ಖಚಿತತೆಯನ್ನು ಕಾಯ್ದುಕೊಳ್ಳಬೇಕು. ಯಾವ ಸ್ಥಾಯಿಭಾವ ಪ್ರಧಾನವೆಂಬುದು ಸಂದಿಗ್ಧವಾಗಿ ಉಳಿಯಬಾರದು. ಅಂದರೆ ಸ್ಥಾಯಿಭಾವ ಅಪ್ರಧಾನವಾಗಬಾರದು. ಓದುಗನ ಮನಸ್ಸು ಅಪ್ರಧಾನವಾದುದನ್ನು ಹೇಗೆ ಆದರಿಸಿ ಆಸ್ವಾದಿಸಬಲ್ಲುದು? ಎಂದು ಕೇಳುತ್ತಾನೆ ಅಭಿನವಗುಪ್ತ. ನಿರ್ಧಾರಕ ಮತ್ತು ಅನುಗಾಮಿಗಳಾದ ಸಾಧನಗಳು ತಾವೇ ಪ್ರಧಾನವಾಗಿ ಮುಖ್ಯವಾದ 'ಸ್ಥಾಯಿ'ಯೇ ಅಪ್ರಧಾನವಾಗುವಂತಾದರೆ ರಸದ ಆಸ್ವಾದನೆಗೆ ಅದು ಅಡ್ಡಿಯಾಗುತ್ತದೆ. ಸ್ಥಾಯಿಯ ಪ್ರಾಧಾನ್ಯ ಸಂದಿಗ್ಧವಾಗಿ ಸ್ಥಾಪಿತವಾದಾಗ ಮಾತ್ರ ಅದು ಸಾಧಾರಣೀಕರಣವಾಗಿ ಸಾಮಾಜಿಕನನ್ನು ಆದರಿಸಿ ಅಲ್ಲಿ ರಸಾನುಭವಕ್ಕೆ ಕಾರಣವಾಗುತ್ತದೆ.

ಈ ಸ್ಥಾಯಿಭಾವಗಳಲ್ಲಿಯೂ ಪುರುಷಾರ್ಥಗಳ ದೃಷ್ಟಿಯಿಂದ ರತಿ, ಕ್ರೋಧ, ಉತ್ಸಾಹ ಮತ್ತು ಶಮಗಳಂಥ ಕೆಲವು ಪ್ರಧಾನವಾಗಿ ನಿಲ್ಲುತ್ತವೆ. ಕ್ರಮವಾಗಿ ಇವು ಕಾಮ, ಧರ್ಮ, ಮೋಕ್ಷ ಈ ಪುರುಷಾರ್ಥಗಳಿಗೆ ಅನ್ವಯಿಸುತ್ತವೆ. ಕೃತಿಯ ಸ್ವರೂಪಕ್ಕನುಗುಣವಾಗಿ ಈ ಭಾವಗಳ ಪ್ರಾಧಾನ್ಯವನ್ನು ಪಡೆಯುತ್ತವೆ.

ಈ ಎಲ್ಲ ಸ್ಥಾಯಿಭಾವಗಳೂ ಆನಂದ ಅಥವಾ ಸಂತೋಷದಾಯಕವಾದುವು ಗಳೆಂಬುದನ್ನು ಇಲ್ಲಿ ಎತ್ತಿ ಹೇಳುತ್ತಾನೆ. ಲೋಕದಲ್ಲಿ ಇವು ಬೇರೆ ಬೇರೆ ಪ್ರತಿಕ್ರಿಯೆಗಳಿಗೆ, ಅದಕ್ಕನುಗುಣವಾದ ಮನೋಧರ್ಮಗಳಿಗೆ ಕಾರಣವಾಗಬಹುದು. ಆದರೆ ಕಲಾಕೃತಿಯಲ್ಲಿ ಇವು 'ಏಕಘನ'ವಾದ ಮತ್ತು ಆಸ್ವಾದನಾರೂಪವಾದ ಬೆಳಕನ್ನು ಪಡೆಯುವುದರಿಂದ ಅವು ಲೋಕಮುಖವಾಗದೆ ಆನಂದದ ಅನುಭವಕ್ಕೆ ಕಾರಣವಾಗುತ್ತವೆ. ಇಲ್ಲಿ ಬರುವ ಆನಂದ ಲೌಕಿಕವಾದುದಲ್ಲ. ಲೋಕದಲ್ಲಿ ನಾವು ಪಡೆಯುವ ಆನಂದ ನಿರಪೇಕ್ಷವಾದುದಲ್ಲ; ಲೌಕಿಕ ಅಪೇಕ್ಷೆಗಳಿಂದ ಕೂಡಿದುದರಿಂದ ದುಃಖವೂ ಅದರಲ್ಲಿ ಹುದುಗಿರುತ್ತದೆ. ಆದರೆ ಕಲೆಯಿಂದ ಬರುವ ಅನುಭವ ನಿರಪೇಕ್ಷವಾದುದರಿಂದ ಕೇವಲ ಆನಂದದ ಅನುಭವಕ್ಕೆ ಕಾರಣವಾಗುತ್ತದೆ. ಯಾವ ವಿಘ್ನಗಳೂ ಇಲ್ಲದೆ ಭಾವಗಳನ್ನು ಆಸ್ವಾಧಿಸುವುದರಿಂದ ಈ ಆನಂದ ಉಂಟಾಗುತ್ತದೆ. ಭರತ ಹೇಳಿದ ಎಂಟು ಮತ್ತು ಕೊನೆಯಲ್ಲಿ 'ಶಮ'ವೂ ಸೇರಿದ ಒಂಬತ್ತು ಭಾವಗಳು, ಒಂದಲ್ಲ ಒಂದು ಪ್ರಮಾಣದಲ್ಲಿ ಎಲ್ಲರಲ್ಲಿಯೂ ಇದ್ದೇ ಇರುವಂತಹವು. ಅವುಗಳ ಪ್ರಮಾಣದಲ್ಲಿ ಹೆಚ್ಚು ಕಡಿಮೆ ಇರಬಹುದು. ಆದರೆ ಇವುಗಳಿಲ್ಲದೇ ಇರುವ ಮಾನವಜೀವಿಯೇ ಇಲ್ಲ. ವ್ಯಭಿಚಾರಿ ಅಥವಾ ಸಂಚಾರಿಭಾವಗಳು ಇಷ್ಟು ಪ್ರಾಮುಖ್ಯವನ್ನು ಪಡೆಯುವುದಿಲ್ಲ. ಆದರೆ ಕಲಾಕೃತಿಯಲ್ಲಿ ಅವುಗಳನ್ನು ಮತ್ತು ಅನುಭಾವಗಳನ್ನು ಪ್ರಧಾನವನ್ನಾಗಿ ಮಾಡಿ ಅವುಗಳಿಗೆ ಮೂಲವಾದ ಸ್ಥಾನ ಯಾವುದೆಂಬುದನ್ನು ಅಪ್ರಧಾನಗೊಳಿಸಿದರೆ 'ಅಪ್ರಧಾನತಾ' ಎಂಬ ವಿಘ್ನ ಉಂಟಾಗಿ ರಸಾನುಭವಕ್ಕೆ ಅಡ್ಡಿಯಾಗುತ್ತದೆ 'ಸ್ಥಾಯಿ'ಯನ್ನು 'ರಸತ್ವ'ಕ್ಕೆ ಮುಟ್ಟಿಸುವಂತೆ ಮಾಡುವುದರಲ್ಲಿಯೇ ಕಲಾಕೃತಿಯ ರಹಸ್ಯವಿದೆ ಎಂಬುದನ್ನು ಭರತನೇ ಸೂಚಿಸಿದ್ದಾನೆ. ಅದು ಸಾಧ್ಯವಾಗುವುದಕ್ಕೆ ಈ ವಿಘ್ನವನ್ನು ನಿವಾರಿಸಿಕೊಳ್ಳುವುದು ಅಗತ್ಯ.

**ಸಂಶಯಯೋಗ**

ಉದ್ದೇಶಿತವಾದ 'ಭಾವ' ಯಾವುದೆಂಬುದನ್ನು ಗುರುತಿಸುವುದರಲ್ಲಿ ಉಂಟಾಗುವ

ಸಂಶಯದಿಂದ ಸಂಭವಿಸುವ ವಿಘ್ನವಾಗಿದೆ. ಈ ಸಂಶಯಕ್ಕೆ ಕಾರಣವೇನೆಂದರೆ ವಿಭಾವಾನುಭಾವಾದಿಗಳು ಯಾವುದೇ ಒಂದು ಭಾವಕ್ಕೆ ನಿರ್ದಿಷ್ಟವಾಗಿ ಸೀಮಿತವಾದುವುಗಳಲ್ಲ. ಅಂದರೆ ಒಂದೇ ವಸ್ತು ಅಥವಾ ಪ್ರತಿಕ್ರಿಯೆ ಬೇರೆ ಬೇರೆ ಭಾವಗಳಿಗೆ ಕಾರಣವಾಗಬಹುದು. ಉದಾಹರಣೆಗೆ, ಕಣ್ಣೀರು ಅತಿಯಾದ ಸಂತೋಷದಿಂದ ಬರಬಹುದು, ದುಃಖದಿಂದಲೂ ಬರಬಹುದು; ಅಥವಾ ಕಣ್ಣು ನೋವಿನಿಂದಲೂ ಬರಬಹುದು. ಒಂದು ಹುಲಿ ಭಯವನ್ನು ಉಂಟು ಮಾಡಬಹುದು, ಕ್ರೋಧವನ್ನು ಉಂಟುಮಾಡಬಹುದು. ಅಂತೆಯೇ ಶಮ, ಚಿಂತೆ ಮೊದಲಾದ ವ್ಯಭಿಚಾರಿಗಳು 'ಉತ್ಸಾಹ', 'ಭಯ' ಮೊದಲಾದ ಸ್ಥಾಯಿಗಳಲ್ಲಿಯೂ ಕಾಣಬಹುದು. ಆದರೆ ಇವೆಲ್ಲವುಗಳ ಒಟ್ಟು ಸಮುದಾಯ ಪರಿಣಾಮ, ಸ್ಥಾಯಿ ಯಾವುದೆಂಬುದನ್ನು ಸ್ಪಷ್ಟಪಡಿಸುತ್ತದೆ. ಉದಾಹರಣೆಗೆ, ಸ್ನೇಹಿತನೊಬ್ಬನ ಮರಣದ ವಿಭಾವದಿಂದ ಉಂಟಾಗುವ ಕಣ್ಣೀರು, ಚಿಂತೆ, ದೈನ್ಯ ಮೊದಲಾದ ಅನುಭಾವ ಸಂಚಾರಿ ಭಾವಗಳು ಸ್ಥಾಯಿ ಯಾವುದೆಂಬುದನ್ನು ಸ್ಪಷ್ಟಪಡಿಸುತ್ತವೆ. 'ಶೋಕ'ವೇ ಇಲ್ಲಿನ ಸ್ಥಾಯಿ ಎಂಬುದು ನಿಸ್ಸಂದಿಗ್ಧವಾಗುತ್ತದೆ. ಹೀಗೆ ವಿಭಾವಾನುಭಾವಾದಿಗಳಿಂದ 'ಸ್ಥಾಯಿ' ಯಾವುದೆಂಬುದು ಸ್ಪಷ್ಟವಾಗದೆ ಸಂಶಯಕ್ಕೆ ಕಾರಣವಾದಾಗ 'ಸಂಶಯ ಯೋಗ' ಎಂಬ ವಿಘ್ನ ಉಂಟಾಗುತ್ತದೆ. ಇದು ಸಂಭವಿಸದ ಹಾಗೆ, ಉದ್ದೇಶಿತ ಭಾವವನ್ನು ಸಂದೇಹಕ್ಕೆ ಅವಕಾಶವಿಲ್ಲದಂತೆ ಪ್ರತಿಪಾದಿಸುವ ನಿಷ್ಕೃಷ್ಟತೆ ಕಲಾಕೃತಿಯಲ್ಲಿರಬೇಕು.

ಹೀಗೆ ಅಭಿನವಗುಪ್ತನ ಸಪ್ತವಿಘ್ನಗಳ ನಿರೂಪಣೆಯಲ್ಲಿ ರಸಾನುಭವವನ್ನು ಕುರಿತು ಆಳವಾದ ಮತ್ತು ಅನುಭವ ಪೂರ್ಣವಾದ ಅಂತರ್ ದೃಷ್ಟಿಯಿಂದ ಕೂಡಿದ ಚಿಂತನಶೀಲತೆ ವ್ಯಕ್ತವಾಗುತ್ತದೆ. ನಾಟಕಕಾರ, ನಟ ಮತ್ತು ಸಾಮಾಜಿಕ ಈ ಮೂವರನ್ನು ದೃಷ್ಟಿಯಲ್ಲಿಟ್ಟುಕೊಂಡು ರಸಸೂತ್ರದ ಸಾರ್ಥಕತೆಯನ್ನು ವಿವೇಚಿಸಿದ್ದಾನೆ. ಈ ಮೂವರ ಶಕ್ತಿಗಳೂ ಏಕಮುಖವಾಗಿ ಒಂದು ಕಡೆಯಲ್ಲಿ ಕೇಂದ್ರೀಕೃತವಾದಾಗ, ಆ ಸಾಮೂಹಿಕ ಪ್ರಯತ್ನದ ಫಲವಾಗಿ ಸಾಮಾಜಿಕನಲ್ಲಿ ರಸ ನಿಷ್ಪನ್ನವಾಗುತ್ತದೆಂಬುದನ್ನು ಇಲ್ಲಿ ತೋರಿಸಿಕೊಟ್ಟಿದ್ದಾನೆ. ಈ ಸಪ್ತ ವಿಘ್ನಗಳಲ್ಲಿ ಕೆಲವು, ಅಂದರೆ ಸಂಭಾವನಾ ವಿರಹ, ಸ್ಫುಟತ್ವಭಾವ, ಸಂಶಯಯೋಗ ಮೊದಲಾದವು ಮುಖ್ಯವಾಗಿ ನಾಟಕಕಾರ ಹಾಗೂ ಕೃತಿಯನ್ನು ಉದ್ದೇಶಿಸಿದ್ದರೆ ಇನ್ನು ಕೆಲವು ನಿಜಸುಖಾದಿ ವಿವಶೀಭಾವ, ದೇಶಕಾಲ ವಿಶೇಷಾದೇಶ ಮೊದಲಾದುವು ಸಾಮಾಜಿಕನನ್ನು ದೃಷ್ಟಿಯಲ್ಲಿಟ್ಟುಕೊಂಡಿವೆ. ರಸಪ್ರತೀತಿಗೆ ವಿಘ್ನಗಳು ಈ ಎರಡೂ ಕಡೆಯಿಂದಲೂ ಉಂಟಾಗಬಹುದು. ಆ ಎರಡೂ ದೋಷ ಮುಕ್ತವಾದಾಗ ರಸಾನುಭವ ಸಾಧ್ಯವಾಗುತ್ತದೆಂಬ ಈ ದೃಷ್ಟಿ ಕಾವ್ಯತತ್ವದಲ್ಲಿ ಸಹೃದಯನನ್ನು ಪ್ರಧಾನವಾದ ಕೊಂಡಿಯನ್ನಾಗಿ ಪರಿಗಣಿಸಿದುದಕ್ಕೆ ಸಂಗತವಾಗಿಯೇ ಇದೆ.

'ರಸ' ಎನ್ನುವುದು ಕಲಾಕೃತಿಯ ನೆರವಿನಿಂದ ಸಹೃದಯ ಸಪ್ತವಿಘ್ನಗಳನ್ನು ಕಳೆದುಕೊಳ್ಳುವುದರಿಂದ ಉಂಟಾಗುವ ಆಸ್ವಾದನಾರೂಪವಾದ ಅನುಭವ ಎಂಬುದನ್ನು ಅಭಿನವಗುಪ್ತ ಮನವರಿಕೆ ಮಾಡಿಕೊಡುತ್ತಾನೆ. ಲೋಕಾನುಭವಗಳನ್ನು ಪರಿವರ್ತಿಸಲು ಕಾರಣವಾಗುವಂತಹ ವಿಭಾವಾನುಭಾವಾದಿಗಳ 'ಸಂಯೋಗ'ದಿಂದ ಇದು ಸಾಧ್ಯವಾಗುತ್ತದೆ. ಇಲ್ಲಿ 'ಸಂಯೋಗ' ಎನ್ನುವ ಮಾತು, ವಿಭಾವ ಅನುಭಾವಾದಿಗಳ ಸಂಯೋಗ ಮಾತ್ರವಲ್ಲ. ಅವುಗಳೊಡನೆ ಏಕಾಗ್ರತೆಯಿಂದ ಸಂಪೂರ್ಣವಾಗಿ

ತನ್ಮಯಗೊಳ್ಳುವ ಸಹೃದಯನ ಮನಸ್ಸಿಗೂ ಅನ್ವಯಿಸುತ್ತದೆ. ಹಾಗೆ ತನ್ಮಯಗೊಂಡಾಗ ಮನಸ್ಸು ಲೋಕಭಾವಗಳ ಲೌಕಿಕ ಪ್ರತಿಕ್ರಿಯೆಯಿಂದ ವಿಮುಕ್ತವಾಗಿ ಭಾವಗಳನ್ನು ಆಸ್ವಾದಿಸುತ್ತದೆ. ಹೀಗೆ ಆಸ್ವಾದನಾರೂಪವಾದ ಗ್ರಹಿಕೆಯಿಂದುಂಟಾಗುವ ಆನಂದದ ಅನುಭವವೇ ರಸ ಎನ್ನುತ್ತಾನೆ ಅಭಿನವಗುಪ್ತ. ವಿಭಾವಾನುಭಾವಾದಿಗಳಿಂದ ಅನುಕೃತವಾದ ಸ್ಥಾಯಿಭಾವವೇ ರಸವಲ್ಲವೆಂಬುದನ್ನು ಇಲ್ಲಿ ಮತ್ತೊಮ್ಮೆ ಸ್ಪಷ್ಟಪಡಿಸುತ್ತಾನೆ. ಆ ಸ್ಥಾಯಿಭಾವದ ಅನುಮಿತಿಯಿಂದ ರಸಾನುಭಾವವಾಗುವುದಾದರೆ ಲೋಕದಲ್ಲಿಯೇ ಇರುವ ಮತ್ತು ಇನ್ನೂ ಹೆಚ್ಚು ಸತ್ಯವಾಗಿ ನೇರವಾಗಿ ಗೋಚರಿಸುವ ಲೋಕದ ಸ್ಥಾಯಿಭಾವಗಳ ಅನುಮಿತಿಯಿಂದಲೂ ರಸಾನುಭಾವವಾಗಬೇಕಾಗಿತ್ತು. ಆದರೆ 'ರಸ' ಎನ್ನುವುದು 'ಅನುಮಿತಿ'ಯಿಂದ ಉಂಟಾಗುವಂತಹುದಲ್ಲ; ತನ್ಮಯತೆಯ ನೇರ ಅನುಭವದಿಂದ ಗ್ರಹಿತವಾಗುವ ಆಸ್ವಾದನೆಯ ಫಲ. ಆದುದರಿಂದಲೇ ಭರತ ರಸಸೂತ್ರದಲ್ಲಿ 'ಸ್ಥಾಯಿಭಾವ' ಎಂಬ ಮಾತನ್ನು ಬಳಸಿಲ್ಲ. ಲೊಲ್ಲಟಾದಿಗಳು ಹೇಳುವಂತೆ ಆ ಮಾತನ್ನು ಸೂತ್ರದಲ್ಲಿ ಸೇರಿಸಿಕೊಳ್ಳುವ ಅಗತ್ಯವೂ ಇಲ್ಲ. ಒಂದು ವೇಳೆ ಆ ಮಾತನ್ನು ಆತ ಹೇಳಿದ್ದರೆ, ಅದರ ವಿವರಣೆ ಕಷ್ಟವಾಗುತ್ತಿತ್ತು. ಏಕೆಂದರೆ ಸ್ಥಾಯಿಭಾವ ರಸವಲ್ಲ: ಇದರ ಪರಿವರ್ತಿತ ಕಲಾರೂಪಗಳಾದ ವಿಭಾವಾನುಭಾವಾದಿಗಳಿಂದುಂಟಾಗುವ ಆಸ್ವಾದನೆಯೇ ರಸ ಎಂಬುದನ್ನು ಅಭಿನವಗುಪ್ತ ಸ್ಪಷ್ಟಪಡಿಸುತ್ತಾನೆ.

**ಪರಾಮರ್ಶನ ಗ್ರಂಥಗಳು**


1. ಭಾರತೀಯ ಕಾವ್ಯಮೀಮಾಂಸೆ – ತೀ.ನಂ.ಶ್ರೀ.
2. ತೌಲನಿಕ ಕಾವ್ಯಮೀಮಾಂಸೆ – ಎಚ್. ತಿಪ್ಪೇರುದ್ರಸ್ವಾಮಿ
3. ರಸೋವೈಸಃ – ಕುವೆಂಪು
4. ಕಾವ್ಯಾರ್ಥ ಚಿಂತನ – ಜಿ.ಎಸ್. ಶಿವರುದ್ರಪ್ಪ
5. ಸಾಹಿತ್ಯ ಪ್ರವೇಶ – (ಅನು) ಸಿ.ಪಿ.ಕೆ. (ಮೂಲ : ಹಡ್ಸನ್)
6. ಸಾಹಿತ್ಯ ವಿಮರ್ಶೆಯ ಮೂಲತತ್ವಗಳು – ಡಾ.ಎಚ್. ತಿಪ್ಪೇರುದ್ರಸ್ವಾಮಿ
7. ವಿಮರ್ಶೆಯ ಪರಿಭಾಷೆ – ಓ.ಎಲ್. ನಾಗಭೂಷಣಸ್ವಾಮಿ
8. ಪ್ರಾಯೋಗಿಕ ವಿಮರ್ಶೆ– ಸಂ: ಡಾ.ಜಿ.ಎಸ್. ಶಿವರುದ್ರಪ್ಪ, ಲಕ್ಷ್ಮೀನಾರಾಯಣ ಭಟ್
9. ಕನ್ನಡ ಸಾಹಿತ್ಯ ಮೀಮಾಂಸೆ– ಡಾ. ರಹಮತ ತರೀಕೆರೆ
10. ಸಾಹಿತ್ಯ ವಿಮರ್ಶೆಯ ಮಾದರಿಗಳು – ಡಾ.ಸಿ.ಆರ್. ಯರವಿನತೆಲಿಮಠ


❖❖❖

ತೆಳುಗಾಳಿಗೆ ಅಲೆಯುವ ಚಂದ್ರನ ಕಂಡೆ
ನೀರಿನಲೆಯ ಮೇಲೆ
ಸುಳಿಗಾಳಿಗೆ ಚಲಿಸುವ ಮೋಡದ ಹಿಂಡೆ
ಹಸಿರ ಜಗಲಿಯೇರೆ

# ಹೊಯ್ಸಳ ಬಿಟ್ಟಿದೇವನ ಕಾಲದ ಶಾಸನೋಕ್ತ ಶೈವ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ

**ಡಾ.ಮೊಹನ್ ಕೆ.ಎನ್., ಡಾ.ಸುರೇಶ ಬಿ.ಸಿ., ಡಾ.ರಾಜೇಶ್ ಕಣ್ ಎಂ.ಆರ್.**
ಶ್ರೀ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು, ಮೈಸೂರು

ಹೊಯ್ಸಳ ವಿಷ್ಣುವರ್ಧನನ ಕಾಲ ಹೊಯ್ಸಳ ರಾಜಮನೆತನದಲ್ಲಿ ರಾಜಕೀಯವಾಗಿ ಮತ್ತು ಐತಿಹಾಸಿಕವಾಗಿ ಅತ್ಯಂತ ಮಹತ್ವದ ಕಾಲಘಟ್ಟವಾಗಿದೆ. ಬಿಟ್ಟಿದೇವನು ತನ್ನ ಅಣ್ಣ ಬಲ್ಲಾಳನೊಂದಿಗೆ ಸೇರಿ ಹೊಯ್ಸಳರ ರಾಜಕೀಯ ಚಟುವಟಿಕೆಗಳಿಗೆ ಭದ್ರ ಬುನಾದಿಯನ್ನು ಹಾಕಿದ. ಅದುವರೆವಿಗೂ ಕಲ್ಯಾಣದ ಚಾಲುಕ್ಯರ ಮಾಂಡಲಿಕ ಅರಸರಾಗಿದ್ದ ಇವರ ಪೂರ್ವಜರು ತಮ್ಮನ್ನು ಮಹಾಮಂಡಲೇಶ್ವರರೆಂದು ಗುರುತಿಸಿ ಕೊಂಡಿದ್ದರು ಆದರೆ ಬಲ್ಲಾಳ ಮತ್ತು ಬಿಟ್ಟೀದೇವನು ಸ್ವತಂತ್ರ ಹೊಯ್ಸಳ ರಾಜ್ಯದ ಕನಸನ್ನು ನನಸು ಮಾಡಿದನು. ಅಣ್ಣನ ಅಕಾಲಿಕ ಮರಣದಿಂದ ರಾಜ್ಯಬಾರ ವಹಿಸಿಕೊಂಡ ಬಿಟ್ಟಿದೇವ, ಶ್ರೀರಾಮನುಜಚಾರ್ಯರ ತತ್ವಗಳಿಗೆ ಮಾರುಹೊಗಿ ಶ್ರೀವೈಷ್ಣವ ಧರ್ಮವನ್ನು ಅಂಗೀಕರಿಸಿ ವಿಷ್ಣುವರ್ಧನನಾದ, ಇವನ ಕಾಲದಲ್ಲಿ ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವು ಉಚ್ಚ್ರಾಯ ಹಂತವನ್ನು ತಲುಪಿತು. ಹೊಯ್ಸಳರ ಕಾಲದಲ್ಲಿ ವಿಷ್ಣುವರ್ಧನನಿಂದ ನಿರ್ಮಾಣವಾದ ದೇವಾಲಯಗಳು ಅತ್ಯುತ್ತಮ ವಾಸ್ತುಕಲೆ ಮತ್ತು ಶಿಲ್ಪಕಲೆಯನ್ನು ಶ್ರೀಮಂತಗೊಳಿಸಿವೆ ಎಂದರೆ ತಪ್ಪಾಗಲಾರದು.

ರಾಜಕಿಯವಾಗಿ ಚೋಳರನ್ನ ಗಂಗವಾಡಿಯಿಂದ ಹೊರಗೆ ಅಟ್ಟಿದ ಮೇಲೆ ಕ್ರಮೇಣವಾಗಿ ತನ್ನ ರಾಜ್ಯ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ನೊಳಂಬವಾಡಿಯಿಂದ ಬನವಾಸಿವರೆಗೂ ಇತ್ತ ಅರಬ್ಬಿ ಸಮುದ್ರದ ತಟದಲ್ಲಿರುವ ಬಾರಕೂರಿನವರೆಗೂ ವಿಸ್ತರಿಸಿದ. ಇದರಿಂದ ಉತ್ತರ ಕರ್ನಾಟಕದಲ್ಲಿ ಹಾಸು ಹೊಕ್ಕಿದ್ದ ಚಾಲುಕ್ಯ ಸಂಸ್ಕೃತಿ, ಪಶ್ಚಿಮ ಭಾಗದಲ್ಲಿದ್ದ ತುಳು ಸಂಸ್ಕೃತಿ ಹಾಗೂ ಸ್ಥಳಿಯವಾಗಿ ಪ್ರಚಲಿತದಲ್ಲಿದ್ದ ಗಂಗ ಮತ್ತು ಚೋಳ ಸಂಸ್ಕೃತಿಗಳ ಪ್ರೇರಣೆಯಿಂದ ವಿಷ್ಣುವರ್ಧನನ ರಾಜ್ಯದಲ್ಲಿ ಒಂದು ಹೊಸ ಶೈಲಿ ಉಗಮವಾಯಿತು. ಈ ಶೈಲಿಯು ವಿಸ್ತಾರದಲ್ಲಿ ಸದೃಡವಾದಂತೆ ರಾಜ್ಯವು ಆರ್ಥಿಕವಾಗಿಯೂ ಸದೃಢವಾಯಿತು.

## ಹೊಯ್ಸಳ ಬಿಟ್ಟಿದೇವನ ಕಾಲದ ಶೈವ ದೇವಾಲಯಗಳು

ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣವಾದ ಹಲವಾರು ದೇವಾಲಯಗಳಲ್ಲಿ ಉತ್ತಮ ಶೈವ ದೇವಾಲಯಗಳು ಕಾಣಬರುತ್ತವೆ. ರಾಜನೇ ನೇರವಾಗಿ ಹಲವಾರು ದಾನ ದತ್ತಿಗಳನ್ನು ಶೈವ ದೇವಾಲಯಗಳಿಗೆ ನೀಡಿದ ದಾಖಲೆಗಳು ದೊರೆಯುತ್ತವೆ. ಆದರೆ ಇವನ ಕಾಲದಲ್ಲಿ ನಿರ್ಮಾಣವಾದಂತಹ ಹೆಚ್ಚಿನ ದೇವಾಲಯಗಳನ್ನು ಬಿಟ್ಟಿದೇವನ ಮಂತ್ರಿಗಳು, ದಂಡನಾಯಕರು, ಅಧಿಕಾರಿಗಳು ಹಾಗೂ ರಾಜನ ಕುಟುಂಬ ವರ್ಗದವರು ಕಟ್ಟಿಸಿರುವ ಉಲ್ಲೇಖಗಳು ದೊರೆಯುತ್ತವೆ.

ಶೈವ ದೇವಾಲಯಗಳನ್ನು ಗಂಗವಾಡಿ ಹೊಯ್ಸಳ ಭಾಗಗಳಿಗೆ ಸೀಮಿತವಾದಂತೆ

ಅವಲೋಕನ ಮಾಡಿದರೆ, ತಲಕಾಡಿನ ಗಂಗರು–ಹೊಯ್ಸಳ ಪೂರ್ವಕಾಲದಲ್ಲಿ ಹಲವಾರು ಶೈವ ದೇವಾಲಯಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಅದೇ ರೀತಿ ಬನವಾಸಿ ಕದಂಬರೂ ಸಹ ಪ್ರಾರಂಭದಲ್ಲಿ ಶೈವ ದೇವಾಲಯಗಳನ್ನೇ ನಿರ್ಮಿಸಿದರು, ಆ ಕಾಲದ ಸಂವೇದನೆಗಳು ಹಾಗೂ ರಾಜನನ್ನು ದೇವಾಲಯ ನಿರ್ಮಾಣದ ವಿಷಯದಲ್ಲಿ ಮನವೊಲಿಸುವುದು ದೇವಾಲಯದ ಪ್ರತಿಷ್ಠಾಪನೆಗೆ ಅನುವಾಗುತ್ತದೆ. ಅವನಿಂದ ಬಂದ ದಾನ ದತ್ತಿಗಳು ದೇವಾಲಯದ ಬೆಳವಣಿಗೆಯಲ್ಲಿ ಸಹಕಾರಿಯಾಗುತ್ತವೆ. ತಲಕಾಡಿನ ಗಂಗರೇ ಈ ಪ್ರದೇಶದಲ್ಲಿ ಪ್ರಾರಂಭದಿಂದಲೂ ದೇವಾಲಯ ನಿರ್ಮಾಣ ಮಾಡಿದ್ದರು. ತಲಕಾಡಿನ ಮರಳೇಶ್ವರ, ನರಸಮಂಗಲದ ರಾಮೇಶ್ವರ ಇವುಗಳು ಈ ಭಾಗದ ಕೆಲವು ಮುಖ್ಯ ಶೈವ ದೇವಾಲಯಗಳಾಗಿವೆ.

ಹೊಯ್ಸಳರು ರಾಜ್ಯ ಸ್ಥಾಪನೆ ಮಾಡಿದ ನಂತರ ಎಲ್ಲ ಧರ್ಮಗಳನ್ನು ಬೆಳೆಸಿದರು ಶ್ರೀ ರಾಮಾನುಜರು ಇಲ್ಲಿಗೆ ಬಂದ ಮೇಲೆ ಶ್ರೀ ವೈಷ್ಣವ ಧರ್ಮಕ್ಕೆ ಬಹುಶಃ ಪ್ರಾಮುಖ್ಯ ದೊರೆತಿರಬಹುದು. ಆದರೆ ಶೈವ ನೆಲೆಗಳು ಧಾರ್ಮಿಕವಾಗಿ ಆಗಲೇ ಸಾಕಷ್ಟು ಪ್ರವರ್ಧಮಾನಕ್ಕೆ ಬಂದಿದ್ದು ಶೈವ ಸಂಪ್ರದಾಯದವು ಆ ಕಾಲದಲ್ಲಿ ಹಲವು ಮುಖ್ಯವಾದ ಅಂಗಗಳಲ್ಲಿ ಚಲನೆಯಲ್ಲಿತ್ತು. ಪಾಶುಪತ, ಲಾಕುಳಿಶ, ಕಾಳಮುಖರು ಪ್ರಮುಖರಾಗಿದ್ದಾರೆ. ಈ ಭಾಗದಲ್ಲಿ ಕಾಪಾಲಿಕರು ಆಗಷ್ಟೇ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲಘಟ್ಟದಲ್ಲಿ ವೀರಶೈವರು ಕೂಡ ಅಲ್ಲಲ್ಲಿ ಮಾತ್ರ ಇದ್ದಿರುವುದು ಕಂಡುಬರುತ್ತದೆ, ಹೊಯ್ಸಳ ರಾಜರುಗಳು ಹಾಗೂ ಅವರ ದಂಡನಾಯಕರು, ವೈಷ್ಣವ ದೇವಾಲಯಗಳ ನಿರ್ಮಾಣದ ಜೊತೆಗೆ ಶೈವ ದೇವಾಲಯಗಳ ನಿರ್ಮಾಣವನ್ನು ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಬಿಟ್ಟಿದೇವನೇ ನಿರ್ಮಾಣ ಮಾಡಿಸಿದ ಮುಖ್ಯ ಶೈವ ದೇವಾಲಯಗಳು ಹಳೇಬೀಡು, ಮರಳೆ ಹಾಗೂ ಶಾಂತಿಗ್ರಾಮಗಳಲ್ಲಿ ಕಂಡುಬರುತ್ತವೆ. ಅವನ ಕಾಲದಲ್ಲಿ ಹಲವು ಶೈವ ಕೇಂದ್ರಗಳಿದ್ದು, ಬಹುತೇಕ ಕೇಂದ್ರಗಳೊಂದಿಗೆ ಅವನಿಗೆ ವಿಶೇಷವಾದ ಸಂಪರ್ಕಯಿತ್ತೆಂದು ಹಲವಾರು ಶಾಸನಗಳಿಂದ ತಿಳಿದು ಬರುತ್ತದೆ. ಅವನ ಆಡಳಿತ ಕಾಲದಲ್ಲಿ ಕ್ರಿ.ಶ. 1106 ರಿಂದ 1142 ರವರೆಗೂ ಸುಮಾರು 120 ಶಾಸನಗಳು, ಶೈವ ದೇವಾಲಯಗಳಿಗೆ ನೀಡಿದ ದಾನ ದತ್ತಿಗಳನ್ನು ಉಲ್ಲೇಖಿಸುವ ಶಾಸನಗಳಾಗಿವೆ ಆದರೆ ನೇರವಾಗಿ ಬಿಟ್ಟಿದೇವನೆ ಶೈವ ದೇವಾಲಯಗಳನ್ನು ನಿರ್ಮಿಸಿರುವ ವಿವರಗಳು ದೊರೆಯುವುದಿಲ್ಲ ಆದರೂ ದಾನ ದತ್ತಿಗಳನ್ನು ನೀಡಿದ ವಿವರಗಳು ಸ್ಪಷ್ಟವಾಗಿ ದೊರೆಯುತ್ತವೆ.

ಬಿಟ್ಟಿಗನ ಕುಟುಂಬವರ್ಗದಲ್ಲಿ ಹಲವಾರು ಜನ ಶೈವರಾಗಿದ್ದುದು ಕಂಡುಬರುತದೆ. ವಿಷ್ಣುವರ್ಧನನ ತಾಯಿ ಶೈವಾರಾಧಕಳಾಗಿದ್ದಳು. ಶಾಂತಲೆಯ ತಂದೆ ಹೆಗ್ಗಡೆ ಮಾರಸಿಂಮಯ್ಯನು ಶೈವನೇ. ಆದರೆ ಪತ್ನಿ ಮಾಚಿಕಬ್ಬೆ ಹಾಗೂ ಅವನ ಪುತ್ರಿ ಶಾಂತಲೆಯು ಜೈನ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದು ತಿಳಿದುಬರುತ್ತದೆ. ಆದರೆ ಧಾರ್ಮಿಕವಾಗಿ ಹೊಸದಾದ ಈ ಕಾಲದಲ್ಲಿ ಶ್ರೀ ವೈಷ್ಣವ ಧರ್ಮ ಪ್ರಾರಂಭವಾಗಿತ್ತು. ಹಿಗಾಗಿ ರಾಜರುಗಳೆಲ್ಲ ಬಹುತೇಕವಾಗಿ ಶ್ರೀವೈಷ್ಣವ ದೇವಾಲಯಗಳನ್ನೇ ನಿರ್ಮಿಸುವುದರಲ್ಲಿ ಆಸಕ್ತಿ ತೋರಿದರೆಂದು ಹೇಳಬಹುದು.

ಆ ಕಾಲದಲ್ಲಿ ನಿರ್ಮಾಣವಾದ ಹಲವಾರು ಶೈವ ದೇವಾಲಯಗಳು

ಶಾಸನೋಕ್ತವಾಗಿ ತಿಳಿದುಬರುತ್ತವೆ. ಆದರೆ ಬಹುತೇಕ ದೇವಾಲಯಗಳು ಇಂದು ನಾಶವಾಗಿವೆ ಅಥವಾ ಸಂಪೂರ್ಣ ಬದಲಾಗಿವೆ. ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಮೊಲಗೊಡು ಎಂಬ ಗ್ರಾಮದಲ್ಲಿ ಶಾಂತಲೆಯ ಸೋದರ ಸಂಬಂಧಿ ಬಿಲ್ಲಯ್ಯ ನಾಯಕನೆಂಬುವನು ಕರ್ಮತೇಶ್ವರ ಎಂಬ ದೇವಾಲಯವನ್ನು ಕ್ರಿ.ಶ.1116ರಲ್ಲಿ ನಿರ್ಮಿಸಿದನೆಂದು ತಿಳಿದುಬರುತ್ತದೆ. ಇದೇ ಸಂದರ್ಭದಲ್ಲಿ ಕ್ರಿ.ಶ.1117 ರಲ್ಲಿ ಶಾಂತಲೆಯು ಬಳ್ಳಿಗಾವೆಯ ಧರ್ಮೇಶ್ವರ ದೇವರಿಗೆ ದಾನ ನೀಡಿದ ವಿವರ ದೊರೆಯುತ್ತದೆ. ಅಲ್ಲದೆ ಕ್ರಿ.ಶ.1122–23ರಲ್ಲಿ ಅವಳ ತಂದೆ ಮಾರಸಿಂಹಯ್ಯನು ಶಾಂತಿ ಗ್ರಾಮದಲ್ಲಿ ಧರ್ಮೇಶ್ವರ ದೇವಾಲಯ ನಿರ್ಮಿಸಿದ ವಿಷಯ ತಿಳಿದುಬರುತ್ತದೆ, ಆದರೆ ಶಾಂತಲೆ ಕ್ರಿ.ಶ. 1116–17ರಲ್ಲಿ ಈ ಶಾಂತಿಪುರದಲ್ಲಿ ರಾಮೇಶ್ವರ ಎಂಬ ಶಿವಾಲಯ ನಿರ್ಮಿಸಿದಂತೆ ತೋರುತ್ತದೆ. ವಿಷ್ಣುವರ್ಧನನ ಕಿರಿಯ ರಾಣಿಯರಾದ ಚಿಕ್ಕಶಾಂತಲೆ, ಬೊಮ್ಮಲಾದೇವಿ ಹಾಗೂ ರಾಜಲಾದೇವಿಯರು ಸಹ ಹಲವಾರು ದೇವಾಲಯಗಳನ್ನು ನಿರ್ಮಿಸಿರುವುದು ತಿಳಿದುಬರುತ್ತದೆ.

ಚಿಕ್ಕ ಶಾಂತಲೆಯು ಕ್ರಿ.ಶ.1135ರಲ್ಲಿ ಅಕಾಲಿಕವಾಗಿ ಮರಣ ಹೊಂದಿದ ಮೇಲೆ ಅವಳ ತಾಯಿ ಜಕ್ಕಬ್ಬೆಯು ಹಳೇಬೀಡಿನ ಹತ್ತಿರದ ಯಲೆಗುಂದದಲ್ಲಿ ತನ್ನ ಮಗಳ ಸ್ಮರಣಾರ್ಥವಾಗಿ ಶಾಂತಲೇಶ್ವರ ಮತ್ತು ಬೊಪ್ಪಲೇಶ್ವರ ಎಂಬ ಎರಡು ಶೈವ ದೇವಾಲಯಗಳನ್ನು ನಿರ್ಮಿಸಿದಳು. ಇದಕ್ಕೆ ವಿಷ್ಣುವರ್ಧನನು ಸಹಾಯ ನೀಡಿದ ಎಂದು ತಿಳಿದುಬರುತ್ತದೆ. ಅಲ್ಲದೆ ಈ ದೇವಾಲಯಗಳಿಗೆ ದಾನ ದತ್ತಿಗಳನ್ನು ನಿರಂತರವಾಗಿ ನಿಡಿದಂತಹ ಹಲವಾರು ಉದಾಹರಣೆಗಳು ದೊರೆಯುತ್ತವೆ ಬೊಮ್ಮಲಾದೇವಿಯು ಸಹ ಬೆಂಚಿಗೆಲೆಯಲ್ಲಿ ಇದೇ ಸಮಯದಲ್ಲಿ ಬೊಮ್ಮಲೇಶ್ವರ ಎಂಬ ಹೆಸರಿನಲ್ಲಿ ದೇವಾಲಯ ನಿರ್ಮಾಣ ಮಾಡಿದಳು ಎಂದು ತಿಳಿದುಬರುತ್ತದೆ. ವಿಷ್ಣುವರ್ಧನನು ಕ್ರಿ.ಶ.1140ರಲ್ಲಿ ಈ ದೇವಾಲಯಕ್ಕೆ ದಾನ ನಿಡಿದ ಶಾಸನವಿದೆ.ಅಂತೆಯೇ ಸೋದರ ಮಾವನಾದ ಮಾಂಡಳಿಕ ಮಂಚೆಯರಸನು ಮಂಚೇಶ್ವರ ದೇವಾಲಯವನ್ನು ವಿಷ್ಣುಸಮುದ್ರದಲ್ಲಿ (ಕೆರೆಸಂತೆ) ನಿರ್ಮಿಸಿ ಆ ದೇವಾಲಯಕ್ಕೆ ಕ್ರಿ.ಶ.1141ರಲ್ಲಿ ದತ್ತಿಯನ್ನು ನೀಡಿದ ವಿವರ ದೊರೆಯುತ್ತದೆ. ವಿಷ್ಣುವರ್ಧನನ ತಾಯಿ ತುವ್ವಲಾದೇವಿಯು ಪಾಂಡವಪುರ ತಾಲ್ಲೂಕಿನ ಯಾದವಪುರದಲ್ಲಿ(ಹೊಸಕೋಟೆ) ಶೈವದೇವಾಲಯಕ್ಕೆ ತುವ್ವಲಾದೇವಿ ಹಾಗೂ ಅವಳ ತಮ್ಮ ತುವಲಾಳರು ಮತ್ತು ವಿಷ್ಣುವರ್ಧನನನ್ನು ಬೇಟಿ ನೀಡಿ ಅಲ್ಲಿನ ಶಿವಯೋಗಿ ಧರ್ಮನರಸಿ ಭಟ್ಟನಿಗೆ ದಾನ ನೀಡಿದರೆಂದು ತಿಳಿದುಬರುತ್ತದೆ. ಇಲ್ಲಿನ ಶಿವಲಿಂಗಕ್ಕೆ ನಿಷ್ಕಾಮೇಶ್ವರ ಎಂಬ ಹೆಸರಿತ್ತು, ತುವಲಾಳನು ಮರಣ ಹೊಂದಿದ ನಂತರ ಆತನ ಅಕ್ಕ ಮಾದಲಾದೇವಿಯು ವಿಷ್ಣುಸಮುದ್ರದಲ್ಲಿ ತುವ್ವಲೇಶ್ವರ ಎಂಬ ದೇವಾಲಯವನ್ನು ಅವನ ಸ್ಮರಾಣಾರ್ಥವಾಗಿ ನಿರ್ಮಿಸಿದಳು. ಇದಕ್ಕೆ ಶಂಕರಹಳ್ಳಿ ಎಂಬ ಗ್ರಾಮವನ್ನು ದಾನ ನೀಡಲಾಗಿತ್ತು ಎಂದು ಕಂಡುಬರುತ್ತದೆ. ವಿಷ್ಣುವರ್ಧನನು ತಾನು ನೇರವಾಗಿ ಶೈವ ದೇವಾಲಯಗಳ ನಿರ್ಮಾಣದಲ್ಲಿ ಭಾಗವಹಿಸದೆ ಹೋದರು ಶೈವ ದೇವಾಲಯಗಳಿಗೆ ದಾನ ನೀಡಿದ ವಿವರಗಳು ಅವನ ಕಾಲದ ಶಾಸನಗಳಲ್ಲಿ ಕಂಡುಬರುತ್ತವೆ, ಅವುಗಳಲ್ಲಿ ಪ್ರಮುಖ ದೇವಾಲಯಗಳು ಇಂತಿವೆ.

ವಿಷ್ಣುವರ್ಧನನ ಕಾಲದಲ್ಲಿ ಹಲವಾರು ಶೈವ ದೇವಾಲಯಗಳು ನಿರ್ಮಾಣವಾಗಿದರೂ ವಾಸ್ತು ಮತ್ತು ಕಲಾದೃಷ್ಟಿಯಿಂದ ಎಲ್ಲವು ಅಷ್ಟು

ಪ್ರಮುಖವಾದವುಗಳಲ್ಲ ಇವುಗಳಲ್ಲಿ ಕೆಲವೇ ಕೆಲವು ದೇವಾಲಯಗಳು ಮಾತ್ರ ಹೆಚ್ಚಿನ ರೀತಿಯ ವಾಸ್ತು ಮತ್ತು ಶಿಲ್ಪಕಲೆಯನ್ನು ಹೊಂದಿವೆ, ಅಂತಹ ಶೈವ ದೇವಾಲಯಗಳಿಗೆ ಉದಾಹರಣೆ ಎಂದರೆ ಹಳೇಬೀಡು ಹೊಯ್ಸಳೇಶ್ವರ, ಮರಳೆಯ ಸಿದ್ಧೇಶ್ವರ ಹಾಗೂ ಶಾಂತಿ ಗ್ರಾಮದ ದರ್ಮೇಶ್ವರ ದೇವಾಲಯಗಳು ಅಂತ್ಯಂತ ಮುಖ್ಯವಾದವುಗಳು.

**ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯ**

ಹೊಯ್ಸಳರ ದೇವಾಲಯಗಳ ಸಂಪೂರ್ಣ ವಾಸ್ತು ನಿರ್ಮಾಣವು ಕೇವಲ ಒಬ್ಬ ರಾಜನ ಕಾಲದಲ್ಲಿ ಆಗಿಲ್ಲ, ವಿಷ್ಣುವರ್ಧನನ ಕಾಲದಲ್ಲಿ ಕ್ರಿ.ಶ.1120ರಲ್ಲಿ ಇದು ಪ್ರಾರಂಭವಾಗಿ ನರಸಿಂಹ ಮತ್ತು ಬಲ್ಲಾಳರ ಕಾಲದಲ್ಲಿಯು ಸಹ ಹೊಯ್ಸಳರ ವಿಶೇಷ ವಾಸ್ತು ನಿರ್ಮಾಣ ಕಾರ್ಯ ಮುಂದುವರೆಯಿತು, ಇವರ ಕಾಲದಲ್ಲಿ ನಿರ್ಮಾಣವಾದ ಕೆಲವು ದೇವಾಲಯಗಳ ವಾಸ್ತುಗಳು ಹಲವಾರು ಹಂತಗಳಲ್ಲಿ ಹೊಸ ಹೊಸ ಜೊಡಣೆಗಳನ್ನು ಮಾಡಿರುವುದು ಸ್ಪಷ್ಟವಾಗಿ ಗುರುತಿಸಬಹುದು.

ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವು ಮೂಲತಃ ವಿಷ್ಣುವರ್ಧನನಿಂದಲೇ ನಿರ್ಮಾಣ ಪ್ರಾರಂಭವಾಯಿತು, ಕ್ರಿ.ಶ.1121ರ ಒಂದು ಶಾಸನದಲ್ಲಿ ವಿಷ್ಣುವರ್ಧನನು ಈ ದೇವಾಲಯಕ್ಕೆ ದಾನ ದತ್ತಿಗಳನ್ನು ನೀಡಿದ ವಿವರಗಳು ಶಾಸನೋಕ್ತವಾಗಿವೆ. ಈ ದೇವಾಲಯವನ್ನು ವಿಷ್ಣುವರ್ಧನನ ಅಧಿಕಾರಿ ಕೇತಮಲ್ಲ ಎಂಬುವನು ರಾಜನ ಆಜ್ಞೆಯ ಮೇರೆಗೆ ನಿರ್ಮಿಸಿದನೆಂದು ಅನಂತರದ ಕಾಲದಲ್ಲಿ ಬದಲಾವಣೆಗಳು ಆದವು ಎಂದು ತಿಳಿದುಬರುತ್ತದೆ. ಹೊಯ್ಸಳೇಶ್ವರ ದೇವಾಲಯ ಮೂಲದಲ್ಲಿ ಮತ್ತು ಒಟ್ಟಾರೆ ಬಾಹ್ಯದೃಶ್ಯದಲ್ಲಿ ಬೇಲೂರಿನ ಕೇಶವ ದೇವಾಲಯದಂತೆ ಇತ್ತೆಂದು ಹೇಳಲಾಗಿದೆ. ಹೊಯ್ಸಳೇಶ್ವರ ದೇವಾಲಯವು ದ್ವಿಕೂಟಚಲಾ ದೇವಾಲಯವಾಗಿದೆ. ಮೊದಲಿನ ವಿನ್ಯಾಸ ವಿಸ್ತೀರ್ಣಗಳು ಈಗಲೂ ಹಾಗೆಯೇ ಉಳಿದುಕೊಂಡು ಬಂದಿವೆ ಅನಂತರದಲ್ಲಿ ಬಿತ್ತಿಗಳಲ್ಲಿರುವ ಶಿಲ್ಪಗಳಲ್ಲಿ ಹಲವಾರು ಬದಲಾವಣೆಗಳು ಆಗಿವೆ.

**ಶಾಂತಿಗ್ರಾಮದ ಧರ್ಮೇಶ್ವರ ದೇವಾಲಯ**

ಶಾಂತಿಗ್ರಾಮದ ಧರ್ಮೇಶ್ವರ ದೇವಾಲಯವು ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖವಾದ ಅಗ್ರಹಾರವಾಗಿತ್ತು ಈ ಗ್ರಾಮದಲ್ಲಿ ಹಲವಾರು ದೇವಾಲಯಗಳಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಧರ್ಮೇಶ್ವರ, ಚನ್ನಕೇಶವ ಮತ್ತು ಭೋಗವರದ ಯೋಗನರಸಿಂಹಸ್ವಾಮಿ ದೇವಾಲಯಗಳು.

ಧರ್ಮೇಶ್ವರ ದೇವಾಲಯವು ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣವಾಗಿದೆ. ಈ ದೇವಾಲಯವನ್ನು ಹೆಗ್ಗಡೆ ಮಾರಸಿಂಗಮಯ್ಯನು ಪ್ರತಿಷ್ಠಾಪಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದ ಕಾಲ ಶಕವರ್ಷ 1044 ಪುಷ್ಯ ಬಹುಳ ಉತ್ತರಾಯಣ ಸಂಕ್ರಮಣ ಪುಣ್ಯಕಾಲದಲ್ಲಿ ಧರ್ಮೇಶ್ವರ ದೇವರ ಪ್ರತಿಷ್ಠಾಪನೆ ಆಯಿತು. ಈ ಕಾಲ ಕ್ರಿ.ಶ.1122 ಡಿಸೆಂಬರ್ 25ಕ್ಕೆ ಸರಿ ಹೊಂದುತ್ತದೆ ಸೊಮವಾರ. ಸಾಮಾನ್ಯವಾಗಿ ಹಿಂದಿನ ಕಾಲದಲ್ಲಿ ದೇವಾಲಯಗಳನ್ನು ನಿರ್ಮಿಸಿದಾಗ ಅಥವಾ ಏನಾದರೂ ದಾನ ಕೊಡುವಾಗ ಉತ್ತರಾಯಣ ಅಥವಾ ದಕ್ಷಿಣಾಯಣ ಪುಣ್ಯ ಪರ್ವಗಳನ್ನು ಆರಿಸಿಕೊಳ್ಳುತ್ತಿದ್ದರು, ಇದರಿಂದ ದಾನ ನೀಡಿದ ವ್ಯಕ್ತಿಗೆ ಹೆಚ್ಚಿನ ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ

ಬೇರೂರಿತ್ತು, ಆ ನಂಬಿಕೆ ಇಂದಿಗೂ ಹಿಂದು ಧರ್ಮದಲ್ಲಿ ಹಾಸು ಹೊಕ್ಕಾಗಿದೆ.

ಈ ಶಾಸನದಲ್ಲಿ ಉಲ್ಲೇಖಿತಗೊಂಡ ಮಾರಸಿಂಗಮಯ್ಯನು ಶಿವನ ಭಕ್ತನಾಗಿದ್ದು ಬಳ್ಳಿಗಾಮೆಯ ಊರಿನವನಾಗಿದ್ದನು. ಈತ ಬಳ್ಳಿಗಾಮೆಯಲ್ಲಿಯೂ ಧರ್ಮೇಶ್ವರ ಎಂಬ ದೇವಾಲಯ ನಿರ್ಮಾಣ ಮಾಡಿದನು ಮತ್ತು ಅವನ ಮಗಳಾದ ವಿಷ್ಣುವರ್ಧನನ ಪತ್ನಿ ಶಾಂತಲದೇವಿಯು ಈ ದೇವಾಲಯಕ್ಕೆ ದಾನ ದತ್ತಿಗಳನ್ನು ನೀಡಿದ ಉಲ್ಲೇಖವು ದೊರೆಯುತ್ತದೆ. ಇಲ್ಲಿಯು ಸಹ ವಿಷ್ಣುವರ್ಧನನು ಶಾಂತಳೆಗೆ ಹಾಗೂ ಸೀಗೆನಾಡಿನ ಶಾಂತಿಗ್ರಾಮದ ಇನ್ನೂರ ಇಪತ್ತು ಜನ ಬ್ರಾಹ್ಮಣರಿಗೆ ಹಾರುವನಹಳ್ಳಿ ಮತ್ತು ಇನ್ನೀತ್ತರ ಗ್ರಾಮಗಳನ್ನು ದಾನವಾಗಿ ನೀಡಿದ್ದ. ದಾನ ನೀಡಿದ ಕೆಲವು ಭೂಮಿಗಳು, ಮಾರಸಿಂಗಮ್ಮಯ್ಯ ನಿರ್ಮಿಸಿದ ಧರ್ಮೇಶ್ವರ ದೇವಾಲಯಕ್ಕೂ ಮತ್ತು ಶಿವಶಕ್ತಿ ಪಂಡಿತನೆಂಬ ಸೇನಾಪತಿಗೂ ನೀಡಿರುವುದನ್ನು ಈ ಶಾಸನವು ಉಲ್ಲೇಖಿಸುತ್ತದೆ. ಈ ಶಾಸನ  ದಾನ ಶಾಸನವಾಗಿದ್ದರು ವಿಷ್ಣುವರ್ಧನನ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತಾ ಅವನ ಬಿರುದು ಬಾವಲಿಗಳನ್ನು ಸಹ ಸುದೀರ್ಘವಾಗಿ ವಿವರಿಸುತ್ತದೆ. ಸುಮಾರು ಐವತ್ತು ಮೂರು ಸಾಲುಗಳ ಈ ಶಾಸನ ವಿಷ್ಣುವರ್ಧನನ ಕಾಲದ ಐತಿಹಾಸಿಕ ಮಹತ್ವವನ್ನು ವಿವರಿಸುವ ಪ್ರಮುಖ ದಾಖಲೆಯಾಗಿದೆ.

**ಮರಳೆಯ ಸಿದ್ಧೇಶ್ವರ ದೇವಾಲಯ**

ವಿಷ್ಣುವರ್ಧನನ ಕಾಲದ ಮತ್ತೊಂದು ಮುಖ್ಯವಾದ ಶೈವದೇವಾಲಯ ಮರಳೆಯ ಸಿದ್ಧೇಶ್ವರ ದೇವಾಲಯವಾಗಿದೆ. ಈ ದೇವಾಲಯವು ಕ್ರಿ.ಶ.1130ರಲ್ಲಿಯೇ ವಿಷ್ಣುವರ್ಧನನ ಅಧಿಕಾರಿ ರಾಯಣ ದಂಡನಾಥನಿಂದಲೇ ನಿರ್ಮಾಣವಾಗಿದೆ. ನಂತರದ ಶಾಸನಗಳಲ್ಲಿ ಈ ದೇವಾಲಯದ ಮುಖ್ಯ ದೇವರನ್ನು 'ಕುಲದೇವ' ಎಂದು ಹೆಸರಿಸಲಾಗಿದೆ. ನರಸಿಂಹ ಮತ್ತು ಬಲ್ಲಾಳನ ಕಾಲದಲ್ಲಿ ಈ ದೇವಾಲಯಕ್ಕೆ ಹಲವು ದಾನ ದತ್ತಿಗಳನ್ನು ನೀಡಲಾಗಿದೆ.

ಈ ಗ್ರಾಮದಲ್ಲಿ ಸಿದ್ಧೇಶ್ವರ ಮತ್ತು ಕೇಶವ ಎಂಬ ಎರಡು ದೇವಾಲಯಗಳಿದ್ದು ವಿಸ್ತೀರ್ಣದಲ್ಲಿ, ವಿನ್ಯಾಸದಲ್ಲಿ, ಆಕಾರದಲ್ಲಿ ಕೇಶವ ದೇವಾಲಯದ ಹಾಗೆ ಇರುವ ಈ ದೇವಾಲಯ ಕೇಶವ ದೇವಾಲಯಕ್ಕಿಂತ ತುಸು ಚಿಕ್ಕದಾಗಿದೆ. ತಳ ವಿನ್ಯಾಸದಲ್ಲಿ ಗರ್ಭಗೃಹ. ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ, ಬಾಹ್ಯ ವಿನ್ಯಾಸದಲ್ಲಿ ಅಧಿಷ್ಠಾನದ ಮೇಲೆ ನಿರ್ಮಾಣವಾಗಿದ್ದು, ಗರ್ಭಗೃಹ ದ್ರಾವಿಡ ವಿಮಾನವನ್ನು ಹೊಂದಿದೆ. ಈ ವಿಮಾನವನ್ನು ಇತ್ತೀಚೆಗೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ ಕೇಶವ ದೇವಾಲಯದಲ್ಲಿ ಕಂಡುಬರುವಂತೆ ಬಿಡಿಯಾದ ಕೊಷ್ಠವು ಕಂಡುಬರುವುದಿಲ್ಲ. ದೇವಾಲಯದ ಅಧಿಷ್ಠಾನವು, ಜಗತಿ, ಪಟ್ಟಿಕೆಗಳನ್ನು ಹೊಂದಿದೆ, ಈ ದೇವಾಲಯದ ಬಿತ್ತಿ ಸಾಕಷ್ಟು ಅಲಂಕೃತವಾಗಿದ್ದು ಹಲವಾರು ಶಿಲ್ಪಗಳಿಂದ ಹೆಚ್ಚಿನ ಶಿಲ್ಪಗಳು ಶೈವ ಧರ್ಮದ ದೇವತಾ ಶಿಲ್ಪಗಳಾಗಿವೆ. ಕಪೂತ ಹಾರ ಕೂಡ ಹಲವಾರು ಅಲಂಕರಣಗಳಿಂದ ಕೂಡಿವೆ.

ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವ ಶೈವ ದೇವಾಲಯಗಳ ರಚನೆಯನ್ನು ಗಮನಿಸಿದಾಗ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ನಂತರ ಹೆಚ್ಚು ಆಕರ್ಷಕವಾಗಿ ಕಂಡುಬರುವ ದೇವಾಲಯವೆಂದರೆ ಮರಳೆಯ

ಸಿದ್ಧೇಶ್ವರ ದೇವಾಲಯವೇ ಆಗಿದೆ. ವಿಷ್ಣುವರ್ಧನನು ನೇರವಾಗಿ ಸ್ವತಃ ತಾನೇ ಶೈವದೇವಾಲಯಗಳನ್ನು ನಿರ್ಮಿಸಲಿಲ್ಲ ಎಂಬುದು ಸತ್ಯ. ಆದರೆ ಅವನ ಕುಟುಂಬ ವರ್ಗದವರು, ಮಂತ್ರಿಗಳು ದಂಡನಾಯಕರುಗಳಲ್ಲಿ ಕೆಲವರು ಶೈವ ಆರಾಧಕರಾಗಿದ್ದರು. ಶೈವ ದೇವಾಲಯಗಳನ್ನು ಗಣನೆಗೆ ತೆಗೆದುಕೊಂಡರೆ ವೈಷ್ಣವ ದೇವಾಲಯಗಳಿಗಿಂತ ಶೈವ ದೇವಾಲಯಗಳ ಸಂಖ್ಯೆಯೇ ಹೆಚ್ಚಾಗಿ ಇರುವುದು ಕಂಡುಬರುತ್ತದೆ. ಆದರೆ ದೇವಾಲಯದ ಅಲಂಕಾರದ ದೃಷ್ಠಿಯಿಂದ ಗಮನಿಸಿದಾಗ ವೈಷ್ಣವ ದೇವಾಲಯಗಳು ಹೆಚ್ಚಿನ ರೀತಿಯಲ್ಲಿ ಭಿತ್ತಿ ಶಿಲ್ಪಗಳಿಂದ ಹಾಗೂ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ದೇವಾಲಯಗಳು ಕಂಡುಬರುತ್ತವೆ. ಹೆಚ್ಚಿನ ಸಂಖ್ಯೆಯ ಶೈವ ದೇವಾಲಯಗಳು ಅತ್ಯಂತ ಸಾಧಾರಣ ವಾಸ್ತು ಕಟ್ಟಡಗಳನ್ನು ಹೊಂದಿವೆ ವಾಸ್ತು ಶಿಲ್ಪದ ದೃಷ್ಠಿಯಿಂದ ಹೆಚ್ಚು ಪ್ರಾಮುಖ್ಯತೆ ಇವುಗಳಿಗೆ ಕಡಿಮೆ. ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣವಾಗಿರುವ ವಾಸ್ತು ಮತ್ತು ಶಿಲ್ಪಕಲೆ ದೃಷ್ಠಿಯಿಂದ ಗಮನಾರ್ಹವಾಗಿರುವ ಮೂರೇ ಮೂರು ದೇವಾಲಯಗಳನ್ನು ನಾವು ಮೇಲೆ ಗಮನಿಸಿದ್ದೇವೆ. ಇದರಿಂದ ಶೈವ ದೇವಾಲಯದ ವಾಸ್ತುವಿಗೆ ಎಷ್ಠು ಮಹತ್ವ ಇತ್ತು ಎಂಬುದು ತಿಳಿದುಬರುತ್ತದೆ.

ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣವಾದ ಕೆಲವು ಶೈವ ದೇವಾಲಯಗಳ ಉಲ್ಲೇಖವನ್ನು ನೀಡುವುದಾದರೆ ಇತನ ಕಾಲದ ಸು.120 ಶಾಸನಗಳಲ್ಲಿ ದೇವಾಲಯಗಳಿಗೆ ದಾನ ನೀಡಿದ ಬಗ್ಗೆ ಮಾಹಿತಿ ಒದಗಿಸುತ್ತವೆ. ಉಳಿನಾಗೂರು ಎಂಬಲ್ಲಿ ದೊರೆತ ಕ್ರಿ.ಶ.1100ರ ಶಾಸನ ಶಿವಾಲಯಕ್ಕೆ ದಾನ ನೀಡಿದ ವಿವರಗಳನ್ನು ತಿಳಿಸುತ್ತದೆ. ಕ್ರಿ.ಶ.1122ರ ಈಶ್ವರಹಳ್ಳಿಯ ಶಾಸನದಲ್ಲಿ ವಿಷ್ಣುವರ್ಧನನು ದೇವಾಲಯಕ್ಕೆ ದಾನ ನೀಡಿದ ವಿವರವು ತಿಳಿದುಬರುತ್ತದೆ. ವಿಷ್ಣುವರ್ಧನನ ಪಟ್ಟ ಮಹಿಷಿ ಶಾಂತಲೆಯ ಸೋದರ ಸಂಬಂಧಿ ಬಳ್ಳಯ್ಯ ನಾಯಕ ಎಂಬುವನು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಮಲಗೂರು ಎಂಬಲ್ಲಿ ಕ್ರಿ.ಶ.1116ರಲ್ಲಿ ಕರ್ಮಠೇಶ್ವರ ದೇವರಿಗೆ ದೇವಾಲಯ ನಿರ್ಮಿಸಿದ ವಿವರ ತಿಳಿದುಬರುತ್ತದೆ. ವಿರುಪಾಕ್ಷಪುರದಲ್ಲಿ ಜಯಗೊಂಡೀಶ್ವರ ಮತ್ತು ಚಂಡೀಶ್ವರ ದೇವಾಲಯಗಳಿಗೆ ಶಾಂತಲೆ ಮತ್ತು ವಿಷ್ಣುವರ್ಧನ ಸೇರಿ ಪಂಚಪ್ರಧಾನರೊಂದಿಗೆ ಕೂಡಿ ದಾನ ದತ್ತಿಗಳನ್ನು ಬಿಟ್ಟ ವಿಷಯ ಶಾಸನೋಕ್ತವಾಗಿದೆ. ಕ್ರಿ.ಶ.1135ರಲ್ಲಿ ಚಿಕ್ಕಶಾಂತಲೆಯು ಮರಣಹೊಂದಲು ಆಕೆಯ ತಾಯಿಯು ವಿಷ್ಣುವರ್ಧನನ ಸಹಾಯದಿಂದ ಹಳೇಬೀಡಿನ ಹತ್ತಿರದಲ್ಲಿರುವ ಎಲೆಗುಂದದಲ್ಲಿ ಶಾಂತಲೇಶ್ವರ ಮತ್ತಿ ಬೊಪ್ಪೇಶ್ವರ ದೇವಾಲಯಗಳನ್ನು ತನ್ನ ಮಗಳ ಸ್ಮರಾಣಾರ್ಥ ನಿರ್ಮಿಸಿದಳೆಂದು ಮತ್ತು ದೇವತೆಗೆ ಹಾಗೂ ಬ್ರಾಹ್ಮಣರಿಗೆ ರಾಜನಿಂದ ಹಲವಾರು ದಾನ ದತ್ತಿಗಳನ್ನು ಕೊಡಿಸಿದಳು ಎಂದು ತಿಳಿದುಬರುತ್ತದೆ. ವಿಷ್ಣುವರ್ಧನನ ಇನ್ನುಳಿದ ರಾಣಿಯರುಗಳು ನಿರ್ಮಿಸಿದ ಕೆಲವು ದೇವಾಲಯಗಳಿಗೂ ಸಹ ಬಿಟ್ಟಿದೇವನು ವಿವಿದ ರೀತಿಯಲ್ಲಿ ದಾನಗಳನ್ನು ನೀಡಿದ್ದಾನೆ.

ವಿಷ್ಣುವರ್ಧನನ ಪತ್ನಿ ಬೊಮ್ಮಲೆಯು ಕ್ರಿ.ಶ.1140ರಲ್ಲಿ ಬೆಂಚಿಗೆರೆಯಲ್ಲಿ ಬೊಮ್ಮಲೇಶ್ವರ ದೇವಾಲಯ ನಿರ್ಮಿಸಿದಳು. ರಾಜಲಾದೇವಿಯು(ಪತ್ನಿ) ತನ್ನ ಸೋದರ ಮಾವ ಮಂಚೆಯರಸನು ಮಂಚೇಶ್ವರ ದೇವಾಲಯ ನಿರ್ಮಿಸಿದ. ಮುಂದೆ ವಿಷ್ಣುವರ್ಧನನ ತಾಯಿ ತುವ್ವಲಾದೇವಿಯು ಪಾಂಡವಪುರ ತಾಲ್ಲೂಕಿನ ಅಂದಿನ ಯಾದವಪುರವಾದ ಇಂದಿನ ಹೊಸ ಕೋಟೆಯಲ್ಲಿರುವ 'ನಿಷ್ಕಾಮೇಶ್ವರ' ದೇವಾಲಯ

ನಿರ್ಮಾಣ ಮಾಡಿಸಿದಳು. ವಿಷ್ಣುವರ್ಧನನ ಮಲತಾಯಿ ಮಾದಲಾದೇವಿಯು ತುವ್ವಲೇಶ್ವರ ಎಂಬ ದೇವಾಲಯ ನಿರ್ಮಿಸಿ ದಾನ ದತ್ತಿ ನೀಡಿದಳು. ಬಳ್ಳಿಗಾವಿಯ ಹತ್ತಿರ ಸಂತೇಕೆರೆಯಲ್ಲಿ ಶೈವರ ದೇವಾಲಯದ ಬಳಿ ಇರುವ ಬಗ್ಗೆ ಶಾಸನೋಕ್ತ ಉಲ್ಲೇಖವಿದೆ. ವಿಷ್ಣುವರ್ಧನನ ದಂಡನಾಯಕರಾದ ಗಂಗರಾಜ ಮತ್ತು ಪುಣಿಸಮಯ್ಯರು ಮೂಲತಃ ಜೈನ ಧರ್ಮಿಯರಾದರು ಸಹ ವೈಷ್ಣವ ಮತ್ತು ಶೈವ ದೇವಾಲಯಗಳಿಗೆ ದಾನ ದತ್ತಿ ನೀಡಿದ ಉಲ್ಲೇಖವಿದೆ. ಗಂಗರಾಜನ ಸ್ವಂತ ಊರಾದ ನಾಗರ ನವಿಲೆಯು ಒಂದು ಪ್ರಮುಖ ಶೈವ ಕೇಂದ್ರವಾಗಿತ್ತು. ಗಂಗರಾಜನ ಹೆಸರಿನಲ್ಲಿ 1134ರಲ್ಲಿ ಮಹದೇವ ಶಕ್ತಿ ಎಂಬ ಶೈವ ಗುರುವಿನ ನೇತೃತ್ವದಲ್ಲಿ ಬೆಳಗೊಲಿ ಅಗ್ರಹಾರದಲ್ಲಿ ಗಂಗೇಶ್ವರ ಎಂಬ ದೇವಾಲಯ ನಿರ್ಮಿಸಿದ. ಕ್ರಿ.ಶ.1138ರಲ್ಲಿ ಗಂಗರಾಜನ ಮೊಮ್ಮಗ ಏಚಮಯ್ಯನು ನಾಲಣಾಕೆರೆಯಲ್ಲಿ ಮಲ್ಲಿಕಾರ್ಜುನ ದೇವರಿಗೆ ವಿಷ್ಣುವರ್ಧನನಿಂದ ಗೌಡಿಕೆ ದತ್ತಿ ಪಡೆದು ನೀಡಿದನೆಂದು ತಿಳಿಯುತ್ತದೆ.

ವಿಷ್ಣುವರ್ಧನನ ಕಾಲದಲ್ಲಿ ಮೂಲತಃ ಶ್ರೀ ವೈಷ್ಣವ ಧರ್ಮದ ದೇವಾಲಯ ನಿರ್ಮಾಣಕ್ಕೆ ನೀಡಿದಷ್ಟೆ ಸಮಾನ ಪ್ರಾಶಸ್ಯವನ್ನು ಶೈವ ಮತ್ತು ಜೈನ ಧರ್ಮದ ದೇವಾಲಯ ನಿರ್ಮಾಣದಲ್ಲಿಯು ಕಾಣಬಹುದು, ಶೈವ ದೇವಾಲಯಗಳು ವಾಸ್ತು ಮತ್ತು ಶಿಲ್ಪಕಲೆಯಲ್ಲಿ ಮತ್ತೊಂದು ಪ್ರಮುಖ ಭಾಗವಾಗಿದೆ ಆಕಾಲದಲ್ಲಿ ಘನೀಕರಣಗೊಳ್ಳಲು ಪ್ರಾರಂಭಿಸಿದ್ದ ಶಿಲ್ಪಗ್ರಂಥಗಳು ದೇವ ದೇವತೆಯ ಪ್ರತಿಮಾಲಕ್ಷಣಶಾಸ್ತ್ರ ಗ್ರಂಥಗಳನ್ನು ಹೊಯ್ಸಳ ಶಿಲ್ಪಿಗಳು ತಿಳಿದಿದ್ದರು ಎಂದು ಹೇಳಬಹುದು. ಆಯಾ ದೇವಾಲಯದಲ್ಲಿ ಪ್ರಮುಖ ಶಿಲ್ಪಗಳನ್ನು ನಿರ್ಮಿಸುವಾಗ ಶಿಲ್ಪಿಗಳು ಹಲವಾರು ವಿಧಗಳನ್ನು ಅನುಸರಿಸಿರುವುದನ್ನು ನಾವು ವಿಶೇಷವಾಗಿ ಗಮನಿಸಬಹುದು. ವಿಷ್ಣುವರ್ಧನನು ಮೂಲತಹ ಜೈನನಾಗಿದ್ದು ಅನಂತರ ವೈಷ್ಣವನಾಗಿದ್ದರು ಸಹ ಈತನ ಸಾಮ್ರಾಜ್ಯದಲ್ಲಿ ಮತ್ತೊಂದು ಧರ್ಮದ ಪ್ರೊತ್ಸಾಹಕ್ಕೂ ಸಹ ಸಾಕಷ್ಟು ಉತ್ತೇಜನ ನೀಡಿದ್ದ ಮತ್ತು ಅವುಗಳ ಮುಂದುವರಿಕೆಗೆ ಸಮಕಾಲೀನವಾಗಿ ದಾನ ದತ್ತಿಗಳನ್ನು ಇತರ ದೇವಾಲಯಗಳಿಗೆ ನೀಡಿದಂತೆ ಶೈವ ದೇವಾಲಯಗಳಿಗೂ ನೀಡಿದ್ದ ಎಂಬುದು ಈ ಹಿಂದೆ ಚರ್ಚಿಸಿರುವ ದೇವಾಲಯಗಳ ಶಾಸನ ಉಲ್ಲೇಖದಿಂದ ತಿಳಿದುಬರುತ್ತದೆ. ಅಂತೆಯೇ ಈತ ಒಬ್ಬ ಸರ್ವಧರ್ಮಸಮನ್ವಯ ರಾಜನಾಗಿದ್ದ ಎಂಬುದಕ್ಕೆ ಇವನ ಕಾಲದಲ್ಲಿ ನಿರ್ಮಾಣವಾದ ಶೈವ, ವೈಷ್ಣವ ಮತ್ತು ಜೈನ ದೇವಾಲಯಗಳೇ ಸಾಕ್ಷಿಯಾಗಿವೆ.

**ಪರಾಮರ್ಶನ ಗ್ರಂಥಗಳು**

1) ಅಯ್ಯರ್ ಕೆ.ವಿ. : ಶಾಂತಲಾ, ಬೆಂಗಳೂರು–1982
2) ಕೃಷ್ಣರಾವ್ ಎಂ.ಹೆಚ್. : ಕನ್ನಡ ನಾಡಿನ ಚರಿತ್ರೆ–ಕರ್ನಾಟಕದ ಕಲೆ, ಬೆಂಗಳೂರು–1976
3) ಚಿದಾನಂದ ಮೂರ್ತಿ ಎಂ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು–1966
4) ಗೋಪಾಲ್, ಬಿ.ಆರ್. : ಕರ್ನಾಟದ ಕಲೆ ಮತ್ತು ವಾಸ್ತು, ಬೆಂಗಳೂರು–1993
5) ತಿಪ್ಪೇರುದ್ರಸ್ವಾಮಿ ಹೆಚ್. : ಕರ್ನಾಟಕ ಸಂಸ್ಕೃತಿ ಸಮಿಕ್ಷೆ, ಮೈಸೂರು–1985
6) ರಘುನಾಥ ಭಟ್ ಹೆಚ್.ಆರ್. : ಹೊಯ್ಸಳ ವಾಸ್ತುಶಿಲ್ಪ ಪರಿಚಯ, ಬೆಂಗಳೂರು–1979
7) ವೆಂಕೋಬರಾವ್ : ಮೈಸೂರು ದೇಶದ ವಾಸ್ತುಶಿಲ್ಪ, ಬೆಂಗಳೂರು–1928
8) ಶ್ರೀಕಂಠಶಾಸ್ತ್ರಿ, ಎಸ್. : ಹೊಯ್ಸಳ ವಾಸ್ತುಶಿಲ್ಪ, ಮೈಸೂರು–1982

9) ಎಪಿಗ್ರಾಫಿಯಾ ಕರ್ನಾಟಕ ಸಂಪುಟಗಳು : 1 ರಿಂದ 13
10) ಡಾ.ಕೆ.ಎನ್.ಮೋಹನ್– ಹೊಸಹೊಳಲು ಮತ್ತು ನುಗ್ಗಿಹಳ್ಳಿ ಹೊಯ್ಸಳ ದೇವಾಲಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ. (ಅಪ್ರಕಟಿತ)
11) CousinsHenry :The Ancient of Aihole-ASI-1907-08
10) Coelho William- The Hoysala Vamsa, Bombay-1950
12) Gerard Roukema - Hoysala Architecture Medieval Temples of south on Karnataka, Vol-I&II -1994
13) Derett, J.D.M- The Hoysalas A Medieval Indian Royal Family, Oxford -1957
14) Setter, S.-Hoysala Sculpture in National Museum, Copenhagen-1975
15) Sheik Ali, B. The Hoysala Dynasty -MYS-1972
16) Dayananada Patel T. - Keshava Temple Somanathapura -A cultural Study- Delhi-1990

- Mysore Archaeological Department Reports.
- Karnataka Gazetteer.
- Epigraphic Carnatic.
- Manavika Karnataka, Journal of Mysore University.

❖❖❖

ಹಾಯಿಯ ಜೊತೆಯಲಿ ಸಾಗುವ ನಾವೆಯು
ಗಮ್ಯ ತೀರ ಸೇರೆ
ಸೀಳುಗೊಕ್ಕಿನ ಒಲುಮೆ ಗಾಯನ
ತೀರದ ನಗೆ ಚೀರೆ

# ಜಾನಪದ : ಬೆಟಗೇರಿಯವರ ದೃಷ್ಟಿ

**ಡಾ. ಮೋಹನ ಕುಂಟಾರ್**
ಪ್ರಾಧ್ಯಾಪಕರು, ಭಾಷಾಂತರ ವಿಭಾಗ, ಹಂಪಿ ಕನ್ನಡ ವಿವಿ, ವಿದ್ಯಾರಣ್ಯ

ಭಾಗ–1

ಬೆಟಗೇರಿ ಕೃಷ್ಣಶರ್ಮ ಅವರದು ಕನ್ನಡ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ. ಅಂದರೆ ಸಣ್ಣಕತೆ, ಕಾದಂಬರಿ, ಕಾವ್ಯ, ವಿಮರ್ಶೆ, ಸಂಶೋಧನೆ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರು ಸಾಹಿತ್ಯ ರಚನೆ ಮಾಡಿದ್ದಾರೆ. ಆದರೂ ಕನ್ನಡದಲ್ಲಿ ಜಾನಪದ ಅಧ್ಯಯನ ಶಾಖೆಯಲ್ಲಿನ ತಜ್ಞತೆಯ ಅರಿವನ್ನು ಅವರ ಬರವಣಿಗೆಗಳಲ್ಲಿ ಕಾಣಬಹುದು. ಜಾನಪದ ಅಧ್ಯಯನ ಎಂದರೆ ದೂರದಿಂದ ದೃಗ್‌ಸಾಕ್ಷಿಯಾಗಿಯೋ, ಓದಿನ ಪರಿಣಾಮವಾಗಿಯೋ ರೂಢಿಸಿಕೊಂಡ ಅರಿವಲ್ಲ. ಅದಕ್ಕೂ ಮಿಗಿಲಾಗಿ ಅವರ ಬಾಲ್ಯದ ದಿನಗಳಲ್ಲಿ ಅಂದರೆ ಇಪ್ಪತನೆಯ ಶತಮಾನದ ಆರಂಭದ ಎರಡು ಮೂರು ದಶಕಗಳ ಅವರ ಅನುಭವವೇ ಲೋಕ ಜ್ಞಾನದ ಅರಿವಿನಿಂದ ವಿಸ್ತಾರಗೊಂಡು ಪರಿಪಕ್ವಗೊಂಡಿದೆ. ಅದಕ್ಕೆ ಅವರ ಬರಹಗಳೇ ಸಾಕ್ಷಿ.

ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಬಗೆಗಿನ ಅಗಾಧವಾದ ಅರಿವು, ಜಾನಪದ ಬದುಕನ್ನು ಹತ್ತಿರದಿಂದ ನೋಡಿ ಅನುಭವಿಸಿದ ಪರಿಣಾಮವಾಗಿ ತಮ್ಮ ಬರವಣಿಗೆಯನ್ನು ಅಧಿಕೃತಗೊಳಿಸಿರುವುದೇ ಇದರ ವಿಶೇಷ. ಜಾನಪದವನ್ನು ನೋಡಿ ತಮ್ಮದೇ ಮಾತುಗಳಲ್ಲಿ ವಿವರಿಸುವ ಕೌಶಲ್ಯಕ್ಕಿಂತಲೂ ಜನಪದ ಬದುಕಿನ ನಡೆನುಡಿಗಳ ಸೊಗಡನ್ನು ಯಥಾವತ್ತಾಗಿ ಓದುಗರಿಗೆ ನೀಡುವ ಪ್ರಯತ್ನ ಅವರ ಬರವಣಿಗೆಗಳಲ್ಲಿ ಕಾಣಬಹುದು. ಜೊತೆಗೆ ಜಾನಪದ ಸಾಹಿತ್ಯವು ಲಿಖಿತ ಕನ್ನಡ ಸಾಹಿತ್ಯದಲ್ಲಿ ಅದರಲ್ಲಿಯೂ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ದಾಖಲಾದ ಬಗೆಯನ್ನು ಕಂಡುಕೊಳ್ಳುವ, ವಿಶ್ಲೇಷಿಸುವ ಅವರ ಪ್ರಯತ್ನವೂ ಶ್ರದ್ಧೇಯವೇ ಆಗಿದೆ.

ಜಾನಪದ ಅಧ್ಯಯನದಲ್ಲಿ ಗಮನ ಸೆಳೆಯುವ, ಬಹುಮುಖ್ಯ ಕೃತಿಗಳೆಂದರೆ ಕನ್ನಡ ಸಾಹಿತ್ಯ ಪರಿಷತ್ತು 1928ರಲ್ಲಿ ಪ್ರಕಟಿಸಿದ 'ಬೀಸು ಕಲ್ಲಿನ ಹಾಡುಗಳು' ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು 1976ರಲ್ಲಿ ಪ್ರಕಟಿಸಿದ 'ಕನ್ನಡ ಜಾನಪದ ಸಾಹಿತ್ಯ'. ಈ ಎರಡೂ ಕೃತಿಗಳನ್ನು ಹೊರತು ಪಡಿಸಿದರೆ ಕೆಲವೊಂದು ಬಿಡಿಲೇಖನಗಳಲ್ಲಿ ಅವರ ಜಾನಪದ ಅಧ್ಯಯನವು ವಿಸ್ತರಿಸಿದೆ. ಅವುಗಳಲ್ಲಿ ಜಾನಪದ ನಾಟಕ ನಡೆದು ಬಂದ ದಾರಿ, ದೊಡ್ಡಾಟಗಳು, ಜಾನಪದ ನಾಟ್ಯಗೀತೆಗಳು, ಕನ್ನಡ ಜಾನಪದ ಕಥಾವಾಹಿನಿ, ಜಾನಪದ ಶಿಶು ಸಾಹಿತ್ಯ ಮತ್ತು ಲಾವಣಿ ಸಾಹಿತ್ಯ, ಜಾನಪದ ಸಂಸ್ಕೃತಿ, ಜಾನಪದ ಸಾಹಿತ್ಯದಲ್ಲಿ ಮಾನವೀಯ ಆದರ್ಶ, ನಮ್ಮ ಹಬ್ಬ ಹುಣ್ಣಿಮೆಗಳು, ಕಾರಹುಣ್ಣಿಮೆ, ಗುಡಿಯ ಹುಣ್ಣಿಮೆ ಇತ್ಯಾದಿಗಳು ಪ್ರಮುಖವಾದ ಕೆಲವು ಲೇಖನಗಳು.

ಇವುಗಳಲ್ಲಿ 'ಕನ್ನಡ ಜಾನಪದ ಸಾಹಿತ್ಯ' ಕೃತಿಯಲ್ಲಿ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೂರು ಪ್ರಬಂಧಗಳಿವೆ. 1. ರೂಪ ವೈವಿಧ್ಯ, ವಿಷಯ, ವ್ಯಾಪ್ತಿ 2. ವಾಸ್ತವ ಜೀವನ–ಮಾನವೀಯ ಆದರ್ಶ 3. ಜಾನಪದ ರಂಗಭೂಮಿ–ಹೀಗೆ

ಮೂರು ವಿಷಯಗಳನ್ನು ಕುರಿತ ಬರೆಹಗಳಿವೆ. ಇವು 1972ರಲ್ಲಿ ಕಲಬುರಗಿಯ ಸ್ನಾತಕೋತ್ತರ ಕಲಾಭ್ಯಾಸ ಕೇಂದ್ರದಲ್ಲಿ ನೀಡಿದ ಉಪನ್ಯಾಸ ಮಾಲೆಯಲ್ಲಿ ಮಂಡಿಸಿದ ವಿಷಯಗಳ ಬರಹ ರೂಪ. ಜಾನಪದ ಸಾಹಿತ್ಯ ಅಧ್ಯಯನ ಕ್ಷೇತ್ರದ ಆಸಕ್ತರಿಗೆ, ಸಾಹಿತ್ಯಾಭ್ಯಾಸಿಗಳಿಗೆ ಮಾರ್ಗದರ್ಶಿಯಾಗಬಹುದಾದ ಮಾದರಿಯ ಬರಹಗಳಿವು.

ವಿಷಯವ್ಯಾಪ್ತಿ, ವೈವಿಧ್ಯ ಎಂಬ ಮೊದಲ ಪ್ರಬಂಧದಲ್ಲಿ ಜನಪದ ಜಾನಪದ ಮೀಮಾಂಸೆ, ದೇಶೀಯ–ಮಾರ್ಗಿಯ ಸಾಹಿತ್ಯಗಳು, ಇವೆರಡರಲ್ಲಿಯ ವೈಲಕ್ಷಣಗಳು, ಜಾನಪದ ಸಾಹಿತ್ಯ ಗುಣ ವಿಶೇಷ, ಜಾನಪದ ಸಾಹಿತ್ಯದಲ್ಲಿ ಜೀವನೇತಿಹಾಸವನ್ನು ಕುರಿತ ತಲಸ್ಪರ್ಶಿಯಾದ ವಿವರಗಳಿವೆ.

ಜಾನಪದ ಸಾಹಿತ್ಯದ ಬಗೆಗೆ ಕನ್ನಡದಲ್ಲಿ ಜಾಗೃತಿ ಮೂಡಿದುದು 20ನೇ ಶತಮಾನದ ಮೂರನೆಯ ದಶಕದಲ್ಲಿ, ಅದಕ್ಕೆ ಮೊದಲು ರೆವರೆಂಡ್ ಕಿಟ್ಟೆಲ್ ಅವರು ನಿಘಂಟು ರಚನೆಯ ಸಂದರ್ಭದಲ್ಲಿ ಜನಸಾಮಾನ್ಯರ ಆಡುನುಡಿಯ ಬಗೆಗೆ ಗಮನ ಹರಿಸಿದ್ದರು. ಆದರೆ ಅವರು ಪದ್ಯ ಸಾಹಿತ್ಯದ ಕಡೆಗೆ ಗಮನಕೊಟ್ಟಿರಲಿಲ್ಲ. ಕನ್ನಡದ ಮೊದಲ ವ್ಯಾಕರಣಕಾರರಾದ ಮುಳಬಾಗಿಲರು ಕನ್ನಡ ಭಾಷೆಯ ಪದಗಳನ್ನು ಮುಖ್ಯವಾಗಿ ದೇಶಿಯ, ಅನ್ಯದೇಶಿಯ, ತತ್ಸಮ, ತದ್ಭವ, ಗ್ರಾಮ್ಯ ಎಂದು ಐದು ರೀತಿಯಲ್ಲಿ ವಿಂಗಡಿಸಿ ಗುರುತಿಸಿದ್ದರು.ತುರಮುರಿ, ಶಾಂತಕವಿ ಮೊದಲಾದವರು ತಮ್ಮ ನಾಟಕಗಳಲ್ಲಿ ತಲಸ್ತರದ ಪಾತ್ರಗಳ ಬಾಯಲ್ಲಿ ಗ್ರಾಮೀಣ ಭಾಷೆಯನ್ನು ನುಡಿಸುತ್ತಿದ್ದರು. ಆದರೆ ಅವರಿಗೂ ಜಾನಪದ ಸಾಹಿತ್ಯ ಪ್ರಜ್ಞೆ ಇರಲಿಲ್ಲ. ಅಂದರೆ ಸಂಸ್ಕೃತ ನಾಟಕಗಳಲ್ಲಿ ಪ್ರಾಕೃತ ಭಾಷೆಯನ್ನು ಬಳಸಿದಂತೆ ಕನ್ನಡದಲ್ಲಿ ಆಡುನುಡಿಯನ್ನು ತಂದರು.

ಕನ್ನಡ ಆಡುನುಡಿ ಹಾಗೂ ಮೌಖಿಕ ಸಾಹಿತ್ಯವನ್ನು, 'ಹಳ್ಳಿಗರ ಸಾಹಿತ್ಯ', 'ಗ್ರಾಮೀಣ ಸಾಹಿತ್ಯ', 'ಪಾಮರ ಸಾಹಿತ್ಯ' ಮೊದಲಾದ ಹೆಸರುಗಳಲ್ಲಿ ಗುರುತಿಸಿಕೊಂಡು ಬಳಕೆಗೆ ಬಂತು.ಶಿಕ್ಷಣ ಪಡೆದವರಿಗೆ ಗ್ರಾಮೀಣ ಸಾಹಿತ್ಯದ ಶ್ರೀಮಂತಿಕೆ ಅರ್ಥವಾಗುತ್ತಿದ್ದಂತೆ. ಹಳ್ಳಿಗರು, ಗ್ರಾಮೀಣರು, ಪಾಮರರು ಈ ಪದಗಳ ಜಾಗದಲ್ಲಿ ವಿದ್ವಾಂಸರು ಜನಪದ, ಜಾನಪದಗಳ ವಿಶೇಷಣಗಳನ್ನು ಬಳಸಲು ಆರಂಭಿಸಿದರು. ಪರಿಣಾಮವಾಗಿ 'ಜನಪದ ಸಾಹಿತ್ಯ' ಎಂಬ ಮಾತನ್ನು ಮೊತ್ತ ಮೊದಲಿಗೆ 1922ರಲ್ಲಿ 'ಜಯಕರ್ನಾಟಕ' ಎಂಬ ಪತ್ರಿಕೆಯಲ್ಲಿ ಬಳಕೆಯಾಯಿತು. ಇದರಲ್ಲಿನ ವ್ಯಾಕರಣ ಶುದ್ಧತೆಯನ್ನು ಅಪೇಕ್ಷಿಸಿದ ಭಾಷಾ ವಿದ್ವಾಂಸರು 'ಜಾನಪದ ಸಾಹಿತ್ಯ'ಎಂಬ ಸಮಸ್ತಪದವನ್ನು ಬಳಸಲಾರಂಭಿಸಿದರು. ಹೀಗೆ ಜನಪದ, ಜಾನಪದ ಪದಗಳು ಕನ್ನಡದಲ್ಲಿ ಚಾಲ್ತಿಗೆ ಬಂದುದನ್ನು ಪ್ರಸ್ತುತ ಲೇಖನದಲ್ಲಿ ವಿವರಿಸಿದ್ದಾರೆ.

Folk ಎನ್ನುವುದಕ್ಕೆ ಜನಪದವನ್ನು ನಾವು ಇಟ್ಟುಕೊಂಡಿರುವುದರಿಂದ ಜಾನಪದವನ್ನು Folklore ಎನ್ನುವ ಅರ್ಥದಲ್ಲಿ ಉಪಯೋಗಿಸಬಹುದೆಂದು 'ಜಾನಪದ ಸ್ವರೂಪ' (1971) ಕೃತಿಯಲ್ಲಿ ಹಾ.ಮಾ.ನಾಯಕರು ಹೇಳಿರುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. 1966ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಮ್ಮಿಕೊಂಡಿದ್ದ 'ಕನ್ನಡ ಜನಪದ ಸಾಹಿತ್ಯ : ವಿವಿಧ ಮುಖಗಳು' ಎಂಬ ವಿಚಾರಗೋಷ್ಠಿಯಲ್ಲಿ ಹಾ.ಮಾ.ನಾ. ಅವರು 'ಜನಪದ ಸಾಹಿತ್ಯ ಮತ್ತು ಅದರ ಸ್ವರೂಪ' ಎಂಬ ಪ್ರಬಂಧವನ್ನು ಮಂಡಿಸಿದ್ದರು. ಹಾ.ಮಾ.ನಾ ಅವರ ವಿಚಾರಧಾರೆಗಳು ಅದು ತನಕ ಜಾನಪದ ಅರಿತುಕೊಂಡಿದ್ದ ರೀತಿಗಿಂತಲೂ ತೀರಾ

ವಿಭಿನ್ನವಾಗಿತ್ತು ಎಂಬುದನ್ನು ವಿದ್ವಾಂಸರು ಗುರುತಿಸಿದ್ದರು. ಜಾನಪದವನ್ನು ನೋಡುವ ಹೊಸ ದೃಷ್ಟಿಕೋನವೊಂದಕ್ಕೆ ಪ್ರಸ್ತುತ ಪ್ರಬಂಧ ನಾಂದಿಯಾಯಿತು.

ಬೆಟಗೇರಿ ಕೃಷ್ಣಶರ್ಮರು ಜಾನಪದವನ್ನು ಪರಿಗ್ರಹಿಸಿದ ಸಾಂಪ್ರದಾಯಕ ಕ್ರಮಕ್ಕೂ ಹಾ.ಮಾ.ನಾ. ಅವರ ವೈಜ್ಞಾನಿಕ ದೃಷ್ಟಿಗೂ ಅಜಗಜಾಂತರವಿರಬಹುದು. ಆದರೆ 1922 ಹೊತ್ತಿಗೆ ಜಯಕರ್ನಾಟಕ ಪತ್ರಿಕೆಯಲ್ಲಿ 'ಜನಪದ ಸಾಹಿತ್ಯ' ಪದ ಬಳಕೆಗೆ ಚಾಲನೆಕೊಟ್ಟಿದ್ದನ್ನು ಗುರುತಿಸಿದ್ದಾರೆ. ಹಾಗೆಯೇ ಜಾನಪದವನ್ನು ಅಪ್ಪಟ ದೇಶಿನೆಲೆಯಿಂದ ಪರಿಗ್ರಹಿಸುವ ಬೆಟಗೇರಿಯವರ ಕ್ರಮವೂ ಮುಂದಿನ ಬೆಳವಣಿಗೆಗಳಿಗೆ ತಳಹದಿಯೋಪಾದಿಯಲ್ಲಿದೆ ಎಂದರೆ ಹೊಸದಾಗಿ ಜಾನಪದ ಕ್ಷೇತ್ರದಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳುವವರಿಗೆ ಮಾರ್ಗದರ್ಶನ ನೀಡುವಂತಿದೆ.

ತಮ್ಮ ಮನೆಯ ಪರಿಸರವೇ ಕಾರಣವಾಗಿ ಜನಪದ ಬದುಕಿನೊಂದಿಗೆ ಒಡನಾಡಿದ ಬೇಟೆಗೇರಿಯವರಿಗೆ 'ಜಾನಪದ ಎಂಬುದು ಕಲಿತ ವಿಷಯವಲ್ಲ' ಅದು ರಕ್ತಗತವಾಗಿಯೇ ಬಂದ ಗುಣಸ್ವಭಾವ. ತಾವು ಹುಟ್ಟಿಬೆಳೆದ ಮನೆ ಅಲ್ಲಿಯ ಬಡತನ, ದನಗಾಹಿಯಾಗಿ ಪಟ್ಟಶ್ರಮ, ಹಸಿವು, ಕಲಿಕೆಯ ದಾಹದಿಂದಲೇ ನೆಲದ ಭಾಷೆಯಲ್ಲಿ ಪ್ರಕಟವಾಗುತ್ತಿದ್ದ ಅರಿವನ್ನು ತನ್ನದಾಗಿಸಿಕೊಂಡರು. ಎಳವೆಯಲ್ಲಿ ನೋಡಿದ ಜಾನಪದ ಹಾಡು, ಕಲಾಪ್ರಕಾರಗಳ ವೀಕ್ಷಣೆ, ಅವುಗಳಲ್ಲಿನ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸುವ ಮನೋಧರ್ಮ ಇತ್ಯಾದಿಗಳಿಂದಾಗಿ 'ಜಾನಪದ' ಎಂಬುದು ಬೆಟಗೇರಿಯವರ ಬೌದ್ಧಿಕತೆಯನ್ನು ಪೋಷಿಸಿದೆ. ಬೀಸುವ ಕಲ್ಲಿನ ಹಾಡುಗಳು, ಅಲ್ಲಿನ ಮಾನವೀಯ ಸಂಬಂಧಗಳು, ಜೀವನ ನಿಷ್ಠೆ, ಕರುಣೆ, ತಿಳಿಹಾಸ್ಯ ಇತ್ಯಾದಿಗಳು ಬೆಟಗೇರಿಯವರನ್ನು ಇನ್ನಿಲ್ಲದಂತೆ ಆಕರ್ಷಿಸಿವೆ. ಹಳ್ಳಿಯ ಹಾಡುಗಾರರು, ವೃತ್ತಿಗಾಯಕರು, ವೇಷಗಾರರು ಅವರ ಬದುಕಿನ ವಿಧಾನವನ್ನು ಸೂಕ್ಷ್ಮಗ್ರಾಹಿಯಾಗಿ ಗಮನಿಸಿದ ಪರಿಣಾಮವಾಗಿ ಜಾನಪದ ಸಂಸ್ಕೃತಿಯ ಅರಿವು ಅವರ ಮನದಲ್ಲಿ ಅಚ್ಚಳಿಯದಂತೆ ನೆಲೆಗೊಂಡಿತು.

ಪಂಡಿತರಾದವರು ಜಾನಪದದ ಬಗೆಗೆ ತೋರಿದ ಅವಜ್ಞೆಯ ಕುರಿತು ಬೆಟಗೇರಿಯವರಿಗೆ ವಿಷಾದವಿದೆ. ಅವರೇ ಹೇಳುವಂತೆ 'ಹುಳುಗಳ ಕಾರ್ಯವೆಂದರೆ ಹೀಗಳೆದು ನಮ್ಮ ಜನ ಜೇನನ್ನು ಕಡೆಗಣಿಸಿಬಿಟ್ಟಿದ್ದರೆ. ಅದರ ರಸದ ಮಾಧುರ್ಯಕ್ಕೆ ಎರವಾಗುತ್ತಿದ್ದೆವಲ್ಲವೇ!'(ಪು.2). ಪಂಡಿತರು ಮೆಚ್ಚಿ ತಲೆದೂಗುವ ಸಂಸ್ಕೃತ ಸುಭಾಷಿತಗಳನ್ನು ಮೀರಿಸುವ ಸ್ವಾರಸ್ಯಕರ ನುಡಿಗಳನ್ನು ಜಾನಪದ ಸಾಹಿತ್ಯದಲ್ಲಿ ಕಾಣಬಹುದು ಎಂಬುದನ್ನು ಅವರು ಖಚಿತವಾಗಿ ತಿಳಿಸಿದ್ದಾರೆ. ಹಾಗಾಗಿ ವಿದ್ವಾಂಸರಾದವರು ಜಾನಪದ ಸಾಹಿತ್ಯದೆಡೆಗೆ ಒಲವನ್ನು ಬೆಳೆಸಿಕೊಳ್ಳುತ್ತಿರುವ ಬಗೆಗೆ ಸಮಾಧಾನದ ನಿಟ್ಟುಸಿರನ್ನು ಬಿಟ್ಟಿದ್ದಾರೆ. ಜಾನಪದ ಸಾಹಿತ್ಯದ ಸತ್ವವನ್ನು ಹೊರತೆಗೆಯುವ ಕೆಲಸ ಮುಂದೆ ಸಂಸ್ಕೃತಿ ಸಂಶೋಧನೆಗೆ ನೆರವಾಗಲಿದೆ ಎಂಬ ಆಶಾಭಾವನೆಯನ್ನು ಪ್ರಕಟಿಸಿದ್ದಾರೆ.

ಜಾನಪದ ಸಾಹಿತ್ಯದ ಸತ್ವ ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ಕವಿಗಳು ಯಥೇಚ್ಛ ಬಳಕೆ ಮಾಡಿಕೊಂಡಿರುವುದನ್ನು ಬೆಟಗೇರಿಯವರು ಉದಾಹರಣೆ ಸಹಿತ ದಾಖಲಿಸಿದ್ದಾರೆ. ಜಾನಪದ ಸಾಹಿತ್ಯದ ಮಹತ್ವವನ್ನು ಕವಿಗಳು ಮನಗಂಡಿರುವುದನ್ನು ಬೆಟಗೇರಿಯವರು ಸಾಧಾರವಾಗಿಯೇ ದಾಖಲಿಸಿದ್ದಾರೆ. ದೇಶೀಯ ಸಾಹಿತ್ಯದ ಸೌಂದರ್ಯವನ್ನು ಅರಿತು ಅಳವಡಿಸಿಕೊಂಡವರಲ್ಲಿ ಪಂಪನೇ ಮೊದಲಿಗನಿರಬಹುದು

ಎಂಬುದನ್ನು ಗುರುತಿಸಿದ್ದಾರೆ. ಹೀಗೆ ಮಾರ್ಗಕವಿಗಳು ದೇಶಿಯನ್ನು ಸಮನ್ವಯದ ಹಾದಿಯಲ್ಲಿ ಕೊಂಡೊಯ್ದಿರುವುದನ್ನು ಗಮನಿಸಬಹುದು.

ಜಾನಪದ ಪದ್ಯದ ಗೇಯವಾದ ಅಂಶಗಣ ಪದ್ಧತಿಯ ಮುಂದೆ ಅಕ್ಷರಗಣ, ವೃತ್ತ, ಕಂದಪದ್ಯ, ಆರ್ಯಾವೃತ್ತಗಳ ಪದ್ಧತಿಯನ್ನು ತೌಲನಿಕವಾಗಿ ಪರಿಶೀಲಿಸಿದ್ದಾರೆ. ವಿಷಯ ಅರ್ಥವಾಗಬೇಕೆಂದು ಅಭಿವ್ಯಕ್ತಿಸುವ ವರ್ಣಕ ಶೈಲಿ ಜಾನಪದದದು. ಅರ್ಥ–ಭಾವಗಳ ಬಿಗಿ ಕಟ್ಟಿನಿಂದ ಭಾವರಸಗಳನ್ನು ಕಂಡುಕೊಳ್ಳಲು ಕಠಿಣವೆನಿಸುವ ವಸ್ತುಕ ಶೈಲಿ ಮಾರ್ಗಕವಿಗಳದು. ಈ ಹಿನ್ನೆಲೆಯಲ್ಲಿ ಜಾನಪದ ಶೈಲಿಯನ್ನು ದ್ರಾಕ್ಷಾಪಾಕ ಎಂದು ಹಾಗೂ ಅಭಿಜಾತರ ಶೈಲಿಯನ್ನು ನಾರಿಕೇಳಪಾಕ ಎಂದು ಗುರುತಿಸಿದ್ದಾರೆ.

ಜಾನಪದದ ಲಯಬದ್ಧವಾದ ಹಾಡು–ಕುಣಿತಗಳಲ್ಲಿ ಗೇಯಕ್ಕೆ ಅನಿಯಮಿತವಾದ ಅಕ್ಷರಗಳಿಂದಲೇ ಪದ್ಯ ಸಾಹಿತ್ಯವನ್ನು ರಚಿಸಿದರು. ಅಕ್ಷರ, ಮಾತ್ರಾಗಣಗಳ ಹಂಗುತೊರೆದ ಗೇಯಗುಣ ಪದ್ಧತಿಯ ಮಹತ್ವವು ಮನವರಿಕೆಯಾದ ಮೇಲೆ 'ಅಂಶಗಣ' ಎಂದು ಶಾಸ್ತ್ರೀಯವಾಗಿ ಗುರುತಿಸಿದರು. ಹಾಗೆಯೇ ಬಳಸಿದ ಮೂರು ಶಬ್ದಗಣಗಳನ್ನು ವಿಶ್ಲೇಷಿಸಿ ಬ್ರಹ್ಮ, ವಿಷ್ಣು, ರುದ್ರಗಣಗಳೆಂದು ಹೆಸರಿಸಿದರು. ಇತ್ಯಾದಿಯಾಗಿ ಜಾನಪದ ಸಾಹಿತ್ಯವನ್ನು ಶಾಸ್ತ್ರಬದ್ಧವಾಗಿ ವಿವರಿಸುವ ಪ್ರಯತ್ನವನ್ನು ತಮ್ಮ ಪ್ರಬಂಧದಲ್ಲಿ ಮಾಡಿದ್ದಾರೆ.

ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗುರುತಿಸಲು ದೃಷ್ಟಾಂತಸಹಿತ ಅವುಗಳ ಸ್ವಾರಸ್ಯವನ್ನು ಸಹ ಪ್ರಸ್ತುತ ಬರಹದಲ್ಲಿ ಮುಂದಿಡಲಾಗಿದೆ. ಇತಿಹಾಸ ಪ್ರಜ್ಞೆಯನ್ನು ಸಾರುವ ಹಾಡುಗಳು, ಪಡೆನುಡಿಗಳು, ಗಾದೆ ಮಾತುಗಳು, ಒಗಟುಗಳು, ಒಡಪುಗಳು, ಪದ್ಯಸಾಹಿತ್ಯ, ಗದ್ಯಸಾಹಿತ್ಯ, ತ್ರಿಪದಿ, ಲಾವಣಿ ಸಾಹಿತ್ಯ ಹೀಗೆ ಸಾಹಿತ್ಯದ ಗುಣ ಮಹತ್ವವನ್ನು ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲೆಲ್ಲ ಬೆಟಗೇರಿಯವರಿಗೆ ಜನಪದದ ಜೊತೆಗಿನ ನೇರ ಸಂಪರ್ಕ ಹಾಗೂ ಒಡನಾಟವಿದ್ದುದನ್ನು ಗುರುತಿಸಬಹುದು. ಭಾಷೆ ಜನಪದರ ಬಾಯಿಯ ಬಳಕೆಯಂತೆಯೇ ಯಥಾವತ್ತಾಗಿ ದಾಖಲಿಸಿರುವುದೇ ಇದಕ್ಕೆ ನಿದರ್ಶನ.

ಬೆಟಗೇರಿಯವರು ತಮ್ಮ ಹಳ್ಳಿಯಲ್ಲಿದ್ದ ಶಾಸ್ತ್ರದ ಮಲ್ಲವ್ವಜ್ಜಿಯನ್ನು ನೆನಪಿಸಿಕೊಂಡಿದ್ದಾರೆ. ಮಲ್ಲವ್ವ ಎಂಬ ಅಜ್ಜಿಯ ಮಾತುಗಳಲ್ಲಿ ಗಾದೆಗಳ ಮಹಾಪೂರವೇ ಹೊಮ್ಮಿಬರುತ್ತಿತ್ತು. ಗಾದೆಗಳು ಶಾಸ್ತ್ರಗಳಂತೆ ಸ್ಪಷ್ಟವಾದ ನೀತಿಯನ್ನು ಸಾರುತ್ತಿದ್ದವು ಎಂಬ ಕಾರಣಕ್ಕಾಗಿ ಹಳ್ಳಿಯ ಜನ ಅಕೆಯನ್ನು 'ಶಾಸ್ತ್ರದ ಮಲ್ಲವ್ವಜ್ಜಿ' ಎಂದೇ ಕರೆದಿರುವ ಸ್ವಾರಸ್ಯಕರ ಸಂಗತಿಯನ್ನು ತೆರೆದಿಟ್ಟಿದ್ದಾರೆ. ಎಳೆಯ ವಯಸ್ಸಿನಲ್ಲಿ ಆಕೆಯನ್ನು ನೋಡಿದ ಹಾಗೂ ಆಕೆಯ ಮಾತುಗಳನ್ನು ಕೇಳಿದ ಬೆಟಗೇರಿಯವರು ತಾವು ಆ ಹೊತ್ತಿಗೆ ದೊಡ್ಡವನಾಗಿದ್ದರೆ 'ಮಲ್ಲವ್ವಜ್ಜಿಯ ಗಾದೆಗಳು' ಎಂಬ ಮಹಾಗ್ರಂಥವೊಂದನ್ನು ಸಂಕಲಿಸ ಬಹುದಿತ್ತು ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಹಾಗೆಯೇ ಕೆಂಚವ್ವ ಎಂಬ ಕುರುಬರ ಮುದುಕಿಯ ಮಾತುಗಳಲ್ಲಿ ಜನಪದ ಸೊಗಡುಗಳು, ಸ್ವಾರಸ್ಯಕರವಾದ ರಂಜನೆಯ ಕತೆಗಳು ಬೆಟಗೇರಿಯವರನ್ನು ಎಳವೆಯಲ್ಲಿಯೇ ಆಕರ್ಷಿಸಿದ್ದವು. ಹಳ್ಳಿಯ ಜನರ ಮಾತುಗಳಲ್ಲಿನ ಸೌಂದರ್ಯ, ಅರ್ಥಧ್ವನಿ, ಅಣಕ, ಅಲಂಕಾರ ಇತ್ಯಾದಿಗಳೆಲ್ಲ ಬೆಟಗೇರಿಯವರ ಬದುಕಿಗೊಂದು

ನೀತಿಯನ್ನು ಕಲಿಸಿದೆ. ಅಲ್ಲಿನ ತಿಳುವಳಿಕೆಯ ಬೆಳಕಿನಲ್ಲಿ ತಮ್ಮ ಜ್ಞಾನ ವಿಸ್ತರಿಸಿಕೊಂಡಿರುವುದಷ್ಟೆ ಅಲ್ಲ. ಜಾನಪದರ ಸೃಜನಶೀಲ ರಚನೆಗಳನ್ನು ಸಾಕಷ್ಟು ಸಂಗ್ರಹಿಸಿ ನಾಡಿನ ಜನತೆಗೆ ಅವುಗಳ ಮಹತ್ವವನ್ನು ತಿಳಿಸಬೇಕು ಎಂಬ ಮಹತ್ವಾಕಾಂಕ್ಷೆಯೂ ಇತ್ತು. ಈ ದೃಷ್ಟಿಯಿಂದ ಅವರು 1922ರಷ್ಟು ಹಿಂದೆಯೇ 'ಕೆರೆಗೆಹಾರ' ಎಂಬ ಜಾನಪದ ಕಥನಗೀತವನ್ನು ಸಂಗ್ರಹಿಸಿ ಪ್ರಕಟಿಸಿದರು. ಹಾಗೆಯೇ ಬೀಸುವ ಕಲ್ಲಿನ ಹಾಡುಗಳು, ಗಾದೆಗಳು, ಒಡಪುಗಳು, ಒಗಟುಗಳು ಇತ್ಯಾದಿಗಳನ್ನು ಬಿಡಿಬಿಡಿಯಾಗಿ ಸಂಗ್ರಹಿಸಿ ತಮ್ಮ ಬರಹಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದು.

ಜಾನಪದ ಸಾಹಿತ್ಯವನ್ನು ಸಂಗ್ರಹಿಸುವಾಗ ಧ್ವನಿಮುದ್ರಿಕೆಗಳ ನೆರವಿನಿಂದ ಪರಂಪರಾಗತ ನುಡಿಗಟ್ಟುಗಳನ್ನು ಯಥಾವತ್ತಾಗಿ ದಾಖಲಿಸುವುದು ಅಗತ್ಯ. ಬದಲಾಗಿ ಕಥಾವಸ್ತುಗಳನ್ನು, ಆಶಯಗಳನ್ನು ತಮ್ಮದೇ ಮಾತುಗಳಲ್ಲಿ ಸಂಗ್ರಹಕಾರರು ದಾಖಲಿಸುವುದು ಅಪೂರ್ಣವಾದ ಕೆಲಸ ಎಂಬುದೇ ಅವರ ಭಾವನೆ. ಜಾನಪದ ಭಾಷೆಯ ಧ್ವನಿಶಕ್ತಿಯಿರುವುದು ಅವುಗಳ ಉಚ್ಚಾರದ ವಿಧಾನದಲ್ಲಿ. ಅದಕ್ಕಾಗಿ ಅವುಗಳನ್ನು ಆಡುಮಾತಿನ ಸ್ವರೂಪದಲ್ಲಿಯೇ ಉಳಿಸಿ ಅಕ್ಷರರೂಪದಲ್ಲಿ ಮಂಡಿಸುವುದನ್ನು ಬೆಟಗೇರಿಯವರ ಬರಹಗಳಲ್ಲಿ ಕಾಣಬಹುದು.

'ಒಗಟೆ' ಎಂಬುದು ಜಾನಪದ ಗದ್ಯ ಸಾಹಿತ್ಯದ ಒಂದು ಶಾಖೆ. ನಾಗವರ್ಮನ ಅಭಿಧಾನ ವಸ್ತುಕೋಶದಲ್ಲಿ ಪ್ರಯೋಗಿಸಿರುವ 'ಒಗಂಟೆ', ಮಂಗರಸನ ಕನ್ನಡ ಕೋಶದಲ್ಲಿ ಬಂದಿರುವ 'ವಾಗಟೆ' ಈ ಪದಗಳು 'ಒಗಟೆ' ಎಂಬ ಸಾಹಿತ್ಯ ಜಾತಿಯ ಪರ್ಯಾಯ ಹೆಸರುಗಳೇ ಆಗಿವೆ ಎಂಬುದನ್ನು ಅವರು ಪ್ರತಿಪಾದಿಸಿದ್ದಾರೆ. ಸಂಸ್ಕೃತದ 'ಪ್ರಹೇಲಿಕಾ', 'ಪ್ರವಹ್ಲಿಕಾ' ಎಂಬಿವುಗಳ ಸಮಾನಾರ್ಥಕ ಪದಗಳಾಗಿ 'ಒಗಟೆ', 'ವಾಗಟೆ'ಗಳನ್ನು ನಿಘಂಟುಕಾರರು ಬಳಸಿದ್ದಾರೆ. ಈ ಪದಗಳು ಕನ್ನಡ ಮೂಲದಿಂದ ಬಂದವುಗಳಲ್ಲ. ಬದಲಾಗಿ ಪ್ರಾಕೃತ ಮೂಲದಿಂದ ಬಂದವಾಗಿರಬಹುದು ಎಂಬುದನ್ನು ಅವರು ಸೂಚಿಸಿದ್ದಾರೆ.

ಉತ್ತರ ಕರ್ನಾಟಕದ ಜನ ಬಳಕೆಯ 'ಒಗಟ' ಎಂಬ 'ಅ' ಕಾರಾಂತ ಪದ ಹಾಗೂ ದಕ್ಷಿಣ ಕರ್ನಾಟಕದ 'ಒಗಟೆ' ಎಂಬ 'ಎ' ಕಾರಾಂತ ಪದ ಇವುಗಳು ಯಾವುದೋ ಮೂಲ ಪದವೊಂದರ ವಿಕೃತಗೊಂಡ ರೂಪ ಎಂಬ ಸಂದೇಹವನ್ನು ಮುಂದಿಟ್ಟಿದ್ದಾರೆ. ವೀರಶೈವ ವಚನಕಾರರು 'ಒಗಟ' ಪದದ ಅರ್ಥದಲ್ಲಿಯೇ 'ಬೆಡಗು' ಎಂಬ ಪದ ಬಳಸಿರುವುದರನ್ನು ಗುರುತಿಸಿದ್ದಾರೆ. ಹೀಗೆ 'ಒಗಟೆ' ಮತ್ತು ಅದರ ಸ್ವರೂಪವನ್ನು ಸೋದಾಹರಣವಾಗಿ ಬೆಟಗೇರಿಯವರು ವಿವರಿಸಿದ್ದಾರೆ. ಒಗಟೆ ಜಾನಪದ ಲಯಬದ್ಧ ಗದ್ಯಸಾಹಿತ್ಯ ಶಾಖೆಯೇ ಆದರೂ ಲಯದ ಬಲ ಅಧಿಕವಾದಾಗ ಪದ್ಯರೂಪ ತಳೆದಿರುವುದನ್ನು ಸಹ ಗುರುತಿಸಿದ್ದಾರೆ.

ಉದಾ: (ಗದ್ಯಲಯ) ತಗ್ಗಿನಾಗಿನ ಬಸಪ್ಪ ಎದ್ದದ್ದು ನೋಡತಾನ (ಉತ್ತರ–ಒಲೆಯಉರಿ), ಕರಿಯ ಗಿಡ್ಡಗ ಬಿಳಿಯ ನಾಮ (ಉತ್ತರ–ಉದ್ದಿನಕಾಳು), (ಪದ್ಯಲಯ) 'ಮರದೊಳಗ ಮರಹುಟ್ಟಿ ಮರದಂತೆ ಕಾಯಾಗಿ ತಿನಬಾರದ ಹಣ್ಣು ಬಲುಸವಿ!' (ಉತ್ತರ–ಎಳಗೂಸು), 'ಅಕ್ಕಗಿಡಾ ನೋಡ, ಗಿಡದ ಮ್ಯಾಲಿನ ಕಾಯಿ ನೋಡ, ಕಾಯಿ ತಿಂದವರ ಬಾಯಿನೋಡ' (ಉತ್ತರ–ಯಾಲಕ್ಕಿ).

'ಜಾನಪದ' ಎಂಬ ಪದವನ್ನು ಕುರಿತಂತೆ ಜಿಜ್ಞಾಸೆಯ ವಿಶ್ಲೇಷಣೆಯೂ

ಇಲ್ಲಿದೆ. ಜಾನಪದ ಸಾಹಿತ್ಯಕ್ಕೆ ಕರ್ತೃಗಳು ಯಾರು ಎಂಬುದು ತಿಳಿದಿಲ್ಲ. ಅನಾಮಧೇಯವಾಗುಳಿದಿರುವ ಈ ಸಾಹಿತ್ಯಕ್ಕೆ ಕನ್ನಡ ಜನಪದ(ದೇಶ)ವೇ ಇದರ ವಾರಸುದಾರರು. ಈ ಅರ್ಥದಲ್ಲಿಯೂ ಇದು 'ಜಾನಪದ' ಸಾಹಿತ್ಯ ಎಂದು ಕರೆಯಬಹುದು. ನೃಪತುಂಗನ ಕಂದಪದ್ಯವೊಂದರಲ್ಲಿ 'ಭಾವಿಸಿದ ಜನಪದಂ' ಎಂಬ ಪದ ಬಳಸಿರುವುದು ಜನಪದ ಎಂದರೆ ದೇಶ ಎಂಬ ಅರ್ಥದಲ್ಲಿಯೇ ಆಗಿದೆ. ಜನಪದ ಒಡೆತನಕ್ಕೆ ಸೇರಿದ ಸಾಹಿತ್ಯ-ಜಾನಪದ ಸಾಹಿತ್ಯ ಎಂದು ಮಧ್ಯಪದ ಲೋಪಿಸಿ ಕರ್ಮಧಾರಯ ಸಮಸ್ತಪದವಾಗುವುದು. (1976:5).

ಪಂಪ ಕವಿಯು ದೇಸಿ ನುಡಿಗೆ ಮನಸೋತು ತಮ್ಮ ಮಾರ್ಗ ಕಾವ್ಯಗಳಲ್ಲಿ ನುಡಿಗಟ್ಟುಗಳನ್ನು ಬಳಸಿದ್ದಾನೆ. ಆತ ಬಳಸಿದ 'ಜಾಣನ ಗೋಣಿ ಬರಿದು!' ಎಂಬ ಅರ್ಥದ ಮರಾಠಿ ಗಾದೆಯೊಂದು ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದೆ 'ಅತಿಶಾಹಣಾ', 'ತ್ಯಾಟಾ ಬೈಲ ರಿಕಾಮಾ' ಎಂಬ ಗಾದೆಯೂ ಇದೇ ಅರ್ಥದಲ್ಲಿರುವುದನ್ನು ಗುರುತಿಸಿದ್ದಾರೆ (1976:15) ಹಾಗೆಯೇ 'ಬೆಕ್ಕು ಬಡಿಗಂಡುದಿಲ್ಲ ಪಾಲನೇ ಕಂಡುದು' ಎಂಬ ಅರ್ಥದ ಗಾದೆಯನ್ನು ಉತ್ತರ ಕರ್ನಾಟಕದಲ್ಲಿ 'ಬಿಲ್ಲೀ ಘೀ ದೇಖಾ, ಬಡಗಾ ನಹೀ ದೇಖಾ' ಎಂದು ಬಳಸುತ್ತಾರೆ ಹೀಗೆ ಎಷ್ಟೋ ಗಾದೆಗಳು ಜನಪದ ನುಡಿಗಳಿಂದ ಮರೆಯಾಗುತ್ತಿರುವುದನ್ನು ಗುರುತಿಸಿದ್ದಾರೆ.

ತ್ರಿಪದಿಯಂತಹ ಜಾನಪದ ಛಂದೋಲಯಗಳ ಲಕ್ಷಣಗಳನ್ನು ವಿಸ್ತಾರವಾಗಿಯೇ ವಿವೇಚನೆಗೊಳಪಡಿಸಿದ್ದಾರೆ. ಮುಂದೆ ತ್ರಿಪದಿಯ ಹಾಡಿನ ಲಯದಲ್ಲಿ ಪಾದವೊಂದು ವಿಸ್ತರಿಸಿ ಮುಂದೆ ಸಾಂಗತ್ಯ ರೂಪು ತಳೆದುದರ ಬಗೆಗೆ ವಿವರಗಳಿವೆ. ಸಾಂಗತ್ಯವೇ ಮುಂದೆ ಲಾವಣಿಯ ಲಯವನ್ನು ಪಡೆದ ಬಗೆಯನ್ನು ಕುರಿತ ವಿವರಗಳಿವೆ. ಕನ್ನಡದಲ್ಲಿ ಅಂಶಗಣ ಆಧಾರದಲ್ಲಿ ವೃತ್ತ, ಷಟ್ಪದಿ ಹಾಡುಗಳು ರೂಪುಗೊಂಡುವು. ಮೂಲತಃ ಅಂಶಗಣಗಳಿಂದಲೇ ಹುಟ್ಟಿಬೆಳೆದ ಶರ, ಕುಸುಮ, ಭೋಗ, ಭಾಮಿನಿ, ಷಟ್ಪದಿಗಳು ತಾಳಗತಿಯ ಲಯ ಬದಲಾದಂತೆ ಮಾತ್ರಾಗಣ ಘಟಿತ ರಚನೆಗಳಾಗಿ ರೂಪುಗೊಂಡುವು ಎಂಬಿತ್ಯಾದಿ ಚರ್ಚೆಗಳನ್ನು ವಿವರವಾಗಿ ಮಂಡಿಸಿದ್ದಾರೆ. ಹೀಗೆ ತ್ರಿಪದಿ ಎಂಬ ಜಾನಪದ ಸಾಹಿತ್ಯ ಪ್ರಕಾರವು ಪಡೆದ ವಿಸ್ತಾರ ಬಾಹುಳ್ಯವನ್ನು ಕುರಿತಂತೆ ವಿವರಿಸಿದ್ದಾರೆ. ಜನಪದ ಬದುಕಿನ ಎಲ್ಲಾ ಸಂದರ್ಭಗಳಲ್ಲಿಯೂ ತ್ರಿಪದಿಯ ದರ್ಶನವಾಗುತ್ತದೆ. ಜೋಗುಳ ಹಾಡುಗಳು, ಬೀಸುವ ಹಾಡುಗಳು, ಸೋಬಾನೆ ಹಾಡುಗಳು, ಶೋಕಗೀತೆಗಳು, ಹಬ್ಬ-ಜಾತ್ರೆಯ ಪದಗಳು, ಒಕ್ಕಲಿಗರ ಬೇಸಾಯದ ಹಾಡುಗಳು, ದೇವ-ದೇವತೆಗಳ ಸ್ತೋತ್ರ ಹಾಡುಗಳು, ಮಠಮಂದಿರಗಳ ಮಹಾತ್ಮ್ಯ ಕಥನಗಳು ಇತ್ಯಾದಿಗಳಲ್ಲೆಲ್ಲ ತ್ರಿಪದಿಗಳು ಬಳಕೆಯಾಗಿವೆ. ಅವು ನಾಡಿನಾದ್ಯಂತ ಪ್ರಚಲಿತದಲ್ಲಿರುವುದನ್ನು ಗಮನಿಸಿದ್ದಾರೆ. ಹೀಗೆ ನಾಡಿನ ಜನಪದ ಸಾಹಿತ್ಯದ ಛಂದೋಲಯಗಳ ಬಗೆಗಿನ ಬೆಟಗೇರಿಯವರ ಆಸಕ್ತಿ, ಕುತೂಹಲಗಳು ಇಂತಹ ವಿವರಣೆಗಳ ಮೂಲಕ ದಾಖಲಾಗಿವೆ.

(ಮುಂದುವರಿಯುವುದು)

❖❖❖

# ತತ್ವಪದಗಳಲ್ಲಿ ಸಮ ಸಮಾಜದ ಪರಿಕಲ್ಪನೆ

**ಡಾ. ಪ್ರತಿಮಾ ಕೆ.ಪಿ.**
ಸಹ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪೇಟೆ

ಕನ್ನಡ ಸಾಹಿತ್ಯದಲ್ಲಿ ತತ್ವಪದಗಳನ್ನು ಭಜನೆ ಪದಗಳು, ಸ್ವರವಚನಗಳು, ಕೈವಲ್ಯಪದಗಳು, ಗುರುಶಿಷ್ಯರ ಪದಗಳು, ಅನುಭಾವ ಪದಗಳು ಎಂಬ ಹೆಸರುಗಳಿಂದ ಗುರುತಿಸಲಾಗಿದೆ. ಇವು ಶರಣರ ಜೀವಪರ ಧೋರಣೆಯನ್ನು ಹಾಗೂ ಪ್ರಖರವಾದ ವೈಚಾರಿಕತೆಯನ್ನು ಒಳಗೊಂಡಿವೆ. ತತ್ವಪದಗಳು ಹಾಡುವುದಕ್ಕಾಗಿ ರಚನೆಯಾದರೂ ಜನ ಸಮುದಾಯದ ಬದುಕಿನ ಮಗ್ಗುಲುಗಳನ್ನು ಮೌಲಿಕವಾಗಿ ಅನಾವರಣಗೊಳಿಸುವಂತಹ ಶಕ್ತಿಯನ್ನು ಹೊಂದಿವೆ. ಇವು ಹನ್ನೆರಡನೇ ಶತಮಾನದಲ್ಲಿ ಸಕಲೇಶ ಮಾದರಸ ಮುಂತಾದ ಶಿವಶರಣರ ಸ್ವರವಚನದ ಸಾಹಿತ್ಯದೊಂದಿಗೆ ಪ್ರಾರಂಭಗೊಂಡು ಹದಿನಾರನೆಯ ಶತಮಾನದಲ್ಲಿ ನಿಜಗುಣ ಶಿವಯೋಗಿಗಳಿಂದ ಜನಪ್ರಿಯಗೊಂಡಿವೆ. ನಂತರ ಹದಿನೇಳರಿಂದ ಹತ್ತೊಂಭತ್ತನೆಯ ಶತಮಾನದಷ್ಟೊತ್ತಿಗೆ ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಮೈಲಾರ ಬಸವಲಿಂಗ, ಕೈವಾರ ನಾರಾಯಣಪ್ಪ ಮುಂತಾದವರಿಂದ ಉತ್ತುಂಗ ಶಿಖರಕ್ಕೆ ತಲುಪಿತು.

ತತ್ವಪದ ಸಾಹಿತ್ಯ ಜನಸಮ್ಮುಖ ವಿಚಾರಧಾರೆ ಹೊಂದಿದ ಸಾಹಿತ್ಯವಾಗಿದೆ. ಸಾಹಿತ್ಯ ಮತ್ತು ಸಂಗೀತ ಇಲ್ಲಿ ಬೆರೆತಿದೆ. ಲೋಕಶಿಕ್ಷಣ, ಲೋಕನೀತಿ, ಆಧ್ಯಾತ್ಮ ವಿಚಾರಗಳು ತತ್ವಪದಕಾರರ ಪದಗಳಲ್ಲಿ ಹಾಸುಹೊಕ್ಕಾಗಿ ಬೆರೆತಿರುವುದನ್ನು ನಾವು ಗುರುತಿಸಬಹುದು. ಸಮಾಜದಲ್ಲಿ ಚಲನಶೀಲತೆಯ ಹೋರಾಟಕ್ಕೆ ತೊಡಗಿಸಿಕೊಂಡ ತತ್ವಪದಕಾರರು ಸಮಾಜದ ಅನಿಷ್ಟಗಳ ವಿರುದ್ಧ ಕೈಗೊಂಡ ಹೋರಾಟಗಳೇ ಈ ತತ್ವಪದಗಳಾಗಿವೆ.

ಬುದ್ಧನ ತರುವಾಯ ಸಮಾನತೆಯ, ಸೋದರತೆಯ ಸ್ವಾತಂತ್ರ್ಯದ ಆಚರಣೆಗಳು ಈ ನೆಲದ ಮೇಲೆ ಮತ್ತೆ ಮೂಡಿಬಂದದ್ದು ವಚನಕಾರರ ಸಂದರ್ಭದಲ್ಲಿ. ನಂತರದ ದಿನಗಳಲ್ಲಿ ಅದನ್ನು ಮುನ್ನಡೆಸಿದವರು ತತ್ವಪದಕಾರರು. ಇವರು ಸರ್ವಸಮಾನತೆಯ ತಳಹದಿಯ ಮೇಲೆ ನವಸಮಾಜವನ್ನು ರೂಪಿಸಲು ಸಾಮಾಜಿಕ ಅವ್ಯವಸ್ಥೆಗಳನ್ನು ನಿರ್ಭೀತಿಯಿಂದ ವಿಮರ್ಶೆ ಮಾಡುವ ಕೆಚ್ಚನ್ನು ಮೈಗೂಡಿಸಿಕೊಂಡರು. ಇಷ್ಟಲ್ಲದೆ ಪರಸ್ಪರ ಪ್ರೇಮ, ಸಮತಾಭಾವ ಮುಂತಾದ ಮಾನವೀಯ ಅಂಶಗಳನ್ನು ಜನ ಸಮುದಾಯದಲ್ಲಿ ಸಾರಿದರು. ಇವರು ತಮ್ಮನ್ನು ಯಾವುದೇ ಧರ್ಮ, ಜಾತಿ–ಮತಗಳಿಗೆ ಸೀಮಿತಗೊಳಿಸಿಕೊಂಡವರಲ್ಲ. ಇಡೀ ಮನುಕುಲಕ್ಕೆ ಸಂಬಂಧಿಸಿದ ವಿಚಾರಗಳನ್ನು ಹೃದಯ ತುಂಬಿ, ಭಾವ ತಾಳಿ ತತ್ವಪದಗಳನ್ನು ರಚಿಸಿ ಹಾಡಿದರು. ಈ ಹಿನ್ನೆಲೆಯಲ್ಲಿ ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಕಡಕೋಳ ಮಡಿವಾಳಪ್ಪ ಕೈವಾರ ನಾರಾಯಣಪ್ಪ, ಶಿಶುನಾಳ ಶರೀಫ ಮುಂತಾದವರು ರಚಿಸಿರುವ ತತ್ವಪದಗಳಲ್ಲಿ ವ್ಯಕ್ತವಾಗಿರುವ ಸಮಸಮಾಜದ ಆಶಯವನ್ನು ಗುರುತಿಸಬಹುದು.

ತತ್ವಪದಕಾರರು ತಮ್ಮ ಅನೇಕ ತತ್ವಪದಗಳಲ್ಲಿ ಜಾತಿಪದ್ಧತಿ, ಅಸ್ಪೃಶ್ಯತೆ ಮುಂತಾದ ಅಂಶಗಳನ್ನು ಖಂಡಿಸುತ್ತಲೇ ಸಾಮಾಜಿಕ ಸಾಮರಸ್ಯದ ಬದುಕಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಜಾತಿ–ಕುಲ–ಅಸ್ಪೃಶ್ಯತೆಯ ಸಮಸ್ಯೆಗಳನ್ನು ಸ್ವತಃ ತತ್ವಪದಕಾರರು ಅನುಭವಿಸಿದ್ದಾರೆ. ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದಾರೆ. ಸಾಕಷ್ಟು ಅಸಮಾನತೆಗೆ, ಅವಹೇಳನೆಗೂ ಕೂಡ ಗುರಿಯಾಗಿದ್ದಾರೆ. ಇವೆಲ್ಲದರಿಂದ ಬೇಸತ್ತಂತಹ ಅವರು ಈ ಗಂಭೀರ ಸಮಸ್ಯೆಗಳನ್ನು ಕುರಿತು ಅನೇಕ ತತ್ವಪದಗಳನ್ನು ರಚಿಸಿದ್ದಾರೆ. ಸಾಮಾಜಿಕ ವಿಡಂಬನೆಯ ತತ್ವಪದಗಳಲ್ಲಿ ಅವಾಚ್ಯ ಶಬ್ದಗಳಿಂದ ನಿಂದನೆಯನ್ನು ಸಹಾ ಮಾಡಿದ್ದಾರೆ.

ಹೈದ್ರಾಬಾದ್ ಕರ್ನಾಟಕದ ಬಹುದೊಡ್ಡ ಅನುಭಾವಿ ಹಾಗೂ ತತ್ವಪದಕಾರರಾದ ಕಡಕೋಳ ಮಡಿವಾಳಪ್ಪನವರು ಕುಲ–ಜಾತಿಯನ್ನು ನಂಬಿ ಶೋಷಿಸುವ ಜನರನ್ನು ತೀವ್ರವಾಗಿ ಖಂಡಿಸಿ ಅನೇಕ ತತ್ವಪದಗಳನ್ನು ರಚಿಸಿದ್ದಾರೆ. "ಕುಲಛಲಕೆ ಹೊಡೆದಾಡಬೇಡಿರೋ ಮುಂದನೆಲೆ ಮಾಡಿಕೊಳ್ಳುವುದು ನೋಡಿರೊ, ಕುಲಛಲವೆಲ್ಲಾ ಸುಳ್ಳು ಇಹಲೋಕದ ಅಭಿಮಾನ ಬಿಡಿ' ಎಂದು ಹೇಳುತ್ತಾರೆ.

**ಮುಡಿಚಟ್ಟಿನೊಳು ಬಂದು ಮುಟ್ಟು ತಟ್ಟು ಅಂತೀರಿ**
**ಮುಡಿಚೆಟ್ಟು ಎಲ್ಲ್ಯಾದ ಹೇಳಣ್ಣಾ ।**
**ಮುಟ್ಟಾದ ಮೂರು ದಿನಕ ಹುಟ್ಟಿ ಬಂದಿರಿ ನೀವು**
**ಮುಡಿಚೆಟ್ಟು ಎಲ್ಲ್ಯಾದ ಹೇಳಣ್ಣ ॥ಪ॥**
.. .. ..

ಗಂಡು ಮತ್ತು ಹೆಣ್ಣಿನ ದೈಹಿಕ ಸಮಾಗಮದ ಮೂಲಕ ಮತ್ತೊಂದು ಜೀವವು ಹುಟ್ಟುತ್ತದೆ. ಈ ದೇಹವು ಮಲ–ಮೂತ್ರ, ಮಾಂಸಗಳ ಮುದ್ದೆಯಾಗಿದೆ. ಆದ್ದರಿಂದ ಈ ದೇಹ ಹೇಗೆ ಶ್ರೇಷ್ಠವಾಗುತ್ತದೆ? ಇತ್ಯಾದಿ ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಮೂಲಕ ಸಾಮಾಜಿಕ ಶೋಷಣೆಯ ನೆಲೆಗಳಾದ ಜಾತಿ–ಕುಲಗಳನ್ನು, ಮಡಿ–ಮೈಲಿಗೆಗಳನ್ನು ನಿರಾಕರಿಸಿದ್ದಾರೆ.

**ಕೈವಾರ ನಾರಾಯಣಪ್ಪನವರು**
**"ಅಲ್ಪವೆಂಬ ಜಾತಿಗೆ ಸೇರಿದವರು ಯಾರು ಇಲ್ಲ**
**ಮೇಲು–ಕೀಳು ಜಾತಿ ಕಲ್ಪಿಸಬಾರದು**
**ಮಾನವರೆಲ್ಲ ಒಂದೇ ಜಾತಿಗೆ ಸೇರಿದವರು**
**ಹೊಲೆಯನನ್ನು ನಿಂದಿಸುವ ಕಾರಣವಿಲ್ಲ"**[2]

ಎಂದು ಹೇಳುತ್ತಾ ಸಮಾಜದಲ್ಲಿನ ಜಾತಿ–ಕುಲಗಳೆಲ್ಲವೂ ಮನುಷ್ಯನ ಸೃಷ್ಟಿಗಳಾಗಿದ್ದು, ಇವುಗಳನ್ನು ಮೀರಬೇಕು. ಮನುಷ್ಯರೆಲ್ಲರೂ ಒಂದೇ, ಯಾರು ಯಾರನ್ನೂ ನಿಂದಿಸಬಾರದು ಎಂಬ ಕರೆ ನೀಡಿದ್ದಾರೆ.

ಕೂಡಲೂರು ಬಸವಲಿಂಗ ಶರಣರು, ಮಾನವರೆಲ್ಲರೂ ಮಾತೃಗರ್ಭದಿಂದ ಹೊರಬೀಳುವಾಗ ಮೂತ್ರದ್ವಾರದ ಮೂಲಕವೇ ಹುಟ್ಟಿ ಬರುತ್ತಾರೆ ಎನ್ನುತ್ತಾರೆ.

**"ಮಲಮೂತ್ರದೊಳು ಬಂದು**
**ಶೀಲ ಬಹಳ ಮಾಡುವವರು**
**ಶೂಲಪಾದದ ಧ್ಯಾನ ನಿಲ್ಲಿಸಿದವರು**

**ಮುಟ್ಟಿನಲಿ ಹುಟ್ಟಿ ಬಂದು**

**ಮುಟ್ಟಿಗಿ ತಟ್ಟಿಗಿ ಅನುವವರು**

**ಹುಟ್ಟಿಸಿದ ಶಿವನ ಕೂಡ ಅರಿಯದವರು"**[3]

ಹೀಗಿರುವಾಗ ಜಾತಿ ಶ್ರೇಷ್ಠತೆ ಎಲ್ಲಿಂದ ಬರುತ್ತದೆ ಎಂದು ತನ್ನ ತತ್ವಪದದಲ್ಲಿ ಪ್ರಶ್ನಿಸಿದ್ದಾರೆ.

ಮುಪ್ಪಿನ ಷಡಕ್ಷರಿಯವರು ಮಡಿ ಮೈಲಿಗೆ, ಜಾತಿ–ಕುಲ, ಆಚಾರ–ವಿಚಾರಗಳ ಬಗ್ಗೆ ತಮ್ಮ ತತ್ವಪದದಲ್ಲಿ ವಿರೋಧ ವ್ಯಕ್ತಪಡಿಸಿದ್ದಾರೆ.

**"ಕುರಿಯ ಕಾಯುತಿರಲಿ**

**ಕರುವ ಕಾಯುತಿರಲಿ**

**ಕೆರವ ಹೊಲಿಯುತಿರಲಿ ಅವರು ಲಿಂಗವಂಗದಿ**

**ಧರಿಸಿ ಭಸಿತವಕ್ಷಮಾಲೆ**

**ಇರಲು ಶಿವನ ಸಮವದೆಂದು**

**ಅರಿದು ಶರಣು ಮಾಡುತಿರ್ಪುದೆಂದಿಗಪ್ಪದೋ"**[4]

ಶಂಕರಾನಂದ ಶಿವಯೋಗಿಗಳು ಜ್ಞಾನ ಮಾರ್ಗದಲ್ಲಿ ನಡೆಯುವವರಿಗೆ ಜಾತಿ–ಮಡಿ–ಮೈಲಿಗೆಗಳು ಕಿಂಚಿತ್ತೂ ಇಲ್ಲವೆನ್ನುತ್ತಾ. ವಿಶ್ವವಿಶಾಲ ದೃಷ್ಟಿಯನ್ನು ತಮ್ಮ ತತ್ವಪದಗಳಲ್ಲಿ ಮೆರೆದಿದ್ದಾರೆ.

**"ನಮ್ಮ ಕುಲ ಮೇಲೆನುತ ವಂದಿಸಿ**

**ನಿಮ್ಮ ಕುಲ ಕೀಳೆನುತ ನಿಂದಿಸಿ**

.. .. .. ..

**ಜಾತಿ ಜೀವಿಗಳಿಂದ ನಿರ್ಮಿತವು"**[5]

ಹುಟ್ಟಿನಿಂದ ಕುಲವನ್ನು ನಿರ್ಧರಿಸಿ ಉತ್ತಮ, ಅದಮ ಎಂದು ತೀರ್ಮಾನಿಸಿ ಕೆಲವರನ್ನು ಅಸ್ಪೃಶ್ಯರಂತೆ ಕಾಣುವುದನ್ನು ಶಿವಯೋಗಿಗಳು ಕಟುವಾಗಿ ಟೀಕಿಸಿದ್ದಾರೆ.

ಖೈನೂರ ಕೃಷ್ಣಪ್ಪನು ತನ್ನ ತತ್ವಪದದಲ್ಲಿ

**"ಎಲ ಎಲ ಎಲ ಹುಟ್ಟಿ ಏನು ಪಡದಿ**

.. .. .. ..

**ಮುಂದ ಯಮಕೊಲಿ ಆದೋ ನಿನ್ನ ಹಣೆಬರದಿ**

**ಬದುಕಿನಲ್ಲಿ ಹುಟ್ಟಿದ ಮೇಲೆ ಏನನ್ನು ಪಡೆದೆ ?"**[6]

ನಿನ್ನ ಬದುಕಿನ ಪರಿಕಲ್ಪನೆಯನ್ನು ಅರಿಯದೆ ಸುಳ್ಳುದಿನಗಳನ್ನು ಕಳೆದೆ. ಜಾತಿ, ಕುಲ ಮತ್ತು ಒಣ ಅಹಂಕಾರದಲ್ಲಿ ಮೆರೆದು ಉರಿದುಹೋದೆ. ಜೀವನದ ಪ್ರಮುಖ ನಿಲುವು ತಿಳಿಯದೆ ಯಮನ ಪಾಶಕ್ಕೆ ಬಲಿಯಾಗುವ ಪರಿಯನ್ನು ಬದುಕಿನಲ್ಲಿ ಕಂಡುಕೊಳ್ಳುವ ನಿಲುವು ಬಹಳ ಮುಖ್ಯ ಎಂಬುದು ಇಲ್ಲಿನ ವಿಚಾರವಾಗಿದೆ. ಬದುಕಿನ ಡೋಲಾಯಮಾನದ ಸ್ಥಿತಿರೂಪದ ಚಿತ್ರಣದೊಂದಿಗೆ ಜಾತಿ, ವರ್ಣ ಪರಂಪರೆಯ ಕಲ್ಪನೆಯ ಸೂಕ್ಷ್ಮ ವಿರೋಧ, ಖಂಡನೆ ಇಲ್ಲಿರುವುದು ತೋರುತ್ತದೆ.

ನಮ್ಮ ದೇಶದಲ್ಲಿ ಜಾತಿ–ಜಾತಿಗಳ ನಡುವೆ ಕುಲ–ಕುಲ ಬಾಂಧವರ ನಡುವೆ ದುಷ್ಟಶಕ್ತಿಗಳು ಕಲಹವನ್ನು ಎಬ್ಬಿಸುತ್ತಿವೆ. ಇದನ್ನು ಕಂಡ ತತ್ವಪದಕಾರ ಕ್ವಾನಳ್ಳಿ ಹೊನ್ನಪ್ಪ ಹೀಗೆ ಹೇಳುತ್ತಾರೆ.

**"ಜಾತಿಗೆ ಜೀತನಾಗಿ**

**ಜ್ಯೋತಿ ಕಂಡನಯೋಗಿ**

**ನಿಜನಾಮದಲ್ಲಿ ಜನಿಸಿದ್ದೇವೋ**

**ನಮಗೆಲ್ಲಿ ಕುಲವೊ"**[7]

ಜಾತಿಯೆಂಬ ಕಲ್ಪನೆ ಸಮಾಜಕ್ಕೆ ಮಾರಕವಾಗಿ ಜಾತಿಯ ಜ್ವಾಲೆ ಸಾಮಾಜಿಕ ರೀತಿ-ನೀತಿಗಳನ್ನು ದಹಿಸಿ ಪರಸ್ಪರರಲ್ಲಿ ಭೀತಿಯನ್ನು ಹುಟ್ಟುಹಾಕುತ್ತಲೇ ಬಂದಿದೆ. ಕುಡಿಯುವ ನೀರು, ಬೀಸುವ ಗಾಳಿ, ಸುಡುವ ಅಗ್ನಿ ಜಗತ್ತಿಗೆ ಒಂದೇ ಆದರೂ ಇದನ್ನು ಮರೆಮಾಚಿ ಕುಲವನ್ನು ಎಣಿಸುವ ಜನತೆಗೆ ಸರ್ವಜ್ಞನು ವಿಡಂಬಿಸಿದಂತೆಯೇ ಕಲ್ಕಂಬ ರುಕ್ಮುದ್ದೀನ್ ಸಾಬರು ಜಾತಿ-ಜಾತಿಗಳ ಒಳಗೊಳಗಿರುವ ವಿಷಮತೆಯನ್ನು ತೊಲಗಿಸಲು ಹಾಗೂ ಭೇದವನ್ನು ಅಳಿಸಲು ಪ್ರಯತ್ನಿಸಿದ್ದಾರೆ. ಅದನ್ನು ಅವರ ಅನೇಕ ತತ್ವಪದಗಳಲ್ಲಿ ಗುರುತಿಸಬಹುದು.

.. .. ...

**ಹುಟ್ಟಿನೊಳಗ ಮುಟ್ಟು ಅದ ಕಿಟ್ಟುಪುಟ್ಟು**

**ಮುಟ್ಟಿನೊಳಗ ಹುಟ್ಟು ಅದ ಕಿಟ್ಟುಪುಟ್ಟು"**[8]

ಎನ್ನುವ ರುಕ್ಮುದ್ದೀನ್ ಸಾಬರು ಜನಮಾನಸದಲ್ಲಿನ ವಿರಸ, ಜಾತೀಯತೆ, ಮಡಿ-ಮೈಲಿಗೆಯಂತಹ ಆಚರಣೆಯನ್ನು ನಿಂದಿಸಿದ್ದಾರೆ. ಮುಂದುವರಿದು,

**"ಎಲ್ಲರೂ ಹುಟ್ಟೋದು ಒಂದೇ ಜಾಗ**

**ಎಲ್ಲರೂ ಬದುಕೋದು ಒಂದೇ ಜಾಗ**

**ಎಲ್ಲಿಂದ ಬಂತು ಕೆಳಗ ಮ್ಯಾಗ**

**ಎಲ್ಲಾ ಒಂದೇ ಒಳಗ-ಹೊರಗ"**[9]

ಹಾಗಾಗಿ ಮೇಲು-ಕೀಳು, ಉಚ್ಚ-ನೀಚ ಭಾವವನ್ನು ಬಿಟ್ಟು ಸಾಮರಸ್ಯದ ಬದುಕು ಸಾಗಿಸಬೇಕು ಎನ್ನುತ್ತಾರೆ.

ಶಿಶುನಾಳ ಶರೀಫರಂತು ಜಾತಿಭೇದ ಮಾಡುವವರನ್ನು ಕಂಡು ಅವರ ಮುಖಕ್ಕೆ ಹೊಡೆದಂತೆ ಅವರೆಲ್ಲರ ಹುಟ್ಟಿನ ಗುಟ್ಟನ್ನು ತಮ್ಮದೊಂದು ತತ್ವಪದದಲ್ಲಿ, ಭೂಮಿಯ ಮೇಲೆ ಹುಟ್ಟುವ ಪ್ರತಿಯೊಬ್ಬ ಮಾನವನು ತೊಗಲಮೊಲೆಯ ಹಾಲು ಕುಡಿದು ಬೆಳೆದರೂ ಶೀಲ ಮಾಡುವುದನ್ನು ನೋಡಿ ಅಣಕಿಸಿದ್ದಾರೆ.

**"ತೊಗಲಮಲಿ ಹಾಲು ಕುಡಿದು ದೊಡ್ಡವರಾಗಿ**

**ಶೀಲಮಾಡತಿರಿ ನಾಡೆಲ್ಲ...**

**ನಾ ಆದರೇನು ನೀ ಆದರೇನು**

**ಗಂಧ ವಿಭೂತಿ, ತೊಗಲಿಗೆ ಧರಿಸಿ**

**ಜಾತಿ ಜಾತಿ ಬ್ಯಾರೆಯೆನಿಸಿ"**[10]

ತೊಗಲಿನಗೂಡು ಎಂದು ಶರೀರವನ್ನು ಹಗುರವಾಗಿ ನಿಂದಿಸಿ, ಎಲ್ಲರೂ ಅದರೊಳಗಿಂದ ಬಂದವರೇ. ಅದರ ಹಾಲು ಕುಡಿದು ಬೆಳೆದವರೆ, ಹೀಗಿರುವಾಗ ಮೇಲು-ಕೀಳಿನ ಭಾವನೆಯೇಕೆ? ಎಂದು ಪ್ರಶ್ನಿಸುತ್ತಾನೆ. ಹಾಗೆಯೇ ನಾ ಆದರೇನು? ನೀ ಆದರೇನು? ಎಂಬ ಶರೀಫರ ಪ್ರಶ್ನೆ ಬ್ರಾಹ್ಮಣರಾದರೇನು, ಅಸ್ಪೃಶ್ಯರಾದರೇನು ಎಲ್ಲರೂ ಒಂದೇ, ಎಲ್ಲರೂ ಆ ತೊಗಲಿನ ಶರೀರದಿಂದ ಬಂದವರು. ಎಲ್ಲಾ ಜಾತಿ

ಒಂದೇ ಎಂದು ಹೇಳಿ ಸಾಮಾಜಿಕ ಸಮಾನತೆಯನ್ನು ಸಾರಿದ್ದಾರೆ.

**"ಬೋಕಿಯೊಳಗ ಮೂರು ಲೋಕ ಹುಟ್ಟಿತೋ**

**ಆ ಕುಲ ಈ ಕುಲ ಎಲ್ಲಿತ್ತೋ.."**[11]

ಮಾನವರೆಲ್ಲ ಸಮಾನರು, ಅದನ್ನು ಮರೆತು ಮೇಲು-ಕೀಳು ಎಂಬ ಕೆಟ್ಟ ಭಾವನೆ ಸರಿಯಲ್ಲ ಎಂದು ಹೇಳಿ ಇಂತಹ ತಾರತಮ್ಯ ನಿವಾರಿಸಲು ಶರೀಫರು ಪ್ರಾಮಾಣಿಕ ಪ್ರಯತ್ನ ನಡೆಸಿರುವುದು ಗೋಚರಿಸುತ್ತದೆ.

ರಸ್ತಾಪುರದ ಭೀಮಕವಿ ಕೆಳಸ್ತರದಲ್ಲಿ ಜನಿಸಿ ಜಾತಿ ಶೋಷಣೆಯನ್ನು ಅನುಭವಿಸಿದವರು. ಅವರ ತತ್ವಪದವನ್ನು ಗಮನಿಸಿದಾಗ ಜಾತಿಕಲ್ಪನೆಯ ಬಗ್ಗೆ ಅವರಿಗಿದ್ದ ಅಭಿಪ್ರಾಯ ವ್ಯಕ್ತವಾಗುತ್ತದೆ.

**"ಜಾತಿಸೂತಕವಿಡಿದೇತಕೆ ಬಳಲುವಿ**

.. .. ..

**ಜಾತಿಕಲ್ಪನೆಯಳಿದು ಹೋದಂತಹ**

**ದಾತಗೆ ಜಾತಿಯ ಸೂತಕವುಂಟೆ?"**[12]

ಅಜ್ಞಾನಿಗಳು ಜಾತಿ ಸೂತಕದಿಂದ ಬದುಕುತ್ತಾರೆ. ಜ್ಞಾನಿಯಾದವನಿಗೆ ಯಾವುದೇ ಜಾತಿ ಸೂತಕವಿಲ್ಲ ಎಂದು ಭೀಮಕವಿ ವಿವರಿಸಿದ್ದಾನೆ. ಎಲ್ಲ ಮನುಜರು ಸೂತಕ ಯೋನಿಯಲ್ಲಿ ಹುಟ್ಟಿಬಂದಿರುವ ಮರ್ಮ ತಿಳಿಯದೆ ಗೋತ್ರಾದಿ ಕುಲಛಲವನ್ನಾಧರಿಸಿ ನರಕಕ್ಕೆ ಬೀಳುವರು ಎಂದಿದ್ದಾನೆ.

"ತತ್ವಪದಕಾರರು ಎಲ್ಲಾ ಜಾತಿಯ ಮರಗಳ ಕಾಡು ಇದ್ದಂತೆ" ಎನ್ನುವ ಮಾತು ಅರ್ಥವತ್ತಾಗಿದೆ. ಇವರಿಗೆ ನಿರ್ದಿಷ್ಟವಾದ ಜಾತಿಯಿಲ್ಲ ಧರ್ಮವಿಲ್ಲ, ಎಲ್ಲರೂ ಒಂದೇ. ಅವರು ನಾನಾ ವಿಧದ ಸ್ತರಗಳಿಂದ ಜಾತಿಗಳಿಂದ ಬಂದವರು. ಕುಲಧರ್ಮಗಳನ್ನು ಮೀರಿನಿಂತವರು. ಯಾವುದೇ ಧರ್ಮತತ್ವಗಳಿಗೆ ಕಟ್ಟುಬಿದ್ದು ತತ್ವಪದಗಳನ್ನು ರಚಿಸಲಿಲ್ಲ. ಸಮಾಜ ಕಲ್ಯಾಣಕ್ಕಾಗಿ ಕಟ್ಟಿದ ಅವರ ಪದಗಳು ಒಂದು ಸಂಸ್ಕೃತಿಯಾಗಿ, ವಿನೂತನ ಪರಂಪರೆಯಾಗಿ ನಮ್ಮಲ್ಲಿ ಉಳಿದುಬಂದಿದೆ.

ಸಮಾನತೆಯ ತತ್ವಕ್ಕೆ ಒತ್ತು ನೀಡುವ ತತ್ವಪದಕಾರರು ಇಂದು ನಮಗೆ ಸರಿಯಾದ ಮಾರ್ಗವನ್ನು ತೋರಿಸಬಲ್ಲವರಾಗಿದ್ದಾರೆ. ನೀತಿಯ ಮಾತುಗಳನ್ನು ಹೇಳಿ, ಸಮಾನತೆ ಹಾಗೂ ಸೌಹಾರ್ದತೆಯ ಪಾಠಗಳನ್ನು ಕಲಿಸಿ ಮನುಷ್ಯನಿಗೆ ಬಿಡದೆ ಅಂಟಿಕೊಂಡಿರುವ ಜಾತಿಯ ಕವಚವನ್ನು ಕಿತ್ತೊಗೆಯುವವರಾಗಿದ್ದಾರೆ.

**ಕೊನೆಟಿಪ್ಪಣಿಗಳು**

1. ಶಿವರಾಜ ಪಾಟೀಲ್ : ಮಹಾಜ್ಞಾನಿ ಕಡಕೋಳ ಮಡಿವಾಳರು; ಪುಟ 76, 1991
2. ಡಾ. ವ್ಹಿ.ಜಿ. ಪೂಜಾರ : ನಡುಗನ್ನಡ ಸಾಹಿತ್ಯ; ಪುಟ 28, 2008
3. ಎನ್.ಜಿ ಸ್ವಾಮಿ (ಸಂ.) : ಕೂಡಲೂರು ಬಸವಲಿಂಗಪ್ಪ; ಪುಟ 42, 1996
4. ಜಗದ್ಗುರು ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು (ಸಂ.) : ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು; ಪುಟ 110, 1998.
5. ಡಾ. ವ್ಹಿ.ಜಿ. ಪೂಜಾರ : ನಡುಗನ್ನಡ ಸಾಹಿತ್ಯ; ಪುಟ 79, 2008.
6. ಮೀನಾಕ್ಷಿ ಬಾಳಿ (ಸಂ.) : ಖೈನೂರ ಕೃಷ್ಣಪ್ಪ; ಪುಟ 13, 1998.
7. ಮಲ್ಲಿಕಾರ್ಜುನ ಸಾಬ : ಗುಲಬರ್ಗಾ ಜಿಲ್ಲೆಯ ದಲಿತ ತತ್ವಪದಕಾರರು; ಪು.85, 2002

8. ಬಸವರಾಜ ಸಬರದ : ಹೈದರಾಬಾದ್ ಕರ್ನಾಟಕದ ತತ್ವಪದಗಳು; ಪುಟ 76, 2000.
9. ರುಕ್ಕುದ್ದೀನ್ ಸಾಬ : ಜ್ಞಾನಜ್ಯೋತಿ ತತ್ವಪದಗಳು, ಭಾಗ–2; ಪುಟ 52, 1988.
10. ಡಾ. ಶಿವಾನಂದ ಗುಬ್ಬಣ್ಣನವರ (ಸಂ.) : ಶಿಶುನಾಳ ಶರೀಫರ ಗೀತೆಗಳು; ಪು.52, 1988
11. ಅದೇ; ಪುಟ 52.
12. ಡಾ. ಜಿ. ನಾರಾಯಣಸ್ವಾಮಿ : ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಸಂವೇದನೆ – ಒಂದು ಅಧ್ಯಯನ ; ಪುಟ–179, 2008.

**ಪರಾಮರ್ಶನ ಗ್ರಂಥಗಳು**

1. ತತ್ವಪದಗಳು : ಶಾಂತರಸ (ಸಂ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2000
2. ಆಯ್ದ ತತ್ತ್ವಪದಗಳು : ಭಾಸ್ಕರ ಟಿ.ಎಂ. (ಸಂ), ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ, 2007
3. ಹೈದರಾಬಾದ್ ಕರ್ನಾಟಕದ ತತ್ತ್ವಪದಗಳು : ಬಸವರಾಜ ಸಬರದ (ಸಂ.) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2007
4. ಕರ್ನಾಟಕದ ಸೂಫಿಗಳು : ರಹಮತ್ ತರೀಕೆರೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ 2001.

❖❖❖

ಹಗಲಿನ ನೆಲದಲಿ ಬಿಸಿಲದು ಬರೆದ
ನೆರಳಿನ ಚಿತ್ರವಿದೆ
ಸೂರ್ಯನ ಜೊತೆಯಲಿ ಅಲೆಯುತ ಸಾಗಿದೆ
ನೆಲದೆದೆ ರಂಗೋಲೆ

# ವಿ.ಎಂ. ಇನಾಂದಾರರ ಸ್ತ್ರೀಪಾತ್ರ ಪ್ರಧಾನ ಕಾದಂಬರಿಗಳು ಒಂದು ವಿಶ್ಲೇಷಣೆ

**ಡಾ. ಸೀತಾ ಹೆಚ್.ಎನ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನಂಜನಗೂಡು–571301

ಮನುಷ್ಯ–ಮನುಷ್ಯನ ನಡುವೆ ಇರಬೇಕಾದ ಸಮಾನತೆಯನ್ನು ಸಮರ್ಥಿಸಲು ಜಗತ್ತಿನಾದ್ಯಂತ ಎಷ್ಟೋ ಶತಮಾನಗಳಿಂದ ಅನೇಕ ಸಾಹಿತ್ಯ ಪ್ರಯತ್ನಗಳು ನಡೆದಿವೆ, ನಡೆಯುತ್ತಿವೆ. ಅಂಥ ಪ್ರಯತ್ನಗಳಲ್ಲಿ ಆಧುನಿಕ ಕಾದಂಬರಿಕಾರರ ಪ್ರಯತ್ನವೂ ಒಂದು ಎಂಬುದನ್ನು ಈಗಾಗಲೇ ನೋಡಿದ್ದೇವೆ. ಕನ್ನಡದಲ್ಲಿ ಮೊದಮೊದಲು ಪುರುಷಪ್ರಧಾನವುಳ್ಳ ಕಾದಂಬರಿಗಳು ಹೆಚ್ಚಾಗಿ ರಚನೆಯಾಗಿದ್ದರೂ, ಶಾಂತದೇವಿ ನೀಲಾಗಾರ, ಜಿ. ರಾಘವೇಂದ್ರರಾಯರು, ಅಣ್ಣಾಜಿರಾಯರು, ತಿರುಮಲಾಂಬಾ, ಅ.ನ.ಕೃ, ಕಟ್ಟಿಮನಿ, ನಿರಂಜನ, ತ,ರಾ,ಸು, ಇಂದಿರಾ, ತ್ರಿವೇಣಿ, ಅನುಪಮಾ ನಿರಂಜನ –ಮೊದಲಾದವರು ಕಾದಂಬರಿ ಕ್ಷೇತ್ರ ಪ್ರವೇಶಿಸಿದ ಮೇಲೆ ಸ್ತ್ರೀಪಾತ್ರ ಪ್ರಧಾನವಾದ ಕಾದಂಬರಿಗಳೂ ಹೊರಬಂದವು. ಹಾಗೆ ನೋಡಿದರೆ ಕನ್ನಡದ ಮೊದಲ ಕಾದಂಬರಿ 'ಇಂದಿರಾಬಾಯಿ'ಯಲ್ಲಿಯೇ ಗುಲ್ವಾಡಿ ವೆಂಕಟರಾಯರು ಸುಧಾರಣಾವಾದಿ ದೃಷ್ಟಿಕೋನವನ್ನು ಚಿತ್ರಿಸಿದ್ದಾರೆ. ಬಾಲವಿಧವೆಯ ಕಥೆಯನ್ನು ಅದರಲ್ಲಿ ಹೇಳಿದ್ದಾರೆ. ಸ್ತ್ರೀ ಸಮಸ್ಯೆಗಳನ್ನು ಎತ್ತಿಕೊಂಡು ಬರೆದವರು ಕೆಲವೇ ಮಂದಿಯಾದರೂ, ಸ್ತ್ರೀಯನ್ನು ನಾಯಕಿಯ ಸ್ಥಾನದಲ್ಲಿ ನಿಲ್ಲಿಸಿ ಸ್ತ್ರೀ ಮಹತ್ವದ ಸ್ಥಾನಗಳನ್ನು ದೊರೆಕಿಸಿಕೊಟ್ಟವರಲ್ಲಿ ಇನಾಂದಾರರೂ ಒಬ್ಬರು. ಇವರ ಕಾದಂಬರಿಗಳು ಮಧ್ಯಮವರ್ಗದ ಹೆಣ್ಣಿನ ಜೀವನವನ್ನು ಸಾಕಷ್ಟು ಸಮರ್ಥವಾಗಿ ಬಿಂಬಿಸುತ್ತವೆ. ಪುರುಷ ಪಾತ್ರಗಳಿಗಿಂತಲೂ ಸ್ತ್ರೀ ಪಾತ್ರಗಳೇ ಪ್ರಧಾನವಾಗಿರುವುದು ಇನಾಂದಾರರ ಹೆಚ್ಚಿನ ಕಾದಂಬರಿಗಳ ವೈಶಿಷ್ಟ್ಯ. ಇನಾಂದಾರರ ಮೋಹಿನಿ, ಊರ್ವಶಿ, ಚಿತ್ರಲೇಖಾ–ಮುಂತಾದ ಕಾದಂಬರಿಗಳ ಹೆಸರೇ ಸೂಚಿಸುವಂತೆ ಸ್ತ್ರೀಪಾತ್ರಗಳು ಕಾದಂಬರಿಯುದ್ಧಕ್ಕೂ ಬೆಳೆದು ನಿಂತಿವೆ.

ಇನಾಂದಾರರ ಒಟ್ಟು ಕಾದಂಬರಿಗಳಲ್ಲಿ ಏಳು ಕಾದಂಬರಿಗಳು ಸ್ತ್ರೀಕೇಂದ್ರಿತ ಕಾದಂಬರಿಗಳಾಗಿರುವುದು ಗಮನಾರ್ಹ ಸಂಗತಿ. ಇವರ ನಾಯಕಿ ಪ್ರಧಾನವಾದ ಕಾದಂಬರಿಗಳಲ್ಲಿ ತಮ್ಮ ಮಟ್ಟಿಗೆ ತಾವಿರಬೇಕೆನ್ನುವ, ಪುರುಷರಿಗಿಂತ ತಾವೇನು ಕಡಿಮೆಯೇ ಎಂದುಕೊಳ್ಳುವ ಆಧುನಿಕ ವಿದ್ಯಾವಂತ ಪ್ರಗತಿಪರ ಮನೋವೃತ್ತಿಯನ್ನು ಹೊಂದಿರುವ ಮಹಿಳೆಯರೇ ಹೆಚ್ಚು ಕಂಡುಬರುತ್ತಾರೆ. ಕಾದಂಬರಿಕಾರರೇ "ಹೆಂಗಸಾದರೂ ಆಯಿತು, ಉಳಿದವರಿಗೆ ಅಡಿಆಳಾಗಿ ಬದುಕಬೇಕಾದ ಕಾಲ ಕಳೆದಹೋಯಿತು, ಹೊಸ ಅವಕಾಶಗಳು, ಹೊಸ ಸ್ವಾತಂತ್ರ್ಯಗಳೂ ಆಕೆಗೆ ಬಂದಿವೆ" ಎಂದು ಸ್ಪಷ್ಟವಾದ ತಮ್ಮ ನಿಲುವನ್ನು ಮೋಹಿನಿ ಕಾದಂಬರಿಯಲ್ಲಿ ಸೂಚಿಸಿದ್ದಾರೆ.

ಮನುಷ್ಯ ವರ್ಗದ ಏಳಿಗೆಯಲ್ಲಿ ಮಹಿಳೆಯ ಪಾತ್ರವನ್ನು ಅರಿತಿರುವ ಕಾರಣ ಇನಾಂದಾರರು, ಗಂಡು–ಹೆಣ್ಣುಗಳನ್ನು ನಡುವಿನ ಸಂಬಂಧದ ವಿವಿಧ ನೆಲೆಗಳು, ಅಲ್ಲಿ

ಎದುರಾಗಬಹುದಾದ ಎಡರು–ತೊಡರುಗಳು, ಮೂಡಬಹುದಾದ ಸರಸ–ವಿರಸಗಳು ಎಲ್ಲವನ್ನು ಕಾದಂಬರಿ ವ್ಯಾಪ್ತಿಯೊಳಕ್ಕೆ ತರುತ್ತಾರೆ. ಇವರು ಸೃಷ್ಟಿಸಿರುವ ಬಹುಪಾಲು ಸ್ತ್ರೀಪಾತ್ರಗಳು ಹೆಚ್ಚು ಕ್ರಿಯಾಶೀಲವಾಗಿವೆ. ಆದರೂ ಒಮ್ಮೊಮ್ಮೆ ಎದುರಾಗಬಹುದಾದ ಸಮಸ್ಯೆಗಳ ತೀವ್ರತೆಯಿಂದಾಗಿ ಪಾತ್ರಗಳು ಕುಸಿಯುತ್ತವೆ. ಸ್ತ್ರೀಯು ಸಾಮಾಜಿಕವಾಗಿ, ಆರ್ಥಿಕವಾಗಿ, ಲೈಂಗಿಕವಾಗಿ ಹೊಂದಿರಬಹುದಾದ ಸಂಬಂಧಗಳ ವಿವಿಧ ಹಂತಗಳು ಕಾದಂಬರಿಗಳಲ್ಲಿ ಸ್ಥಾನ ಪಡೆದಿವೆ. ಅದು ವಿವಾಹಪೂರ್ವ, ವೈವಾಹಿಕ, ವಿವಾಹೋತ್ತರ ಮತ್ತು ವಿವಾಹಬಾಹಿರ ಸಂಬಂಧಗಳನ್ನು ಒಳಗೊಳ್ಳುತ್ತದೆ. ಇವರು ಚಿತ್ರಿಸಿರುವ ಪ್ರಮುಖ ಪಾತ್ರಗಳೆಲ್ಲ ಒಂದೊಂದು ರೀತಿಯಲ್ಲಿ ಬೆಳೆಯುತ್ತ, ಸೆಣಸಾಡುತ್ತಾ ಮುಂದುವರಿಯುತ್ತವೆ. ಅಂತಹ ಸೆಣಸಾಟದಲ್ಲಿ ಇವರ ಸ್ತ್ರೀಪಾತ್ರಗಳು ಗೆಲುವು ಸಾಧಿಸಿಯೇ ಇಲ್ಲ ಎಂಬುದು ಕಾದಂಬರಿಯನ್ನು ಓದಿದಾಗ ಮನವರಿಕೆಯಾಗುತ್ತದೆ.

ಇನಾಂದಾರರು ಸೃಷ್ಟಿಸಿರುವ ಸ್ತ್ರೀಪಾತ್ರಗಳಲ್ಲಿ ಪ್ರಮುಖವಾಗಿ ಎರಡು ವರ್ಗಗಳು ಕಂಡುಬರುತ್ತವೆ. ಮೊದಲನೆಯ ವರ್ಗ ನೀತಿಸಂಹಿತೆಯೊಳಗೆ ಒಪ್ಪಿ ಬಾಳುವ ಸ್ತ್ರೀಯರದಾದರೆ, ಅದನ್ನು ಪ್ರತಿಭಟಿಸಿ ಇಲ್ಲವೇ–ಸ್ವತಂತ್ರವಾಗಿ ವರ್ತಿಸಿ ಕೆಡುಕನ್ನೇ ತಂದುಕೊಳ್ಳುವಂತಹುದು ಎರಡನೆಯ ವರ್ಗ. ಆದರೆ ಈ ಎರಡು ವರ್ಗಗಳಲ್ಲಿ ಮೊದಲನೆಯದರ ಕಡೆಗೆ ಕಾದಂಬರಿಕಾರರ ಒಲವು ಅಧಿಕವೆಂಬುದು ಸ್ಪಷ್ಟ..

ಒಂದು ಹೆಣ್ಣಿನ ಸ್ವಾತಂತ್ರ್ಯದ ಅಪೇಕ್ಷೆ ಪರಿಣಾಮಗಳನ್ನು ಚಿತ್ರಿಸುವ ಮೋಹಿನಿ ಕಾದಂಬರಿ–'ಕನಸಿನ ಮನೆ', 'ಕಟ್ಟಿದ ಮನೆ' 'ಬಾಡಿದ ಹೂ' 'ಕತ್ತಲೆಯ ಕಡಲು' –ಎಂಬ ನಾಲ್ಕು ಭಾಗಗಳಲ್ಲಿ ರೂಪುಗೊಂಡಿದ್ದು, ಈ ನಾಲ್ಕು ಭಾಗಗಳಲ್ಲೂ ಮೋಹಿನಿ ಪಾತ್ರವೇ ಪ್ರಮುಖವಾದುದು. ಸಾಮಾಜಿಕ ಸ್ಥಿತಿಗತಿಗಳನ್ನು ಪರ್ಯಾಯವಾಗಿ ಚಿತ್ರಿಸಿಕೊಂಡು ಹೋಗುವ ಈ ಕಾದಂಬರಿಯಲ್ಲಿ ಬರುವ ಪಾತ್ರಗಳು ತೀರ ಸರಳ ಜೀವಿಗಳಲ್ಲ. ಇವರೆಲ್ಲರೂ ಸುಶಿಕ್ಷಿತರಾಗಿದ್ದರಿಂದಲೇ ಸಂಕೀರ್ಣ ಭಾವನೆಗಳಿಂದ ಸಾಮಾಜಿಕ ವ್ಯವಹಾರಗಳ ಕುರಿತ ಸಮಸ್ಯೆಗಳನ್ನು ಸಾಮಾಜಿಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮದುವೆಯ ಬಂಧನವನ್ನೊಪ್ಪಿ ಬಂದ ಮೋಹಿನಿ ಆನಂದನೊಡನೆ ಬದುಕಲು ಯೋಗ್ಯ ಪರಿಸರ ದೊರೆತಿದ್ದರೆ ಅವಳ ಬಾಳಿನ ರೀತಿಯೇ ಬೇರೆಯಾಗುತ್ತಿತ್ತು. ಹಾಗಿಲ್ಲದಿದ್ದಾಗ ಅವಳು ಕಟ್ಟಬೇಕೆಂದಿದ್ದ ಕನಸಿನ ಮನೆ ನಿರಾಶೆಯ ಕೂಪಕ್ಕಿಳಿದು ಆಕೆ ಪತಿಯೇ ಪರದೈವವೆಂದು ಒಪ್ಪಿಕೊಂಡು ಬಂದ ಸಂಪ್ರದಾಯಕ್ಕೆ ವಿರುದ್ಧವಾಗಿ ಹೋರಾಡಬೇಕಾಯಿತು. ಈ ಹೋರಾಟದಿಂದ ಅವಳಿಗೆ ಮೊದಲು ನಿರಾಶೆ ಆವರಿಸಿದರೂ, ಮುಂದೆ ಅದು ಛಲವಾಗಿ ಬೆಳೆಯುತ್ತದೆ. ಎಂತಹ ಛಲ ಅವಳಲ್ಲಿ ಬೆಳೆಯಿತೆಂದರೆ ಗಂಡ ಆನಂದ ಬಂದು ಮನೆಗೆ ಕರೆದರೂ ಹೋಗಲು ಒಪ್ಪದ ಛಲವೆನ್ನಬಹುದು. ಈ ಛಲ ಅಪಾಯದ ಸೂಚನೆಯೆಂಬ ಅರಿವು ಆಕೆಗೆ ಬರುವುದಿಲ್ಲ.

ಮೋಹಿನಿಯ ಸಾಧನೆಗೆ ಅವಳಿಗಿದ್ದ ಬಂಡವಾಳವೆಂದರೆ ಆತ್ಮಸ್ಥೈರ್ಯ ಮತ್ತು ಸೌಂದರ್ಯ. ಯೌವ್ವನ ಆಕೆಗೆ ದಾರಿ ತೋರಿಸಿದರೆ, ಆತ್ಮಸ್ಥೈರ್ಯ ಅವಳನ್ನು ಮುನ್ನೆಡೆಸುತ್ತದೆ. ತಾನು ಬಯಸಿದ್ದೆಲ್ಲಾ ತನ್ನದಾಗಬೇಕೆಂಬ ಚಪಲ, ಹಠವಿರುವ ಮೋಹಿನಿ ಅದು ದೊರೆಯದಾದಾಗ ನಿರಾಶೆ ಅನುಭವಿಸುತ್ತಾಳೆ. ಆದರೆ ಹಠದ ಈ ಸ್ವಭಾವ ಮೋಹಿನಿಗೆ ವಿಶಿಷ್ಟವಾದುದು. ಇಷ್ಟೊಂದು ಹಠದ ಸ್ವಭಾವವಿರುವ

ಮೋಹಿನಿಯ ವ್ಯಕ್ತಿತ್ವವನ್ನು ಕಾದಂಬರಿಕಾರರು ಕೆಲವೊಮ್ಮೆ ಮಾನವೀಯ ಅನುಕಂಪೆಗೂ ಒಳಪಡಿಸುತ್ತಾರೆ, ಇನ್ನೊಮ್ಮೆ ತಿರಸ್ಕಾರಯೋಗ್ಯವಾಗಿಸುತ್ತಾರೆ. ಮೋಹಿನಿಯ ಪಾತ್ರದಲ್ಲಿ ಇನಾಂದಾರರಿಗೆ ಮೊದಲಿಗಿದ್ದ ಧೋರಣೆ ಕಾದಂಬರಿಯ ಅಂತ್ಯದ ವೇಳೆಗೆ ಬದಲಾಗುತ್ತದೆ. ಅವರ ಪ್ರಕಾರ ಸ್ವತಂತ್ರವಾಗಿ ಬೆಳೆಯುತ್ತಿದ್ದ, ಪಾತ್ರಕ್ಕೆ ಸೋಲು ಸಹಜವೇ ಎಂಬಂತಿದೆ. ಅದರಲ್ಲೂ ಕಾದಂಬರಿಯ ಕೊನೆಯಲ್ಲಿ ಆನಂದನನ್ನು ತಂದು ನಿಲ್ಲಿಸಿ ಸೋಲನ್ನು ಇನ್ನಷ್ಟು ತೀವ್ರವಾಗಿಸಲು ಕಾದಂಬರಿಕಾರರು ಪ್ರಯತ್ನಪಟ್ಟರೂ ಅದು ಕೃತಕವೆನಿಸುತ್ತದೆ.

ಮೋಹಿನಿಯಲ್ಲಿರುವ ಆತ್ಮಸ್ಥೈರ್ಯ ಮೆಚ್ಚುವಂತಹುದು. ಅವಳ ಸಾಧನೆಯ ದಾರಿಕೆಟ್ಟದಾದರೂ, ಸರಿಯೆನ್ನುವ ಮನೋಭಾವ ಆಕೆಯದು. ಆದರೆ ಆಕೆಯ ಸ್ವತಂತ್ರ ಪ್ರವೃತ್ತಿ ಎಂದೂ ಆದರ್ಶವಲ್ಲ. ಮೋಹಿನಿಯ ಸ್ವತಂತ್ರ, ಛಲ ಎಂದೂ ಸಮಾಜದ ಸ್ತ್ರೀಯೊಬ್ಬಳದಾಗದೆ ಮೋಹಿನಿಯದು ಮಾತ್ರವಾಗಿದೆ. "ಸಿದ್ಧಿ ಮುಖ್ಯ, ಸಾಧನೆ ಯಾವುದಾದರೂ ಸರಿ" ಎನ್ನುವ ಮೋಹಿನಿಯ ಸಾಧನೆಯ ಮಾರ್ಗ ಅನೈತಿಕವಾದುದು. ಆದ್ದರಿಂದಲೇ ಅವಳ ಅರಳಿದ ಬದುಕು ಏಕಾಂಗಿತನದಿಂದ ಬಾಡಬೇಕಾಯಿತು. ಮೊಗ್ಗು ಅರಳಿ ಹೂವಾಗುವುದು ನ್ಯಾಯವಾದರೆ ಅರಳಿದ ಹೂವು ಬಾಡುವುದು ನ್ಯಾಯವೇ" (ಬಾಡಿದ ಹೂ, ಪು.214) ಎಂಬ ಕಾದಂಬರಿಯಲ್ಲಿನ ಪಾತ್ರವೊಂದರ ಈ ಮಾತು ಮೋಹಿನಿ ಪಾತ್ರಕ್ಕೆ ಸರಿಯಾಗಿ ಅನ್ವಯಿಸುತ್ತದೆ.

ಕಾದಂಬರಿಯಲ್ಲಿ ಬರುವ ಅನುರಾಧೆಯ ಪ್ರಾತ್ರ ಮೋಹಿನಿ ಪಾತ್ರಕ್ಕಿಂತ ಭಿನ್ನವಾಗಿದೆ. ಚಲನಚಿತ್ರ ನಿರ್ದೇಶಕನಾಗಿದ್ದ ಅಪಟೆಯ ಧರ್ಮಪತ್ನಿ ಅನುರಾಧೆ, ಯಾವುದೋ ಕೆಟ್ಟ ಕ್ಷಣದಲ್ಲಿ ನಟವರ್ಮನಿಗೆ ದೇಹ ಅರ್ಪಿಸಿ ಪತಿಯನ್ನು ವಂಚಿಸಿದ್ದಾಳೆ. ಕೊನೆಗೆ ತಾನು ಮಾಡಿದ್ದು ತಪ್ಪೆಂದು ಅರಿವಾದಾಗ ಆಪಟೆಯ ಕ್ಷಮೆ ಕೇಳಿ ಮತ್ತೇ ಅವನ ಜೊತೆಗೆ ಸಂಸಾರ ಸಾಗಿಸುತ್ತಾಳೆ. ಈ ಪಾತ್ರವನ್ನೇ ಹೋಲುವ ಮತ್ತೊಂದು ಪಾತ್ರವನ್ನು ಇನಾಂದಾರರು ಮಂಜು ಮಸುಕಿದ ದಾರಿ" ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಇಲ್ಲಿ ಬರುವ ಸುಮಿತ್ರೆ ಕೂಡ ಸುಬ್ಬರಾವ್ ಜೊತೆಯಲ್ಲಿ ವಿವಾಹೇತರ ಸಂಬಂಧವನ್ನು ಹೊಂದಿದ್ದಾಳೆ. ಇವರನ್ನು ಆಳುವ ಪುರುಷ ಪಾತ್ರಗಳಾದ ಆಪಟೆ, ಗೋಪಾಲರಿಬ್ಬರೂ ಅತಿ ಸಂಯಮಿಗಳು. ಇವರು ಸದಾ ಕಾಲ ತಮ್ಮ ಕೆಲಸದಲ್ಲಿಯೇ ತಲ್ಲೀನರಾಗಿ ದಣಿದು ರಾತ್ರಿಯಷ್ಟೇ ಮನೆಗೆಬರುವರು. ಹೆಂಡಿರು ಹಗಲಿಡೀ ಏಕಾಂಗಿಯಾಗಿ ಮನೆಯಲ್ಲಿ ಸಮಯ ದೂಡುವರು. ಕ್ರಮೇಣ ಪತಿಯಂದಿರ ಸಲುಗೆಯಿಂದ ದೊರೆತ ಹೊರ ಪ್ರಪಂಚದ ಸಂಪರ್ಕ ಅವರಿಬ್ಬರನ್ನೂ ಉನ್ಮತ್ತರನ್ನಾಗಿಸಿದೆ. ತಮ್ಮ ರೂಪವೇ ಪರ ಪುರುಷರನ್ನು ಮಣಿಯಿಸಿತು. ಸುಮಿತ್ರೆಯರ ಇಚ್ಚೆಯನ್ನು ಪೂರೈಸುವಲ್ಲಿ ಮರ್ಮ, ಸುಬ್ಬರಾವ್ ಸಫಲರಾದರು. ಪತಿಯರ ದೈಹಿಕ ದೌರ್ಬಲ್ಯವೇ ಇವರನ್ನು ಅಡ್ಡ ಹಾದಿಗೆ ಎಳೆಯಲು ಕಾರಣವಾಗುತ್ತದೆ. ಇನಾಂದಾರರು ಪುರುಷ ಪಾತ್ರಗಳನ್ನು ಕಾರ್ಯಕ್ಷಮತೆಯ ಸಂಯಮದ ಅತಿ ನಿಷ್ಠರನ್ನಾಗಿ ಚಿತ್ರಿಸಿದರೆ, ಸ್ತ್ರೀಪಾತ್ರಗಳನ್ನು ವಿಲಾಸೀ ಜೀವನಕ್ಕಾಗಿ ಹಂಬಲಿಸುವ ರಸಿಕರನ್ನಾಗಿ ಚಿತ್ರಿಸಿದ್ದಾರೆ.

ಮೋಹಿನಿ ಕಾದಂಬರಿಯಲ್ಲೇ ಬರುವ ಮತ್ತೊಂದು ಪ್ರಮುಖ ಪಾತ್ರ ನಂದಿನಿ. ಈ ಪಾತ್ರದ ಮೂಲಕ ಕಾದಂಬರಿಕಾರರು ಇನ್ನೊಂದು ತೆರನಾದ ಜೀವನವನ್ನು ಚಿತ್ರಿಸುತ್ತಾರೆ. ನಂದಿನಿ. ಮೊದಲಿಗೆ ಚಲನಚಿತ್ರದಲ್ಲಿ ನಟಿಯಾಗಿ ಅಭಿನಯಿಸಿ ಮೆರೆದಿದ್ದರೂ ಸದ್ಯದಲ್ಲಿ

ಆದರ್ಶ ಗೃಹಿಣಿಯಂತೆ ಗೋಚರಿಸುತ್ತಾಳೆ. ಇಂತಹ ಆದರ್ಶ ಗೃಹಿಣಿಯರದೇ ಒಂದು ವರ್ಗ ಇವರ ಕಾದಂಬರಿಗಳಲ್ಲಿ ಬರುತ್ತವೆಯೆಂಬುದಕ್ಕೆ 'ಮಂಜು ಮುಸುಕಿದ ದಾರಿ'ಯ 'ಲಕ್ಷ್ಮಿ' 'ಮೋಹಿನಿ' ಕಾದಂಬರಿಯ ತಾಯಿ, ಚಿತ್ರಲೇಖಾ ಕಾದಂಬರಿಯ 'ಸುಧಾ' – ಈ ಪಾತ್ರಗಳು ಉದಾಹರಣೆಗಳಾಗಿವೆ. ಆದರ್ಶ ಗೃಹಿಣಿಯರೆನಿಸಿಕೊಳ್ಳುವ ಇವರುಗಳು ತಮ್ಮ ಮಟ್ಟಿಗೆ ತಮ್ಮ ಮನೆಯನ್ನು ನಿಭಾಯಿಸಿಕೊಂಡು ಸುಖದ ನಡುವೆ ಬಾಳುವೆ ನಡೆಸುವ ಗರತಿಯರು. ಈ ಪಾತ್ರಗಳೆಲ್ಲವೂ ಸಾಮಾಜಿಕ ಮೌಲ್ಯದ ಪರಿಮಿತಿಯಲ್ಲಿಯೇ ಬಾಳುತ್ತವೆ.

ಇನ್ನು 'ಸ್ವರ್ಗದ ಬಾಗಿಲು' ಕಾದಂಬರಿಯ 'ಕಾವೇರಿ'ಯ ಪಾತ್ರ ಇನಾಂದಾರರ ಪಾತ್ರ ಸೃಷ್ಟಿಯ ಪರಮ ಸಿದ್ಧಿ ಎನ್ನಬಹುದು. ಇವರ ಇತರ ಪಾತ್ರಗಳಂತೆ ಕಾವೇರಿ ಚೆಲುವೆಯೂ ಅಲ್ಲ, ವಿದ್ಯಾವಂತೆಯೂ ಅಲ್ಲ. ಓದು ಬರೆಹ ಬಲ್ಲ ನಮ್ಮ ಸುತ್ತಮುತ್ತಲೂ ಕಾಣಬಹುದಾದ ಸಾಮಾನ್ಯ ಹೆಣ್ಣು. ಈಕೆಗೆ ಮಕ್ಕಳಾಗದಿರುವುದೇ ಒಂದು ದೊಡ್ಡ ಚಿಂತೆಯಾಗಿದೆ. ಮಕ್ಕಳಿಲ್ಲವೆನ್ನುವ ಕಾರಣಕ್ಕಾಗಿ ಅವಳತ್ತೆ ಭಾಗ್ಯಮ್ಮ ಎಷ್ಟು ಕಿರುಕುಳ ಕೊಟ್ಟರೂ ಮರುಮಾತಾಡದೆ ಎಲ್ಲವನ್ನು ಮೌನದಿಂದಲೇ ನುಂಗಿಕೊಳ್ಳುವ ಸ್ವಭಾವ ಈಕೆಯದು. ಹಠಮಾರಿತನವಂತೂ ಇವಳ ಜಾಯಮಾನಕ್ಕೆ ಬಂದಿಲ್ಲ. ಅತ್ತೆ ಭಾಗ್ಯಮ್ಮ ತನ್ನ ಗಂಡನಿಗೆ ಮರುಮದುವೆ ಮಾಡುವ ಹವಣಿಕೆ ಹಾಕುತ್ತಿದ್ದಾಳೆಂಬ ವಿಚಾರ ತಿಳಿದರೂ ಪ್ರತಿಭಟಿಸಲು ಹೋಗದೆ, ಗಂಡನನ್ನು ಮರುಮದುವೆಗೆ ಒಪ್ಪಿಸಿ ತಾನು ಆತ್ಮಹತ್ಯೆಯ ದಾರಿ ಕಂಡುಕೊಳ್ಳುತ್ತಾಳೆ. ಯಾವುದನ್ನೂ ಬೇಡದೆ, ಎಲ್ಲವನ್ನೂ ಕೊಡಬಲ್ಲ ಆತ್ಮ ಸಮರ್ಪಣೆಯೇ ಪ್ರೀತಿಯ ಸತ್ಯವಾದರೆ ಕಾವೇರಿಯ ಪ್ರೀತಿಗೆ ಸಾಟಿಯಲ್ಲ. ಈಕೆಯ ಆತ್ಮ ಸಮರ್ಪಣೆ ಆದರ್ಶವಾಗಿಲ್ಲದೆ ಹೋದರೂ ಈಕೆಯಲ್ಲಿರುವ ಹೃದಯವಂತಿಕೆ, ತಿಳಿವು ಸಹನೆ, ತ್ಯಾಗಗಳು ಮಾತ್ರ ಹಿರಿದಾದ ಆದರ್ಶಗಳಾಗಿವೆ.

ಇನಾಂದಾರರ 'ಶಾಪ' ಕಾದಂಬರಿಯಲ್ಲಿ ತಾಯಿಯ ಹೊಲಸು ಜೀವನವನ್ನು ತಿರಸ್ಕರಿಸುವ ಸರೋಜಿನಿಯ ಪಾತ್ರ ಮುಖ್ಯವಾಗುತ್ತದೆ. ಕಾದಂಬರಿಯ ನಾಯಕಿ ಸರೋಜಿನಿ ಅದೆಷ್ಟೇ ಕಷ್ಟ ಬಂದೊದಗಿದರೂ ಹೊಸಬಾಳನ್ನು ಬಾಳಲೇಬೇಕೆಂಬ ಗುರಿಯಿಟ್ಟುಕೊಂಡಿದ್ದಾಳೆ. ಆದರೆ ಅವಳ ತಾಯಿ ಮಾತ್ರ ಮಗಳು ತನ್ನಂತೆಯೇ ಕುಲಪದ್ಧತಿಯನ್ನು ಮುಂದುವರಿಸಬೇಕೆಂಬ ಆಸೆಯುಳ್ಳವಳಾಗಿದ್ದಾಳೆ. ಆ ಕಾರಣಕ್ಕಾಗಿಯೇ ಅವಳು ಸರೋಜಿನಿಯನ್ನು ಗೌಡನಿಗೊಪ್ಪಿಸಿದರೆ ಜೀವನಕ್ಕೊಂದು ದಾರಿಯಾದೀತು ಎಂದು ಅದಕ್ಕಾಗಿ ಶ್ರಮಿಸುತ್ತಾಳೆ. ಕಡೆಗೊಮ್ಮೆ ದೇಹ ಗೌಡನೆಂಜಲಾಗುತ್ತದೆ. ಆನಂತರ ವೈದ್ಯರ ಪರೀಕ್ಷೆಯಿಂದ ತಾಯಿಯಂತೆ ಮಗಳೂ ಕೂಡ ವಿಷಕನ್ಯೆ ಎಂಬ ವಿಷಯ ತಿಳಿದಾಗ ಆಕೆಯ ಆಲಾಪ ಸಂಕಟ ಮನಮಿಡಿಯುವಂತಿದೆ. ಯಾರೋ ಮಾಡಿದ ಪಾಪಕ್ಕೆ ಯಾರಿಗೋ ಶಿಕ್ಷೆ ಎಂಬಂತೆ ಮುಂದೆ ಸರೋಜಿನಿ ಬರಡು ಜೀವನವನ್ನು ನಡೆಸುತ್ತಾಳೆ. ಈ ಮಧ್ಯೆ ಸರೋಜಿನಿ, ಗೌಡನೊಂದಿಗೆ ಪ್ರತಿಭಟಿಸುವ ರೀತಿ ಮನೋಜ್ಞವಾಗಿದೆ. ಆದರೂ ಅವಳು ಹೆದರದೆ, ಬೆಚ್ಚದೆ ಮುಂದೆ ಕಾಲೇಜು ಸೇರುತ್ತಾಳೆಂಬಲ್ಲಿಗೆ ಕಾದಂಬರಿ ಮುಗಿಯುತ್ತದೆ. ಕಾದಂಬರಿಕಾರರು ಸಮಾಜ ವ್ಯವಸ್ಥೆಯಲ್ಲಿರುವ ಅಸಮಾನತೆ, ಸ್ವಾರ್ಥ, ಕೀಳರಿಮೆ, ಬಡತನಗಳ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಇನಾಂದಾರರು ಚಿತ್ರಿಸಿರುವ 'ಊರ್ವಶಿ' ಕಾದಂಬರಿಯ ಊರ್ವಶಿಯದು

ಒಳಿತು–ಕೆಡಕುಗಳ ನಡುವೆಯೇ ಓಲಾಡುವ ಮತ್ತೊಂದು ಸ್ತ್ರೀಪಾತ್ರ. ಈಕೆಗೆ ಥಳುಕಿನ ಜೀವನದ ಕಡೆಗೆ ಆಕರ್ಷಣೆ ವಿಪರೀತವಿದ್ದರೂ, ಅವಳ ಆಂತರ್ಯ ಹೇಗಿತ್ತು ಎಂಬುದರ ಸ್ಪಷ್ಟ ಚಿತ್ರಣವನ್ನು ಕಾದಂಬರಿಕಾರರು ಕೊಡುವುದೇ ಇಲ್ಲ. ಇಲ್ಲೆಲ್ಲಾ ಇನಾಂದಾರರು ಸ್ತ್ರೀಯರ ಸಮಸ್ಯೆಗಳನ್ನು ಚಿತ್ರಿಸುವುದಕ್ಕಿಂತ, ಭಿನ್ನವಾಗಿ ಸ್ತ್ರೀಯರು ಸ್ವೇಚ್ಛೆಯಿಂದ ನಡೆದಾಗ, ಅದರಿಂದ ಒದಗಬಹುದಾದ ಸಮಸ್ಯೆಗಳಿಗೆ ಹೆಚ್ಚು ಪ್ರತಿಕ್ರಿಯಿಸುತ್ತಾರೆ. ಇವರು ಸೃಷ್ಟಿಸಿದ ಸ್ತ್ರೀಪಾತ್ರ.ಗಳು ಸ್ವಂತಿಕೆಯ ಬಗೆ ಅಭಿಮಾನವುಳ್ಳವಳಾಗಿರಲಿ, ವಿದ್ಯಾವಂತೆಯಾಗಿರಲಿ, ಅವಳಿಗರಿವಿಲ್ಲದಂತೆ ಪುರುಷ ಸಂಬಂಧವಾಗಿ ಆಕೆಯಲ್ಲಿ ಅಂಕುರಿಸುವ ಬಯಕೆಗಳು ಅವಳ ಹಿಡಿತಕ್ಕೆ ಸಿಕ್ಕದೆಯೇ ಬದುಕಿನಲ್ಲಿ ಬೃಹತ್ತಾಗುತ್ತವೆ.

ಇನ್ನು ಸ್ತ್ರೀಪಾತ್ರ ಪ್ರಧಾನವಾದ 'ಚಿತ್ರಲೇಖಾ' ಕಾದಂಬರಿಯ ಕುಸುಮಳ ಪಾತ್ರ ಇನ್ನೊಂದು ಬಗೆಯದು. ಒಬ್ಬನನ್ನು ಪ್ರೀತಿಸಿ, ಮತ್ತೊಬ್ಬನನ್ನು ಮದುವೆಯಾಗಬೇಕಾಗಿ ಬಂದ ದುರದೃಷ್ಟೆ ಕುಸುಮಾ. ಕುಸುಮಾ ಹಾಗೆ ಮದುವೆಯಾದುದು ಬೇರೆ ಯಾರೋ ಆಗಿರದೆ, ಅವಳ ಪ್ರಿಯಕರನ ಸ್ನೇಹಿತನಾಗಿದ್ದುದು ಇಲ್ಲಿನ ವಿಪರ್ಯಾಸ. ಮದುವೆಯಾದ ಗಂಡನಿಗೆ ದ್ರೋಹ ಬಗೆಯಲಾರದ ಸ್ವಭಾವ ಕುಸುಮಾಳದು. ಆಕೆ ತಾನು ಹಿಂದೆ ಪ್ರೀತಿಸಿದ್ದ ರಮೇಶನಿಗಾಗಿ ಕೈಯನ್ನು ಕೊಡಲು ಇಚ್ಛಿಸದಿದ್ದರೂ ಪ್ರಾಣಕೊಡಲು ಸಿದ್ಧಳಿದ್ದಾಳೆ. ದೈಹಿಕ ಸಂಪರ್ಕವಿಲ್ಲದ ಸಾತ್ವಿಕ ಪ್ರೇಮವೇ ಅವಳಿಗೆ ಹೆಚ್ಚು ಸುಖವಾಗಿ ಕಾಣುತ್ತದೆ. ಆದರೆ ರಮೇಶನ ಸಂಯಮ ಕಟ್ಟೆಯೊಡೆದು ಕೈ ಸ್ಪರ್ಶಿಸಿದಾಗ, ಅದುವರೆಗೆ ಕಾಯ್ದುಕೊಂಡಿದ್ದ ಕುಸುಮಾಳ ಪರಿಶುದ್ಧ ಪ್ರೇಮ ಭಗ್ನವಾಯಿತೆನ್ನುವುದು, ಅತಿ ಭಾವುಕರಾದ ಈ ಪಾತ್ರದ ದೌರ್ಬಲ್ಯ ಎನ್ನಬೇಕಾಗುತ್ತದೆ. ಕಡೆಯಲ್ಲಿ ಅವಳಿಗಾಗಿ ರಮೇಶ ಪಡುತ್ತಿದ್ದ ಸಂಕಟವನ್ನು ಅರಿತ ಆಕೆ ಜೀವಿಸುವ ಸ್ಥಿತಿಯಲ್ಲಿರದೆ ತನ್ನೆಲ್ಲಾ ಭಾವನೆಗಳ ತುಮುಲದಿಂದ ನರಳಿ ಪ್ರಾಣಬಿಡುತ್ತಾಳೆ. ಈ ಕಾದಂಬರಿಯಲ್ಲಿ ಮನಸ್ಸುಗಳ ತಾಕಲಾಟ ಮತ್ತು ಸಮಾಜದ ವಸ್ತುಸ್ಥಿತಿ ಇವೆರಡರ ನಡುವೆ ನಡೆಯುವ ತಿಕ್ಕಾಟ ತೀವ್ರತರವಾಗಿ ಪ್ರಕಟವಾಗಿದೆ.

ಇನಾಂದಾರರು ಚಿತ್ರಿಸಿರುವ ಸ್ತ್ರೀ ಪಾತ್ರಗಳಲ್ಲಿ ಬಡತನದ ಸಮಸ್ಯೆ ಇರದಿದ್ದರೂ ಮಾನಸಿಕ ಹಿಂಸೆಗೆ ಒಳಗಾಗಿರುವ ಪಾತ್ರಗಳೇ ಹೆಚ್ಚಾಗಿವೆ. ಒಟ್ಟಿನಲ್ಲಿ ಇವರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ಸ್ತ್ರೀ ಪಾತ್ರಗಳು ಒಂದಿಲ್ಲೊಂದು ರೀತಿಯ ಶೋಷಣೆಗೆ ಒಳಗಾದಂಥವುಗಳೇ ಆಗಿವೆ. ಕೆಲವು ಸ್ತ್ರೀ ಪಾತ್ರಗಳಂತೂ ನೋವು, ಯಾತನೆಯನ್ನು ಸಹಿಸಿಕೊಂಡು ಅಸಹಾಯಕರಂತೆ ಚಿತ್ರಣಗೊಂಡಿದ್ದರೆ, ಮತ್ತೆ ಕೆಲವು ಸ್ತ್ರೀ ಪಾತ್ರಗಳು ಶೋಷಣೆಯ ವಿರುದ್ಧ ದನಿಯೆತ್ತಿವೆ.

ಒಟ್ಟಾರೆಯಾಗಿ ಇನಾಂದಾರರ ಸ್ತ್ರೀ ಪಾತ್ರಗಳ ಧೋರಣೆ, ಅವರು ಒಪ್ಪಿರುವ ಮೌಲ್ಯ ವ್ಯವಸ್ಥೆ ಮತ್ತು ನೀತಿ ಸಂಹಿತೆಯ ಪರಿಧಿಯೊಳಗೆ ಚಿತ್ರಿತವಾಗಿವೆ. ಹಳೆಯದನ್ನು ಪ್ರತಿಭಟಿಸಿ ಹೊಸ ನೀತಿ ಸಂಹಿತೆಯ ಅವಿಷ್ಕಾರ ಮಾಡುವ ಪಾತ್ರಗಳ ಬಗ್ಗೆ ಅವರಿಗೆ ಒಲವಿಲ್ಲದೆ, ಅಂತಹ ಪಾತ್ರಗಳಲ್ಲಿ ದುರಂತವನ್ನೇ ಕಾಣುತ್ತಾರೆ. ಆದಾಗ್ಯೂ ಸ್ತ್ರೀಚೈತನ್ಯ ಎನ್ನುವುದು ವಿಶಿಷ್ಟವಾದುದು ಎಂಬುದರಲ್ಲಿ ನಂಬಿಕೆಯಿಟ್ಟಿದ್ದ ಇನಾಂದಾರರು ತಮ್ಮೆಲ್ಲಾ ಕಾದಂಬರಿಗಳಲ್ಲಿಯೂ ಸ್ತ್ರೀಯ ವಿಭಿನ್ನ ಮುಖಗಳನ್ನು ಚಿತ್ರಿಸಿರುವುದು ಶ್ಲಾಘನೀಯವಾಗಿದೆ.

**ಆಕರ ಗ್ರಂಥಗಳು**

1. ವಿ.ಎಂ ಇನಾಂದಾರ, ಕನಸಿನ ಮನೆ ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು 1946
2. ವಿ.ಎಂ ಇನಾಂದಾರ, ಕಟ್ಟಿದ ಮನೆ ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು 1953
3. ವಿ.ಎಂ ಇನಾಂದಾರ, ಬಾಡಿದ ಹೂವು ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು 1972
4. ವಿ.ಎಂ ಇನಾಂದಾರ, ಕತ್ತಲೆಯ ಕಡಲು ಪ್ರಕಾಶಕರು ಗೀತಾ ಬುಕ್‌ಹೌಸ್ ಮೈಸೂರು 1976
5. ವಿ.ಎಂ ಇನಾಂದಾರ, ಚಿತ್ರಲೇಖಾ ಪ್ರಕಾಶಕರು ಉಷಾ ಸಾಹಿತ್ಯಮಾಲೆ ಮೈಸೂರು, 1961
7. ವಿ.ಎಂ ಇನಾಂದಾರ, ಊರ್ವಶಿ ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು 1968

**ಪರಾಮರ್ಶನ ಗ್ರಂಥಗಳು**

1. ಅಮೂರ ಜಿ.ಎಸ್. 1983 ಕನ್ನಡ ಕಾದಂಬರಿಯ ಬೆಳವಣಿಗೆ, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು.
2. ಗಿರಡ್ಡಿ ಗೋವಿಂದರಾಜ 1987 ಕಾದಂಬರಿ ವಸ್ತು ಮತ್ತು ತಂತ್ರ ಸ್ನೇಹ ಪ್ರಕಾಶನ,ಮಂಗಳೂರು.
3. ನಾಯಕ. ಹಾ.ಮಾ. (ಸಂ) ವೆಂಕಟೇಶಮೂರ್ತಿ 1990 ಕಾದಂಬರಿಲೋಕ ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು
4. ನಾಗರಾಜಯ್ಯ ಹಂಪ 1973 ಕಾದಂಬರಿಯ ವಿಮರ್ಶೆ, ಸಾಹಿತ್ಯ ವಿಮರ್ಶೆ, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು.
5. ಮೋಹನ ಕುಂಟಾರ್ 1994, ಇನಾಂದಾರರ ಕಾದಂಬರಿಗಳು ಶ್ರೇಣಿ ಪ್ರಕಾಶನ ಉಕ್ಕಿನಡ್ಕ ಕಾಸರಗೋಡು-67
6. ವಿವೇಕ ರೈ(ಸಂ) 1987, ಕನ್ನಟ ಕಾದಂಬರಿಯ ಮೊದಲ ಹೆಜ್ಜೆಗಳು ಮಂಗಳೂರು ವಿಶ್ವವಿದ್ಯಾನಿಲಯ ಮಂಗಳೂರು
7. ಶೇಷಗಿರಿರಾವ್ ಎಲ್.ಎಸ್. 1990, ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ ಶಾರದಾ ಪ್ರಕಾಶನ, ಬೆಂಗಳೂರು.

❖❖❖

ತುಂಬಿಯ ಹಿಂಡದು ತಿರುಗುತಲಿತ್ತು
ಬಂಡನು ಅನುನಯಿಸಿ
ಎರಡೆಳೆ ನಾಲಗೆ ಹೊರಳುತಲಿತ್ತು
ಹಸಿವನು ಅನುಸರಿಸಿ

# ಕನ್ನಡ ಕಥಾ ಪರಂಪರೆ ಮತ್ತು ಕುವೆಂಪು

**ಶಿವರಾಜು ಎನ್.**
ಸಂಶೋಧನಾರ್ಥಿ, ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ
ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

**ಪ್ರಸ್ತಾವನೆ**

ಹೊಸಗನ್ನಡ ಕಥನ ಸಾಹಿತ್ಯಕ್ಕೆ ನವೋದಯ ಕವಿಗಳ ಕೊಡುಗೆಯನ್ನು ಕುರಿತು ಮಾತನಾಡುವ ಸಂದರ್ಭದಲ್ಲಿ ರಾಷ್ಟ್ರಕವಿ ಕುವೆಂಪು ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಸಹೃದಯರು ಅವರನ್ನು ಗುರುತಿಸುವುದು ಕವಿಯಾಗಿಯೇ ಆದರೂ ಕುವೆಂಪು ಅವರದು ಅದ್ಭುತ ಕಥನ ಪ್ರತಿಭೆ. ಕುವೆಂಪು ಅವರು ಅದ್ಭುತ ಕಥೆಗಾರರು, ಮೇಲ್ಮಟ್ಟದ ಕಾದಂಬರಿಕಾರರು. ಕುವೆಂಪು ಅವರ ಕಾವ್ಯ, ಮಹಾಕಾವ್ಯ, ನಾಟಕ, ವಿಚಾರ ಸಾಹಿತ್ಯವನ್ನು ಅಧ್ಯಯನ ಮಾಡುವ ಮುನ್ನ ಅವರ ಕಥೆ, ಕಾದಂಬರಿ, ಕಥನ ಕಾವ್ಯಗಳನ್ನು ವ್ಯಾಸಂಗ ಮಾಡಿದರೆ ಕುವೆಂಪು ಅವರ ಕಥೆಗಾರರಾಗಿಯೇ ಇಷ್ಟವಾಗುತ್ತಾರೆ. ಕಥೆಯಲ್ಲಿ ಕಾವ್ಯಾತ್ಮಕ ಗುಣವಿರಬೇಕೆಂಬ ಅಂಶ ಅವರ ಕಥೆಗಳಾದ 'ಸಾಲದ ಮಗು' 'ಯಾರು ಅರಿಯದ ವೀರ' 'ಆರಾಣಿ ಮೂರು ಕಾಸು' ಕಥೆಗಳನ್ನು ಓದಿದಾಗ ಮನದಟ್ಟಾಗುತ್ತದೆ.

"ಕುವೆಂಪು ಅವರು ಕನ್ನಡದ ಒಬ್ಬ ಪ್ರಮುಖ ಕಥನಗಾರ. ಅವರ 'ಯಾರು ಅರಿಯದ ವೀರ' 'ಸಾಲದ ಮಗು' 'ಧನ್ವಂತರಿಯ ಚಿಕಿತ್ಸೆ' ಮುಂತಾದ ಕಥೆಗಳ ಹಿಂದೆ ಮಲೆನಾಡಿನ ವಿವರವಾದ ಪ್ರಪಂಚ ಜ್ಞಾನವಿದೆ"[1]. ಕುವೆಂಪು ಅವರ ಕಥೆಗಳ ನಿರೂಪಣೆ, ಕಲಾತ್ಮಕತೆ, ತಮಾಷೆ, ವರ್ಣನೆ, ರಸಿಕತೆ, ಆದರ್ಶ ಪ್ರಿಯತೆ, ಸಾಮಾಜಿಕ ಕ್ರಾಂತಿ ಈ ಎಲ್ಲಾ ಗುಣಗಳಿಂದ ನವೋದಯ ಕಥಾ ಸಾಹಿತ್ಯದ ಉತ್ತಮ ರಚನೆಗಳಾಗಿವೆ.

'ನರಿಗಳಿಗೇಕೆ ಕೋಡಿಲ್ಲ' ಎಂಬ ಮಕ್ಕಳ ಕಥೆಯನ್ನು ರಚಿಸುವ ಮೂಲಕ ಕನ್ನಡ ಕಥಾಲೋಕ ಪ್ರವೇಶಿಸಿದ ಕುವೆಂಪು ಅವರು ಮೂರು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ, ಸನ್ಯಾಸಿ ಮತ್ತು ಇತರ ಕಥೆಗಳು(1936), ನನ್ನ ದೇವರು ಮತ್ತು ಇತರ ಕಥೆಗಳು(1940) ಕಥೆಗಳೊಡನೆ ಆರಂಭದಲ್ಲಿ(1985) ಮೇಲ್ಕಂಡ ಮೂರು ಕಥಾ ಸಂಕಲನಗಳಲ್ಲಿ ಒಟ್ಟು ಇಪ್ಪತ್ತೈದು ಕಥೆಗಳಿವೆ. "ಕುವೆಂಪು ಸಣ್ಣ ಕಥೆಗಳ ಬಗ್ಗೆ ಕನ್ನಡ ವಿಮರ್ಶೆ ಹೆಚ್ಚು ಚರ್ಚೆ ನಡೆಸಿಲ್ಲ. ಅವರ ಕಾದಂಬರಿಗಳನ್ನೇ ಚರ್ಚಿಸಿದ್ದರ ಫಲವಿದು"[2]

ಕಥೆಗಳೊಡನೆ ಆರಂಭದಲ್ಲಿ ಕಥಾ ಸಂಕಲನವೂ 1985ರಲ್ಲಿ ಪ್ರಕಟವಾಗಿದ್ದರೂ ಈ ಸಂಕಲನದಲ್ಲಿ ಎಲ್ಲ ಕಥೆಗಳು 1926 ಮತ್ತು 1927ರ ಅವಧಿಯಲ್ಲಿ ರಚಿತವಾದಂತಹವು. ಅಂದರೆ 'ಸನ್ಯಾಸಿ ಮತ್ತು ಇತರೆ ಕಥೆಗಳು' 'ನನ್ನ ದೇವರು ಮತ್ತು ಇತರ ಕಥೆಗಳು' ಕಥಾ ಸಂಕಲನಗಳ ರಚನೆಯ ಪೂರ್ವ ರಚನೆಯಾದಂತಹವು. ಕಥೆಗಳೊಡನೆ ಆರಂಭದಲ್ಲಿ ಸಂಕಲನವನ್ನು ದೇ. ಜವರೇಗೌಡರು ತಮ್ಮ ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ನ 'ಸಹ್ಯಾದ್ರಿ ಪ್ರಕಾಶನ'ದ ಮೂಲಕ 1985ರಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಎಂಟು ಕಥೆಗಳಿವೆ. ಮೊದಲ ನಾಲ್ಕು ಕಥೆಗಳು ಅನುವಾದಗಳು. ಉಳಿದ ನಾಲ್ಕು ಕುವೆಂಪು ಅವರ ಸ್ವಂತ ರಚನೆಗಳು.

ಅವರ ಅನುವಾದಿತ ಕಥೆಗಳ ಪೈಕಿ ವಿಮರ್ಶಕರನ್ನು ಸೂಜಿಗಲ್ಲಿನಂತೆ ಸೆಳೆದ ಕಥೆ

ಎಂದರೆ ಟಾಲ್‌ಸ್ಟಾಯ್‌ನ How much land does a man need ಕಥೆಯ ಅನುವಾದ. 'ಅವಶ್ಯವಿದ್ದದ್ದು ಆರಡಿ, ಆಸೆ ಪಟ್ಟಿದ್ದು ಊರಿಡಿ' ಕಥೆ. ಟಾಲ್‌ಸ್ಟಾಯ್‌ನ ಕಾದಂಬರಿಗಳನ್ನು ಓದಿದ ನಂತರ ಕುವೆಂಪು ಅವರು ಕಾದಂಬರಿಗಳನ್ನು ರಚಿಸಿದ್ದು. "ಕುವೆಂಪು ಅವರನ್ನು ಕನ್ನಡಕ್ಕೆ ಕೊಟ್ಟವರು ಕಸಿನ್ಸ್ ಮಹಾಶಯನಾದರೆ, ಕುವೆಂಪು ಕನ್ನಡಕ್ಕೆ ಎರಡು ಮಹಾಕಾದಂಬರಿಗಳನ್ನು ನೀಡಲು ಕಾರಣವಾದ ಮಹಾಶಯ ಟಾಲ್‌ಸ್ಟಾಯ್. ಕುವೆಂಪು ಕಾದಂಬರಿಗಳ ರಚನೆಯಲ್ಲಿ ಟಾಲ್‌ಸ್ಟಾಯ್ ಪ್ರಭಾವ ದಟ್ಟವಾಗಿದೆ."[3] 'ಅವಶ್ಯವಿದ್ದು ಆರಡಿ, ಆಸೆಪಟ್ಟದ್ದು ಊರಿಡಿ' ಕಥೆಯನ್ನು ಓದುವ ಸಹೃದಯರಿಗೆ ಎಲ್ಲಿಯೂ ಅನುವಾದಿತ ಕಥೆ ಎಂಬ ಸುಳಿವು ಸಿಗದ ಹಾಗೆ ಕಥೆ ರಚಿಸಿದ್ದಾರೆ.

'ಆದರ್ಶ ಸಾಧನೆ' ಕುವೆಂಪು ಅವರ ಮತ್ತೊಂದು ಶ್ರೇಷ್ಠ ಕಥೆ. "ಆದರ್ಶ ಸಾಧನೆಯಂತಹ ಕಥೆ ಬದುಕಿನಲ್ಲಿ ಆದರ್ಶ ಒಂದು ಮನಸ್ಥಿತಿ, ವಾಸ್ತವದಲ್ಲಿ ಅದರ ಅನುಷ್ಠಾನ ಎಷ್ಟು ಕಷ್ಟ ಎಂಬ ಅರಿವಿನಿಂದ ಮೂಡಿದ್ದು. ತನ್ನ ಸಮಸ್ಯೆಯನ್ನು ಸೃಜನಶೀಲ ಸಂದರ್ಭದಲ್ಲಿಟ್ಟು ನೋಡುವ ಪ್ರಯತ್ನ"[4] ಕಥೆಯ ನಾಯಕ ಚಂದ್ರ ಅವಿವಾಹಿತನಾಗಿದ್ದು, ಲೋಕೋಪಕಾರ ಮಾಡುತ್ತಾ ಆದರ್ಶ ವ್ಯಕ್ತಿಯಾಗಿರಬೇಕೆಂಬ ಹಂಬಲದವನು. ಆದರೆ ತನ್ನ ತಂದೆ, ತಾಯಿ ಹಾಗೂ ಸ್ನೇಹಿತರ ಒತ್ತಾಯದ ಮೇರೆಗೆ ರೋಹಿಣಿ ಎಂಬ ಹುಡುಗಿಯನ್ನು ವಿವಾಹವಾಗುತ್ತಾನೆ. ಮದುವೆಯ ನಂತರದಲ್ಲಿ ಚಂದ್ರನದು ಆದರ್ಶ ಸಂಸಾರಿಯಾಗುವ ಹಂಬಲ. ಆದರ್ಶ ಬ್ರಹ್ಮಚಾರಿಯಾಗಲು ಸಾಧ್ಯವಿಲ್ಲ. ಆದರ್ಶ ಪತಿಯಾದರೂ ಆಗಬೇಕು ಎಂದು ಯೋಚಿಸುವ ಪಾತ್ರ ಅದು.

'ನನ್ನ ದೇವರು' ಕುವೆಂಪು ಅವರ ಶ್ರೇಷ್ಠ ಕಥೆಗಳಲ್ಲೊಂದು. ಈ ಕತೆಯ ನಿರೂಪಕ, ಆತನ ತಮ್ಮನ ಹೆಂಡತಿ ಮದುವೆಯಾದ ಒಂದು ವರ್ಷಕ್ಕೆ ಗಂಡನನ್ನು ಕಳೆದುಕೊಂಡ ಪುಟ್ಟ ವಿಧವೆ. ಅವಳಿಗಿನ್ನೂ ಹದಿನೈದರ ಹರೆಯ. ಭಾವ ಸಹಾನುಭೂತಿಯಿಂದ ಕಾಣುತ್ತಾರೆ. ಸಾಂತ್ವನ ಹೇಳುತ್ತಾರೆ. ಬದುಕಿನಲ್ಲಿ ಶ್ರದ್ಧೆ, ಧೈರ್ಯ ತುಂಬುತ್ತಾರೆ. ಅವರೆಂದರೆ ಅವಳಿಗೆ ಒಂದು ಬಗೆಯ ಆಪ್ತಭಾವ. ಅವರ ವ್ಯಕ್ತಿತ್ವದ ಬಗ್ಗೆಯೂ, ಇತರರಂತಲ್ಲದೆ ಅವಳಿಗೆ ಅಪಾರ ಗೌರವ. ಕುವೆಂಪು ಅವರು ಕಲ್ಲುದೇವರನ್ನು, ಮಣ್ಣು ದೇವರನ್ನು ದೇವರೆಂದು ನಂಬಿದವರಲ್ಲ. ಈ ಕಥೆಯ ಬಗ್ಗೆ ಕೆ. ಎಸ್. ನರಸಿಂಹಸ್ವಾಮಿಯವರು ಬರೆಯುತ್ತ "ನನ್ನ ದೇವರು ಎನ್ನುವುದು ಸಣ್ಣ ಕಥೆಯೋ, ಭಾವಗೀತೆಯೋ ನಾನು ಹೇಳಲಾರೆ. ಕಥೆಯನ್ನು ನಡೆಸುವ ಹೆಣ್ಣು ಕಾವ್ಯ ಲೋಕದವಳು."[5] ಎಂದಿದ್ದಾರೆ.

ಕುವೆಂಪು ಅವರು ಪ್ರೇಮ ಸಂಬಂಧಿ ಕತೆಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು ಎಂಬುದನ್ನು 'ಮೀನಾಕ್ಷಿ ಮನೆಯ ಮೇಷ್ಟ್ರು' ಕತೆಯ ರಚನೆಯ ಮೂಲಕ ನಿರೂಪಿಸಿದ್ದಾರೆ. 'ಮೀನಾಕ್ಷಿ ಮನೆಯ ಮೇಷ್ಟ್ರು' ತಾರುಣ್ಯ ಸಹಜ ಪ್ರೀತಿಯ ಭ್ರಮೆಯನ್ನು ವಿವರಿಸುವಂತಹದ್ದು. ಮೀನಾಕ್ಷಿಗೆ ಮನೆ ಪಾಠ ಹೇಳುವ ಮೇಷ್ಟ್ರು ಸ್ವತಃ ತರುಣ ವಿದ್ಯಾರ್ಥಿ. ಮನೆಯ ಬಡತನದ ಕಾರಣದಿಂದ ನಾಲ್ಕಾರು ಮನೆಗಳಲ್ಲಿ ಪಾಠ ಹೇಳಿಕೊಡುತ್ತಾ ಹಣ ಸಂಪಾದಿಸಿ ಸಂಸಾರಕ್ಕೆ ನೆರವಾಗುತ್ತಿದ್ದರು. ಅಂತಹ ಮನೆಪಾಠದ ವಿದ್ಯಾರ್ಥಿಗಳಲ್ಲಿ ಮೀನಾಕ್ಷಿಯೂ ಒಬ್ಬಳು. ಹದಿನೈದರ ಹುಡುಗಿ. ಮೀನಾಕ್ಷಿ ಹೇಳಿಕೊಳ್ಳುವಂತಹ ಸುಂದರಿಯೇನೂ ಅಲ್ಲ. ಹಾಗಂದ ಮಾತ್ರಕ್ಕೆ ಆಕೆ ಕುರೂಪಿಯೂ ಅಲ್ಲ. ಎಣ್ಣೆಗೆಂಪು ಮೈ ಬಣ್ಣದ ಸಾಧಾರಣ ಹಳ್ಳಿ ಚೆಲುವೆ ಆಕೆ. ಮೀನಾಕ್ಷಿಯನ್ನು ಮೇಷ್ಟ್ರು ತಮಗರಿವಿಲ್ಲದಂತೆ ಮನಸಾರೆ ಪ್ರೀತಿಸತೊಡಗುತ್ತಾರೆ. ಮೇಷ್ಟ್ರು ಮೀನಾಕ್ಷಿಯ ಬಳಿ ಪ್ರೇಮ ನಿವೇದನೆ ಮಾಡಿಕೊಳ್ಳುವಲ್ಲಿ ವಿಫಲರಾಗುತ್ತಾರೆ.

ಮುಂದಾಗುವ ಅನಾಹುತಗಳ ಚಿತ್ರಣವನ್ನು ನೆನೆದು ಮೇಷ್ಟ್ರು ತಮ್ಮ ಪ್ರೀತಿಯನ್ನು ತಮ್ಮ ಮನದಲ್ಲಿಯೇ ಗೌಪ್ಯವಾಗಿಟ್ಟುಕೊಳ್ಳುತ್ತಾರೆ. ಮೀನಾಕ್ಷಿಗೆ ಬೇರೊಬ್ಬನ ಜೊತೆಯಲ್ಲಿ ವಿವಾಹವಾದಾಗ ಮೇಷ್ಟ್ರು ಹೌಹಾರುತ್ತಾರೆ. ಮಮ್ಮಲ ಮರುಗುತ್ತಾರೆ. ಮದುವೆ ನಿಲ್ಲಿಸಲು ಅವರು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗುತ್ತವೆ. ಈ ಕಥೆಯೂ ಹದಿಹರಯದವರ ಪ್ರೀತಿಯ ಅವಘಡಗಳನ್ನು ಕುರಿತು ಮಾತನಾಡುತ್ತದೆ. ಜೀವನದಲ್ಲಿ ಭದ್ರತೆಯನ್ನು ಕಾಯ್ದುಕೊಳ್ಳುವವರೆಗೂ ಪ್ರೀತಿಯ ಬಲೆಯಲ್ಲಿ ಬೀಳಬಾರದೆಂಬ ಸಾಮಾನ್ಯ ಸಂದೇಶ ಕಥೆಯಲ್ಲಿದೆ. ಶ್ರೀಮಂತ ಮನೆಯ ಹುಡುಗಿಯನ್ನು ಪ್ರೀತಿಸುವ ಬಡ ಮೇಷ್ಟ್ರು ತಮ್ಮ ಪ್ರೀತಿಯನ್ನು ಉಳಿಸಿಕೊಳ್ಳುವಲ್ಲಿ ವಿಫಲರಾಗುತ್ತಾರೆ. "ಯಾರು ಅರಿಯದ ವೀರ' 'ಸಾಲದ ಮಗು' ಕುವೆಂಪು ಅವರ ಸಾಮಾಜಿಕ ನಿಲುವನ್ನು ಪ್ರತಿಪಾದಿಸುವ ಯಶಸ್ವೀ ಕಥೆಗಳು. ಸಾಮಾನ್ಯರ ಬದುಕನ್ನು ಚಿತ್ರಿಸುವುದು ಕುವೆಂಪು ಅವರ ಪ್ರಧಾನ ಆಶಯಗಳಲ್ಲೊಂದು. ಆ ಮೂಲಕ ಪರ್ಯಾಯ ಸಂಸ್ಕೃತಿಯನ್ನು ಪ್ರತಿಪಾದಿಸುವ, ಬದುಕಿನ ಬಹುಮುಖೀ ಸಾಧ್ಯತೆಗಳನ್ನು ಅನ್ವೇಷಿಸುತ್ತ ಅವುಗಳ ಮಹತ್ವವನ್ನು ತೋರಿಸಿಕೊಡುವುದು ಕುವೆಂಪು ಅವರ ಸಾಹಿತ್ಯವನ್ನು ಇಂದು ನಮಗೆ ಪ್ರಸ್ತುತಗೊಳಿಸುವ ಮಹತ್ವದ ಅಂಶ. ಬದುಕನ್ನು ಸಹನೀಯಗೊಳಿಸುವ ಜೀವಸೆಲೆಗಳನ್ನು ಕುವೆಂಪು ಗುರುತಿಸುವ ಕ್ರಮದಲ್ಲಿಯೇ ಅವರು ನಮಗೆ ಮುಖ್ಯವೆನ್ನಿಸುತ್ತಾರೆ." 'ಯಾರು ಅರಿಯದ ವೀರ' ಸ್ವಾಮಿನಿಷ್ಠೆಯ ಮಹತ್ವವನ್ನು ಸಾರುವ ಕಥೆ. ಕಥೆಯಲ್ಲಿನ ಲಿಂಗ ಒಬ್ಬ ಜೀತದಾಳು. ಧಣಿಯಾದ ಗೌಡರ ಕುಟುಂಬವಿದ್ದ ದೋಣಿಯ ಭಾರ ಹೆಚ್ಚಾಗಿ ಮುಳುಗುವ ಹಂತದಲ್ಲಿದ್ದಾಗ ಲಿಂಗ ತನ್ನ ಪ್ರಾಣವನ್ನು ಬಲಿಕೊಟ್ಟು ಧಣಿಯ ಕುಟುಂಬ ರಕ್ಷಿಸುವ ನಿರ್ಧಾರ ಕೈಗೊಂಡು ಹೊಳೆಗೆ ಹಾರುತ್ತಾನೆ. ಗೌಡರ ಕುಟುಂಬ ಸುರಕ್ಷಿತವಾಗಿ ದಡ ಸೇರುತ್ತದೆ. ನಂತರ ಲಿಂಗನೂ ನೆರೆಯಿಂದ ಪಾರಾಗಿ ಗೌಡರ ಕುಟುಂಬ ಸೇರುತ್ತಾನೆ.

'ಸಾಲದ ಮಗು' ಕುವೆಂಪು ಅವರ ಬಹು ಚರ್ಚಿತ ಕತೆ. ಕುವೆಂಪು ಅವರು 1940ರ ದಶಕದಲ್ಲಿ ಅಸ್ತಿತ್ವದಲ್ಲಿದ್ದ ಜ್ವಲಂತ ಸಾಮಾಜಿಕ ಸಮಸ್ಯೆಯೊಂದರ ಸುತ್ತ ಈ ಕಥೆಯನ್ನು ಹೆಣೆದಿದ್ದಾರೆ. ಕಥಾನಾಯಕ ಸುಬ್ಬ ಎಂಟು ಹತ್ತು ವರ್ಷದ ಹುಡುಗ. ಅವನ ತಂದೆ ರಂಗನು ಗೌಡರ ಒಕ್ಕಲಾಗಿದ್ದನು. ಸುಬ್ಬನ ತಾಯಿ ಮಗನನ್ನು ಹೆತ್ತ ಎರಡು ವರ್ಷಗಳಲ್ಲಿಯೇ ತೀರಿ ಹೋಗಿದ್ದಳು. ರಂಗ ಎರಡನೇ ಮದುವೆಯಾಗದೆ ತೀವ್ರ ಕಾಯಿಲೆಯಿಂದ ತೀರಿಹೋಗುತ್ತಾನೆ. ಗೌಡರಲ್ಲಿ ರಂಗ ಮಾಡಿದ ಮುನ್ನೂರು ರೂಪಾಯಿಗಳ ಸಾಲ ತೀರಿಸುವಂತೆ ಗೌಡರು ಆತನನ್ನು ತಮ್ಮ ಮನೆಯ ಜೀತದಾಳುವಾಗಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ.

ಭೂ ಮಾಲೀಕರು ಭೂ ರಹಿತ ಕಾರ್ಮಿಕರನ್ನು ಶೋಷಣೆ ಮಾಡುವ ಪರಿಯನ್ನು, ಕ್ರೂರ ಹಿಂಸೆ ನೀಡುವುದನ್ನು ಕಥೆಯಲ್ಲಿ ಚರ್ಚಿಸಲಾಗಿದೆ. ಗೌಡರು ಸುಬ್ಬನನ್ನು ಮಳೆಗಾಲದ ಒಂದು ದಿನ ಕತ್ತಲೆಯಲ್ಲಿ ಬಾಲಕ ಎಂಬುದನ್ನೂ ನೆನೆಯದೇ ಮೀನು ಹಿಡಿಯಲು ಕಳಿಸುತ್ತಾರೆ. ಸುಬ್ಬನು ಮೀನು ಹಿಡಿಯಲು ಹೋಗುವ ಸನ್ನಿವೇಶವನ್ನು ಕುವೆಂಪು ಅವರು ಹೀಗೆ ಚಿತ್ರಿಸಿದ್ದಾರೆ. "ಸುಬ್ಬನು ಮೀನು ಬುಟ್ಟಿ ಹೊತ್ತುಕೊಂಡು ಕೈಯಲ್ಲಿ ಲಾಟೀನು ಹಿಡಿದುಕೊಂಡು ಕಂಬಳಿಕೊಪ್ಪೆ ಹಾಕಿಕೊಂಡು ಹೊರಟನು"[6] ಗೌಡರು ಮರಳಿ ತಮ್ಮ ಕಾರ್ಯದಲ್ಲಿ ನಿರತರಾದರು.

ತಂದೆ, ತಾಯಿ ಮಾಡಿದ ಸಾಲವನ್ನು ತೀರಿಸಲು ಮಕ್ಕಳು ದುಡಿಯುವ ಪರಿಸ್ಥಿತಿ ಬರಬಾರದು. "ಗೌಡರು ಆತನನ್ನು ಒಬ್ಬ ಆಳಾಗಿ ಕಾಣುತ್ತಾರೆಯೇ ಹೊರತು ಜೀವಿಯನ್ನಾಗಿ

ನೋಡುವುದಿಲ್ಲ."[7] ಸುಬ್ಬ ಅಂತಿಮವಾಗಿ ಕೃಷ್ಣಸರ್ಪದ ಕಡಿತಕ್ಕೆ ಬಲಿಯಾಗುತ್ತಾನೆ. ಕುವೆಂಪು ಅವರು ಸುಬ್ಬನ ಸಾವಿನ ಚಿತ್ರಣವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಸಾಲದ ಮಗು ಕಥೆಯ ಬಗ್ಗೆ ಬರೆಯುತ್ತ ಜಿ.ಎಸ್. ಅಮೂರರು "ಈ ಕಥೆಯು ಯಶಸ್ವಿ ಕಥೆಗಳ ಸಾಲಿಗೆ ಸೇರಬೇಕು. ಕುವೆಂಪುರವರ ವರ್ಣನೆಯ ಮೋಹ ಅದನ್ನು ಮುಕ್ಕಾಗಿಸುತ್ತದೆ"[8] ಎಂದು ಹೇಳುತ್ತಾರೆ. ಕುವೆಂಪು ಅವರ ಕಥನ ಸಾಹಿತ್ಯದ ಮತ್ತೊಂದು ಲಕ್ಷಣವೆಂದರೆ ಪ್ರಕೃತಿಯ ವರ್ಣನೆ. ಸಾಲದ ಮಗು ಕಥೆಯೂ ಸಹ ಪ್ರಕೃತಿಯ ವರ್ಣನೆಯೊಂದಿಗೆ ಆರಂಭವಾಗುತ್ತದೆ.[9]

'ಶ್ರೀಮನ್ಮೂಕವಾಗಿತ್ತು' ಮಾನವೀಯತೆಯನ್ನು ವಿಜೃಂಭಿಸುವ ಒಂದು ವಿಶಿಷ್ಟ ಕಥೆ. ಕುವೆಂಪು ಇದನ್ನು 'ಪಾಪ ಎಳಗರು' ಎಂದು ಕರೆದಿದ್ದರು. ನಂತರ 'ಶ್ರೀಮನ್ಮೂಕವಾಗಿತ್ತು' ಎಂದು ಹೆಸರಿಸಿದ್ದಾರೆ. ಉನ್ನತೀಕರಣದ ಪ್ರಯತ್ನವಿದು.ರಂಗನ ಎಮ್ಮೆಯೊಂದು ತಪ್ಪಿಸಿಕೊಂಡಿರುತ್ತದೆ. ಅದರ ಎಳಗರು ಕೊಟ್ಟಿಗೆಯಲ್ಲಿ ತಾಯಿಗಾಗಿ ಹಂಬಲಿಸುತ್ತಿರುತ್ತದೆ. ಆ ಎಳಗರುವಿನ ಆರ್ತನಾದಕ್ಕೆ ಕರಗಿದ ರಂಗ ನಡುರಾತ್ರಿಯಲ್ಲಿ ಎಮ್ಮೆಯನ್ನು ಹುಡುಕಿಕೊಂಡು ಹೊರಡುತ್ತಾನೆ. ತಮ್ಮ ಗದ್ದೆಯಲ್ಲಿ ಮೇಯುತ್ತಿತ್ತೆಂದು ನಾಗಣ್ಣಗೌಡರು ರಂಗನ ಎಮ್ಮೆಯನ್ನು ಹಿಡಿದು ಕಟ್ಟಿರುತ್ತಾರೆ. ನಾಗಣ್ಣಗೌಡರ ಮನೆಯಲ್ಲಿ ಅವರ ಮಗ ವಾಸುವಿಗೆ ವಿಪರೀತ ಜ್ವರ. ಜೋಯಿಸರ ಬಳಿ ವಿಭೂತಿ ತರಲು ಹೋಗುತ್ತಿದ್ದ ನಾಗಣ್ಣಗೌಡರ ಆಳು ರಂಗನ ಎಮ್ಮೆ ಗೌಡರ ಕೊಟ್ಟಿಗೆಯಲ್ಲಿರುವುದನ್ನು ಹೇಳುತ್ತಾನೆ. ರಂಗ ಗೌಡರ ಬಳಿ ತನ್ನ ಎಮ್ಮೆಯನ್ನು ಬಿಡಲು ಕೇಳಿಕೊಳ್ಳುತ್ತಾನೆ. ಸಾಯುತ್ತಿರುವ ಎಳೆಗರುವಿನ ವಿಚಾರ ಹೇಳುತ್ತಾನೆ. ಆ ಕರುವಿಗಾಗಿಯಾದರೂ ಎಮ್ಮೆಯನ್ನು ಬಿಡಬೇಕೆಂದು ರಂಗನ ಪ್ರಾರ್ಥನೆ. ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದ ಗೌಡರ ಮಗ ವಾಸು ಜ್ವರದಿಂದ ನರಳುತ್ತಿದ್ದವನು ತಕ್ಷಣವೇ ಪಾಪ ಎಳಗರು. ಎಮ್ಮೆ ಹೊಡಕೊಂಡು ಹೋಗು ರಂಗ ಎಂದು ಹೇಳಿ ಎಮ್ಮೆಯನ್ನು ರಂಗನಿಗೆ ಕೊಡಿಸುತ್ತಾನೆ.

ಜ್ವರದಿಂದ ನರಳುತ್ತಿದ್ದ ವಾಸುವಿನಲ್ಲಿ ಮೂಡಿದ ಮನುಷ್ಯ ಸಹಜ ಪ್ರಾಣಿಯ ಮೇಲಿನ ಪ್ರೀತಿ, ಅದರಲ್ಲೂ ತಾಯಿಗಾಗಿ ಮೊರೆಯಿಡುತ್ತಿದ್ದ ಕರುವಿನ ಮೇಲಿನ ಪ್ರೀತಿಯೇ ಅವನ ಜ್ವರವನ್ನು ಕಡಿಮೆ ಮಾಡಿತೆಂಬುದನ್ನು ಗೊಡ್ಡು ಸಂಪ್ರದಾಯಸ್ಥ ಮನದ ಗೌಡರು ಅರಿಯದಾದರು. ಆಗ ಕಥೆಗಾರ ಕುವೆಂಪು ಹೀಗೆ ಬರೆಯುತ್ತಾರೆ. "ದೂರದ ಕೆರೆಯೂರಿನಲ್ಲಿ ತನ್ನ ಮುದ್ದು ಕರುವನ್ನು ಮೂಸಿ ನೆಕ್ಕುತ್ತಿದ್ದ ಮೂಕ ಪ್ರಾಣಿಯ ಆನಂದದ ಆಶೀರ್ವಾದದಿಂದ ವಿಭೂತಿ ಅದನ್ನಾಲಿಸಿ ಶ್ರೀಮನ್ಮೂಕವಾಗಿತ್ತು."[10] "ಕುವೆಂಪು ಅವರದೂ ಮಾಸ್ತಿಯವರಂತೆಯೇ ಕಥನಕ್ಕೆ ಒಲಿದ ಪ್ರತಿಭೆ. ಬೇಂದ್ರೆಯವರಂತೆ ಭಾವಗೀತಾತ್ಮಕ ಪ್ರತಿಭೆಯಲ್ಲ. ಆದರೆ ಮಾಸ್ತಿಯವರ ಹಾಗೆ ಕಥೆ ಹೇಳುವುದರಲ್ಲಿ ಕುವೆಂಪು ಅವರಿಗೆ ಆಸಕ್ತಿಯಿಲ್ಲ. ಮಾಸ್ತಿಯವರ ಕಥೆಗಳು ಘಟನಾ ಪ್ರಧಾನವಾಗಿದ್ದರೆ ಕುವೆಂಪು ಕಥೆಗಳು ವರ್ಣನಾ ಪ್ರಧಾನವಾಗಿದ್ದು, ಭಾವಕೇಂದ್ರಿತವಾಗಿರುತ್ತದೆ."[11] ನವೋದಯ ಸಂದರ್ಭದಲ್ಲಿ ಮಾಸ್ತಿ, ಗೊರೂರು, ಅಶ್ವಥ, ಆನಂದರಿಗಿಂತ ಭಿನ್ನವಾದ ಒಂದು ಮಾದರಿಯನ್ನು ನಾವು ಕುವೆಂಪು ಅವರ ಕಥೆಗಳಲ್ಲಿ ಕಾಣಬಹುದು. ಸಾಮಾನ್ಯರ ಬದುಕನ್ನು ಚಿತ್ರಿಸುವುದು ಕುವೆಂಪು ಅವರ ಪ್ರಧಾನ ಆಶಯಗಳಲ್ಲೊಂದು ಎನ್ನುವುದು ಅವರ ಕರಿಸಿದ್ಧ ಎನ್ನುವ ಕಥನ ಕಾವ್ಯವನ್ನು ನೋಡಿದರೂ ಗೊತ್ತಾಗುತ್ತದೆ.

ಕನ್ನಡ ಕಥಾ ಸಾಹಿತ್ಯದ ಬಗ್ಗೆ ಆಳವಾದ ಅಧ್ಯಯನ ನಡೆಸಿ ಸಣ್ಣ ಕಥೆಯ

ಬೆಳವಣಿಗೆಯನ್ನು ಗುರುತಿಸಿ ವಿವರವಾಗಿ ಬರೆದಿರುವ, ಮರೆಯಬಾರದ ಅನೇಕಗಳನ್ನು ಪರಿಚಯಿಸಿರುವ ವಿಮರ್ಶಕ ಗಿರಡ್ಡಿ ಗೋವಿಂದರಾಜುರವರು ಸುಮಾರು ಮುನ್ನೂರು ಪುಟಗಳ ತಮ್ಮ ಕಥಾ ಸಾಹಿತ್ಯ ವಿಮರ್ಶೆಯಲ್ಲಿ ಕುವೆಂಪು ಅವರ ಸಣ್ಣಕಥೆಗಳ ಬಗ್ಗೆ ಎಲ್ಲಿಯೂ ಪ್ರಸ್ತಾಪಿಸದಿರುವುದು ನನಗಂತೂ ಸೋಜಿಗವನ್ನುಂಟು ಮಾಡಿದೆ. ಗಿರಡ್ಡಿಯವರು ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರಕ್ಕಾಗಿ ಸಂಪಾದಿಸಿದ ಸಣ್ಣ ಕಥೆಗಳ ಸಂಕಲನ(1987) ಸಂಗ್ರಹದಲ್ಲಿಯೂ ಕುವೆಂಪು ಅವರ ಕಥೆ ಇಲ್ಲ.

ಬೊಳುವಾರು ಮಹಮ್ಮದ ಕುಂಞ ಅವರು 2001ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಗಾಗಿ ಸಂಪಾದಿಸಿರುವ ಶತಮಾನದ ಸಣ್ಣ ಕಥೆಗಳು ಸಂಕಲನದಲ್ಲಿ ಕುವೆಂಪು ಅವರ ಕಥೆಯನ್ನು ಸೇರಿಸದಿರುವ ಬಗ್ಗೆ ನನ್ನ ತಕರಾರು ಇದೆ. "ಕುವೆಂಪು ಅವರನ್ನು ಕನ್ನಡ ವಿಮರ್ಶೆ ಕತೆಗಾರರೆಂದು ಗುರುತಿಸಿಲ್ಲವೆಂಬ ಬೊಳುವಾರು ಅವರ ತಿಳುವಳಿಕೆ ಕುವೆಂಪು ಅವರನ್ನು ಕೈ ಬಿಡಲು ಕಾರಣವಿರಬೇಕು... ಕುವೆಂಪು ಅವರನ್ನು ಹೊರತುಪಡಿಸಿ ದಾಖಲಿಸಬಹುದೆಂಬುದನ್ನು ಮರುಪರಿಶೀಲಿಸಬೇಕಾಗುತ್ತದೆ."[14]

ನ್ಯಾಷನಲ್ ಬುಕ್ ಟ್ರಸ್ಟಿಗಾಗಿ ಜಿ.ಹೆಚ್. ನಾಯಕರು ಸಂಪಾದಿಸಿದ 'ಕನ್ನಡ ಸಣ್ಣಕಥೆಗಳು'(1978) ಸಂಕಲನದಲ್ಲಿ ಕುವೆಂಪು ಅವರ ಯಾರು ಅರಿಯದ ವೀರ ಕಥೆ ಸೇರಿದೆ. "ಜಿ. ಹೆಚ್. ನಾಯಕರ ಪ್ರಕಾರ ಕನ್ನಡ ಸಣ್ಣ ಕಥೆಯ ಚರಿತ್ರೆಯಲ್ಲಿ ಕುವೆಂಪು ಪ್ರಾತಿನಿಧಿಕ ಕಥೆಗಾರರಲ್ಲೊಬ್ಬರು"[15]

ಕನ್ನಡ ಸಣ್ಣ ಕಥೆಯ ಬಗ್ಗೆ ವಿಸ್ತಾರವಾಗಿ ಚರ್ಚಿಸಿದ ಮಹತ್ವದ ಕೃತಿ (ಕನ್ನಡ ಕಥನ ಸಾಹಿತ್ಯ : ಸಣ್ಣ ಕಥೆ) ರಚಿಸಿರುವ ಅಮೂರರು ಕುವೆಂಪು ಅವರನ್ನು ನವೋದಯದ ಪ್ರಮುಖ ಕಥೆಗಾರರಲ್ಲೊಬ್ಬರೆಂದು ಗುರುತಿಸಿ ಚರ್ಚಿಸಿದ್ದಾರೆ. "ನನ್ನ ಈ ಪುಸ್ತಕ ಕನ್ನಡ ಸಣ್ಣ ಕಥೆಯ ಸಮಗ್ರ ಇತಿಹಾಸವಲ್ಲ. ಕನ್ನಡ ಸಣ್ಣ ಕಥೆಯ ವಿಕಾಸಕ್ಕೆ ಕಾರಣರಾದ ಪ್ರಮುಖ ಕಥೆಗಾರರನ್ನು ನಾನಿಲ್ಲಿ ಅಭ್ಯಾಸಕ್ಕೆ ಆರಿಸಕೊಂಡಿದ್ದೇನೆ"[16] ಎಂದು ಅಮೂರರು ಹೇಳುತ್ತಾರೆ. ಅಂದರೆ ಕನ್ನಡ ಸಣ್ಣ ಕಥೆಯ ವಿಕಾಸಕ್ಕೆ ಕಾರಣರಾದ ಪ್ರಮುಖರಲ್ಲಿ ಕುವೆಂಪು ಅವರೂ ಒಬ್ಬರು ಎಂಬುದು ಅಮೂರರ ಗ್ರಹಿಕೆ. ಈ ಮಾತು ಅಕ್ಷರಶಃ ಸತ್ಯ.

ಕುವೆಂಪುರವರು ಬಹುತೇಕ ಕಥೆಗಳು ವರ್ಣನಾ ಪ್ರಧಾನವಾದವುಗಳು. ಆದರೂ ಸಹ ಅವು ಸಹೃದಯರ ನೆಚ್ಚಿನ ಕಥೆಗಳು. ಕುವೆಂಪು ತಮ್ಮ ಕಥಾ ಸಾಹಿತ್ಯದಲ್ಲಿ ಪ್ರಕೃತಿಯನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಅವರ ಕಥೆಗಳಲ್ಲಿ ಮಲೆನಾಡಿನ ದಟ್ಟಕಾಡಿನ ವರ್ಣನೆಯನ್ನು, ಮಳೆಯ ವರ್ಣನೆಯನ್ನು, ಹಕ್ಕಿ ಪಕ್ಷಿಗಳ ಕಲರವವನ್ನು, ನದಿಯ ವರ್ಣನೆಯನ್ನು ಕಾಣಬಹುದು. ವಿಶೇಷವಾಗಿ 'ಸಾಲದ ಮಗು' ಹಾಗೂ 'ಯಾರೂ ಅರಿಯದ ವೀರ' ಕಥೆಗಳಲ್ಲಿ ಪ್ರಕೃತಿ ಒಂದು ಪಾತ್ರವಾಗಿ ಬಂದಿದೆ. ಏಕೆಂದರೆ ಸಾಲದ ಮಗು ಕಥೆ ಪ್ರಾರಂಭವಾಗುವುದೇ ಪ್ರಕೃತಿ ವರ್ಣನೆಯೊಂದಿಗೆ. ಯಾರೂ ಅರಿಯದ ವೀರ ಕಥೆಯ ಪ್ರವಾಹದ ಚಿತ್ರಣ, ಗೌಡರ ಕುಟುಂಬ ನದಿಯಲ್ಲಿ ಸಾಗುವಾಗ ನದಿಯ ವರ್ಣನೆ ಇತ್ಯಾದಿ ಸನ್ನಿವೇಶಗಳನ್ನು ಕುವೆಂಪು ಅವರು ಅದ್ಭುತವಾಗಿ ಸೆರೆಹಿಡಿದ್ದಾರೆ.

**ಕೊನೆ ಟಿಪ್ಪಣಿಗಳು**


01. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–60

02. ಜಿ. ಹೆಚ್. ನಾಯಕ್, ಕನ್ನಡ ಸಣ್ಣ ಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ, 1978, ಪುಟ–X
03. ಕುವೆಂಪು, ನನ್ನ ದೇವರು ಮತ್ತು ಇತರ ಕಥೆಗಳು, ಉದಯ ರವಿ ಪ್ರಕಾಶನ, ಮೈಸೂರು, 1993, ಪುಟ–16
04. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–63
05. ಕನ್ನಡ ಕಥನ ಸಾಹಿತ್ಯ ಸಣ್ಣ ಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 2012, ಪು.87
06. ಕುವೆಂಪು, ನನ್ನ ದೇವರು ಮತ್ತು ಇತರ ಕಥೆಗಳು, ಉದಯ ರವಿ ಪ್ರಕಾಶನ, ಮೈಸೂರು, 1993, ಪುಟ–16
07. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–67
08. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–64
09. ಕುವೆಂಪು, ನನ್ನ ದೇವರು ಮತ್ತು ಇತರ ಕಥೆಗಳು, ಉದಯ ರವಿ ಪ್ರಕಾಶನ, ಮೈಸೂರು, 1993, ಪುಟ–16
10. ಕುವೆಂಪು, ನನ್ನ ದೇವರು ಮತ್ತು ಇತರ ಕಥೆಗಳು, ಉದಯ ರವಿ ಪ್ರಕಾಶನ, ಮೈಸೂರು, 1993, ಪುಟ–18
11. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–69
12. ಕುವೆಂಪು, ಸಮಗ್ರ ಕಾವ್ಯ (ಸಂಪುಟ 2) ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ, 2017, ಪುಟ–59
13. ಕುವೆಂಪು, ಸಮಗ್ರ ಕಾವ್ಯ (ಸಂಪುಟ 2) ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ, 2017, ಪುಟ–60
14. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–39
15. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–39
16. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018, ಪುಟ–40
17. ಕುವೆಂಪು, ಸಮಗ್ರ ಕಾವ್ಯ (ಸಂಪುಟ 2) ರಾಷ್ಟ್ರ ಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ, 2017, ಪುಟ–667

**ಆಕರ ಗ್ರಂಥಗಳು**

01. ಅಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ : ಸಣ್ಣ ಕಥೆ, ಪ್ರಿಯದರ್ಶಿನಿ ಪ್ರಕಾಶನ, 2011
02. ಕುವೆಂಪು, ನನ್ನ ದೇವರು ಮತ್ತು ಇತರ ಕಥೆಗಳು, ಉದಯರವಿ ಪ್ರಕಾಶನ, ಮೈಸೂರು, 1993
03. ಕುವೆಂಪು ಸಮಗ್ರ ಕಾವ್ಯ, (ಸಂಪುಟ–2) ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ, 2017
04. ಜಿ.ಹೆಚ್. ನಾಯಕ, ಕನ್ನಡ ಸಣ್ಣ ಕಥೆಗಳು, ನ್ಯಾಷನಲ್ ಬುಕ್ ಟ್ರಸ್ಟ್, ನವದೆಹಲಿ, 1978
05. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಥನ ಕೌತುಕ, ಅಭಿನವ ಪ್ರಕಾಶನ, ಬೆಂಗಳೂರು, 2018

❖❖❖

# ಕುವೆಂಪು ಮಹಾಕಾವ್ಯದಲ್ಲಿ ಭಾರತೀಯ ದರ್ಶನ

**ಡಾ. ವಿಜಯಕುಮಾರ ಹೆಚ್. ವಿಶ್ವಮಾನವ**
**ಡಾ. ಮಹಾಂತ ಗೌಡ**
**ಡಾ. ಆಶಾರಾಣಿ ಎಂ.ಪಿ.**
**ಡಾ. ಧನಂಜಯ ಪಿ.ಕೆ.**

ಕುವೆಂಪು ಕನ್ನಡ ನಾಡಿನ ಹೆಮ್ಮೆಯ ಕವಿ ಪುಂಗವರು. ಅಷ್ಟೇ ಅಲ್ಲದೆ ಒಬ್ಬ ವಿಶ್ವಮಾನವ, ಜಗದ ಕವಿ, ಯುಗದ ಕವಿ ಹಾಗೂ ಯುಗ ಪ್ರವರ್ತಕ. ಕುವೆಂಪು ಅವರು ದಾರ್ಶನಿಕರಾದ ಕವಿ–ಲೇಖಕರು. ಅವರದು ರಾಮಾಯಣ 'ದರ್ಶನ'. ಅವರ ವಿಮರ್ಶೆಯೆಂದರೆ ಅದು ದರ್ಶನ ವಿಮರ್ಶೆ. ಅವರ ಕಾದಂಬರಿಗಳೂ ದಾರ್ಶನಿಕ ಕೃತಿಗಳೇ ಆಗಿವೆ. ತಮ್ಮ ಕೃತಿಗಳನ್ನು ಅವರು ರಚಿಸಿದ್ದು ಕೂಡ ತಪಸ್ಸಿನಂತೆಯೇ.

ಕುವೆಂಪು ತಮ್ಮ 'ಶ್ರೀ ರಾಮಾಯಣ ದರ್ಶನಂ'ನ್ನು ಸೃಜಿಸುವುದಕ್ಕೆ ಅನೇಕ ಪಾಶ್ಚಾತ್ಯ ಮಹಾಕಾವ್ಯಗಳಿಂದ ಮತ್ತು ಕವಿಗಳಿಂದ ಪ್ರಭಾವಿತರಾಗಿದ್ದರು ಎಂಬ ಮಾತಿದೆ. ಕುವೆಂಪು ಅವರು ಪಾಶ್ಚಾತ್ಯ ಮಹಾಕಾವ್ಯಗಳಿಂದ ಪಡೆದ ಪ್ರೇರಣೆಯನ್ನು ಖಚಿತವಾಗಿ ನಿರ್ಧರಿಸುವುದು ಕಷ್ಟ. ಏಕೆಂದರೆ ಎಷ್ಟೇ ರೀತಿಯಲ್ಲಿ ಪಾಶ್ಚಾತ್ಯ ಮಹಾಕಾವ್ಯದ ಪ್ರೇರಣೆ ಕಾಣುತ್ತದೆ ಎಂದು ತೋರಿದಾಗ ಸ್ವಂತದ ಅಥವಾ ಕನ್ನಡದ ಕೃತಿಯ ಪ್ರಭಾವವೂ ಇರಬಹುದು. ಅಲ್ಲದೆ, ಇಂತಹ ಕೃತಿಯ ಪ್ರಭಾವದೊಂದಿಗೆ ಪಾಶ್ಚಾತ್ಯ ಕಾವ್ಯವೊಂದರ ಪ್ರಭಾವ ಬೇರೆ ಬೆರೆತಿರಬಹುದು. ಉದಾ: ಮಹಾಕಾವ್ಯದ ಪ್ರತಿ ನಾಯಕನನ್ನು ದುರಂತ ವ್ಯಕ್ತಿಯಾಗಿ ಚಿತ್ರಿಸಲು ಪ್ರೇರಣೆ ಮಿಲ್ಟನ್‌ನ ಸೇಟನ್ ಪಾತ್ರದಿಂದ ಬಂದಿರಬಹುದೆಂದು ಕಂಡರೂ ರನ್ನನ ದುರ್ಯೋಧನನಿಂದಲೂ ಪ್ರೇರಣೆ ಬಂದಿರಬಹುದು. ಹಾಗೆಯೇ ನಾಯಕ–ಪ್ರತಿನಾಯಕರಲ್ಲಿ ಒಂದು ಸೂಕ್ಷ್ಮವಾದ ಆಂತರಂಗಿಕ ಸಂಬಂಧವನ್ನು ಸೂಚಿಸುವ ಸಾಧ್ಯತೆಯನ್ನು ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್'ನಲ್ಲಿ ಗುರುತಿಸಬಹುದು. ಆದರೆ ಕುಮಾರವ್ಯಾಸ ತನ್ನ ದುರ್ಯೋಧನನಿಂದ ಎನ್ನ ಹೃದಯದೊಳಗಿದ್ದು, ಮುರಿಯುವನು ಸಂದಿಯನು ಇಂತಹ ಮಾತುಗಳನ್ನಾಡಿಸುತ್ತಾನೆ. ನಾಯಕ ಪ್ರತಿನಾಯಕರ ಚೇತನಗಳಲ್ಲಿ ಒಂದು ಸೂಕ್ಷ್ಮ ಸಂಬಂಧವನ್ನು ತಲುಪಿಸುವುದರಲ್ಲಿ ಕುವೆಂಪು ಮಿಲ್ಟನ್ ಮತ್ತು ನಾರಾಯಣಪ್ಪ ಇಬ್ಬರಿಗಿಂತಲೂ ಬಹು ದೂರ ಹೋಗುತ್ತಾರೆ.

ಪಾಶ್ಚಾತ್ಯ ಮಹಾಕಾವ್ಯಗಳಲ್ಲಿ ಹೋಮರ್, ವರ್ಜಿಲ್, ಡಾಂಟೆ ಮತ್ತು ಮಿಲ್ಟನ್‌ನರ ಕೃತಿಗಳು ಮಾತ್ರ ಕುವೆಂಪು ಅವರ ಗಮನವನ್ನು ಸೆಳೆದಂತೆ ಕಾಣುತ್ತವೆ. ಹೋಮರನ ಸಂಪ್ರದಾಯದ ಆಚೆ ಮಹಾಕಾವ್ಯಗಳನ್ನು ಬರೆದ ಇಟಲಿಯ ಕವಿಗಳೂ ಲುಡೊವಿಕೋ ಅರಿಯಸ್ಟೊ ಮತ್ತು ಟೆಕ್ವಾರ್ಟೊ ಟಾಸೆ ಇವರ ಹೆಸರುಗಳನ್ನು ಅವರು ಉಲ್ಲೇಖಿಸುವುದು ಇಲ್ಲ. ಹೋಮರನ ಈಲಿಯಡ್ ಕಾವ್ಯವನ್ನು ಕುರಿತು ಅವರು ಕೃತ್ತಿಕೆ ಸಂಗ್ರಹದ ಒಂದು ಸಾನೆಟ್‌ನಲ್ಲಿ ವ್ಯಕ್ತಪಡಿಸುವ ಒಂದು ಅಭಿಪ್ರಾಯವನ್ನು ಇಲ್ಲಿ ಗಮನಿಸಬಹುದು, ಹೋಮರನ ಕಲೆಯನ್ನು ಮೆಚ್ಚಿದರೂ ಕುವೆಂಪು ಅವರು ಚಿತ್ರಿಸಿದ ಹೆಲನಳ ಪಾತ್ರಕ್ಕೆ ಬೇಸತ್ತು 'ಪತಿಯುವಂ, ಪೆಣ್ಗೂಸುಮಂ ತ್ಯಜಿಸಿ ತನು

ರುಚಿಗೆ ಸೋತು, ಪಾಣ್ಬಂ ಬೆರೆ ಸೋಡಿದಾ ಪೆಣ್ಗೆ' ಎಂದು ಹೇಳಿ ಈಲಿಯಡ್‌ನ ಮಹಾಕಲೆಯ ನೆತ್ತರ್ಗಣ್ಗೆ ಬೆಲೆವಣ್ಣೆ ಗುರಿಯಾಯಿತೆ? ಎಂದು ಪ್ರಶ್ನಿಸುತ್ತಾರೆ. ಸೀತೆಯ ಶುಚಿಗೆ 'ರಾಮಾಯಣ'ನೊರೆದನಾದಿ ಕವಿ ವಾಲ್ಮೀಕಿ ಎನ್ನುತ್ತಾರೆ. ಪತಿವ್ರತೆಯಾದ ಮಂಡೋದರಿಯ ಗಂಡನಾಗಿಯೂ ಕಾಮದಿಂದ ಸೀತೆಯನ್ನು ಕರೆತಂದ ರಾವಣನು ಕವಿಯ ಅನುಕಂಪಕ್ಕೆ ಅರ್ಹನಾಗಿದ್ದರೆ, 'ಪತಿಯುಮಂ ಪೆಣ್ಣೂಸುಮಂ ತ್ಯಜಿಸಿ ತನುರಿಗೆ ಸೋತ' ಹೆಣ್ಣು ಅನುಕಂಪದ ಕವಿಯ ಎಲ್ಲೆಯಾಚೆ ನಿಲ್ಲಬೇಕಾಗಿಲ್ಲ. ಹೋಮರನ ಕಾವ್ಯಕ್ಕೆ ಹೆಲೆನ್ ನಾಯಕಿಯಲ್ಲ. ಆ ಕಾವ್ಯಕ್ಕೆ ನಾಯಕಿಯೇ ಇಲ್ಲ. ಹೋಮರನಾದರೂ ಹೆಲೆನ್ನಳ ನಡತೆಯನ್ನು ವೈಭವೀಕರಿಸುವುದಿಲ್ಲ, ಸಮರ್ಥಿಸುವುದೂ ಇಲ್ಲ. ಅವಳು ಪಶ್ಚತ್ತಾಪದಲ್ಲಿ ಬೇಯುತ್ತಿರುವುದನ್ನು ಚಿತ್ರಿಸುತ್ತಾನೆ. ಹೋಮರ್ ಹೆಲೆನಳನ್ನು ಚಿತ್ರಿಸುವ ರೀತಿಗೆ ಆದಿ ಕವಿ ವಾಲ್ಮೀಕಿಯನ್ನು ಮೆಚ್ಚುವವರು ಬೇಸರಿಸಬೇಕಾಗಿಲ್ಲ ಎಂದು ನಮಗೆ ತೋರುತ್ತದೆ. ಹೋಮರನ ದೃಷ್ಟಿಯನ್ನು ಕುರಿತ ಕುವೆಂಪು ಅವರ ಭಾವನೆ 'ಇಲಿಯಡ್'ನ ಪ್ರಭಾವವನ್ನು ಕುಗ್ಗಿಸಿರಲೂಬಹುದು.

ಬಹುಮಟ್ಟಿಗೆ ಕುವೆಂಪು ಭಾರತೀಯ ಮಹಾಕಾವ್ಯದ ಪರಂಪರೆಯಲ್ಲಿಯೇ ಬರೆದವರು. ಪಾಶ್ಚಾತ್ಯ ಮಹಾಕಾವ್ಯದಲ್ಲಿ ಕಥೆಯ ನಿರ್ವಹಣೆಯಲ್ಲಿ ಎದ್ದು ಕಾಣುವ ಒಂದು ಅಂಶವೆಂದರೆ ಕಥೆಯ ಘಟನೆಗಳನ್ನು ಕಾಲಾನುಕ್ರಮವಾಗಿ ಬಿತ್ತರಿಸದೆ ಕುತೂಹಲವನ್ನು ಸೆರೆ ಹಿಡಿಯುವ ಒಂದು ಘಟ್ಟದಲ್ಲಿ ಪ್ರಾರಂಭಿಸಿ ನಂತರ ಸಿಂಹಾವಲೋಕನ ಕ್ರಮದಿಂದ ಹಿಂದೆ ನಡೆದಿದ್ದನ್ನು ನಿರೂಪಿಸುವುದು ಎಂದು ನಮಗೆ ಇವರ ನಿರೂಪಣಾ ಕ್ರಮದಿಂದ ಒಂದು ನಿಖರವಾದ ಮಾಹಿತಿ ಲಭ್ಯವಾಗುತ್ತದೆ.

ಪಾಶ್ಚಾತ್ಯ ಮಹಾಕಾವ್ಯದ ಪ್ರೇರಣೆ ರಾಮಾಯಣ ದರ್ಶನಕ್ಕೆ ನೀಡಿದ ಒಂದು ಸ್ಪಷ್ಟ ಕೊಡುಗೆ ಮಹೋಪಮೆ ಎಂದು 1941ರಲ್ಲಿ ಮಹೋಪಮೆ ಕುರಿತು ಬರೆದ ಲೇಖನದಲ್ಲಿ ಕುವೆಂಪು 'ಆ ಹೆಣ್ಣು ಕನ್ನಡದ ಮನೆಗೆ ಹೊಸ ಸೊಸೆ' ಎಂದರು. ಆದರೆ ಮಹಾ ಮಹಾ ಉಪಮೆಗಳು ಕುಮಾರವ್ಯಾಸನಂತಹ ಕವಿಗಳಲ್ಲಿ ಕಡಿಮೆಯೇನಿಲ್ಲ. ಅಲ್ಲಿ ಸುಪ್ರತೀಕ ಗಜ ಹೇಗಿತ್ತೆಂದರೆ, 'ಕೈಕಾಲ್ ಮೂಡಿತೋ ನಭಕೆ' ಎಂಬಂತಿತ್ತು! ಏನೇ ಇದ್ದರೂ ಪ್ರಾಚ್ಯ ಪಾಶ್ಚಾತ್ಯ ಪ್ರಾಚೀನ ಅರ್ವಾಚೀನಗಳ ಸಾರ್ವಕಾಲಿಕ ಮತ್ತು ಸಾರ್ವಧಾರ್ಮಿಕ ಸಮಷ್ಟೀ ರೂಪದ ಯುಗ ಪ್ರಜ್ಞೆಯ ಆ ವಿಭೂತಿಯಂತಿರುವ 'ರಾಮಾಯಣ ದರ್ಶನಂ' ಮಹಾಕಾವ್ಯವನ್ನು ವ್ಯವಹಾರಿಕವಾಗಿ ಕುವೆಂಪು ಕೃತಿ ಎಂದು ಕರೆಯಲಾಗಿದ್ದರೂ ಪಾರಮಾರ್ಥಿಕವಾಗಿ ನೋಡಿದರೆ ಕುವೆಂಪುವನ್ನೇ ಅದು ಸೃಜಿಸಿದೆ. ಅದು ಯುಗ ಚೈತನ್ಯದ ಸಮಷ್ಟೀ ಪ್ರಜ್ಞೆಯ ಸೃಷ್ಟಿ. ಅದು ಶ್ರೀ ರಾಮಾಯಣದ ಅತ್ಯಂತ ಆಧುನಿಕ ಅವತಾರ. ಅದು ವೈದಿಕ ಸಂಪ್ರದಾಯದ ವಾಲ್ಮೀಕಿ ರಾಮಾಯಣಕ್ಕೆ ಋಣಿಯಾಗಿರುವಂತೆ, ಜೈನ ಸಂಪ್ರದಾಯದ ರಾಮಾಯಣಗಳಿಗೂ ಋಣಿಯಾಗಿದೆ. ವ್ಯಾಸ, ವಾಲ್ಮೀಕಿ, ಡಾಂಟೆ, ಮಿಲ್ಟನ್‌ರಿಗೂ ಋಣಿಯಾಗಿದೆ. ಅಲ್ಲಿ ಶ್ರೀ ರಾಮಕೃಷ್ಣ, ವಿವೇಕಾನಂತರ ಸಮನ್ವಯ ದರ್ಶನವೆಂತೋ ಅಂತೆಯೇ ಗಾಂಧೀಜಿ, ವಿನೋಭಾಜಿಯವರಿಂದ ಪ್ರಣೀತವಾದ ಸರ್ವೋದಯ ಭಾವನೆಯನ್ನು ಪಾಶ್ಚಾತ್ಯ ವಿಜ್ಞಾನದ ವಿಕಾಸವಾದವನ್ನೆಂತೋ ಅಂತೆಯೇ ಶ್ರೀ ಅರವಿಂದ ಪ್ರಣೀತವಾದ ಪೂರ್ಣ ಯೋಗ ದರ್ಶನವನ್ನು ಸಂದರ್ಶಿಸಬಹುದು. ಸಮನ್ವಯ, ಸರ್ವೋದಯ ಮತ್ತು ಪೂರ್ಣ ದೃಷ್ಟಿ ಇವುಗಳೇ 'ಶ್ರೀ ರಾಮಾಯಣ

ದರ್ಶನಂ'ದ ತ್ರಿನೇತ್ರಗಳಾಗಿವೆ ಎಂದು ಸ್ವತಃ ಪುಟ್ಟಪ್ಪನವರೇ ತಮ್ಮ ದಿವ್ಯ ದರ್ಶನದ ಬಗ್ಗೆ ಉಲ್ಲೇಖಿಸುತ್ತಾರೆ.

ಸುಜನಾ ತಮ್ಮ ಲೇಖನದಲ್ಲಿ ಹೀಗೆ ವಿವರಿಸುತ್ತಾರೆ: ಮಹಾಪುರುಷರಾದ ಅನಂತರದಲ್ಲಿ ಮಹಾಕವಿಗಳು ಹುಟ್ಟುತ್ತಾರೆ. ರಾಮ ಕೃಷ್ಣರಾದ ಮೇಲೆ ವಾಲ್ಮೀಕಿ, ವ್ಯಾಸರು ಬಂದರು. ಹಾಗಯೇ ಇತ್ತೀಚೆಗೂ ಮಹಾಪುರುಷರು ಹುಟ್ಟಿ ಬರುವಂತೆಯೇ ಅಂದೊಮ್ಮೆ ಇಂದೊಮ್ಮೆ ಮಹಾಕವಿಗಳು ಮೂಡಿ ಬಂದಿರುತ್ತಾರೆ. ಅವರು ದರ್ಶನವನ್ನು ಲೋಕಕ್ಕೆ ಪ್ರತಿಮಿಸಲು ಹಿಂದಿನ ಆ ಕವಿಗಳು ರಾಮಕೃಷ್ಣರ ದರ್ಶನದ ಅಭಿವ್ಯಕ್ತಿಗೆ ಅವರನ್ನೇ ವಸ್ತುವನ್ನಾಗಿ ಮಾಡಿಕೊಂಡರು. ಇತ್ತೀಚೆಗೆ ಕವಿಗಳು ತಮ್ಮ ಹಿಂದಿನ ಹಾಗೂ ಸಮಕಾಲೀನ ಮಹಾತ್ಮರ ದರ್ಶನವನ್ನು ಪಡಿಮೂಡಿಸುವಾಗ ಅವರ ಜೀವನವನ್ನೇ ನೇರವಾಗಿ ಕಾವ್ಯ ವಸ್ತುವನ್ನಾಗಿ ತೆಗೆದುಕೊಳ್ಳದೆ ಅಪೂರ್ವದ ಮಹಾತ್ಮರ ಜೀವನವನ್ನೇ ಕಾವ್ಯ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ... ಶ್ರೀರಾಮಕೃಷ್ಣ ಸರ್ವ ಸಮನ್ವಯ ದರ್ಶನ ಗಾಂಧೀಜಿಯವರ ಅಹಿಂಸಾತ್ಮಕ ಸರ್ವೋದಯ ದರ್ಶನ, ಶ್ರೀ ಅರವಿಂದರ ಪೂರ್ಣ ದೃಷ್ಟಿ ಇವುಗಳು ಈ ಕಾಲದ ಮಹಾಕಾವ್ಯವೊಂದರಲ್ಲಿ ಮೂಡಬೇಕಾಯಿತು. ಆ ಮೂಡಿಕೆ ಈ ಮಹಾಕಾವ್ಯದಲ್ಲಿ ನಡೆದಿದೆ ಎಂದು ಹೇಳಿದಾಗ ಯಾರೋ ವೆಬ್ಬಳಿಸಬೇಕಾಗಿಲ್ಲ. ಕಥೆಯೇನೋ ಹಳೆಯದೆ. ಆದರೂ ಅದು ಅಂದಿನ ದೇವ ದೇವತೆಗಳು ಇಂದಿನ ತಮ್ಮ ಭಾವನೆಗಳಿಗೆ ಮುಯ್ಯಾಗಿ ಬೆಳೆದು ಬಂದಿರುವಂತೆ ನಮ್ಮ ಕಾಲದ ಮಹಾಪುರುಷರ ದರ್ಶನಕ್ಕೆ ಮುಯ್ಯಾಗಿ ಬಂದಿವೆ. ಇಲ್ಲಿ ಕಥೆಯ ಹಂದರ ವ್ಯತ್ಯಾಸಗಳೇನೂ ಅಲ್ಲ. ಮೂಡಿ ಬಂದ ಬೆಳವಣಿಗೆ ಪರಿಣಾಮ ವಶಿಯಾದ ಕಾವ್ಯ ಕಥೆ ಹೇಗೆ ಬೆಳೆಯಬಹುದೋ ಹಾಗೆ ಬೆಳೆದಿದೆ.

ರಾಮನಾಗಲಿ, ರಾವಣನಾಗಲಿ, ಸೀತೆಯಾಗಲಿ, ಮಂಡೋದರಿಯಾಗಲೀ ತಮ್ಮ ತಮ್ಮ ಪಾತ್ರವನ್ನು ತಾವು ಚಾಚೂ ತಪ್ಪದಂತೆ ನೆರವೇರಿಸುತ್ತಾರೆ, ಆದರೆ ಅವರು ತಮ್ಮನ್ನೂ ಅರಿತುಕೊಳ್ಳುತ್ತಾರೆ. ಇಪ್ಪತ್ತನೇಯ ಶತಮಾನದ ವಿಜ್ಞಾನ ಇದ್ದಿಲು ಕೂಡ ವಜ್ರವಾಗುತ್ತದೆ ಎಂಬುದನ್ನು ಸಾಧಿಸಿ ತೋರಿಸಿತು. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯಲ್ಲಿ' ಎಂದು ಹೇಳಿದಾಗ ಕವಿ ಹಳೆಯ ಮಾತನ್ನು ಮಾತ್ರವೇ ಹೇಳಿಲ್ಲ. ಯುಗದ ವಾಣಿಯನ್ನೂ ಸಾರಿದ್ದಾರೆ, ತೋರಿದ್ದಾರೆ. ಸಾರಿರುವುದಕ್ಕಿಂತ ತೋರಿರುವುದು ಕಂಡದ್ದನ್ನೇ ಕಂಡಿರುವುದಕ್ಕಿಂತ ಕಂಡರಿಸುವುದು ಅತಿಮುಖ್ಯವಾದುದು ಇದು ಕುವೆಂಪು ಅವರ ನಿಜವಾದ ಭಾರತೀಯ ದರ್ಶನ.

ರಾಮ ರಾಮನಾಗಿಯೇ ಉಳಿದಿದ್ದರೆ ಎಲ್ಲಾ ಪಾತ್ರಗಳಿಗೂ ತಮ್ಮ ತಮ್ಮ ಪಾತ್ರದಲ್ಲೇ ಹರಿದು ಪೂರ್ಣತೆಯ ಸಾಗರವನ್ನು ಮುಟ್ಟದಿದ್ದರೆ, ಹೊಸದಾಗಿ ಮೂಡಿ ಬಂದ ಈ ಕಾವ್ಯವನ್ನು ಓದಲು ಬೇಕಾಗಿರಲಿಲ್ಲ. ಸರ್ವೋದಯ ದರ್ಶನವನ್ನು ಕಂಡ ಯುಗ. ಅನ್ನಮಯದಲ್ಲಿ ಮಾತ್ರ ಸರ್ವೋದಯವಾಗಲಿ ಎಂದು ಕಾಣಲಿಲ್ಲ. ಸರ್ವರ ಉದ್ಧಾರ ಹಾಗೂ ಸರ್ವ ಸ್ತರಗಳ ಉದ್ಧಾರವಿದೆ. ಅದರ ಜೊತೆಗೆ ಸರ್ವರಿಂದ ಸರ್ವರ ಉದ್ಧಾರವಾಗಿದೆ. ಇದು ಎಲ್ಲಕ್ಕಿಂತ ಶ್ರೇಷ್ಠವಾದ ಆದರ್ಶ.

'ಶ್ರೀ ರಾಮಾಯಣ ದರ್ಶನಂ'ದಲ್ಲಿ ಯಾರೂ ಯಾರೊಬ್ಬರ ಉದ್ಧಾರಕ್ಕಾಗಿ ತಪಿಸುತ್ತಾರೆಯೋ ತಿಳಿಯುವುದೇ ಇಲ್ಲ. ಯಾರೊಬ್ಬರೂ ತಾವು ಮತ್ತೊಬ್ಬರಾಗಿ ಅಂಥವರೊಬ್ಬರಿಗಾಗಿ ತಪಸ್ಸನ್ನು ಮಾಡುತ್ತಿರುವುದಾಗಿ ಎಲ್ಲೂ ಹೇಳುವುದಿಲ್ಲ. ಹಾಗೆ

ಹೇಳಿದರೆ ಅದು ಶುದ್ಧ ಕಪಟವಾದೀತು. ಅಪ್ರಜ್ಞಾಪೂರ್ವಕವಾಗಿ ಸ್ವತ್ಮೋದ್ಧಾರಕ್ಕಾಗಿ ತಪಸ್ಸು ಮಾಡುತ್ತಿರುವಾಗಲೇ ಪರರ ಉದ್ಧಾರವನ್ನು ಸಾಧಿಸುತ್ತಿರುವುದನ್ನು ಕಾಣುತ್ತೇವೆ. ಸೀತಾದೇವಿ, ರಾಮೋದ್ಧಾರಕ್ಕೆ ಮಾಡುವ ಅಪ್ರಜ್ಞಾಪೂರ್ವಕ ಹಾಗೂ ಅತೀಂದ್ರಿಯ ಪ್ರಜ್ಞಾಪೂರ್ವಕ ತಪಸ್ಸೇ ಶ್ರೇಷ್ಠ ಸಾಕ್ಷಿ ಇದಕ್ಕೆ.

ವ್ಯಕ್ತಿಯ ಹಾಗೂ ಸಮಷ್ಠಿ, ಅಪೂರ್ಣತೆಯ ಹಾಗೂ ಪೂರ್ಣತೆಯ ಎಲ್ಲಾ ಸ್ತರಗಳನ್ನೂ ಪೂರ್ಣವಾಗಿ ಕಂಡುಕಂಡರಿಸುವ ಕವಿ ಧನ್ಯರೇ ಸರಿ ಅಂತಾಗಿ ಈ ಕವಿ ನಮ್ಮ ಕಾಲದ ಮಹಾನುಭಾವಿಗಳ ಮಹಾದರ್ಶನವನ್ನು ಕಂಡ ಕಂಡರಿಸಿದ್ದಾರೆ. ನಮ್ಮ ಕಾಲದ ಇತಿಹಾಸವನ್ನೆಲ್ಲಾ ಇವರು ಇಲ್ಲಿ ತೋರಿರುವ ಲೋಕ ಇರುವ ಲೋಕ ಮಾತ್ರವೇ ಅಲ್ಲ, ಇರಬೇಕಾದ ಲೋಕ ಮಾತ್ರವೇ ಅಲ್ಲ, ಇರುವ ಲೋಕ ಮುನ್ನಡೆಯುತ್ತಿರುವ ಲೋಕ ಮತ್ತು ಇರಬೇಕಾದ ಲೋಕ ಅದೇ ಪೂರ್ಣತೆಯ ಲೋಕ. ಆದ್ದರಿಂದಲೇ ಗಡಿಬಿಡಿಯ ಲೋಕದಲ್ಲಿರುವ ನಿಮಗೆ ಅದು ನಮ್ಮ ಶತಮಾನದ ಕೃತಿಯಲ್ಲವೆಂದು ತೋರುತ್ತದೆ. ಎಲೆಯು ಮರವಲ್ಲ, ತೊಗಟೆಯೂ ಮರವಲ್ಲ, ಈ ಬಿಡಿಬಿಡಿ ಕಲ್ಲೋಲವಲ್ಲಾ ನಮ್ಮ ಜೀವನವಲ್ಲ ಮುಂದೆ ಬಹುಕಾಲವಾದ ಮೇಲೆ ಶತಶತಮಾನಗಳಾಚೆಯಲ್ಲಿ ನಿಂತ ಕಾಲ ಪುರುಷ ಯಾವುದೂ ಈ ಶತಮಾನವೆಂಬುದನ್ನು ನಿರ್ಧರಿಸಬಲ್ಲ ನಮ್ಮ ಕವಿ ನಾವು ಇರುವ ಲೋಕವನ್ನು ಮಾತ್ರವೇ ಚಿತ್ರಿಸಿಲ್ಲ, ಇರಬೇಕಾದ ನಾವು ಹೋಗುತ್ತಿರುವ ನಮ್ಮ ಯುಗದ ಮಹಾ ಚೇತನ ಕಂಡೂ ನಾವು ಕಾಣದಿರುವ ಲೋಕವನ್ನು ದರ್ಶಿಸಿ ಚಿತ್ರಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಕುವೆಂಪು : ಶ್ರೀ ರಾಮಾಣ ದರ್ಶನಂ
2. ನರಹಳ್ಳಿ ಬಾಲ ಸುಬ್ರಮಣ್ಯಂ : ಇಹದ ಪರಿಮಳದ ಹಾದಿಯಲ್ಲಿ
3. ಅರವಿಂದ ಮಾಲಗತ್ತಿ : ಕುವೆಂಪು ಕೃತಿ ವಿಮರ್ಶೆ (ಸಮಗ್ರ)
4. ನಂಜೇಗೌಡ : ಕುವೆಂಪು ಸೂಕ್ತಿ
5. ಡಾ.ಕೆ.ಸಿ. ಶಿವಾರಡ್ಡಿ : ಯುಗದ ಕವಿ



* ಡಾ ವಿಜಯಕುಮಾರ ಹೆಚ್ ವಿಶ್ವಮಾನವ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಮಾನವಿಕ ಮತ್ತು ಭಾಷಾ ನಿಕಾಯ, ಕನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಆಳಂದ ರೋಡ್, ಕಡಗಂಚಿ, ಕಲಬುರಗಿ–585 367

** ಡಾ ಆಶಾರಾಣಿ ಎಂ. ಪಿ. ಯು.ಜಿ.ಸಿ. ಪೋಸ್ಟ್ ಡಾಕ್ಟರಲ್ ಫೆಲೋ ಕನ್ನಡ ಅಧ್ಯಯನ ವಿಭಾಗ, ಮಾನವಿಕ ಮತ್ತು ಭಾಷಾ ನಿಕಾಯ, ಕನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಆಳಂದ ರೋಡ್, ಕಡಗಂಚಿ, ಕಲಬುರಗಿ–585 367

*** ಡಾ ಮಹಾಂತ ಗೌಡ ಕನ್ನಡ ಸಹಾಯಕ ಪ್ರಾಧ್ಯಾಪಕರು, ದೇವಾನಂಪ್ರಿಯಾ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು ಜಿಲ್ಲೆ ಮಸ್ಕಿ–585124.

**** ಡಾ. ಧನಂಜಯ ಪಿಕೆ ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ. ಆರ್. ಪೇಟೆ ಮಂಡ್ಯ–571426.


❖❖❖

# ಆಧುನಿಕ ಕನ್ನಡ ಸಾಹಿತ್ಯ ಮತ್ತು ಭಾಷಾಂತರ ಮೀಮಾಂಸೆಯ ವಿನ್ಯಾಸಗಳು

**ಡಾ. ವಿಜಯೇಂದ್ರ ಕುಮಾರ್ ಜಿ.ಎಲ್.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ-562105

ಯಾವುದೇ ಸಮಾಜವು ಬದಲಾವಣೆಯ ಹಂತದಲ್ಲಿದ್ದಾಗ, ಕ್ರಾಂತಿಪೂರ್ವ ಘಟ್ಟದಲ್ಲಿದ್ದಾಗ ಅಲ್ಲಿ ಹೆಚ್ಚುಹೆಚ್ಚು ಭಾಷಾಂತರಗಳು ನಡೆಯುತ್ತವೆ ಎಂದು ಹೇಳಲಾಗುತ್ತದೆ. 19ನೆಯ ಶತಮಾನದ ಕೊನೆಯ ಭಾಗ ಮತ್ತು 20ನೆಯ ಶತಮಾನದ ಆರಂಭಿಕ ದಶಕಗಳನ್ನು ಗಮನಿಸಿದರೆ, ಈ ಮಾತು ಸತ್ಯವೆನಿಸುತ್ತದೆ. ಕನ್ನಡದಲ್ಲಿ ಬಹಳ ತೀವ್ರಗತಿಯಲ್ಲಿ ಭಾಷಾಂತರ ಕಾರ್ಯಗಳು ನಡೆದ ಸಂದರ್ಭವಿದು. ರೂಪಾಂತರ, ಅಳವಡಿಕೆ, ಸಂಗ್ರಹಾನುವಾದ, ಸರಳಾನುವಾದ ಮತ್ತು ಮರುಸೃಷ್ಟಿಗಳ ಮೂಲಕ ಅಸಂಖ್ಯ ಯೂರೋಪಿಯನ್ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಬಂದುವು. ಅಧಿಕಾರ ಭಾಷೆಯಾಗಿದ್ದ ಇಂಗ್ಲಿಷಿನಿಂದ ಮಾತ್ರವೇ ಅಲ್ಲದೆ, ದೇಶಭಾಷೆಗಳಾದ ಮರಾಠಿ, ಹಿಂದಿ ಮತ್ತು ವಿಶೇಷವಾಗಿ ಬಂಗಾಳಿ ಭಾಷೆಯಿಂದ ಕನ್ನಡವು ತನಗೆ ಅಗತ್ಯವೆನಿಸಿದ ಸಾಹಿತ್ಯವನ್ನು ಭಾಷಾಂತರಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಭಾಷಾಂತರ ಮೀಮಾಂಸೆಯ ವಿನ್ಯಾಸಗಳನ್ನು ಗುರುತಿಸಿಕೊಳ್ಳುವ ಪ್ರಯತ್ನವೇ ಪ್ರಸ್ತುತ ಅಧ್ಯಯನ.

******

ಕನ್ನಡ ಸಾಹಿತ್ಯವು ಭಿನ್ನ ಸಂಸ್ಕೃತಿಯೊಂದರ ಸಂಸರ್ಗದಿಂದ ಹೊಸ ಚೈತನ್ಯವನ್ನು ಪಡೆಯಲು ಸಾಧ್ಯವಾದದ್ದೇ ಭಾಷಾಂತರಗಳಿಂದ. ಭಾಷಾಂತರವು ಹಚ್ಚಿದ ಕಿಚ್ಚು, ದೇಶಭಾಷಾ ಸಾಹಿತ್ಯಗಳನ್ನು ಬೆಳಗುವಂತೆ ಮಾಡಿತು. ಕನ್ನಡ ಸಾಹಿತ್ಯದ ದೃಷ್ಟಿಯಿಂದಂತೂ ಈ ಆಧುನಿಕಪೂರ್ವ ಮತ್ತು ಆಧುನಿಕ ಸಾಹಿತ್ಯದ ಸಂದರ್ಭವು ಹಲವು ಪಲ್ಲಟಗಳ ತೀವ್ರ ಸಂವೇದನೆಯ ಕಾಲಘಟ್ಟ. ಈ ವಸಾಹತುಶಾಹಿ ಸಂದರ್ಭದಲ್ಲಿ ಭಾಷಾಂತರ ಪ್ರಕ್ರಿಯೆ, ಹೊಸ ಸಾಹಿತ್ಯ ರಚನೆ, ಪ್ರಾಚೀನ ಸಾಹಿತ್ಯ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆ ಒಂದನ್ನೊಂದು ಪರಸ್ಪರ ಪ್ರಭಾವಿಸಿರುವುದನ್ನು ನಾವು ಗಮನಿಸಬಹುದು.

1783ರಲ್ಲಿ ಚಾರ್ಲ್ಸ್ ವಿಲ್ಕಿನ್ಸ್‌ನು ಭಗವದ್ಗೀತೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿದ. 1827ರಲ್ಲಿ ಲಂಡನ್ನಿನಲ್ಲಿ ಒಂದು 'ಓರಿಯಂಟಲ್ ಟ್ರಾನ್ಸ್‌ಲೇಷನ್ ಫಂಡ್' ಅನ್ನೇ ಸ್ಥಾಪಿಸಲಾಯಿತು. ಭಾರತದ ತತ್ವಶಾಸ್ತ್ರೀಯ ಕೃತಿಗಳು ಮತ್ತು ಕಾಳಿದಾಸನ ನಾಟಕಗಳು ಜರ್ಮನಿಯಲ್ಲಿ ಜನಪ್ರಿಯತೆಯನ್ನು ಪಡೆದುವು. 1850 ರಿಂದ 1870ರ ಅವಧಿಯಲ್ಲಿ ಮ್ಯಾಕ್ಸ್‌ಮುಲ್ಲರ್‌ನ ನೇತೃತ್ವದಲ್ಲಿ 'ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್' ಗ್ರಂಥ ಮಾಲೆಯಲ್ಲಿ ಸುಮಾರು ಐವತ್ತು ಗ್ರಂಥಗಳನ್ನು ಪ್ರಕಟಿಸಲಾಯಿತು. ರಾಬರ್ಟ್ ಕಾಲ್ಡ್‌ವೆಲ್ 'ಎ ಕಂಪ್ಯಾರೆಟಿವ್ ಗ್ರಾಮರ್ ಆಫ್ ದ್ರವಿಡಿಯನ್ ಲಾಂಗ್ವೇಜಸ್' (1856), ಜೇಮ್ಸ್

ಫರ್ಗುಸನ್ 'ಕೇವ್ ಟೆಂಪಲ್ಸ್ ಆಫ್ ಇಂಡಿಯ'(1844), ರಾಬರ್ಟ್ ಸಿವೆಲ್ 'ಎ ಫರ್‌ಗಾಟನ್ ಎಂಪೈರ್' ಕೃತಿಗಳನ್ನು ರಚಿಸಿದರು. ಎಲ್‌ಫಿನ್‌ಸ್ಟನ್, ಕ್ಯಾಸೆಲ್, ವಿನ್ಸೆಂಟ್ ಸ್ಮಿತ್ ಮುಂತಾದ ವಿದ್ವಾಂಸರು ಭಾರತದ ಇತಿಹಾಸವನ್ನು ತಮ್ಮ ಒರೆಗಲ್ಲಿಗೆ ಹಚ್ಚಿ 'ಕೇಂಬ್ರಿಜ್ ಹಿಸ್ಟರಿ ಆಫ್ ಇಂಡಿಯ' ಎಂಬ ಗ್ರಂಥವನ್ನು ಪ್ರಕಟಿಸಿದರು.

1868ರಲ್ಲಿ ಜಾನ್ ಗ್ಯಾರೆಟ್‌ನು ಕೇಶಿರಾಜನ 'ಶಬ್ದಮಣಿ ದರ್ಪಣ'ವನ್ನು ಸಂಪಾದಿಸಿ ಪ್ರಕಟಿಸಿದ. ಇದೇ ಕೃತಿಯನ್ನು ಆನಂತರದಲ್ಲಿ ಫರ್ಡಿನೆಂಡ್ ಕಿಟೆಲ್‌ನು ಇಂಗ್ಲಿಷ್ ವಿವರಣೆಸಮೇತ 'ದ ಜುವೆಲ್ ಮಿರ್ರರ್ ಆಫ್ ಗ್ರಾಮರ್' ಎಂಬ ಉಪ ಶೀರ್ಷಿಕೆಯೊಂದಿಗೆ ಪ್ರಕಟಿಸಿದ. 1894ರಲ್ಲಿ ಈತ ಸಿದ್ಧಪಡಿಸಿ ಪ್ರಕಟಿಸಿದ 'ಕನ್ನಡ–ಇಂಗ್ಲಿಷ್ ನಿಘಂಟು' ಕನ್ನಡ ಸಾಹಿತ್ಯಕ್ಕೆ ಆತ ನೀಡಿದ ಬಹಳ ದೊಡ್ಡ ಕೊಡುಗೆಯೆಂದೇ ಭಾವಿಸಲಾಯಿತು. ಬಿ.ಎಲ್.ರೈಸನು 'ದಿ ಹಿಸ್ಟರಿ ಆಫ್ ಕ್ಯನರೀಸ್ ಲಿಟರೇಚರ್' ಅನ್ನು ಪ್ರಕಟಿಸಿದ. 1885ರ ಸುಮಾರಿಗೆ ಜೆ.ಎಫ್. ಫ್ಲೀಟ್‌ನು 'ಇಂಡಿಯನ್ ಆಂಟಿಕ್ವೆರಿ'ಯ ಸಂಪುಟಗಳಲ್ಲಿ ಕನ್ನಡ ಪರಿಸರದಲ್ಲಿ ಚಾಲ್ತಿಯಲ್ಲಿದ್ದ ಲಾವಣಿಗಳನ್ನು ಸಂಗ್ರಹಿಸಿ ಪ್ರಕಟಿಸಿದ. ಕರ್ನಾಟಕದ 'ಪ್ರಪಂಚು'ಗಳನ್ನು ಸಂಗ್ರಹಿಸಲು, ಕರ್ನಲ್ ಮೆಕೆಂಜಿಯಿಂದ ಅಪ್ಪಣೆ ಪಡೆದ ದೇವಚಂದ್ರ ಕವಿ 'ರಾಜಾವಳಿ ಕಥೆ'ಯನ್ನು ರಚಿಸಿದ್ದು, ಪಾಶ್ಚಾತ್ಯರಿಂದ ಕನ್ನಡ ವ್ಯಾಕರಣ ಗ್ರಂಥಗಳು ರಚನೆಯಾದದ್ದು ಮತ್ತು ಹಲವು ಪಾಚೀನ ಕನ್ನಡ ಕಾವ್ಯಕೃತಿಗಳು ಮುದ್ರಣ ಕಂಡಿದ್ದು ಈ ಕಾಲಘಟ್ಟದಲ್ಲಿಯೇ.

ಒಟ್ಟಿನಲ್ಲಿ ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಂಡು ತಮ್ಮದಾಗಿಸಿಕೊಳ್ಳಬೇಕೆಂಬ 'ಜ್ಞಾನದ ದಾಹ' ಈ ಎಲ್ಲ ಭಾಷಾಂತರಗಳು ಮತ್ತು ಸಂಶೋಧನೆಗಳ ಹಿಂದಿರುವುದನ್ನು ನಾವು ಗಮನಿಸಬಹುದು. ವಸಾಹತೋತ್ತರ ಅಧ್ಯಯನಗಳು ಜ್ಞಾನಕ್ಕೂ, ಅಧಿಕಾರಕ್ಕೂ, ಇರುವ ಸಂಬಂಧವನ್ನು ಕುರಿತು ಬಿಡಿಸಿ ಹೇಳಿದಾಗಲೇ, 19ನೆಯ ಶತಮಾನದ ಪಾಶ್ಚಾತ್ಯ ವಿದ್ವಾಂಸರ ಪ್ರಯತ್ನಗಳ ಹಿಂದಿದ್ದ ಹುನ್ನಾರಗಳೇನು ಎಂಬುದು ನಮಗೆ ಹೊಳೆದದ್ದು. ಈ ಹಿನ್ನೆಲೆಯಲ್ಲಿ ಸ್ಥಳೀಯ ಭಾಷೆಗಳಲ್ಲಿನ ಸಾಹಿತ್ಯವು ಇಂಗ್ಲಿಷಿಗೆ ಭಾಷಾಂತರವಾದ ಬಗೆಯನ್ನು ನಾವು ಮರುವಿಶ್ಲೇಷಣೆ ಮಾಡಬೇಕಿದೆ.

ಇದೇ ಸಂದರ್ಭದಲ್ಲಿ ಮತ್ತು ಆನಂತರದಲ್ಲಿ ಇಂಗ್ಲಿಷಿನಿಂದ ಕನ್ನಡಕ್ಕೆ ಹರಿದುಬಂದ ಸಾಹಿತ್ಯವನ್ನು ಸಹ ನಾವು ವಸಾಹತೋತ್ತರ ಚಿಂತನೆಗಳ ಬೆಳಕಿನಲ್ಲಿ ನೋಡಬೇಕಿದೆ. ಎಂ.ಎಲ್. ಶ್ರೀಕಂಠೇಶಗೌಡರು, ಬಸವಪ್ಪ ಶಾಸ್ತ್ರಿಗಳು, ಎಸ್.ಜಿ. ನರಸಿಂಹಾಚಾರ್ಯರು, ಚುರುಮುರಿ ಶೇಷಗಿರಿರಾಯರು, ಬಿ.ಎಂ.ಶ್ರೀ., ಡಿ.ವಿ.ಜಿ., ಕುವೆಂಪು ಅವರ ಸಾಹಿತ್ಯವನ್ನು ಭಾಷಾಂತರ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಪುನರ್‌ಪರಿಶೀಲನೆ ಮಾಡುವ ಅಗತ್ಯವಿದೆ.

ಇದರಿಂದ ನಮ್ಮ ಆಧುನಿಕ ಕನ್ನಡ ಸಾಹಿತ್ಯವನ್ನು ಈವರೆಗೆ ಓದಿಕೊಂಡಿರುವುದಕ್ಕಿಂತ ಭಿನ್ನವಾಗಿ ನೋಡಲು ಸಾಧ್ಯ. ಮತ್ತು ಇದರ ಜೊತೆಗೆ, ಕನ್ನಡ ಭಾಷಾಂತರ ಮೀಮಾಂಸೆಯನ್ನು ಸಹ ರೂಪಿಸಿಕೊಳ್ಳಲು ಪ್ರಯತ್ನಿಸಬಹುದು.

ಈ ನಿಟ್ಟಿನಲ್ಲಿನ ಅಧ್ಯಯನದ ಆರಂಭದಲ್ಲಿಯೇ ಕೆಲವು ಮುಖ್ಯ ಪ್ರಶ್ನೆಗಳು ನಮಗೆ ಎದುರಾಗುತ್ತವೆ.

* ಭಿನ್ನ ಭಾಷೆಯ, ಭಿನ್ನ ಸಂಸ್ಕೃತಿಯ ಕೃತಿಗಳನ್ನು ನಮ್ಮ ಕನ್ನಡ ಸಾಹಿತ್ಯ ಯಾವ ಬಗೆಯಲ್ಲಿ ಸ್ವೀಕರಿಸಿತು?

ಕನ್ನಡ ಸಂಸ್ಕೃತಿಯು 'ಅನ್ಯ'ವನ್ನು ತನ್ನದಾಗಿಸಿಕೊಂಡದ್ದು ಹೇಗೆ?

* ಈ ಸಂದರ್ಭದಲ್ಲಿ ನೇರ ಭಾಷಾಂತರಗಳ ಬದಲಿಗೆ ರೂಪಾಂತರಗಳೇ ಹೆಚ್ಚು ಪ್ರಾಮುಖ್ಯತೆ ಪಡೆದದ್ದೇಕೆ?
* ಮೂಲಕ್ಕೆ ನಿಷ್ಠತೆಯ ಪ್ರಶ್ನೆ ನಮ್ಮ ಲೇಖಕರಿಗೆ ಏಕೆ ಮುಖ್ಯವಾಗಲಿಲ್ಲ?
* ಇಷ್ಟಕ್ಕೂ ನಮ್ಮ ಕನ್ನಡವು ಅನುವಾದಿಸಿಕೊಂಡ ಸಾಹಿತ್ಯವಾದರೂ ಎಂಥದು? ಏಕೆ ಮತ್ತು ಹೇಗೆ?

ಹೀಗೆ ಹಲವು ಪ್ರಶ್ನೆಗಳಿಗೆ ಇಂದು ನಾವು ಉತ್ತರಗಳನ್ನು ಕಂಡುಕೊಳ್ಳುವ ಅಗತ್ಯವಿದೆ. ನಮ್ಮ ಕನ್ನಡ ಸಾಹಿತ್ಯವು ಯೂರೋಪಿನ ಯಾವ ಬಗೆಯ ಸಾಹಿತ್ಯವನ್ನು ಪ್ರಮಾಣ ಸಾಹಿತ್ಯವನ್ನಾಗಿ ಪರಿಗಣಿಸಿ ಅದನ್ನು ಹೇಗೆ ಸ್ವೀಕರಿಸಿತು–ಎಂಬುದು ಇವುಗಳಲ್ಲಿ ಬಹಳ ಮುಖ್ಯವಾದುದು. ಯು.ಆರ್. ಅನಂತಮೂರ್ತಿಯವರು ಈ ಹಿನ್ನಲೆಯಲ್ಲಿ ಹೇಳಿರುವ ಮಾತುಗಳನ್ನು ನಾವಿಲ್ಲಿ ನೆನೆಯಬಹುದು:

"ವಸಾಹತುಶಾಹಿಯ ಚರಿತ್ರೆಯಲ್ಲಿ ನಮ್ಮ ಮೇಲೆ ಪ್ರಭಾವ ಮಾಡಿದ ಯೂರೋಪಿನ ಲೇಖಕರೆಲ್ಲರೂ ಸಾಮ್ರಾಜ್ಯಶಾಹಿಯ ವಿರೋಧಿಗಳಾಗಿದ್ದವರು ಮತ್ತು ಔದ್ಯಮೀಕರಣ ನಾಶ ಮಾಡುವ ಮಾನವೀಯ ವಿಷಯದಲ್ಲಿ ಕಾಳಜಿಯಿದ್ದವರು. ನವೋದಯ ಕಾಲದವರ ಮೇಲೆ ಪ್ರಭಾವ ಮಾಡಿದ ವರ್ಡ್ಸ್‌ವರ್ತ್, ಶೆಲ್ಲಿ, ಬ್ಲೇಕ್, ಬೈರನ್, ಹಾರ್ಡಿ, ಡಿಕನ್ಸ್, ಟಾಲ್‌ಸ್ಟಾಯ್‌ರ ಬಗ್ಗೆ ಇದು ಹೇಗೆ ನಿಜವೋ, ನಮ್ಮ ಕಾಲದ ಅಸ್ತಿತ್ವವಾದೀ ಐರೋಪ್ಯ ಲೇಖಕರ ಬಗ್ಗೆಯೂ ಇದು ನಿಜ. ಸಾರ್ತ್ರ್. ಕಮೂ, ಕಾಫ್ಕ–ಈ ಯಾರೂ ಐರೋಪ್ಯ ರಾಷ್ಟ್ರೀಯವಾದಿಗಳಲ್ಲ; ಬದಲಾಗಿ ತಮ್ಮ ದೇಶದ ಹುಂಬ ರಾಷ್ಟ್ರೀಯತೆಗೆ ವಿರೋಧಿಗಳು".[1]

ಆದರೆ ಎಡ್ವರ್ಡ್ ಸೈದ್ ತನ್ನ 'ಓರಿಯಂಟಲಿಸಂ' ಕೃತಿಯಲ್ಲಿ ಇಂತಹ ಒಟ್ಟು ಪಾಶ್ಚಾತ್ಯ ಸಾಹಿತ್ಯವನ್ನು ನೋಡುವುದೇ ವಸಾಹತುಶಾಹಿಯ ಸರಕೆಂಬಂತೆ. ಹೆಚ್ಚೂ ಕಡಿಮೆ ಸುಸಾನ್ ಬಾಸ್ನೆಟ್ ಸಹ ಇಂಥದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾಳೆ.

"ಭಾರತಕ್ಕೆ ರವಾನೆಯಾದ ಷೇಕ್ಸ್‌ಪಿಯರ್ ಅಲ್ಲಿ ಇಂಗ್ಲಿಷಿನ ಹಿರಿಮೆಗರಿಮೆ ಮತ್ತು ಕಾವ್ಯ ಪ್ರೌಢಿಮೆಯ ಸಾಕಾರ ರೂಪವೆಂಬಂತೆ ಬಿಂಬಿಸಲ್ಪಟ್ಟ. ಇವನು ಹೇಗೆಲ್ಲ ರಫ್ತು ಮಾಡಲ್ಪಟ್ಟನೆಂದರೆ – ಷೇಕ್ಸ್‌ಪಿಯರ್ ಒಬ್ಬ ಗ್ರೇಟ್ ಮಾಸ್ಟರ್, ಷೇಕ್ಸ್‌ಪಿಯರ್ ಇಂಗ್ಲಿಷಿನ ಮಹಾನ್ ಲೇಖಕ, ಷೇಕ್ಸ್‌ಪಿಯರ್ ಇಂಗ್ಲಿಷ್ ತನದ ಸಾರಸಂಗ್ರಹ, ಎಂದೆಲ್ಲ ರಂಜಿತಗೊಂಡು ರಫ್ತಾದ. ಆದರೆ ಯೂರೋಪಿನಾದ್ಯಂತ ಕ್ರಾಂತಿಕಾರಕ ಶಕ್ತಿಯಿಂದ ತುಂಬಿ ತುಳುಕುತ್ತಿದ್ದ ನಗರಗಳಲ್ಲೇ ಪ್ರದರ್ಶನಗೊಂಡ–ದುರಾಡಳಿತಗಾರರನ್ನು ಉರುಳಿಸುವ ವಸ್ತುವುಳ್ಳ–ಇವನ ನಾಟಕಗಳ ಪರ್ಯಾಯ ವ್ಯವಸ್ಥೆಯೊಂದರ ಚಿತ್ರಣ ಮಾತ್ರ ಇವರಿಗೆ ಅಂಗೀಕಾರಾರ್ಹವಾದುದಾಗಿರಲಿಲ್ಲ. ಈ ರೀತಿಯ ಆದರ್ಶೀಕೃತ ಷೇಕ್ಸ್‌ಪಿಯರ್ ರಫ್ತುಗಾರಿಕೆಯ ಜೊತೆ ಜೊತೆಗೇ ವಸಾಹತುವಾದದ ಎಲ್ಲ ಕೇಡುಗಳೂ ಇಂಡಿಯಾಕ್ಕೆ ಬಂದವು".[2]

ನಮ್ಮ ಕನ್ನಡಕ್ಕೆ ರೂಪಾಂತರಗೊಂಡಿರುವ ಷೇಕ್ಸ್‌ಪಿಯರನ ನಾಟಕಗಳನ್ನು ಗಮನಿಸಿದರೆ ಇಷ್ಟೆಲ್ಲಾ ಆತಂಕಪಡುವ ಅಗತ್ಯವಿಲ್ಲವೆನಿಸುತ್ತದೆ. ಆದರೆ ಇಂಗ್ಲಿಷಿನಿಂದ ಕನ್ನಡಕ್ಕೆ ತಂದಷ್ಟು ದೊಡ್ಡ ಪ್ರಮಾಣದಲ್ಲಿ ಕನ್ನಡದಿಂದ ಇಂಗ್ಲಿಷಿಗೆ ನೀಡಲಾಗಲಿಲ್ಲವಲ್ಲಾ ಎಂಬ ಕೊರಗು ಮಾತ್ರ ನಮ್ಮನ್ನು ಕಾಡುತ್ತಿದೆ. ಇಂಗ್ಲಿಷ್ ಕೊಡುವ ಭಾಷೆ,

ಕನ್ನಡವು ಪಡೆವ ಭಾಷೆ–ಎಂಬ ಕೀಳರಿಮೆಯ ಭಾವ ಹಲವರಲ್ಲಿರುವುದನ್ನು ನಾವು ಕಾಣಬಹುದು. ಪ್ರಾಚೀನ ಸಾಹಿತ್ಯದ ಬಗ್ಗೆ ಮಾತನಾಡುವಾಗಲೂ, ಸಂಸ್ಕೃತ ಮತ್ತು ಕನ್ನಡಗಳನ್ನು ಕುರಿತಂತೆ ಇದೇ ರೀತಿಯಲ್ಲಿ ಸಂಕಟಪಡುತ್ತಾ ಇದ್ದುದುಂಟು.

ಇದೇ ಸಂದರ್ಭದಲ್ಲಿ ನಮಗೆ ಎದುರಾಗುವ ಇನ್ನೊಂದು ಮುಖ್ಯ ಪ್ರಶ್ನೆಯೆಂದರೆ, ಅಧಿಕಾರ ಭಾಷೆಗಳಿಂದ ಸಾಕಷ್ಟು ಸ್ವೀಕಾರ ಮಾಡಿದ ಕನ್ನಡವು ಏಕೆ ಮೂಲವನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಂಡಿತು ಎಂಬುದು? ಇದು ಕೇವಲ ಆಧುನಿಕ ಸಾಹಿತ್ಯ ಸಂದರ್ಭಕ್ಕೆ ಮಾತ್ರವೇ ಅನ್ವಯಿಸುವುದಿಲ್ಲ. ಕವಿರಾಜಮಾರ್ಗ, ಪಂಪಭಾರತ, ಕುಮಾರವ್ಯಾಸಭಾರತಗಳಿಂದ ಹಿಡಿದು ಆಧುನಿಕ ಸಂದರ್ಭದ ಇಂಗ್ಲಿಷ್ ಗೀತೆಗಳು, ರಕ್ತಾಕ್ಷಿ, ಬಿರುಗಾಳಿ ಕೃತಿಗಳವರೆಗೆ ಇಡೀ ಕನ್ನಡ ಸಾಹಿತ್ಯ ಪರಂಪರೆಯ ಸಂದರ್ಭದಲ್ಲಿಯೇ ಈ ಪ್ರಶ್ನೆ ಮತ್ತೆ ಮತ್ತೆ ಎದುರಾಗುತ್ತದೆ. ಮೂಲಕ್ಕೆ ನಿಷ್ಠರಾಗಿರಬೇಕೆಂದು ಇವರಾರಿಗೂ ಅನ್ನಿಸಲೇ ಇಲ್ಲವೇಕೆ?

ವಸಾಹತೋತ್ತರ ಚಿಂತನೆಗಳ ಹಿನ್ನಲೆಯಲ್ಲಿ ಈ ಬಗ್ಗೆ ಚರ್ಚಿಸುವಾಗ, ಡಿ.ಆರ್. ನಾಗರಾಜರು ಹೇಳುವ ಮಾತುಗಳು ಅನುವಾದ ಪ್ರಕ್ರಿಯೆಗಳ ಕುರಿತು ಬೇರೆ ರೀತಿಯಲ್ಲಿ ಚಿಂತಿಸುವಂತೆ ಮಾಡುತ್ತವೆ.

ಕನ್ನಡದ ಸಂದರ್ಭದಲ್ಲಿ Translationಗೆ ಪರ್ಯಾಯವಾಗಿ 'ಅನುವಾದ' ಎನ್ನಬೇಕೋ, 'ಭಾಷಾಂತರ' ಎನ್ನಬೇಕೋ, 'ರೂಪಾಂತರ' ಎಂದು ಕರೆಯಬೇಕೋ ಎಂಬ ಗೊಂದಲವಿದೆ. ಇಂಥ ಗೊಂದಲದ ನಡುವೆಯೇ, ಕೀರ್ತಿನಾಥ ಕುರ್ತಕೋಟಿಯವರು ಭಾಷಾಂತರ ಪ್ರಕ್ರಿಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸುತ್ತ, ಕನ್ನಡ ಭಾಷಾಂತರ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು 'ಪುನರ್ಲೇಖ' ಎನ್ನುವುದು ಹೆಚ್ಚು ಸೂಕ್ತವೆನ್ನುತ್ತಾರೆ.[3] ಪಠ್ಯದ ಭಾಷೆಯಲ್ಲಾದ ಬದಲಾವಣೆ, ರೂಪದಲ್ಲಾದ ಬದಲಾವಣೆ, ಅರ್ಥದಲ್ಲಾದ ಬದಲಾವಣೆ ಎಂಬುದನ್ನು ಸೂಚಿಸುವಾಗ ಭಾಷಾಂತರ, ರೂಪಾಂತರ, ಅರ್ಥಾಂತರ ಎಂದು ಹೇಳಬಹುದು. ಆದರೆ ಎಲ್ಲ ಬಗೆಯ ಭಾಷಾಂತರಗಳನ್ನು ಪುನರ್ಲೇಖ ಎನ್ನಲಾಗುವುದಿಲ್ಲ. ಸಂಸ್ಕೃತದಲ್ಲಿದ್ದ ಮಹಾಭಾರತವನ್ನು 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನ್ ಈಸುವೆನ್' ಎಂಬ ಅಹಂಕಾರ ನನಗಿಲ್ಲ ಎನ್ನುತ್ತಲೇ ಪಂಪ ಕನ್ನಡದಲ್ಲಿ 'ಬರೆದ'. ಪಂಪ ಬರೆದದ್ದನ್ನು ಕುಮಾರವ್ಯಾಸ ಮತ್ತೆ 'ಬರೆದ' ಎನ್ನುವಾಗ, ಇಂತಹ ಮರುನಿರೂಪಣೆಯನ್ನು ಪುನರ್ಲೇಖ, ಮರುಸೃಷ್ಟಿ ಎನ್ನಬಹುದು.

ಇದೇ ಸಂದರ್ಭದಲ್ಲಿ ಈ ಪರಿಕಲ್ಪನೆಯನ್ನು ಕುರಿತ ಅನಂತಮೂರ್ತಿಯವರ ಮಾತುಗಳನ್ನು ಗಮನಿಸಬಹುದು. 'ಇಂಗ್ಲಿಷ್ ಗೀತೆಗಳು: ಸಾಂಸ್ಕೃತಿಕ ಮುಖಾಮುಖಿ' ವಿಚಾರ ಸಂಕಿರಣದ ಉದ್ಘಾಟನಾ ಭಾಷಣ ಮಾಡುತ್ತಾ "ಇತ್ತೀಚೆಗೆ ಗಾಯಿತ್ರಿ ಸ್ಪೀವಾಕ್ ಅನ್ನೋರು ಸ್ವಲ್ಪ ಫಿಲಾಸಾಫಿಕಲ್ಲಾಗಿ ಅನುವಾದದ ಬಗ್ಗೆ ಮಾತಾಡ್ತಾ, ಟ್ರಾನ್ಸ್‌ಲೇಶನ್‌ಗೆ ಅನುವಾದ ಅನ್ನುವ ಶಬ್ದವನ್ನೇ ಬಳಸಬೇಕೆಂದು ಹೇಳುತ್ತಿದ್ದರು. ಅನುವಾದ ಅಂದ್ರೆ 'ಕಮಿಂಗ್ ಇಮಿಡಿಯಟ್ಲಿ ಆಫ್ಟರ್' ಕೂಡಲೇ ಹತ್ತಿರವಾಗುವುದು ಅಂತ. ಬೇರೆಲ್ಲ ಶಬ್ದಕ್ಕಿಂತ ಇದು ಒಳ್ಳೆಯದು"[4] ಎನ್ನುತ್ತಾರೆ. ಆದರೆ ಅನುವಾದವೆನ್ನುವುದು ಕನ್ನಡದ ಸಂದರ್ಭದಲ್ಲಿ ಹೀಗೆ 'ಕೂಡಲೇ ಹತ್ತಿರವಾಗುವ' ಅಥವಾ 'ತಕ್ಷಣವೇ ಪ್ರತಿಕ್ರಿಯಿಸುವ' ಪ್ರಕ್ರಿಯೆ ಆಗಲಿಲ್ಲ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು. ಶೇಕ್ಸ್‌ಪಿಯರ್, ಮಿಲ್ಟನ್,

ವರ್ಡ್ಸ್‌ವರ್ತ್, ಎಲಿಯಟ್ ಇವರೆಲ್ಲ ಕನ್ನಡಕ್ಕೆ ಹತ್ತಿರವಾದದ್ದು ಬಹಳ ನಿಧಾನವಾಗಿಯೇ. ಯಾಕೆ ಹೀಗಾಯಿತು? ಎಂಬುದರ ಬಗ್ಗೆಯೂ ಚರ್ಚಿಸುವ ಅಗತ್ಯವಿದೆ.

ಆದರೆ ಅನುವಾದವನ್ನು 'ಅನುಕರಣೆ' ಎಂದು ಭಾವಿಸದೆ 'ಅಣಕ'ವಾಗಿ ನೋಡಿದಾಗ, ಭಾಷಾಂತರವು ಹೇಗೆ ಒಂದು ವಿದ್ರೋಹದ ಕ್ರಿಯೆಯಾಗಿ ಕಾಣುತ್ತದೆ ಎಂಬುದನ್ನು ತೋರಿದವರು ಡಿ.ಆರ್. ನಾಗರಾಜರು. ವಸಾಹತುಶಾಹಿ ಸಂದರ್ಭದಲ್ಲಿ ಕನ್ನಡಕ್ಕೆ ಅನುವಾದಗೊಂಡ ಕೃತಿಗಳನ್ನು–ಎಡ್ವರ್ಡ್‌ಸೈದ್ ಮುಂತಾದ ವಸಾಹತೋತ್ತರ ಸಿದ್ಧಾಂತಿಗಳಿಗಿಂತ–ಭಿನ್ನವಾಗಿ ನೋಡುವ ಕ್ರಮ ಇವರದು. ಪಾಶ್ಚಾತ್ಯ ಸಾಹಿತ್ಯವನ್ನು ಸ್ವೀಕರಿಸುತ್ತಲೇ, ಕನ್ನಡದಲ್ಲಿ ಹೇಗೆ ವಸಾಹತುಶಾಹಿ ಸಂಸ್ಕೃತಿಯನ್ನು ಅಣಕಿಸುವ, ಬುಡಮೇಲು ಮಾಡುವ ಕೃತ್ಯಗಳು ಭಾಷಾಂತರಗಳ ಮೂಲಕ ನಡೆದುವು ಎನ್ನುವುದಕ್ಕೆ 'ಅಣಕದ ಕೋತಿ'ಯ ಕತೆಯ ನಿರೂಪಣೆ ಮತ್ತು ಕುವೆಂಪು ಅವರ 'ರಕ್ತಾಕ್ಷಿ', 'ಬಿರುಗಾಳಿ' ನಾಟಕಗಳ ವಿಶ್ಲೇಷಣೆಯ ಮೂಲಕ ಚರ್ಚಿಸುತ್ತಾರೆ. ಇವರ ದೃಷ್ಟಿಯಲ್ಲಿ ಭಾಷಾಂತರವೆನ್ನುವುದು ಶತ್ರುವಿನ ಎದುರು ಹುಚ್ಚನಂತೆ ನಟಿಸುತ್ತ ಅಣಕಿಸುತ್ತ ಬದುಕಿಕೊಳ್ಳುವ ಕಲೆ.[5]

ಭಾಷಾಂತರವೆಂದರೆ ಚಲನೆ: ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ, ಒಂದು ದೇಶದಿಂದ ಇನ್ನೊಂದು ದೇಶಕ್ಕೆ, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ, ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ, ಈ ಹಿನ್ನಲೆಯಲ್ಲಿಯೆ ವಿ.ಬಿ. ತಾರಕೇಶ್ವರ್ ಅವರು 'ಭಾಷಾಂತರವೆಂದರೆ ಚಲನೆ, ಬದಲಾವಣೆ ಎಂದೇ ನಾವು ಭಾವಿಸಬೇಕಾಗುತ್ತದೆ'[6] ಎಂದಿರುವುದು. ವಿವಿಧ ಲೇಖಕರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಹೇಳುವುದಾದರೆ, ಭಾಷಾಂತರವು ಮೂಲವನ್ನು ಬದಲಿಸುತ್ತದೆ. ಎಷ್ಟೋ ವೇಳೆ ಮೂಲವನ್ನು ಗೇಲಿ ಮಾಡುತ್ತಿರುತ್ತದೆ. ಮೂಲವನ್ನು ಮೀರಿ ನಿಲ್ಲುತ್ತದೆ. ಬಹುಶಃ ಈ ಆತಂಕದಿಂದಲೇ ಇರಬೇಕು, ಮಧ್ಯಯುಗೀನ ಯೂರೋಪಿನಲ್ಲಿ ಬೈಬಲ್ಲಿನ ಭಾಷಾಂತರವನ್ನು ನಿಷೇಧಿಸಿದ್ದುದು. ತಮಾಷೆಯೆಂದರೆ, ಇಂದು ಜಗತ್ತಿನಲ್ಲಿಯೇ ಹೆಚ್ಚು ಭಾಷೆಗಳಿಗೆ ಅನುವಾದಗೊಂಡಿರುವ ಗ್ರಂಥ–ಬೈಬಲ್. ಇವೆರಡೂ ಉದ್ದೇಶಗಳ ಹಿಂದೆ ಎರಡು ಭಿನ್ನ ಧರ್ಮಕಾರಣಗಳಿವೆ. ಒಂದು: ಮೂಲದ ಪಾವಿತ್ರ್ಯತೆ ಕಾಪಾಡುವುದು. ಇನ್ನೊಂದು: ಮತಾಂತರ ಮಾಡುವುದು.

ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಮತ್ತು ಆನಂತರದಲ್ಲಿ ಭಾಷಾಂತರ ರೂಪಾಂತರ ಕಾರ್ಯಗಳು ಬಹಳ ಉತ್ಸಾಹದಿಂದ ನಡೆದುವು. ಅವು ಉಂಟು ಮಾಡಿದ ಪರಿಣಾಮಗಳೂ ಸಹ ಅಪಾರ. ಆದರೆ ಕನ್ನಡ ವಿಮರ್ಶೆಯಲ್ಲಿ ಭಾಷಾಂತರಿಸಲ್ಪಟ್ಟ ಸಾಹಿತ್ಯದ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿಲ್ಲ. ಪ್ರಸ್ತಾವನೆ, ಮುನ್ನುಡಿಗಳಲ್ಲಿ ಮತ್ತು ಕೆಲವು ಬಿಡಿಲೇಖನಗಳಲ್ಲಿ ಭಾಷಾಂತರವನ್ನು ಕುರಿತು ಚರ್ಚಿಸಲಾಗಿದೆ. ಇಂತಹ ವಿರಳ ಚರ್ಚೆಗಳಲ್ಲಿ ಭಾಷಾಂತರ ರಾಜಕಾರಣವನ್ನು ಕುರಿತ ಕೀರ್ತಿನಾಥ ಕುರ್ತಕೋಟಿ, ಡಿ.ಆರ್. ನಾಗರಾಜ, ಕೆ.ವಿ. ನಾರಾಯಣ, ಓ.ಎಲ್. ನಾಗಭೂಷಣಸ್ವಾಮಿ, ರಹಮತ್ ತರೀಕೆರೆ, ನಟರಾಜ್ ಹುಳಿಯಾರ್–ಇವರುಗಳ ಬಿಡಿಲೇಖನಗಳು ಸಾಕಷ್ಟು ಒಳನೋಟಗಳನ್ನು ನೀಡುತ್ತಿರುವುದರ ಜೊತೆಗೆ, ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಅಧ್ಯಯನ ಆಗಬೇಕಿರುವುದನ್ನು ಸೂಚಿಸುತ್ತಿವೆ. ಅಲ್ಲದೆ, ವಿ.ಬಿ. ತಾರಕೇಶ್ವರ್ ಅವರ 'ವಸಾಹತುಶಾಹಿ ಮತ್ತು ಭಾಷಾಂತರ' ಹಾಗೂ ಸುಸಾನ್

ಬಾಸ್ನೆಟ್ ಅವರ Comparative literature: A critical Introduction ಕೃತಿಯ ಕನ್ನಡ ರೂಪ 'ತೌಲನಿಕ ಸಾಹಿತ್ಯ' – ಈ ಎರಡೂ ಪುಸ್ತಕಗಳು ಭಾಷಾಂತರ ಅಧ್ಯಯನಗಳ ಮಹತ್ವವನ್ನು ಒತ್ತಿಹೇಳುತ್ತಿವೆ.

ಕನ್ನಡವು ಇಂಗ್ಲಿಷಿಗೆ ಏನನ್ನು ಕೊಟ್ಟಿತು ಮತ್ತು ಅದರಿಂದ ಏನನ್ನು ಪಡೆಯಿತು? ಎಂಬುದನ್ನು ತಿಳಿಯುವುದು ಎಷ್ಟು ಮುಖ್ಯವೋ, ಅಂತಹ ಕೊಡುಕೊಳೆಗಳ ಹಿಂದಿರಬಹುದಾದ ರಾಜಕಾರಣವನ್ನು ಅರ್ಥ ಮಾಡಿಕೊಳ್ಳುವುದೂ ಸಹ ಅಷ್ಟೇ ಮುಖ್ಯ. ಈ ಹಿನ್ನೆಲೆಯಲ್ಲಿ ನಮ್ಮ ಆಧುನಿಕ ಕನ್ನಡ ಸಾಹಿತ್ಯವನ್ನು ಭಾಷಾಂತರಗಳ ಅಧ್ಯಯನದ ಮೂಲಕ ಒಂದು ಸಮಗ್ರ ವಿಶ್ಲೇಷಣೆಗೆ ಒಳಪಡಿಸುವ ಅಗತ್ಯವಿದೆ. ಆ ಮೂಲಕ ಕನ್ನಡ ಭಾಷಾಂತರ ಮೀಮಾಂಸೆಯನ್ನೂ ಸಹ ಕಟ್ಟಿಕೊಳ್ಳಬಹುದು.

ಕೇವಲ ಸಾಹಿತ್ಯವಷ್ಟೇ ಅಲ್ಲದೆ, ಸಾಹಿತ್ಯ ಮೀಮಾಂಸೆಯನ್ನು ಕುರಿತ ಲೇಖನಗಳೂ ಸಹ ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಭಾಷಾಂತರಗೊಂಡಿರುವುದನ್ನು ನಾವು ಗಮನಿಸಬಹುದು. ವರ್ಡ್ಸ್‌ವರ್ತ್, ಕೋಲರಿಜ್, ಶೆಲ್ಲಿ, ಐ.ಎ. ರಿಚರ್ಡ್ಸ್, ಎಜ್ರಾಪೌಂಡ್, ವಿಲಿಯಟ್‌ರ ವಿಚಾರಗಳು, ಫ್ರೆಂಚ್ ಮತ್ತು ಜರ್ಮನ್ ಸಾಹಿತ್ಯ ಸಿದ್ಧಾಂತಗಳು, ಅರಿಸ್ಟಾಟಲ್‌ನ ಕಾವ್ಯಮೀಮಾಂಸೆ, ಹೊರೇಸ್‌ನ ಸಾಹಿತ್ಯ ವಿಮರ್ಶೆಗಳು ಕನ್ನಡಕ್ಕೆ ಬಂದಿವೆ. ಕೆ.ಕೃಷ್ಣಮೂರ್ತಿಯವರ ಅನುವಾದಗಳ ಮೂಲಕ ಸಂಸ್ಕೃತ ಕಾವ್ಯ ಮೀಮಾಂಸೆಯು ಸಹ ಕನ್ನಡಕ್ಕೆ ಬಂದಿದೆಯಲ್ಲದೆ, ಇದಕ್ಕಿಂತ ಮೊದಲೇ ಪ್ರಕಟವಾದ ತೀ.ನಂ. ಶ್ರೀಯವರ ಭಾರತೀಯ ಕಾವ್ಯಮೀಮಾಂಸೆಯು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದುದನ್ನು ನಾವು ನೆನೆಯಬಹುದು.

ಇದರ ಜೊತೆಗೆ, ಕನ್ನಡ ಸಾಹಿತ್ಯದ ಒಳಗೆಯೇ ನಡೆದಿರುವ ಮತ್ತು ನಡೆಯುತ್ತಿರುವ ಗದ್ಯಾನುವಾದ, ಹೊಸಗನ್ನಡಾನುವಾದ, ಸರಳಾನುವಾದಗಳನ್ನು ಕೂಡ ಇವತ್ತಿನ ಸಂದರ್ಭದಲ್ಲಿ ನಾವು ಗಂಭೀರವಾಗಿ ಪರಿಗಣಿಸಬೇಕಿದೆ.

"ವಾನ್ ಜೋಹರ್, ಎಜ್ರಾಪೌಂಡ್, ವಾಲ್ಟರ್ ಬೆಂಜಮಿನ್, ಡೆರಿಡಾ ಮುಂತಾದ ಚಿಂತಕರು ಭಾಷಾಂತರದ ಬಗೆಗೆ ಮಂಡಿಸುವ 'ಪುನರ್ಜನ್ಮ' ಪರಿಕಲ್ಪನೆಯನ್ನು ವಿಶ್ಲೇಷಿಸುತ್ತಾ, ಸುಸಾನ್ ಬಾಸ್ನೆಟ್ ಹೇಳುವ ಮಾತುಗಳನ್ನು ನಾವು ಗಮನಿಸಬೇಕು. ವಿಭಾಷಾಂತರವು ಒಂದು ಕೃತಿಯು ಮತ್ತೊಂದು ಸನ್ನಿವೇಶದಲ್ಲಿ ಬದುಕನ್ನು ಮುಂದುವರೆಸಲು ಪಠ್ಯಕ್ಕೆ ಅವಕಾಶವನ್ನು ಕಲ್ಪಿಸುತ್ತದೆ. ಮತ್ತು ಆ ಹೊಸ ಸನ್ನಿವೇಶದಲ್ಲಿ ನಿರಂತರ ಬಾಳುವುದರಿಂದ ಅದು ಅಲ್ಲಿ ಮೂಲ ಪಠ್ಯವೇ ಆಗಿಬಿಡುತ್ತದೆ. ಹಾಗಾಗಿ ಭಾಷಾಂತರವು ಒಂದು ವಿಶೇಷವಾದ ಚಟುವಟಿಕೆಯೇ ಆಗಿದೆ".[7]

ಹೀಗೆ ಸಾಗುವ ನಮ್ಮ ಅಧ್ಯಯನದ ಉದ್ದೇಶವು ಭಾಷಾಂತರ ಕಾರ್ಯವನ್ನು ಮೊದಲ ದರ್ಜೆಯ ಸೃಷ್ಟಿಕ್ರಿಯೆ ಎಂದು ಸಿದ್ಧಪಡಿಸುವುದಲ್ಲ. ಅಥವಾ ಭಾಷಾಂತರ ಮತ್ತು ಭಾಷಾಂತರಕಾರರ ಶ್ರೇಷ್ಠತೆಯನ್ನು ಎತ್ತಿಹಿಡಿಯುವುದಲ್ಲ. ಭಾಷಾಂತರವು ಆಧುನಿಕ ಕನ್ನಡ ಸಾಹಿತ್ಯ ನಿರ್ಮಾಣದ ಸಂದರ್ಭದಲ್ಲಿ ನಿರ್ವಹಿಸಿದ ಪಾತ್ರವನ್ನು ಅರಿಯುವುದು ಮತ್ತು ಆ ಮೂಲಕ ಕನ್ನಡ ಭಾಷಾಂತರ ಮೀಮಾಂಸೆಯ ವಿನ್ಯಾಸಗಳನ್ನು ಗುರುತಿಸಿಕೊಳ್ಳಲು ಯತ್ನಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

**ಕೊನೆ ಟಿಪ್ಪಣಿಗಳು**

1. ಅನಂತಮೂರ್ತಿ ಯು.ಆರ್., ಪೂರ್ವಾಪರ, ವಸಂತ ಪ್ರಕಾಶನ, ಬೆಂಗಳೂರು, 2011, ಪುಟ–25
2. ಸುಸಾನ್ ಬಾಸ್ನೆಟ್, ತೌಲನಿಕ ಸಾಹಿತ್ಯ (ಅನು), ಸಂ: ಕೆ.ಸಿ. ಶಿವಾರೆಡ್ಡಿ, ರಾಮಲಿಂಗಪ್ಪ ಟಿ. ಬೇಗೂರು, ಅಧ್ಯಯನ ಮಂಡಲ, ಬೆಂಗಳೂರು, 2008, ಪುಟ–25
3. ಕೀರ್ತಿನಾಥ ಕುರ್ತಕೋಟಿ, ಬಯಲು–ಆಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997, ಬಯಲು–ಆಲಯ, ಪುಟ–9
4. ಅನಂತಮೂರ್ತಿ ಯು.ಆರ್., 'ಉದ್ಘಾಟನ ಭಾಷಣ', ಇಂಗ್ಲಿಷ್ ಗೀತಗಳು: ಸಾಂಸ್ಕೃತಿಕ ಮುಖಾಮುಖಿ, ಸಂ: ರಹಮತ್ ತರೀಕೆರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007, ಪುಟ–9
5. ನಾಗರಾಜ್ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, 2006, ಪುಟ–21–22
6. ತಾರಕೇಶ್ವರ ವಿ.ಬಿ., ವಸಾಹತುಶಾಹಿ ಮತ್ತು ಭಾಷಾಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006, ಪುಟ–4
7. ಸುಸಾನ್ ಬಾಸ್ನೆಟ್, ತೌಲನಿಕ ಸಾಹಿತ್ಯ (ಅನು), ಸಂ: ಕೆ.ಸಿ. ಶಿವಾರೆಡ್ಡಿ, ರಾಮಲಿಂಗಪ್ಪ ಟಿ.ಬೇಗೂರು, ಅಧ್ಯಯನ ಮಂಡಲ, ಬೆಂಗಳೂರು, 2008, ಪುಟ–196

❖❖❖

ಆದ್ಯಂತಗಳ ಕರ್ಷಣದೊಡನೆ ಪಯಣ
ಸಾಗುತಿದೆ ದೂರಕೆ
ಹಾದಿ ಮಧ್ಯದಿ ಕಂಡು ಕರಗುವ ಮೊಗದ
ನೆನಪಿನ ಭಾರಕೆ

# ಪರತತ್ವ ಲಿಂಗ ಪ್ರಕಾಶ ಸ್ಥಲ – ನವಲಿಂಗ ಪೂಜಾ ವಿಧಾನ ಸ್ಥಲ ಮಂತ್ರಗೋಪ್ಯಗಳ ಅವಲೋಕನ

**ಡಾ. ಆರ್. ವಿ. ಪಾಟೀಲ**
ಸಹ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು
ಎಸ್.ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ವಿದ್ಯಾಗಿರಿ–ಧಾರವಾಡ–04

ಭಾರತೀಯ ಪರಂಪರೆಯಲ್ಲಿ ಮಂತ್ರಕ್ಕೆ ಬಹಳ ಮಹತ್ತ್ವದ ಸ್ಥಾನವಿದೆ. ಅದು ಮನಸ್ಸನ್ನು ಏಕಾಗ್ರತೆಯ ಕಡೆಗೆ ಒಯ್ಯಲು ಸಹಾಯ ಮಡುತ್ತದೆ; ಬೇಡಿದವರಿಗೆ ಬೇಡಿದ್ದನ್ನು ಕೊಡುವ ಕಾಮಧೇನು; ಮೋಕ್ಷಾಪೇಕ್ಷಿಗಳನ್ನು ರಕ್ಷಿಸುವ ಕಲ್ಪವೃಕ್ಷ; ಸದಾ ಮಂತ್ರವನ್ನು ಮನಃಪೂರ್ವಕವಾಗಿ ಜಪಿಸುವುರಿಂದ, ಮನಸ್ಸೇ ಚಿತ್–ಘನವಾಗುವುದು, ಸತ್ಯ ಶುದ್ಧವಾಗುವುದು ಎನ್ನುವಂತಹ ನಂಬಿಕೆಯಿದೆ. ಶೈವ ಪರಂಪರೆಯಲ್ಲಿ ಲಿಂಗದೀಕ್ಷೆಯ ಸಮಯದಲ್ಲಿ ಗುರುವು ಶಿಷ್ಯನ ಕಿವಿಯಲ್ಲಿ ಮಂತ್ರವನ್ನು ಹೇಳಿ, ಶಿಷ್ಯನ ಮಾಂಸಪಿಂಡದ ದೇಹವನ್ನು ಮಂತ್ರ ಪಿಂಡಮಯವನ್ನಾಗಿಸಿ, ಶುದ್ಧೀಕರಿಸಿ ಸಾಧನ ಮಾರ್ಗದಲ್ಲಿ ಮುನ್ನಡೆ ಸಾಧಿಸಲು ಉಪದೇಶ ಮಾಡುವನು. ಮಂತ್ರಗಳನ್ನು ಮೂರು ವಿಧಗಳಲ್ಲಿ ಉಚ್ಚಾರಣೆ ಮಾಡುವುದು ನಿಯಮ. ಅವುಗಳು

1. ವಾಚಿಕ ಮಂತ್ರ : ಈ ಮಂತ್ರವನ್ನು ಜೋರಾಗಿ ಎಲ್ಲರಿಗೂ ಕೇಳುವಂತೆ ಹೇಳುವದು.
2. ಮಾನಸಜ ಮಂತ್ರ : ಮಂತ್ರವನ್ನು ಮನಸ್ಸಿನಲ್ಲಿಯೇ ಉಚ್ಚರಿಸುವುದು.
3. ಉಪಾಂಶು ಮಂತ್ರ : ಗುಣು ಗುಣು ಧ್ವನಿಯಲ್ಲಿ ಹೇಳುವುದು.

ವಿಶ್ವ ಶಕ್ತಿಯನ್ನು ಆಕರ್ಷಿಸಿಕೊಂಡು ಭಗವಂತನೊಂದಿಗೆ ಅವಿನಾಭಾವವಾಗಿ ತನ್ಮಯತೆಯಿಂದ ಲೀನವಾಗಿಸುವಂತಹ, ಶೂನ್ಯವಾಗಿಸುವಂತಹ ವಿಶೇಷ ಶಕ್ತಿ ಮಂತ್ರಗಳಿಗಿವೆ ಎಂಬ ನಂಬಿಕೆಯ ಕಾರಣದಿಂದ ಆಧ್ಯಾತ್ಮದಲ್ಲಿ ಶಿವ ಸಾಧಕರು ಪಂಚಾಕ್ಷರ ಮತ್ತು ಷಡಕ್ಷರ ಮಂತ್ರಗಳಿಗೆ ಪ್ರಾಧಾನ್ಯ ನಿಡಿದ್ದಾರೆ. “ಓಂ ನಮಃ ಶಿವಾಯ” –ಪ್ರಣವ ಪಂಚಾಕ್ಷರಿ–ಷಡಕ್ಷರ ಮಂತ್ರ ‘ಓಂ’ಕಾರದಲ್ಲಿ ಅ, ಉ, ಮ ಸಮ್ಮಿಲನವಿದೆ. ಇದನ್ನು ಭಕ್ತನಾದವನು ಇಷ್ಟಲಿಂಗೋಪಾಸನೆಯಲ್ಲಿ ದೃಷ್ಟಿಯನ್ನಿರಿಸಿ; ಲಿಂಗವನ್ನು ಧರಿಸಿಕೊಂಡು, ದೃಷ್ಟಿಲಿಂಗದಲ್ಲಿ ಸ್ಥಿರವಾಗಿ ನಿಲ್ಲಿಸಿ ಹೇಳಬೇಕು.

ಇಂತಹ ಮಂತ್ರವನ್ನು 11–12ನೆಯ ಶತಮಾನದಲ್ಲಿ ಶಿವ–ಶರಣರು ಗುರು–ಶಿಷ್ಯನಿಗೆ ‘ಶಿವದೀಕ್ಷೆ’ಯನ್ನು ಕೊಡುವ ಸಂದರ್ಭದಲ್ಲಿ ಬೋಧಿಸಿರುವರು. ಇದರಿಂದ ಸಂಸ್ಕಾರ ಹೊಂದಿ ದೇಹ–ಆತ್ಮ ಶುದ್ಧೀಕರಣಗೊಂಡು ಭಕ್ತನ ಅಂಗವು ಲಿಂಗವಾಗಿ ಪರಿವರ್ತನೆಯಾಗಲು ನ, ಮ, ಶಿ, ವಾ, ಯ ಎಂಬ ಮಂತ್ರವನ್ನು ಬೋಧಿಸುವರು. ಇದರಿಂದ ಮಾನವ ದೇವಮಾನವನಾಗುವನು, ಇದು ದೀಕ್ಷೆಯಿಂದ ಮೋಕ್ಷದೆಡೆಗೆ ಸಾಗುವ ಸರಳ ಮಾರ್ಗ, ಇದು ಚನ್ನಬಸವಣ್ಣನವರು ಬೋಧಿಸಿದ ಪರತತ್ವ ಲಿಂಗ ಪ್ರಕಾಶ ಸ್ಥಲ, ನವಲಿಂಗ ಪೂಜಾ ವಿಧಾನ ಸ್ಥಲ ಮಂತ್ರಗೋಪ್ಯಗಳ ಸಾರವಾಗಿದೆ.

**ನವಲಿಂಗ ಪೂಜಾ ವಿಧಾನ ಸ್ಥಲ**

**ಬ್ರಹ್ಮಸೂತ್ರವ ಒಲಿದು**
**ವರ್ಮಾದಿ ವರ್ಮದಲಿ,**
**ಕರ್ಮವನು ಹಜಿದು ನಿರ್ಮಾಯನಾದೆನು ॥ ಪ ॥**
**ಅಷ್ಟದಳ ಮಂಟಪದ**
**ಅಷ್ಟಕೋಣೆಗಳೊಳಗೆ**
**ಅಷ್ಟ ಲಿಂಗಾರ್ಚನೆಯು ಅಷ್ಟಪೂಜೆ !**
**ಅಷ್ಟಲಿಂಗಾರ್ಪಿತವು**
**ದೃಷ್ಟಪ್ರಸಾದದಿಂ,**
**ನಿಷ್ಠೆ ನಿಜದಲಿ, ನಿರಂಜನವ ಕಂಡೆ ! ॥ 1 ॥**
**ನವಸೂತ್ರ ಪಟ್ಟಣದ**
**ನವದ್ವಾರ ಬೀದಿಯೊಳು**
**ನವನಾಳ ಬಾಗಿಲಿಗೆ ನವ ಕಳಶವು !**
**ನವಲಿಂಗಸ್ಥಾವರಕೆ**
**ನವಪೂಜೆ, ನವಧೂಪ**
**ನವದೀಪ, ನವಮಂತ್ರ, ನವಜಪ ನಮೋ ! ॥ 2 ॥**
**ಆಱು ನೆಲೆ ಮಂಟಪದ**
**ಮೂಱು ಕೋಣೆಗಳೊಳಗೆ**
**ಬೇಜೊಂದು ಸ್ಥಾನದಲಿ ಲಿಂಗವಿಹುದು !**
**ಆಱು ನೆಲೆಯನು ದಾಂಟಿ,**
**ಮೂಱು ಬಾಗಿಲ ಮುಚ್ಚಿ,**
**ಮೀಱೆ ಕಂಡೆನು ಮಹಾ ಘನಲಿಂಗವ ! ॥ 3 ॥**
**ಆಕಾಶದಾ ಮೇಲೆ**
**ನಿರಂತರ ಸ್ಥಾನದಲಿ**
**ಲೋಕವನು ಹೊದ್ದ ದಾ ಶಿವನಿಳಯವು !**
**ಏಕಾಂತವಾಸದೊಳ–**
**ಗೇಕೀಕರಣ ಪೂಜೆ**
**'ಓಂ'ಕಾರ ಮಂತ್ರದಲಿ, ಗೋಪ್ಯಗೋಪ್ಯಂ ! ॥ 4 ॥**
**ಜಂತ್ರ ಸೂತ್ರದ ತೆಱದಿ । ನಿ–**
**ರಂತರಂ ನಿಜವಿಡಿದು,**
**ಮಂತ್ರಭೇದವನಱೆದು ಸಂತೈಸುತ,**
**ನಿಶ್ಚಿಂತ ನಿರ್ಜಾತ**
**ನಿರ್ವಯಲನೆಯ್ದಿದ ಮ–**
**ಹಂತ – ಕೂಡಲ ಚನ್ನಸಂಗಯ್ಯನು ! ॥ 5 ॥**

ಲೌಕಿಕ ಬದುಕಿನ ವ್ಯವಹಾರಗಳನ್ನು ಬಿಟ್ಟು, ವಿಷಯವನ್ನು ದೃಢೀಕರಿಸಿ, ಜ್ಞಾನವಂತನು, ಧರ್ಮವಂತನು ಆಗಿ ಶುದ್ಧ ಮನಸ್ಸಿನಿಂದ, ಶಾಂತಚಿತ್ತದಿಂದ

ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ಅಂತರಂಗವನ್ನು 'ಪರಮಾತ್ಮ'ನ ಸ್ವರೂಪವಾದ ಲಿಂಗದಲ್ಲಿ ಲೀನಗೊಳಿಸಿಕೊಂಡು, ತನ್ನ ಕರಸ್ಥಲದಲ್ಲಿ ಲಿಂಗವನ್ನಿರಿಸಿ, ಅದನ್ನು 'ಪರಮಾತ್ಮ'ನೆಂದು ತಿಳಿದು ಮಂತ್ರಿಸಬೇಕು. 10 ಚಕ್ರಗಳಾದ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಬ್ರಹ್ಮ, ಶಿಖಾ, ಪಶ್ಚಿಮ, ಅಣು ಚಕ್ರಗಳು ಶಕ್ತಿಕೇಂದ್ರಗಳಾಗಿವೆ. ಅನುಕ್ರಮವಾಗಿ ಆಧಾರದಲ್ಲಿ–ಆಚಾರಲಿಂಗ, ಸ್ವಾಧಿಷ್ಠಾನದಲ್ಲಿ–ಗುರುಲಿಂಗ ಮಣಿಪೂರಕದಲ್ಲಿ–ಶಿವಲಿಂಗ, ಅನಾಹತದಲ್ಲಿ–ಜಂಗಮಲಿಂಗ, ವಿಶುದ್ಧಿಯಲ್ಲಿ–ಪ್ರಸಾದಲಿಂಗ, ಆಜ್ಞೆಯಲ್ಲಿ–ಮಹಾಲಿಂಗ, ಬ್ರಹ್ಮನಲ್ಲಿ–(ಭಾವ) ಪ್ರಾಣಲಿಂಗ, ಶಿಖಾ ಚಕ್ರದಲ್ಲಿ–ಕರ್ಣ(ಇಷ್ಟಲಿಂಗ), ಪಶ್ಚಿಮದಲ್ಲಿ–ಮನ ಅಣುಚಕ್ರದಲ್ಲಿ ಲಿಂಗ; ಈ ರೀತಿಯಾಗಿ ಪೂಜಿಸುತ್ತಾ "ಪ್ರಾಣಲಿಂಗಾರ್ಚನೆ"ಯನ್ನು ಮಾಡುತ್ತಾ, ಲಿಂಗಸುಖದಲ್ಲಿದ್ದಂತಹ ಶರಣನ ನವ(ದಶ) ಚಕ್ರದೊಳಗೆ ಪ್ರಾಣಲಿಂಗವು. ಈ ರೀತಿಯಾಗಿ ಪ್ರಕಾಶಿಸುತ್ತಿರಲು ಆ ನವಲಿಂಗಗಳನ್ನು ಅರ್ಚಿಸುತ್ತಾ ಬೆರೆಸುವುದು ನವ(ದಶ) ಲಿಂಗ ಪೂಜೆ."[2] ಈ ನವಲಿಂಗ ಪೂಜಾ ವಿಧಾನವನ್ನು ಚನ್ನಬಸವಣ್ಣನವರು ಸಿದ್ಧರಾಮನಿಗೆ ಮಂತ್ರದ ಮೂಲಕ ಗೌಪ್ಯವಾಗಿ ಬೋಧಿಸಿರುವರು. ಅದರಲ್ಲಿಯ ವಿಷಯ ವಿವರ–ಸೃಷ್ಟಿಕರ್ತನಿಂದ ಸೃಷ್ಟಿಯಾದ ಈ ಜೀವಜಗತ್ತು ಸದೃಢವಾಗಿ ಸ್ಥಾಪಿತಗೊಂಡಿರುವುದು. ಇಲ್ಲಿ ಜನಿಸಿದ ಜೀವಿಗಳು ತಮ್ಮ ತಮ್ಮ ಕರ್ಮಾದಿಗಳಿಂದ ಹಾಗೂ ಶುದ್ಧ ಕೆಲಸಗಳಿಂದ ಸಾಧನೆ ಗೈಯ್ಯುವವು. ಹಾಗೆಯೇ ಭಕ್ತಿಯ ಸಾಧನೆಯಲ್ಲಿ ಬಯಕೆಯ ಕರ್ಮಗಳು ಹರಿದು ನಿರ್ಮಲವಾಗುವುದು ಮಂತ್ರಗೋಪ್ಯದ ಮೂಲ ಉದ್ದೇಶ.

ಜ್ಞಾನಲಿಂಗಾರ್ಚನೆಯನ್ನು ಮಾಡಿ ಸುಖಿಯಾಗಿ ಸ್ವಾನುಭವದಲ್ಲಿ ತಲ್ಲೀನನಾದವನು, ಭೌತಿಕ ಜಗತ್ತಿನ ಜಾತಿಯ ಭ್ರಾಂತಿಯನ್ನು ಹಾಗೂ ನಾನು–ನನ್ನದು ನೀನು–ನಿನ್ನದು ಎಂಬ ಭ್ರಾಂತಿಯನ್ನು ಬಿಟ್ಟು ಹುಟ್ಟು–ಸಾವುಗಳನ್ನು ಗೆದ್ದು, ಶಿವಜ್ಯೋತಿ ಪ್ರಕಾಶಮಾನವಾಗಿ, ವಿಶ್ವಪ್ರಭೆಯಾಗಿ ಪ್ರಜ್ವಲಿಸುತ್ತಾ ಜ್ಞಾನಜ್ಯೋತಿಯಾಗಿ ಬೆಳಗುವನು. ಆ ಬೆಳಗೇ ಕೂಡಲ–ಚನ್ನಸಂಗಯ್ಯನು. ಅವನೇ ಶಿವಯೋಗಿಯಾಗಿ ಪ್ರಾಣಲಿಂಗ ಪೂಜೆಯಿಂದ, ಸಕಲ ನಿಷ್ಕಲಾತ್ಮಕವಾದ ಪ್ರಣವ ಮೂರ್ತಿಯ ಸಂಯೋಗ ಹೊಂದಿದ ನಂತರ, ಷಡ್‌ಚಕ್ರ–ಷಟ್‌ವಿಧಲಿಂಗ; ಅಷ್ಟಚಕ್ರ–ಅಷ್ಟಲಿಂಗ; ನವಚಕ್ರಗಳ–ನವಲಿಂಗ; ದಶಚಕ್ರಗಳ–ದಶಲಿಂಗ ಪೂಜಾವಿಧಾನದಿಂದ ವಿಶ್ವದ ಎಲ್ಲ ಮಾರ್ಗಗಳ ಮೂಲಕ ಅತ್ಯಂತ ರಹಸ್ಯಮಯವಾದ ಮೂಲ 'ಓಂ'ಕಾರ ಪ್ರಣವವನ್ನು ಆರಾಧಿಸುತ್ತಾ ಸಂಯೋಗಗೊಳಿಸಿಕೊಳ್ಳುವ ವಿಧಾನವನ್ನು "ನವಲಿಂಗ ಪೂಜಾ ವಿಧಾನಸ್ಥಲ"ವೆಂದು; ಮುಂದುವರೆದು, ಶ್ರೀಗುರು ಚನ್ನಬಸವದೇವರು ಸಿದ್ಧರಾಮ ದೇವರಿಗೆ ಬೋಧಿಸಿರುವರು. 'ನವಲಿಂಗ ಪೂಜಾ ವಿಧಾನ ಸ್ಥಲ ಮಂತ್ರಗೋಪ್ಯ. ಪಲ್ಲವಿ– ಅನುಪಲ್ಲವಿಯಿಂದ ಪ್ರಾರಂಭವಾಗಿ ನಾಲ್ಕು ಸಾಲಿನ ಐದು ನುಡಿಗಳಲ್ಲಿದೆ. ಆದಿಪ್ರಾಸದಿಂದ ಕೂಡಿದೆ. ನವಲಿಂಗಪೂಜಾ ವಿಧಾನ ಸ್ಥಲ. ಬ್ರಹ್ಮಸೂತ್ರವ ಒಲಿದು'[3] "ಆಚಾರ, ಗುರು, ಶಿವ, ಜಂಗಮ, ಪ್ರಸಾದ, ಮಹತ್, ನಿಃಕಲ–ನಿಃಶೂನ್ಯ ನಿರಂಜನ"[4] ಇವು ನವಲಿಂಗಗಳಾಗಿವೆ. ಹೃದಯದಲ್ಲಿ ಅಷ್ಟದಳ ಕಮಲವಿದೆ. ಅಲ್ಲಿ ಪ್ರಾಣಲಿಂಗವಿರುತ್ತದೆ. ಅಲ್ಲಿ ಎಂಟು ಕೋಣೆಗಳನ್ನಾಗಿ ಮಾಡಿಕೊಂಡು, ಅಷ್ಟಲಿಂಗಾರ್ಚನೆಗೆ ಅಷ್ಟ ಪೂಜೆ. ಅಂದರೆ ಎಂಟುದಳಗಳಿಗನುಸರಿಸಿ ಹೃದಯದಲ್ಲಿ ಪ್ರಾಣದ ಗುಣಗಳಿರುತ್ತವೆ.

ಅವುಗಳನ್ನು ಲಿಂಗಪೂಜೆಯಿಂದ ಶುದ್ಧೀಕರಿಸಿಕೊಳ್ಳಬೇಕು. ಅಂದಾಗ ಆತ್ಮಕ್ಕೆ ಸಂಸ್ಕಾರ ಉಂಟಾಗುವುದು. ಈ ಅಷ್ಟಲಿಂಗ ಪೂಜೆ ಹಾಗೂ ಜಪವನ್ನು ಕುರಿತು ಅಷ್ಟಲಿಂಗಕ್ಕೆ ಧೈರ್ಯದಿಂದ ಶ್ರೇಷ್ಠ ಪ್ರಸಾದವನ್ನು ಮಾಡಿಸಿ, ನಿಷ್ಠೆಯಿಂದ ಲಿಂಗಜಪ ಅಂದರೆ –

| | | | | | |
|---|---|---|---|---|---|
| 1. | ಪೃಥ್ವಿ | ತತ್ವದ | ಪೂರ್ವ ದಳಕ್ಕೆ | ಜಪ | 5000 |
| 2. | ಅಪ್ಪು | ತತ್ವದ | ವರುಣ ದಳಕ್ಕೆ | ಜಪ | 4000 |
| 3. | ಅಗ್ನಿ | ತತ್ವದ | ಅಗ್ನಿ ದಳಕ್ಕೆ | ಜಪ | 3000 |
| 4. | ವಾಯು | ತತ್ವದ | ವಾಯು ದಳಕ್ಕೆ | ಜಪ | 2000 |
| 5. | ಆಕಾಶ | ತತ್ವದ | ಈಶಾನ್ಯ ದಳಕ್ಕೆ | ಜಪ | 1000 |
| 6. | ಸೂರ್ಯ | ತತ್ವದ | ಯಮ ದಳಕ್ಕೆ | ಜಪ | 2400 |
| 7. | ಚಂದ್ರ | ತತ್ವದ | ನೈರುತ್ಯ ದಳಕ್ಕೆ | ಜಪ | 3200 |
| 8. | ಆತ್ಮ | ತತ್ವದ | ಕುಬೇರ ದಳಕ್ಕೆ | ಜಪ | 1000 |
| | | | | | **216005** |

ಈ ಜಪಗಳನ್ನು ಪಠಿಸುತ್ತಾ ಅಷ್ಟ ಪೂಜೆಯನ್ನು ಮಾಡಿ ಚೈತನ್ಯ ಜ್ಯೋತಿಯಾದ ನಿರಂಜನನ ಕಂಡೆನು. ಹೊಸ ನಿಯಮದಿಂದ ಕೂಡಿದ ದೇಹವೆಂಬ ಪಟ್ಟಣದೊಳಗೆ ಇರುವ 2 ಕಣ್ಣುಗಳು 2 ಕಿವಿಗಳು 2 ಮೂಗಿನ ಹೊಳ್ಳೆಗಳು, ಬಾಯಿ, ಮೂತ್ರದ್ವಾರ, ಗುದದ್ವಾರ–ದೇಹದ ಈ ಒಂಭತ್ತು ಕಳಸ ಪ್ರಾಯವಾಗಿ ಜೀವಚೈತನ್ಯದಿಂದ ಕೂಡಿರುವವು. ಅಲ್ಲಿ ಒಂಭತ್ತು ಲಿಂಗಗಳನ್ನು ಸ್ಥಾಪಿಸಿ, ಆ ನವಲಿಂಗಗಳನ್ನು ಒಂಭತ್ತು ವಿಧದಲ್ಲಿ ಹೊಸ ಒಂಭತ್ತು ಧೂಪ–ದೀಪಗಳ ಮೂಲಕ ಒಂಭತ್ತು ಮಂತ್ರ, ಜಪದಿಂದ ಅರ್ಚಿಸುತ್ತಾ ಬೆರೆಯುತ್ತಾ ನಮೋ ನಮೋ ಎನ್ನುತ್ತಿದ್ದೆನು." ಎಂಬಲ್ಲಿ ಲಿಂಗಸ್ವರೂಪದೆಡೆಗೆ ಮುನ್ನಡೆಸುವುದನ್ನು ಕಾಣುತ್ತೇವೆ. ಏಕಾಂತವಾಗಿ ಏಕೇಶ್ವರನಾದ ಶಿವನನ್ನು 'ಓಂ'ಕಾರ ಮಂತ್ರದಲ್ಲಿ ರಹಸ್ಯವಾಗಿ ತಿಳಿದೂ ತಿಳಿಯದಂತೆ ಗೋಪ್ಯವಾಗಿ ಪೂಜಿಸುವುದೇ ಪೂಜೆ.[6] ಹೀಗೆ ಸೃಷ್ಟಿ–ಸೃಷ್ಟಿಕರ್ತನಾದ ಶಿವನನ್ನು ನಿರಂತರವಾಗಿ 'ಶಿವಶಕ್ತಿ'ಯನ್ನು ತನು–ಮನ–ಧನದಿಂದ ಪೂಜಿಸುತ್ತಾ, ಬೆರೆಸುತ್ತಾ, ಸಂತೈಸುತ್ತಾ ಮಂತ್ರದ ಮಹತ್ವವನ್ನು ತಿಳಿದುಕೊಂಡು, ಸಾಧಕನಾಗಿ, ಶುದ್ಧನಾಗಿ, ನಿಶ್ಚಿಂತೆಯಿಂದ ಸತ್ಯವನ್ನು ಕಂಡುಕೊಂಡು ಶೂನ್ಯನಾದ, ನಿರಾಕಾರ ಮಹಾಂತ ಕೂಡಲ ಚನ್ನಸಂಗನು ಎಂದು ನವಲಿಂಗಗಳ ಪೂಜಾವಿಧಾನವನ್ನು ಮೂಲ 'ಓಂ'ಕಾರ ಮೂರ್ತಿ ಸೃಷ್ಟಿಯ ಲಯವಾದ ಲಿಂಗದ ಆರಾಧನೆಯಿಂದ ಶಿವಾರ್ಪಿತವಾಗುವುದನ್ನು ಸಿದ್ಧರಾಮನಿಗೆ ಚೆನ್ನಬಸವಣ್ಣನವರು ಬೋಧಿಸಿರುವರು. ಶಿವಾನುಭವ'[7] ದಿಂದ ಶಿವಯೋಗಿಯಾಗಿ ತನ್ನನ್ನು ತಾನರಿತು ಜ್ಞಾನಿಯಾಗಿ ಮುಂದೆ ಪರತತ್ವ ಪ್ರಕಾಶ ಹೊಂದುವುದನ್ನು ಹೇಳಿರುವರು; ಅದೇ "ಪರತತ್ವಲಿಂಗ ಪ್ರಕಾಶ ಸ್ಥಲ."

**ಪರತತ್ವ ಲಿಂಗ ಪ್ರಕಾಶ ಸ್ಥಲ:**

**ಪುಷ್ಪ ಪರಿಮಳ ನುಂಗಿ**
**ನಿಷ್ಪತಿಯು ಕರಿಗೊಂಡು**
**ಕರ್ಪುರವನಪ್ಪಿದುರಿಯಂತಾದೆನು! ॥ ಪ ॥**

**ಬಯಲು ಭಾನುವ ನುಂಗಿ**
**ನಿಲವು ನೆಳಲನೆ ನುಂಗಿ**
**ಛಳಿಗಾಳಿ – ಬಿಸಿಲ ನುಂಗಿದ ತೆಜಿದೊಳು**
**ಮಳೆಮೋಡವನು ಮಿಂಚು**
**ನುಂಗಿದಂದದೊಳಿಪ್ಪ**
**ಥಳಥಳನೆ ಹೊಳೆವುತಿಹ ವಜ್ರದಂತೆ ! ॥ 1 ॥**
**ಶಶಿ ಸಾಗರವ ನುಂಗಿ**
**ಶಿಶು ಗರ್ಭವನು ನುಂಗಿ**
**ಪಶು ಬಸವನ ನುಂಗಿದಾ ತೆಜಿನೊಳು,**
**ಮಸೆದ ಕೂರಲಗು ಮೊನೆ**
**ವಜ್ರದಂದದೊಳಿಪ್ಪ,**
**ಪಸರಿಸಿತು ಶಿವಲಿಂಗ ಹೃದಯದೊಳಗೆ ! ॥ 2 ॥**
**ಅಪ್ಪು ಅಗ್ನಿಯ ನುಂಗಿ**
**ಅಪ್ಪು ಉದಕವ ನುಂಗಿ**
**ಹೆಪ್ಪು ತುಪ್ಪವ ನುಂಗಿದಾ ತೆಜಿನೊಳು,**
**ಕಪ್ಪು ಕಣ್ಣನೆ ನುಂಗಿ**
**ಒಪ್ಪ ಚಿತ್ರವ ನುಂಗಿ**
**ಅಪ್ಪಿ ಅಗಲದೆಯಿಪ್ಪ ನಿಜವು ತಾನೆ ! ॥ 3 ॥**
**ಧ್ಯಾನ ಮೌನವ ನುಂಗಿ**
**ಮೌನ ಮುಗ್ಧವ ನುಂಗಿ**
**ನೇಮ ನಿತ್ಯವ ನುಂಗಿದಾ ತೆಜಿನೊಳು,**
**ಕಾಮ ಕರಣವ ನುಂಗಿ**
**ನಾಮ ಸೀಮೆಯ ನುಂಗಿ**
**ಆ ಮಹಾಘನಲಿಂಗವಾದ ಶರಣ ! ॥ 4 ॥**
**ಬೆಳಗು ಒಳಗನೆ ನುಂಗಿ**
**ಒಳಗು ಬೆಳಗನೆ ನುಂಗಿ**
**ಛಳಿಮೋಹರವ ಮಂಜು ನುಂಗಿದಂತೆ,**
**ಹೊಳೆವ ದೀಪವ ಬಯಲ**
**ಗಾಳಿ ನುಂಗಿದ ತೆಜಿದಿ**
**ಕಳೆಯಳಿದ ಕೂಡಲ ಚೆನ್ನಸಂಗಯ್ಯನು! ॥ 5 ॥**

ಶ್ರೇಷ್ಠವಾದ ಪರಮಾರ್ಥ ಸ್ವರೂಪವುಳ್ಳ ಪರಮಾತ್ಮನನ್ನು ಕುರಿತು ಚನ್ನಬಸವಣ್ಣನವರು ಸಿದ್ಧರಾಮನಿಗೆ ಈ ರೀತಿಯಾಗಿ ಹೇಳಿರುವರು. ಪರತತ್ವಲಿಂಗವೆಂಬುದು ದೇವರ ನಿದರ್ಶನವಾಗಿದೆ. ಪರಮಾತ್ಮನು ಯಾವ ರೂಪದಲ್ಲಾದರೂ ಪ್ರಕಟವಾಗಬಹುದು. ಆದರೆ, ಹಿಂದೂ ಧರ್ಮೀಯರಲ್ಲಿ ಪರಮಾತ್ಮ 'ಶೂನ್ಯ ಅಥವಾ ನಿರ್ವಿಕಾರಿ–ನಿರ್ವಯಲಾಗಿದ್ದಾನೆ. ಶರಣರೂ ಕೂಡಾ ಪರಮಾತ್ಮ ಲಿಂಗಸ್ವರೂಪಿ, ಚೈತನ್ಯಮೂರ್ತಿ, ಆಕಾರ ರಹಿತನಾಗಿರುವನು ಎಂದು ಹೇಳಿದ್ದಾರೆ. ಶಿವನ ಶಕ್ತಿ ಹೃದಯ ಕಮಲದಲ್ಲಿ ನೆಲೆಸಿರುವುದರಿಂದ ಜೀವಾತ್ಮನು ಜೀವಂತವಾಗಿ

ಚೈತನ್ಯದಿಂದ ಕ್ರಿಯಾ–ಕರ್ಮಗಳಲ್ಲಿ ತೊಡಗಿರುವನು. ಪರವಸ್ತುಗಳಲ್ಲಿ ಚೈತನ್ಯ ಶಕ್ತಿ ಗುರುತಿಸಿ ಅಲ್ಲಿ ಪರಮಾತ್ಮ ಇರುವನು–ಎಂದು ಜಗತ್ತಿನಲ್ಲಿ "ಕಾಣುವಂತಹ ಒಂದು ಬಗೆಯ ವಸ್ತುವಲ್ಲ ಎಂಬುದನ್ನು ತಿಳುಹಲಿಕ್ಕೆ ಪರವಸ್ತು ಎಂದು; ಮತ್ತು ಅವನು ಮಾಯಾರಹಿತನೆಂದು ಹೇಳಲು ನಿಜ ಘನ, ಆನು, ಸ್ಥಲ–ಮುಂತಾದ ಶಬ್ದಗಳನ್ನು ಉಪಯೋಗಿಸಿರುವರು. ಜಗತ್ತಿನ ವ್ಯಾಪಾರಗಳೆಲ್ಲ ಅಂತರ್ಭೂತವಾಗಿ ನಡೆಸುತ್ತಿದೆಯೋ ಮತ್ತು ಪ್ರೇರೇಪಿಸುತ್ತದೋ ಅದೇ ತತ್ವ"[9] ತತ್ವದಿಂದಲೇ ಜಗತ್ತು ಕ್ರಮಿಸುತ್ತಿದೆ. ಶರಣರು ಇದನ್ನು ಲಿಂಗರೂಪದಲ್ಲಿ ಕಂಡುಕೊಂಡಿರುವರು ಚೆನ್ನಬಸವಣ್ಣನವರು ಪರತತ್ವಲಿಂಗವೆಂದು ಹೇಳಿ ಅದರ ತಿಳಿವನ್ನು ಇಲ್ಲಿ ನೀಡಿರುವರು. ಲಿಂಗಸ್ವರೂಪಿಯಾದ ಶಿವನಲ್ಲಿ ಹೂವಿನಲ್ಲಿರುವ ಸಮರಸಗೊಂಡಿರುವ ಪರಿಮಳದ ಸುವಾಸನೆಯಂತೆ ಹಾಗೂ ಸುಟ್ಟ ಕರ್ಪೂರದ ವಾಸನೆಯಂತಾದೆನು ಎನ್ನುವರು. ಭ್ರಮರವು ಪುಷ್ಪಗಳ ಪರಿಮಳವನುಂಡು, ಅಲ್ಲಿಯೇ ನಿರ್ಲೇಪವಾಗಿದ್ದು ಹೋಗುವಂತೆ ಅಂಗದಲಿದ್ದು ಲಿಂಗದ ಸಮರಸಾನಂದವನ್ನು ಸುಖಿಸಿ, ಪುಣ್ಯ–ಪಾಪಾದಿ ಸಕಲ ಪ್ರಪಂಚಗಳಲ್ಲಿ ಬೆರೆಯದೆ, ಲಿಂಗಾಂಗ ಸಾಮರಸ್ಯವನ್ನು ಅಳವಡಿಸಿಕೊಂಡಿರುವ ಶಿವಯೋಗಿ ಚನ್ನಬಸವದೇವನು ಪರಶಿವಲಿಂಗದ ಪಾದಾರವಿಂದದಲ್ಲಿ ಸೇರಿರುವನು.

ಆಕಾಶವು ಸಕಲ ಶೂನ್ಯ ಜಗತ್ತನ್ನು ತನ್ನಲ್ಲಿರಿಸಿಕೊಂಡಂತೆ ಆಕಾರ ಸ್ವರೂಪವಾದ ಸ್ಥಿತಿಯನ್ನು ಕತ್ತಲೆಯ ಅಂಧಕಾರ ನುಂಗಿ, ಚಳಿ–ಗಾಳಿಯು ಬಿಸಿಲನ್ನು ನುಂಗಿದಂತೆ, ಮಳೆಯ ಮೋಡಗಳು ಮಿಂಚಿನೊಂದಿಗೆ ಪ್ರಕಾಶಮಾನವಾಗಿ ಥಳ–ಥಳನೆ ಹೊಳೆಯುತ್ತವೆ. ವಜ್ರದಂತೆ ಬೆಳಕಿನೊಂದಿಗೆ ಮಳೆಯ ನೀರು ಧರೆಗಪ್ಪಳಿಸಿ ಸಾಗರವ ತುಂಬಿತು. ಆ ಸಾಗರವನ್ನು ಶಶಿ(ಚಂದ್ರ)ಯು ಆವರಿಸುವಂತೆ, ಮಗುವು ತಾಯಿಯ ಗರ್ಭದಲ್ಲಿರುವಂತೆ, ಹಸುವು ಬಸವನನ್ನು ನುಂಗಿ ಆವರಿಸಿಕೊಂಡಂತೆ, ಮಸೆದ ಹರಿತವಾದ ಆಯುಧಗಳ ಅಂಚಿನಂತೆ, ಹೊಳೆಯುವ ಹೊಳಪು ವಜ್ರದಲ್ಲಿ ಹರಡಿರುವಂತೆಯೇ ಇವು ಒಂದರೊಳಗೊಂದು ಅವಿನಾಭಾವ ಸಂಬಂಧ ಪಡೆದಿರುವ ಹಾಗೆ ಹೃದಯದೊಳಗೆ ಶಿವಲಿಂಗವು ಅವಿನಾಭಾವ ಸಂಬಂಧ ಹೊಂದಿರುವುದು. ನೀರಿನಲ್ಲಿ ಬೆಂಕಿ ಇರುವಂತೆ, ಉಪ್ಪಿನಲ್ಲಿ ನೀರು ಅಡಗಿರುವಂತೆ, ಹೆಪ್ಪಿನಲ್ಲಿರುವ ತುಪ್ಪದಂತೆ, ಒಂದರೊಳಗೊಂದು ನುಂಗಿಕೊಂಡಿರುವಂತೆ, ಕತ್ತಲನ್ನು ಕಣ್ಣು ನುಂಗಿಕೊಂಡು ದೃಷ್ಟಿಹರಿಸಿ ಮನಸ್ಸು ಸುಂದರವಾದ ಚಿತ್ರದಲ್ಲಿ ಕರಗಿರುವಂತೆ, ಶರಣನು ಮಹಾಘನಲಿಂಗದಲ್ಲಿ ಸೇರಿ ಕರಗಿರುವನು. ಪ್ರಕಾಶಿಸುವ ಅರಿವನ್ನು ರಹಸ್ಯದಿಂದ ಮನಸ್ಸಿನೊಳು ನುಂಗಿಕೊಂಡಿರುವಂತೆ, ಮನಸ್ಸು ಪ್ರಕಾಶವನ್ನು ನುಂಗಿರುವಂತೆ ಒಂದರೊಳಗೊಂದು ಇರುವ ಹಾಗೆ ಮಂಜಿನ ಹನಿಯಲ್ಲಿ ಚಳಿಯ ಗುರುತಿರುವಂತೆ, ಹೊಳೆಯುವ ದೀಪವನ್ನು ಬಯಲಲ್ಲಿ ಬೀಸುವ ಗಾಳಿ ನುಂಗಿದಂತೆ, ಗಾಳಿಯಿಂದ ಜ್ಯೋತಿ ನಂದುವಂತೆ, ಲಿಂಗವಗಲಿದ ಶರಣ ಕಾಂತಿಗುಂದುವನು. ಕೂಡಲ ಚನ್ನಸಂಗಯ್ಯನು ಲಿಂಗದೊಳೊಂದಾಗಿ ನೀರಿನಲ್ಲಿರುವ ಬೆಂಕಿಯಂತೆ, ಪುಷ್ಪದಲ್ಲಿರುವ ಪರಿಮಳದಂತೆ, ಶರಣನು ಲಿಂಗ ಸಂಯೋಗಿಯಾಗಿರುವನು. ಇದೇ ಪರಮಾನಂದ ಪರಬ್ರಹ್ಮವಾಗುವ ಪರತತ್ವ. ತನ್ನನ್ನು ತೋರಿ ತನ್ನನ್ನು ತಾನೇ ತಿಳಿದುಕೊಂಡು, ತನ್ನಲ್ಲಿ ಅಡಗಿರುವ ಶಿವತ್ವವನ್ನು ತಾನೇ ತಿಳಿದುಕೊಂಡು ಪರಬ್ರಹ್ಮವಾಗಿ ತೋರುವನು ಎಂದು ಈ ಮಂತ್ರಗಳನ್ನು ಬೋಧಿಸಿರುವರು.

**ಅಡಿ ಟಿಪ್ಪಣಿಗಳು**

1. ಡಾ. ಸಂಗಮೇಶ ಸವದತ್ತಿಮಠ, ವರ್ಣನಾತ್ಮಕ ವಚನಪದಕೋಶ, ಪುಟ 199, ರೂಪರಶ್ಮಿ ಪ್ರಕಾಶನ, ಧಾರವಾಡ. ಮು. 2009.
2. ಡಾ. ಎಲ್. ಬಸವರಾಜು ಸಂ. ಶಿವದಾಸ ಗೀತಾಂಜಲಿ, ಪುಟ 327–328 ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ಮು. 1990.
3. ಫ.ಗು.ಹಳಕಟ್ಟಿ, ಶಿವಾನುಭವ ಶಬ್ದಕೋಶ–ಪುಟ 197 ಹೆಚ್ಚಿನ ವಿವರಣೆಗಾಗಿ ಡಾ. ಎಸ್.ವ್ಹಿ. ಅಯ್ಯನಗೌಡ ಅವರ–"ಮೈಲಾರ ಬಸವಲಿಂಗ ಶರಣರ ಜೀವನ ಹಾಗೂ ಸಮಗ್ರ ಸಾಹಿತ್ಯ ಕೃತಿಗಳ ದರ್ಶನ" ಮಹಾ ಪ್ರಬಂಧದ "ಲಿಂಗಪೂಜಾ ವಿಧಾನ" ಕೃತಿಯ ವಿಮರ್ಶೆ ನೋಡಿರಿ.
4. ಚೆನ್ನಬಸವಣ್ಣನವರ – ಪದ ಮಂತ್ರಗೋಪ್ಯ
5. ಡಾ. ಫ.ಗು. ಹಳಕಟ್ಟಿ ಸಂ. ಶಿವಾನುಭವ ಶಬ್ದಕೋಶ, ಪುಟ 191. ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ಮು. 1964.
6. ಡಾ. ಫ.ಗು.ಹಳಕಟ್ಟಿ ಸಂ. ಶಿವಾನುಭವ ಶಬ್ದಕೋಶ, ಪುಟ 167. ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ಮು. 1964.
7. ಡಾ. ಎಸ್.ವ್ಹಿ. ಅಯ್ಯನಗೌಡ್ರ ಅವರು 'ಪೂಜೆ' ಅಥವಾ 'ಪೂಜಿ' ಅಂದರೆ 'ಶೂನ್ಯ' ಅಂದರೆ ಶೂನ್ಯ='0' 0=ಪರಿಪೂರ್ಣತೆ, ಪರಿಪೂರ್ಣತೆ ಹೊಂದಲು, ಪೂಜಿ ಆಗಲು ನಾವು, 'ಪೂಜೆ' ಮಾಡಬೇಕೆನ್ನುವರು, ನೋಡಿ ಡಾ. ಶೇಖರ ಪೂಜಾರ ಅವರ ಅಭಿನಂದನಾ ಗ್ರಂಥ.
8. ಡಾ. ಎಲ್. ಬಸವರಾಜು ಸಂ. ಶಿವದಾಸ ಗೀತಾಂಜಲಿ, ಪುಟ 328–329 ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ಮು. 1990
9. ಡಾ. ಫ.ಗು.ಹಳಕಟ್ಟಿ ಸಂ. ಶಿವಾನುಭವ ಶಬ್ದಕೋಶ, ಪುಟ 11. ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗ, ಮು. 1964.

**ಆಕರ ಗ್ರಂಥಗಳು**


1. ಡಾ.ಫ.ಗು. ಹಳಕಟ್ಟಿ ಸಂ. ವಚನಶಾಸ್ತ್ರ ಸಾರ ಭಾಗ–2, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ– ಮು–1982
2. ಡಾ. ಬಿ.ವಿ. ಶಿರೂರ ಸಂ. ಗೌರವ ಅಭಿನಂದನಾ ಗ್ರಂಥ, ವೀರಶೈವ ಅಧ್ಯಯನ ಸಂಸ್ಥೆ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಮು. 1986
3. ಡಾ. ಎಂ.ಎಂ ಕಲ್ಬುರ್ಗಿ ಸಂ. ಬಿ.ಆರ್.ಹಿರೇಮಠ ಹಾಗೂ ಇತರರು, ಕನ್ನಡ ಹಸ್ತಪ್ರತಿ ಸೂಚಿ, ಕ.ವಿ.ವಿ. ಧಾರವಾಡ.
4. ಪ್ರ. ಸಂ. ಡಾ. ಎಂ.ಎಂ.ಕಲ್ಬುರ್ಗಿ ಸಂ.ಡಾ.ಬಿ.ಆರ್.ಹಿರೇಮಠ, ಕನ್ನಡ ಅಧ್ಯಯನ ಪೀಠ ಹಸ್ತ ಪ್ರತಿಸೂಚಿ ಕ.ವಿ.ವಿ. ಧಾರವಾಡ.
5. ಶಿವಯೋಗ ಪ್ರದೀಪಿಕೆ, ಎಸ್. ಕೆ. ಪಿ ಪ್ರೆಸ್, ಮೈಸೂರು, 1913
6. ಡಾ. ಎಲ್. ಬಸವರಾಜು ಸಂ. ಶಿವದಾಸ ಗೀತಾಂಜಲಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು 1990.


❖❖❖

# ವಿಷ್ಣುಪುರಾಣ ಮತ್ತು ಮತ್ಸ್ಯ ಪುರಾಣಗಳಲ್ಲಿ ಕಂಡು ಬಂದಿರುವಂತೆ ಶಿಕ್ಷಣ ವ್ಯವಸ್ಥೆ

**ರಹಿಮಾನ್ ಸಾಬ್ ಎಲ್.**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ
ಬೆಂಗಳೂರು ವಿಶ್ವ ವಿದ್ಯಾಲಯ ಬೆಂಗಳೂರು

ವಿಷ್ಣು ಪುರಾಣವು ಕೇವಲ ವಿಷ್ಣುವಿನ ಬಗ್ಗೆ ಅವನ ಮಹಿಮಾವಳಿಗಳ ಬಗ್ಗೆ ವಿವರಿಸುವ ಕೃತಿಯಾಗಿರದೇ ಆ ಕೃತಿಯು ರಚನೆಯಾದ ಕಾಲಘಟ್ಟದಲ್ಲಿ ಇದ್ದಂತಹ ರಾಜಾಡಳಿತ, ಶಿಕ್ಷಣಪದ್ಧತಿ, ಶಿಕ್ಷಾ ಪದ್ಧತಿ, ರಾಜನೀತಿ, ಜ್ಞಾನ ಶಾಖೆಗಳ ಬಗೆಗಳು, ಅಂದಿನ ಸಾಮಾಜಿಕ ಜೀವನ, ಧರ್ಮ, ಸ್ತ್ರೀಯರ ಸ್ಥಾನಮಾನ, ಜಾತಿಪದ್ಧತಿ ಮುಂತಾದವುಗಳ ಕುರಿತು ಬೆಳಕು ಚೆಲ್ಲುತ್ತದೆ. ಈ ಲೇಖನದಲ್ಲಿ ಪ್ರಮುಖವಾಗಿ ಅಂದಿನ ಕಾಲದಲ್ಲಿ ಇದ್ದಂತಹ ಶಿಕ್ಷಣ ಪದ್ಧತಿ ಹಾಗೂ ಗುರು-ಶಿಷ್ಯರ ಸಂಬಂಧ, ಕರ್ತವ್ಯವನ್ನು ಪಾಲಿಸದ, ದ್ರೋಹವನ್ನೆಸಗಿದ ಗುರು ಮತ್ತು ಶಿಷ್ಯರಿಬ್ಬರಿಗೂ ನೀಡಲಾಗುತ್ತಿದ್ದ ಶಿಕ್ಷೆಗಳ ಕುರಿತು ಸ್ಪಷ್ಟವಾದ ನಿದರ್ಶನಗಳೊಂದಿಗೆ ವಿಶ್ಲೇಷಿಸಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಉಪನಯನದ ತರುವಾಯ ವಿದ್ಯಾರ್ಥಿಯು ತನ್ನ ಗುರುವಿನ ಮನೆಯಲ್ಲಿ ನೆಲಸಿ ಅಧ್ಯಯನ ಮಾಡಬೇಕು. ಸಂಯಮದ ಜೀವನ ನಡೆಸುತ್ತಾ ಶುದ್ಧ ಮನಸ್ಸಿನಿಂದ ವೇದಾಧ್ಯಯನ ಕೈಗೊಳ್ಳಬೇಕು. ಮುಂಜಾನೆ ಮತ್ತು ಸಂಜೆ ಅಗ್ನಿ ಮತ್ತು ಸೂರ್ಯರನ್ನು ಆರಾಧಿಸಬೇಕು. ನಂತರತನ್ನ ಗುರುಗಳಿಗೆ ನಮಸ್ಕರಿಸಬೇಕು. ಅವನ ಗುರು ನಿಂತಾಗ ನಿಲ್ಲಬೇಕು. ನಡೆಯುವಾಗ ನಡೆಯಬೇಕು. ಕುಳಿತುಕೊಂಡಾಗ ಕೆಳಗೆ ಕುಳಿತುಕೊಳ್ಳಬೇಕು. ತನ್ನ ಗುರುವಿನ ಅನುಮತಿ ಪಡೆದು ಭಿಕ್ಷೆ ಬೇಡಬೇಕು. ಹೀಗೆ ಸಂಗ್ರಹಿಸಿದ ಆಹಾರವನ್ನು ಸೇವಿಸಬೇಕು. ಹಾಗೆಯೇ ಗುರುಗಳಿಗೆ ಬೇಕಾದ ಉರುವಲು, ನೀರು, ಇತರೇ ವಸ್ತುಗಳನ್ನು ಸಂಗ್ರಹಿಸಿ ತರಬೇಕು. ಹೀಗೆ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ತನ್ನಗುರುವಿನಿಂದ ಮುಕ್ತಿ ಪಡೆದು ಗೃಹಸ್ಥಾಶ್ರಮಕ್ಕೆ ಪ್ರವೇಶಿಸಬಹುದಾಗಿತ್ತು.[1]

ವಿಷ್ಣು ಪುರಾಣದ ಹದಿನೇಳನೆಯ ಭಾಗದಲ್ಲಿ ಮೈತ್ರೇಯನು ಪರಾಶರನಿಗೆ ವಿವರಿಸಿದ ಒಂದು ಕತೆಯಲ್ಲಿ ಹಿರಣ್ಯಕಶ್ಯಪನ ಮಗನಾದ ಪ್ರಹ್ಲಾದನನ್ನು ವಿದ್ಯೆ ಕಲಿಸುವ ಗುರುವಿನ ಮನೆಗೆ ಕಳುಹಿಸಲಾಗುತ್ತದೆ. ಆ ಗುರುವಿನಂದ ಪ್ರಹ್ಲಾದನು ಹಿರಣ್ಯಕಶ್ಯಪನ ಶತ್ರುವಾದ ವಿಷ್ಣುವಿನ ಬಗ್ಗೆ ಅಧ್ಯಯನ ಮಾಡಿರುತ್ತಾನೆ.[2] ಹಾಗೆಯೇ ಪ್ರಹ್ಲಾದನು ಮತ್ತೊಬ್ಬ ಗುರುವಿನ ಬಳಿಗೆ ವಿದ್ಯೆ ಕಲಿಯಲು ಹೋದಾಗ ಅಲ್ಲಿದ್ದ 'ಉಷನಸ್' ಎನ್ನುವ ಗುರುವು ಚರ್ಕವರ್ತಿಗೆ ಬೇಕಾದ ರಾಜನೀತಿಯನ್ನು ಪ್ರತಿದಿನ ಕಲಿಸುತ್ತಾನೆ. ಹಾಗೆಯೇ ಇಲ್ಲಿ ಗುರು ಉಷನಸ್‌ನು ರಾಜನು ತನ್ನ ಶತ್ರು ಮತ್ತು ಮಿತ್ರರೊಡನೆ ಅನುಸರಿಸಬೇಕಾದ ನಿಯಮಗಳನ್ನು ಮಂತ್ರಿಗಳೊಂದಿಗೆ ರಾಜನ ವರ್ತನೆ ಅಧಿಕಾರಿಗಳ ಜೊತೆಗೆ ರಾಜನು ಯಾವ ರೀತಿ ವ್ಯವಹರಿಸಬೇಕೆನ್ನುವುದರ ಬಗ್ಗೆ ಬೋಧಿಸುತ್ತಿದ್ದನು.

ಹಾಗೆಯೇ ರಾಜನು ಯಾರೊಂದಿಗೆ ಯುದ್ಧ ಮಾಡಬೇಕು, ಯಾರೊಂದಿಗೆ ಮೈತ್ರಿ ಮಾಡಿಕೊಳ್ಳಬೇಕು, ಯಾವ ರೀತಿಯ ಕೋಟೆಗಳನ್ನು ನಿರ್ಮಿಸಬೇಕು, ಬುಡಕಟ್ಟು

ಜನಾಂಗವನ್ನು ಯಾವ ರೀತಿ ಅಧೀನಗೊಳಿಸಿಕೊಳ್ಳಬೇಕು ಇಂತಹ ಹಲವು ಅಂಶಗಳನ್ನು ರಾಜ ನೀತಿಯು ಒಳಗೊಂಡಿತ್ತು. ವಿಷ್ಣು ಪುರಾಣದಲ್ಲಿಯೇ ವಿವರಿಸಿರುವಂತೆ ವಿದ್ಯಾರ್ಥಿಯಾದವನ ನೈತಿಕ ನಡವಳಿಕೆಯು ಅತ್ಯಂತ ಶ್ರೇಷ್ಠವಾಗಿರಬೇಕು. ತನ್ನ ಗುರುವಿನ ಪತ್ನಿಯೊಂದಿಗೆ ವ್ಯಭಿಚಾರ ಮಾಡುವವನು 'ತಪ್ತ ಕುಂಭ' ನರಕಕ್ಕೆ ಕಳುಹಿಸಲ್ಪಡುತ್ತಾನೆ.[3] ಹಾಗೆಯೇ ಯಾರು ಗುರುವನ್ನು ಹಾಗೂ ಆತನ ಅರ್ಧಾಂಗಿಯನ್ನು ಗೌರವಿಸುವುದಿಲ್ಲವೋ ಅವನನ್ನು ಮತ್ತು ವೇದಗಳನ್ನು ನಿಂದಿಸುವವನು 'ಲವಣ' ನರಕಕ್ಕೆ ಕಳುಹಿಸಲ್ಪಡುತ್ತಾನೆ.[4] ಹಾಗೆಯೇ ಹಗಲಿನಲ್ಲಿ ಮಲಗುವ ಹಾಗೂ ಅಪವಿತ್ರನಾದ ವಿದ್ಯಾರ್ಥಿಯನ್ನು 'ಶ್ವಭೋಜನ' ಎಂದು ಕರೆಯುತ್ತಿದ್ದರು.[5]

ವಿದ್ಯಾರ್ಥಿಯ ಶಿಕ್ಷಣ ಮುಗಿದ ನಂತರ ವಿದ್ಯಾರ್ಥಿಗೆ ಇನ್ನೂ ಹೆಚ್ಚಿನ ಆಧುನಿಕ ಜ್ಞಾನವನ್ನು ನೀಡುವ ಸಲುವಾಗಿ ಗುರುವು ಶಿಷ್ಯನ ಮನೆಗೆ ಹೋಗುತ್ತಿದ್ದನು. ವಿಷ್ಣು ಪುರಾಣದಲ್ಲಿ ಬರುವ 'ಋಭು' ಎಂಬ ಗುರುವು 'ನಿದಾಘ' ಎಂಬ ಶಿಷ್ಯನ ಮನೆಗೆ ಹೀಗೆ ಹಲವು ಬಾರಿ ಭೇಟಿ ನೀಡುತ್ತಾನೆ. ಅಂತಹ ಸಂದರ್ಭದಲ್ಲಿ ಗುರುವು ಅಘನ್ಯವನ್ನು ಸ್ವೀಕರಿಸಿ ಶಿಷ್ಯನ ಮನೆಯಲ್ಲಿಯೇ ಭೋಜನವನ್ನು ಸ್ವೀಕರಿಸಿ ನಂತರ ಅವನಿಗೆ ಉನ್ನತ ಜ್ಞಾನವನ್ನು ಬೋಧಿಸುತ್ತಾನೆ.[6] ಹೀಗೆ ಗುರುಶಿಷ್ಯರ ಸಂಬಂಧ ಗುರುಕುಲ ಜೀವನದ ನಂತರವೂ ಮುಂದುವರೆಯುತ್ತಿತ್ತು. ಹಾಗೆಯೇ ಹೊಸ ಜ್ಞಾನವನ್ನು ವಿದ್ಯಾರ್ಥಿಯು ಪಡೆಯಲು ಇದರಿಂದ ಅನುಕೂಲವಾಗುತ್ತಿತ್ತು.

ಹಾಗೆಯೇ ಗುರುವಿನ ಆದೇಶವನ್ನು ಮೀರಿದ ಶಿಷ್ಯನಿಗೆ ಶಿಕ್ಷೆ ವಿಧಿಸಲಾಗುತ್ತಿತ್ತು. ಇದೇ ರೀತಿ ಯಾಜ್ಞವಲ್ಕ್ಯನು ತನ್ನ ಗುರುವಾದ ವೈಶಾಂಪಾಯನನಿಂದ ಶಿಕ್ಷೆಗೆ ಒಳಗಾಗಿದ್ದನು.[7] ಹಾಗೂ ಆ ಶಿಕ್ಷೆಯನ್ನು ಯಾವುದೇ ಕೋಪ ಮತ್ತು ಬೇಸರವಿಲ್ಲದೆ ಅವನು ಅನುಭವಿಸಿದನು.

ವಿಷ್ಣು ಪುರಾಣವು ಅಂದು ಕಲಿಸಲಾಗುತ್ತಿದ್ದ 18 ಜ್ಞಾನಗಳನ್ನು ಪಟ್ಟಿ ಮಾಡಿದೆ. ಅವುಗಳೆಂದರೆ 4 ವೇದಗಳು, 6 ಅಂಗಗಳು. ಮೀಮಾಂಸ, ನ್ಯಾಯಶಾಸ್ತ್ರ, ಪುರಾಣ, ಧರ್ಮಶಾಸ್ತ್ರ, ಗಾಂಧರ್ವವೇದ, ಆಯುರ್ವೇದ, ಧನುರ್ವೇದ, ಅರ್ಥಶಾಸ್ತ್ರ.[8]

ಬ್ರಾಹ್ಮಣರು ವೇದಾಧ್ಯಯನಕ್ಕಾಗಿ ಮತ್ತು ಪವಿತ್ರ ಸ್ಥಳಗಳನ್ನು ದರ್ಶಿಸುವ ಸಲುವಾಗಿ ಇಡೀ ಭೂಮಿಯಾದ್ಯಂತ ಸಂಚರಿಸಬೇಕು.[9] ಹೀಗೆ ಶಿಕ್ಷಣವನ್ನು ಪಡೆದುಕೊಂಡ ವ್ಯಕ್ತಿಯು ಗುರುಗಳಿಗೆ ಗುರುದಕ್ಷಿಣೆ ನೀಡಿ ತನ್ನ ಕುಟುಂಬಕ್ಕೆ ಹಿಂತಿರುಗಿ ವಿವಾಹವಾಗಿ ಗೃಹಸ್ಥಾಶ್ರಮಕ್ಕೆ ಪ್ರವೇಶಿಸಬೇಕು. ಒಂದು ವೇಳೆ ವಿದ್ಯಾಭ್ಯಾಸ ಮುಂದುವರೆಸಲು ಇಚ್ಛಿಸುವ ವಿದ್ಯಾರ್ಥಿಯು ಪ್ರತಿಜ್ಞೆ ಸ್ವೀಕರಿಸಿ ತನ್ನ ಗುರು ಮತ್ತು ಆತನ ವಂಶಸ್ಥರ ಸೇವೆಯಲ್ಲಿ ತೊಡಗಬೇಕು.[10] ವಿಷ್ಣುಪುರಾಣವು ಗೃಹಸ್ಥನ ಕರ್ತವ್ಯಗಳನ್ನು ವಿವರಿಸುವ ಸಂದರ್ಭದಲ್ಲಿ ಗೃಹಸ್ಥನಾದವನು ವೇದಗಳಲ್ಲಿ ಪಾರಂಗತನಾದ ಬ್ರಾಹ್ಮಣನಿಗೆ ನಾಲ್ಕು ಹಿಡಿ ಆಹಾರವನ್ನು ಪ್ರತ್ಯೇಕಿಸಿ ನೀಡಬೇಕೆಂದು ತಿಳಿಸಿದೆ. ಹಾಗೆಯೇ ಧಾರ್ಮಿಕ ವಿದ್ಯಾರ್ಥಿಗೆ ಉಡುಗೊರೆಗಳನ್ನು ನೀಡಬಹುದು ಎಂದು ವಿವರಿಸಿದೆ.[11] ಕೃಷಿ, ವಾಣಿಜ್ಯ ಮತ್ತು ಪಶುಪಾಲನೆ ಈ ಮೂರು ವಿಷಯಗಳನ್ನು ಪ್ರಾಯೋಗಿಕ ವಿಜ್ಞಾನವೆಂದು ಪರಿಗಣಿಸಲಾಗಿತ್ತು.[12]

ಕೃಷ್ಣ ಮತ್ತು ಬಲರಾಮರು ಅವಂತಿಯಲ್ಲಿ ನೆಲೆಸಿದ್ದ 'ಸಾಂದೀಪನಿ' ಎಂಬ ಗುರುವಿನ ಬಳಿಗೆ ವಿದ್ಯಾಭ್ಯಾಸಕ್ಕಾಗಿ ಹೋದರು. ಅಂದರೆ ವಿದ್ಯೆ ಕಲಿಯಲು ದೂರದ

ಸ್ಥಳಗಳಿಗೆ ಹೋಗುವ ಪದ್ಧತಿ ಅಂದಿನ ಕಾಲಘಟ್ಟದಲ್ಲಿತ್ತು. ಕೃಷ್ಣ ಮತ್ತು ಬಲರಾಮರು ಸಾಂದೀಪನಿಯಿಂದ ಶಸ್ತ್ರಾಸ್ತ್ರ ವಿದ್ಯೆಯನ್ನು ಕಲಿತರು. ಹಾಗೆಯೇ ಅವರು ತಮ್ಮ ಗುರುಗಳ ಬಳಿ ವಿಧೇಯತೆಯಿಂದ ಇದ್ದರು.[13]

ಹಾಗೆಯೇ ಈ ಪುರಾಣದಲ್ಲಿ 'ಜಂಬೂದ್ವೀಪಸ್ಯ ವಿಸ್ತಾರಃ ಶತ ಸಹಸ್ರ ಸಂಮಿತಃ ಸಘವ ದವಿಗುಣೋ ಬ್ರಹ್ಮನ್ ಪ್ಲಕ್ಷದ್ವೀಪ ಉದಹೃತ:'[14] ಅಂದರೆ ಜಂಬೂದ್ವೀಪವು ಲಕ್ಷಯೋಜನ ವಿಸ್ತಾರವಿರವಿದೆ ಹಾಗೂ ಪ್ಲಕ್ಷ ದ್ವೀಪವು ಎರಡು ಲಕ್ಷ ಯೋಜನ ವಿಸ್ತಾರವಿದೆ ಎಂಬ ಮಾಹಿತಿ ದೊರೆಯುತ್ತದೆ. ಹಾಗೆಯೇ ಜಂಬೂದ್ವೀಪದಲ್ಲಿ ಏಳು ಪ್ರಮುಖ ನದಿಗಳು, ಏಳು ಪರ್ವತಗಳು, ಹಲವು ಚಿಕ್ಕ ನದಿಗಳು ಮತ್ತು ಲೆಕ್ಕವಿಲ್ಲದಷ್ಟು ಬೆಟ್ಟಗಳಿವೆ.[15] ಹಾಗೆಯೇ ಇಲ್ಲಿ ಅಂಕ–2 ಅಧ್ಯಾಯ–2ರಲ್ಲಿ "ಜಂಬೂಪಕ್ಷದಯೋ ದ್ವೀಪಾ: ಶಾಲ್ಮಲಿಶ್ಚಾರೋ ದ್ವಿಜ ಕುಶ: ಕ್ರೌಂಚ ಸ್ತಥಾ ಶಾಕ: ಪುಷ್ಕರಶ್ಚೈವ ಸಪ್ತಮ://5//[16] ಎಂಬ ಉಲ್ಲೇಖವಿದೆ. ಇದರರ್ಥ ಭೂಮಿಯ ಮೇಲೆ 7 ದ್ವೀಪಗಳಿವೆ ಅವುಗಳೆಂದರೆ ಜಂಬೂದ್ವೀಪ, ಪ್ಲಕ್ಷ, ಶಾಲ್ಮಲ, ಕುಶ, ಕ್ರೌಂಚ, ಶಾಕ, ಪುಷ್ಕರ. ಈ ಮಾಹಿತಿಯನ್ನು ಪರಿಶೀಲಿಸಿದಾಗ ಅಂದಿನ ಕಾಲಾವಧಿಯಲ್ಲಿ ಭೂಗೋಳಸಾಸ್ತ್ರದ ಜ್ಞಾನ ಇತ್ತು ಎಂದು ತಿಳಿಯುತ್ತದೆ.

**ಮತ್ಸ್ಯ ಪುರಾಣ**

ಮತ್ಸ್ಯ ಪುರಾಣದಲ್ಲಿಯೂ ಶಿಕ್ಷಣದ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಿದೆ. 'ನೈಮಿತ್ತಿಕ ಶ್ರಾದ್ಧ'ಕ್ಕೆ ಒಬ್ಬ ವ್ಯಕ್ತಿಯನ್ನು ಆಹ್ವಾನಿಸಬೇಕೆಂದರೆ ಆ ವ್ಯಕ್ತಿಗೆ ಪಂಚಾಗ್ನಿ ಸಿದ್ಧಾಂತದ ಪರಿಚಯವಿರಬೇಕು. ಹಾಗೆಯೇ ಅವನು ವೇದಗಳಲ್ಲಿ ಪಾರಂಗತನಾದ ಸ್ನಾತಕ ಬ್ರಹ್ಮಚಾರಿಯಾಗಿರಬೇಕು ಮತ್ತು ಶ್ರೋತೀಯ ಬ್ರಾಹ್ಮಣನು ಅಂದರೆ ವಿಧಿಯ ನಿಯಮಗಳನ್ನು ಚೆನ್ನಾಗಿ ಅರಿತವನಾಗಿರಬೇಕಿತ್ತು. ಹೀಗೆ ಸ್ನಾತಕ ಬ್ರಹ್ಮಚಾರಿ ಮತ್ತು ಶ್ರೋತೀಯ ಬ್ರಾಹ್ಮಣ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದರು.[17] ಬೃಹಸ್ಪತಿಯ ಮಗನಾದ 'ಕಚನು' ಗುರುಗಳಾದ 'ಶುಕ್ರನ' ಬಳಿಗೆ ತೆರಳಿ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಮನವಿ ಮಾಡಿದನು. ತನ್ನನ್ನು ಸಾವಿರಾರು ವರ್ಷಗಳ ಕಾಲ ತನ್ನ ಶಿಷ್ಯನನ್ನಾಗಿ ಇರಿಸಿಕೊಳ್ಳಲು ಕೇಳಿಕೊಂಡನು. ಈ ಮಾತುಗಳನ್ನು ಕೇಳಿ ಶುಕ್ರನು ಆತನನ್ನು ಶಿಷ್ಯನನ್ನಾಗಿ ಸ್ವೀಕರಿಸಿದನು.[18]

ಮತ್ಸ್ಯ ಪುರಾಣದಲ್ಲಿ ಯಯಾತಿ ತಿಳಿಸುವಂತೆ ಒಬ್ಬ ವಿದ್ಯಾರ್ಥಿಯು ಶ್ರದ್ಧೆಯಿಂದ ಅಧ್ಯಯನ ಮಾಡುತ್ತಾ ತನ್ನ ಗುರುಗಳಿಗೆ ಗೌರವ ಮತ್ತು ವಿಧೇಯತೆಯನ್ನು ತೋರಿಸುವ ಮೂಲಕ ತನ್ನ ಗುರುಗಳಿಗಿಂತ ಮುಂಚಿತವಾಗಿ ಎದ್ದು ಗುರುಗಳು ಮಲಗಿದ ನಂತರ ಮಲಗುತ್ತಿದ್ದನು. ತನ್ನ ಭಾವೋದ್ವೇಗಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಮೂಲಕ ಸೌಮ್ಯ ಸ್ವಭಾವದಿಂದ ತನ್ನ ಅಧ್ಯಯನವನ್ನು ಕೈಗೆತ್ತಿಕೊಳ್ಳುತ್ತಿದ್ದನು.[19] ಹಾಗೆಯೇ ಮತ್ಸ್ಯಪುರಾಣದಲ್ಲಿ 'ಸಬಲಿಪೀಠ' ಮತ್ತು 'ಮಂಡಲದ' ಅಳತೆಯನ್ನು ಎದ್ದು ಕಾಣುವಂತೆ ವಿವರಿಸಲಾಗಿದೆ.[20] ಇದು ಪ್ರಾಚೀನ ಭಾರತದಲ್ಲಿ ರೇಖಾಗಣಿತದ ಕಲ್ಪನೆ ಮತ್ತು ಕಲಿಕೆ ನಡೆಯುತ್ತಿತ್ತು ಎಂಬುದನ್ನು ಸಾಕ್ಷೀಕರಿಸುತ್ತದೆ.

ಹಾಗೆಯೇ ಮತ್ಸ್ಯಪುರಾಣದ ಲೇಖಕರಿಗೆ ಸಮಭಾಜಕ ವೃತ್ತ, ಧೃವಗಳ ಪರಿಕಲ್ಪನೆ ಕುರಿತ ತಿಳುವಳಿಕೆ ಇತ್ತು, ಈ ಅವಧಿಯ ಖಗೋಳ ಶಾಸ್ತ್ರಜ್ಞರಿಗೆ ಆಷಾಢ,

ಮೂಲ, ಪುಷ್ಯ, ಆಶ್ಲೇಷ ಮತ್ತು ಪುನರ್ವಸು, ಸ್ವಾತಿ ನಕ್ಷತ್ರಗಳ ಸ್ಥಾನಗಳ ಬಗ್ಗ ಕಂಡುಕೊಂಡ ಜ್ಞಾನ ಮತ್ತು ಇವುಗಳ ಆಧಾರದ ಮೇಲೆ ಖಗೋಳ ಲೆಕ್ಕಾಚಾರಗಳನ್ನು ಮಾಡುತ್ತಿದ್ದ ವಿಧಾನವು ಅಂದು ಅವರಿಗಿದ್ದಂತಹ ಅಗಾಧವಾದ ಜ್ಞಾನದ ವಿಸ್ತಾರವನ್ನು ಸ್ಪಷ್ಟಪಡಿಸುತ್ತದೆ.[21] ಇಲ್ಲಿ ತ್ರಿಪುರ ಕೋಟೆಯ ಕುರಿತು ವಿವರಿಸಲಾಗಿದೆ. ಅಂದರೆ ಅವರಿಗೆ ವಾಸ್ತುಶಾಸ್ತ್ರದ ಜ್ಞಾನವಿತ್ತು ಎಂಬುದು ಈ ಮೂಲಕ ತಿಳಿದುಬರುತ್ತದೆ.[22]

ಮತ್ಸ್ಯ ಪುರಾಣದಲ್ಲಿ ಬ್ರಹ್ಮಚಾರಿಯ ಕರ್ತವ್ಯವನ್ನು ವಿವರಿಸುವಾಗ ಉತ್ತಮ ನಡತೆ, ಉತ್ತಮ ಆಚಾರ ಮತ್ತು ಗುರುವಿಗೆ ಒಳ್ಳೆಯದನ್ನು ಮಾಡುವವನಾಗಿರಬೇಕು. ಹಾಗೆಯೇ ದುರಾಸೆಯಿಂದ ಮುಕ್ತರಾಗಿರುವವರು ಸ್ವಯಂ–ಸಂಯಮ, ನಿರಂಹಕಾರ, ಸದ್ಗುಣ ಮಾರ್ಗವನ್ನು ಅನುಸರಿಸುವವರನ್ನು 'ಆಚಾರ್ಯ' ಎಂದು ಕರೆಯಲಾಗಿದೆ.[23]

ವೈದ್ಯಕೀಯ ವಿಜ್ಞಾನ ಮತ್ತು ವೈದ್ಯಕೀಯ ವಿಜ್ಞಾನದಲ್ಲಿ ಪ್ರವೀಣರಾದವರಿಗೆ ಹೆಚ್ಚಿನ ಗೌರವ ನೀಡಲಾಗುತ್ತಿತ್ತು. 'ಅಷ್ಟಾಂಗ ಸಂಗ್ರಹ' ಕೃತಿಯಲ್ಲಿ ಅನುವಂಶಿಕವಾಗಿ ಪ್ರವೀಣನಾದವನನ್ನು ತನ್ನ ವೈದ್ಯನನ್ನಾಗಿ ರಾಜನು ನೇಮಿಸಿಕೊಳ್ಳಬೇಕು. ಹಾಗೆಯೇ ರಾಜನು ಆತನ ಮಾತುಗಳನ್ನು ಕೇಳಬೇಕೆಂದು ತಿಳಿಸಿದೆ.[24] ಅಂದರೆ ಆಗಿನ ಕಾಲದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗುತ್ತಿತ್ತೆಂಬುದು ಈ ಮೂಲಕ ಗೋಚರವಾಗುತ್ತದೆ.

ಹಾಗೆಯೇ ಆನೆಗಳಿಗೆ ತರಬೇತಿ ನೀಡುವ ಕಲೆ ಸಾಕಷ್ಟು ಮುಂದುವರೆದಿತ್ತು. ಆನಗೆಳಿಗೆ ತರಬೇತಿ ನೀಡುವ ಕಲೆಯನ್ನು ಕರಗತ ಮಾಡಿಕೊಂಡಿರುವವನನ್ನು ಹಾಗೆಯೇ ಕ್ರೂರ ಮೃಗಗಳ ಬಗ್ಗೆ ಹೆಚ್ಚಿನ ಜ್ಞಾನ ಹೊಂದಿರುವವರನ್ನು ರಾಜನು ಆನೆಗಳ ಅಧೀಕ್ಷಕನನ್ನಾಗಿ ನೇಮಿಸಿಕೊಳ್ಳುತ್ತಿದ್ದನು. ಅಂದರೆ ಈಗಿನ ಕಾಲದಲ್ಲಿ ಗಜಶಾಸ್ತ್ರ ಮತ್ತು ಇಂಜಿನಿಯರಿಂಗ್ ಕಲಿಸುತ್ತಿದ್ದರು.[25] ಹಾಗೆಯೇ ಮತ್ಸ್ಯ ಪುರಾಣದಲ್ಲಿ ಅರಸನಾಗುವವನಿಗೆ ಇರಬೇಕಾದ ವಿದ್ಯಾರ್ಹತೆಗಳನ್ನು ಕುರಿತು ವಿವರಿಸಲಾಗಿದೆ. ರಾಜನು ವೇದಗಳನ್ನು ಬಲ್ಲವರಿಂದ ವೇದಗಳನ್ನು ಕಲಿಯಬೇಕು. ಹಾಗೆಯೇ ರಾಜನೀತಿ, ತರ್ಕಶಾಸ್ತ್ರ, ತತ್ವಶಾಸ್ತ್ರ, ವಿಜ್ಞಾನದಲ್ಲಿ ಪಾಂಡಿತ್ಯವನ್ನು ಪಡೆದಿರಬೇಕು ಎಂದು ಮತ್ಸ್ಯ ಪುರಾಣದಲ್ಲಿ ವಿವರಿಸಲಾಗಿದೆ.[26]

ತನ್ನ ಕರ್ತವ್ಯಗಳನ್ನು ನಿರ್ವಹಿಸದ ಗುರುಗಳಿಗೂ ಇಲ್ಲಿ ಶಿಕ್ಷೆಯಿತ್ತು ಎಂದು ಇದರಲ್ಲಿ ಸೂಚಿಸಲಾಗಿದೆ. ಅಂದರೆ ಯಾವ ಗುರುವು ತನ್ನ ಶಿಷ್ಯರಿಂದ ಶುಲ್ಕವನ್ನು ಪಡೆದು ಅವರಿಗೆ ಜ್ಞಾನವನ್ನು ಬೋಧಿಸುವನೊ ಅಂತಹ ಗುರುವು ತನ್ನ ವೇತನದ ಸಂಪೂರ್ಣ ಮೊತ್ತವನ್ನು ದಂಡವನ್ನಾಗಿ ಪಾವತಿಸಬೇಕಿತ್ತು ಎಂದು ವಿವರಿಸಲಾಗಿದೆ.[27] ಶೂದ್ರನಾದವನು ದ್ವಿಜನಿಗೆ ಧರ್ಮವನ್ನು ಬೋಧಿಸಿದರೆ ರಾಜನು ಆ ಶೂದ್ರನಿಗೆ ಕಿವಿ ಮತ್ತು ಬಾಯಿಯಲ್ಲಿ ಕಾದ ಎಣ್ಣೆಯನ್ನು ಸುರಿಯುವ ಮೂಲಕ ಶಿಕ್ಷಿಸಬೇಕೆಂದು ಸೂಚಿಸಿದೆ.[28] ಗುರುವಿನ ಹೆಂಡತಿಯನ್ನು ಭೋಗಿಸುವವನನ್ನು ಕೊಲ್ಲಬೇಕು. ಒಂದು ವೇಳೆ ಆತ ಬ್ರಾಹ್ಮಣನಾಗಿದ್ದರೆ ಅವನ ದೇಹದ ಮೇಲೆ ಯೋನಿಯ ಮುದ್ರೆ ಹಾಕಿ ಬಹಿಷ್ಕರಿಸಬೇಕು. ಅಂತಹ ಮುದ್ರೆ ಇರುವ ವ್ಯಕ್ತಿಯನ್ನು ಸಮಾಜ ಸ್ವೀಕರಿಸಬಾರದು. ಒಟ್ಟಾರೆಯಾಗಿ ವಿದ್ಯಾರ್ಥಿಯಾದವನು ನೈತಿಕ ನಿಯಮಗಳನ್ನು ಪಾಲಿಸುತ್ತಾ ಅಂದು ಅಸ್ತಿತ್ವದಲ್ಲಿದ್ದ ವಿವಿಧ ವಿಷಯಗಳನ್ನು ಅಧ್ಯಯನ ಮಾಡುತ್ತಾ ಬ್ರಹ್ಮಚರ್ಯದಿಂದ ಗೃಹಸ್ಥಾಶ್ರಮಕ್ಕೆ ಕಾಲಿಡುತ್ತಿದ್ದರು.

**ಅಡಿಟಿಪ್ಪಣಿ**

1. ವಿಷ್ಣುಪುರಾಣ 1 –ಅ 9 ಶ್ಲೋಕ 1–10; 2. ವಿಷ್ಣುಪುರಾಣ 1 –ಅ–17 ಶ್ಲೋಕ 10; 3. ವಿಷ್ಣುಪುರಾಣ 1 –Sec VI, 9-11; 4. ವಿಷ್ಣುಪುರಾಣ 2 –Sec VI, 7-11; 5. ವಿಷ್ಣುಪುರಾಣ 2 –Sec V, 28-29; 6. ವಿಷ್ಣುಪುರಾಣ 2 – Sec 2 ಅ–16 ಶ್ಲೋ.1; 7. ವಿಷ್ಣುಪುರಾಣ 2 –Sec 3, ಅ 5 ಶ್ಲೋ 7-14; 8. ವಿಷ್ಣುಪುರಾಣ PT III – Sec VI, S- 27-28; 9. ವಿಷ್ಣುಪುರಾಣ 3 – IX 12; 10. ವಿಷ್ಣುಪುರಾಣ 3 –IX 7-10; 11. ವಿಷ್ಣುಪುರಾಣ 3 –XI 63-66; 12. ವಿಷ್ಣುಪುರಾಣ 5 –I 27; 13. ವಿಷ್ಣುಪುರಾಣ 5 –XXI 19-22; 14. ವಿಷ್ಣುಪುರಾಣ 2 2ನೇಯ ಅಂಕ ಅ–4 ಶ್ಲೋ –2; 15. ವಿಷ್ಣುಪುರಾಣ vol 1 ಅಂಕ 2 ಅ– 4 ಶ್ಲೋ 11–14; 16. ವಿಷ್ಣುಪುರಾಣ vol 1 ಅಂಕ 2 ಅ– 2 ಶ್ಲೋ 5; 17. ಮತ್ಸ್ಯ ಪುರಾಣ ಸಂಪಾದಕ– ಪಂಚನಾನತಾರಕರತ್ನ 1989, C-XVI, 7; 18. ಮತ್ಸ್ಯ ಪುರಾಣ 6–25, 5/24; 19. ಮತ್ಸ್ಯ ಪುರಾಣ 6–40, 2; 20. ವಿಷ್ಣುಪುರಾಣ vol 1 ಅಂಕ 2 ಅ– 4 ಶ್ಲೋ 11–14; 21. ಮತ್ಸ್ಯ ಪುರಾಣ C- 124, 50; 22. ಮತ್ಸ್ಯ ಪುರಾಣ C- 137; 23. ಮತ್ಸ್ಯ ಪುರಾಣ II. Ch. CXILV 105 & 29-30; 24. ಮತ್ಸ್ಯ ಪುರಾಣ C-CCXV, 33; 25. ಮತ್ಸ್ಯ ಪುರಾಣ C-CCXV, 39; 26. ಮತ್ಸ್ಯ ಪುರಾಣ–CCXV, 53-54; 27. ಮತ್ಸ್ಯ ಪುರಾಣ II.C- 227, 6; 28. ಮತ್ಸ್ಯ ಪುರಾಣ II.C- 227, 75; 29. ಮತ್ಸ್ಯ ಪುರಾಣ II.C- 227- 162-3 &165

**ಆಧಾರಗಳು**


1) Translated by Horace Hayman Wilson : The Vishnu Purana (Year 2019)
2) ಅನುವಾದಕ–ಪಂಡಿತ ಗಂಜಾಂ ತಿಮ್ಮಣ್ಣಯ್ಯ 'ವಿಷ್ಣುಪುರಾಣ' ಸಂಚಿಕೆ–1 (ಕನ್ನಡ ಅನುವಾದ) (ವರ್ಷ–1948) ಶ್ರೀ ವಿನಾಯಕ ಪ್ರಿಂಟಿಂಗ್ ವರ್ಕ್ಸ್, ಮೈಸೂರು
3) ಅನುವಾದಕ–ಪಂಡಿತ ಗಂಜಾಂ ತಿಮ್ಮಣ್ಣಯ್ಯ ವಿಷ್ಣುಪುರಾಣ ಸಂಪುಟ–2 (ಕನ್ನಡ ಅನುವಾದ) (ವರ್ಷ–1948) ಶ್ರೀ ವಿನಾಯಕ ಪ್ರಿಂಟಿಂಗ್ ವರ್ಕ್ಸ್, ಮೈಸೂರು
4) ಅನುವಾದಕ– ವಾಜಪೇಯಂ ಶ್ರೀರಂಗಾಚಾರ್ ಶ್ರೀ ಮತ್ಸ್ಯ ಮಹಾಪುರಾಣಂ ಸಂಪುಟ–2 (ಕನ್ನಡ ಅನುವಾದ) (ವರ್ಷ 1947)
5) ಅನುವಾದಕ–ವಾಜಪೇಯಂ ಶ್ರೀರಂಗಾಚಾರ್ ಶ್ರೀ ಮತ್ಸ್ಯ ಮಹಾಪುರಾಣಂ ಸಂಪುಟ–6 (1948) (ಕನ್ನಡ ಅನುವಾದ)
6) ಪಂಚನಾನ ತಾರಕರತ್ನ–ಮತ್ಸ್ಯ ಮಹಾಪುರಾಣ (ವರ್ಷ 1909) (ಅಂತರಜಾಲ)


❖❖❖

ಮರದಿಂದುದುರಿದ ಎಲೆಯದು ಬಿದ್ದಿತು
ಕಲ್ಲಿನೆದೆಯ ಮೇಲೆ
ಕಲ್ಲೆದೆ ಮಾತನು ಆಲಿಸುತಲಿದೆ
ಚಿಗುರದು ಮರದಲ್ಲೇ

# ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಸ್ತ್ರೀ ಸಂವೇದನೆ

**ಡಾ. ಎಸ್. ಶಶಿರೇಖಾ**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು–560001

ಆಧುನಿಕ ಕಾಲದಲ್ಲಿಯೂ ಬದುಕಿನ ಮೌಲ್ಯಗಳು ಸ್ತ್ರೀಯರ ಅನುಕೂಲಗಳಿಗೆ ತಕ್ಕಂತೆ ರೂಪುಗೊಂಡಿಲ್ಲ ಎನ್ನುವುದನ್ನು ಕಾಣುತ್ತೇವೆ. ಸ್ತ್ರೀಯು ಪುರುಷನಿಗೆ ಪೂರಕವಾಗಿ ಸಿಕ್ಕ ಜೀವಿಯಷ್ಟೆ. "ಬದುಕಿನ ಎಲ್ಲ ಮೌಲ್ಯಗಳೂ ಪುರುಷ ಕೇಂದ್ರಿತ ಗ್ರಹಿಕೆಯ ಮುಷ್ಟಿಯಲ್ಲಿ ಉಳಿಯಿತು. ಎಲ್ಲರನ್ನು, ಎಲ್ಲವನ್ನೂ ತಾನೇ ತಿಳಿಯುವ, ಅಳೆಯುವ ಅರ್ಥೈಸುವ, ನಿಯಂತ್ರಿಸುವ ಸಾಹಸ ಮಾಡಿತು. ಸ್ತ್ರೀಯರ ಬದುಕಿನ ಸ್ವರೂಪವೇನು? ಸ್ವಭಾವವೇನು? ಬೆಲೆಯೇನು? ಗುರಿಯೇನು? ಎಲ್ಲದಕ್ಕೂ ತಾನೇ ಉತ್ತರ ಹೇಳಿತು. ಇಂಥ ಪ್ರಯತ್ನ ಸಹಜವಾಗಿ ತನ್ನ ಮೂಗಿನ ನೇರಕ್ಕಿದೆ. ತನ್ನ ಹಿತವನ್ನು ಪ್ರಧಾನವಾಗಿಟ್ಟುಕೊಂಡಿದೆ. ಹಾಗೆ ಮಾಡುವಾಗ ಸ್ತ್ರೀಯರ ಸ್ವಭಾವ ಜೀವನ ಅಂತಃಸತ್ವಗಳು ಉಪೇಕ್ಷಿತವಾಗಿವೆ, ತಿರುಚಲ್ಪಟ್ಟಿವೆ, ಅಪಮೌಲ್ಯಗೊಂಡಿವೆ, ತಪ್ಪಾಗಿ ತಿಳಿಯಲ್ಪಟ್ಟಿವೆ."[1] ಬದುಕಿನ ಎಲ್ಲ ಮಜಲುಗಳಲ್ಲಿ ಪುರುಷ ತನ್ನತನವೇ ಮುಖ್ಯವೆಂದುಕೊಂಡಾಗ ಆತನ ಜೊತೆಗೆ ನಡೆವ ಸ್ತ್ರೀಯರು ಸಂಕಷ್ಟದಲ್ಲಿ ಸಿಲುಕುತ್ತಾರೆ. ಈ ಎಲ್ಲ ಅಭಿಪ್ರಾಯಗಳಿಗೆ ಉತ್ತಮ ನಿದರ್ಶನವಾಗಿ ಸಿಗುವ ಕೃತಿ ಶಿವರಾಮ ಕಾರಂತರು ಬರೆದಿರುವ 'ಸರಸಮ್ಮನ ಸಮಾಧಿ' ಕಾದಂಬರಿ.

'ನಡೆದಾಡುವ ವಿಶ್ವಕೋಶ' ಎಂಬ ಮಾತಿಗೆ ಪಾತ್ರವಾದ ವಿಶಿಷ್ಟ ವ್ಯಕ್ತಿತ್ವದ ಕಾರಂತರು ಎಲ್ಲ ಜ್ಞಾನಶಾಖೆಗಳಲ್ಲಿ ಆಸಕ್ತಿ ತಳೆದಿದ್ದರು. ಎಲ್ಲ ಕ್ಷೇತ್ರಗಳಲ್ಲಿ ಸಹಜವಾಗಿಯೇ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಕ್ರಿಯಾಶೀಲ ಮನಸ್ಸಿನ ಕಾರಂತರು ಯಕ್ಷಗಾನ, ರಂಗಭೂಮಿ, ಚಲನಚಿತ್ರ, ವಿಜ್ಞಾನ, ಶಿಕ್ಷಣ, ಸಂಗೀತ, ಚಿತ್ರಕಲೆ, ಪತ್ರಿಕೋದ್ಯಮ, ರಾಜಕೀಯ, ಎಲ್ಲ ಕ್ಷೇತ್ರಗಳಲ್ಲಿ ದುಡಿದಿದ್ದಾರೆ. ಸಮೃದ್ಧವಾದ ಬದುಕನ್ನು ಅನುಭವಿಸಿ ಸಕಲ ಸ್ತರಗಳ ಅನುಭವಗಳ ಪಾಕವನ್ನು ಸಾಹಿತ್ಯದ ಮೂಲಕ ನಮಗೆ ನೀಡಿದ್ದು ಗಮನಾರ್ಹ. ಕಾರಂತರನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ, ಆಳವಾದ ಓದು, ಚಿಂತನೆ ಮತ್ತು ಅನುಭವದ ಅಗತ್ಯವಿದೆ. ವೈಜ್ಞಾನಿಕವಾಗಿ ಬೌದ್ಧಿಕವಾಗಿ ಎತ್ತರದಲ್ಲಿ ನಿಲ್ಲುವ ಅವರ ಚಿಂತನೆಗಳು ಅಪೂರ್ವ ಲೋಕವನ್ನು ದರ್ಶಿಸುತ್ತವೆ. ಇದರಲ್ಲಿ ಪ್ರಮುಖವಾಗಿ ಸ್ತ್ರೀಲೋಕದ ಸುತ್ತ ಎಣೆದಿರುವ ವೈಜ್ಞಾನಿಕ ಚಿಂತನೆಯತ್ತ ಕರೆತರುವ ನಿಟ್ಟಿನಲ್ಲಿ ಸಿಗುವ ಕಾದಂಬರಿ 'ಸರಸಮ್ಮನ ಸಮಾಧಿ'. ಈ ಕಾದಂಬರಿಯಲ್ಲಿ ಗಂಡು ಹೆಣ್ಣಿನ ಸಂಬಂಧಗಳ ಕಲ್ಪನೆಯಲ್ಲಿ ವ್ಯಕ್ತವಾಗುವ ನಿಲುವುಗಳು, ಸಮಾಜದಲ್ಲಿ ಸ್ತ್ರೀ ಅನುಭವಿಸಿರುವ ವೇದನೆ, ಸಂವೇದನೆಯ ಕನ್ನಡಿಯಾಗಿ ನಮ್ಮರಿವಿಗೂ ನಿಲುಕದ ನಮ್ಮೊಳಗಿನ ಸಂಕಥನದ ಸಾಕ್ಷಿಯಾಗಿ ತೋರುತ್ತದೆ. ಈ ಕಾದಂಬರಿಯಲ್ಲಿ ಬರುವ ಪ್ರತಿಯೊಂದು ಹೆಣ್ಣು ಒಂದು ನೊಂದ ಸಮುದಾಯದ ಸ್ತ್ರೀಲೋಕದ ಪ್ರತಿನಿಧಿಯಾಗಿ

ಕಂಡು ಬರುತ್ತಾಳೆ. ಗಂಡು ಹೆಣ್ಣಿನ ನಡುವಿನ ಅಸಮ ನಡವಳಿಕೆ, ಅತೃಪ್ತ ದಾಂಪತ್ಯ ಇಲ್ಲಿ ಕೇಂದ್ರವೆನಿಸುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ "ಜೀವನದ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀ ಮನಸ್ಸು ಮತ್ತು ಶರೀರಗಳೆರಡೂ ಅವನ ಸೊತ್ತು, ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ ಎಂಬ ಭಾವನೆ ಜಗತ್ತಿನ ಹಲವು ದೇಶ ಮತ್ತು ಮತಗಳು ಸಾರುತ್ತಾ ಬಂದಿವೆ."[2]

ಸಾಂಸಾರಿಕ ಒಡಕು, ಬಿರುಕು, ಅತೃಪ್ತಿಯ ವಿಚಾರಗಳು ಗಂಡು ಹೆಣ್ಣಿನ ನಡುವಿನ ವಿರಸ ಅಸ್ತಿತ್ವರಹಿತವಾದ ಹೊಂದಾಣಿಕೆಯಿಲ್ಲದ ದಾಂಪತ್ಯದ ಕ್ಲೇಶೆಯನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸುವ ಕಾದಂಬರಿ 'ಸರಸಮ್ಮನ ಸಮಾಧಿ'. ಕಾದಂಬರಿಯ ಆರಂಭವೇ ಕಾದಂಬರಿಯಲ್ಲಿ ಬರುವ ಹೆಣ್ಣಿನ ಸಾಂಸಾರಿಕ ಚೌಕಟ್ಟಿನ ವೇದನೆ ಮತ್ತು ಸಂವೇದನೆಯನ್ನು ವಿವರಿಸುತ್ತದೆ. ಜಾನಕಮ್ಮ ಮತ್ತು ಸೀತಮ್ಮನ ಸಂಭಾಷಣೆಯಲ್ಲಿ ಇಬ್ಬರ ಮನೆಯ ಸಂಕಷ್ಟಗಳು ಹಾಗೂ ಪುರುಷ ಪ್ರಾಧಾನ್ಯತೆಯ ಚೌಕಟ್ಟಿನಲ್ಲಿ ನೊಂದ ಮನಸ್ಸುಗಳ ಅರಿವಾಗುತ್ತದೆ. ಜಾನಕಮ್ಮ ಐದು ಹೆಣ್ಣು ಮಕ್ಕಳನ್ನು ಹೆತ್ತು ಗಂಡ ತಿಮ್ಮಪ್ಪಯ್ಯನ ಅವಜ್ಞೆಗೆ ಗುರಿಯಾಗಿದ್ದಾಳೆ. ವಿಧವೆಯಾಗಿರುವ ಸೀತಮ್ಮ ಎಲ್ಲರಿಂದಲೂ ತಿರಸ್ಕಾರಕ್ಕೆ ಒಳಗಾಗಿ ನೊಂದಿದ್ದಾಳೆ. ಇಲ್ಲಿ ಈ ಇಬ್ಬರೂ ಸ್ತ್ರೀಯರ ಸಂಭಾಷಣೆಯಲ್ಲಿ ತಮ್ಮಂತೆ ನೋಯುವ ತಮ್ಮ ಸಮಾಜದ ಹೆಣ್ಣು ಮಕ್ಕಳ ಬಗ್ಗೆ ಕನಿಕರ ವ್ಯಕ್ತವಾಗಿದೆ. ತಮ್ಮ ಮನೆಗಳ ಗಂಡಸರನ್ನು ಬದಲಿಸಲಾಗದ ಸ್ಥಿತಿಗೆ ಮರುಗುತ್ತಾರೆ. "ಕೈ ಬೇವಿನ ಗಿಡಕ್ಕೆ ಬೆಲ್ಲದ ಪಾನಕ ಎರೆದರೆ, ಬೇವಿನ ಚಿಗುರು ಸಿಹಿ ಆದೀತೆ?" ಎಂದು ಎಷ್ಟು ಪುರಾಣ ಉಪದೇಶಗಳನ್ನು ಕೇಳಿದರೂ ಬದಲಾಗದ ಸಮಾಜವನ್ನು ಕುರಿತು ಚರ್ಚಿಸಿದ್ದಾರೆ. ಇವರಿಬ್ಬರ ಸಂಭಾಷಣೆಯಲ್ಲಿ ಮಾಸ್ತಿಗುಡಿಯಲ್ಲಿ ನಡೆವ ಆಚರಣೆಯ ಸುಳಿವು ಸಿಗುತ್ತದೆ. ದಾಂಪತ್ಯದ ಕ್ಲೇಶೆ ಮತ್ತು ಬಿರುಕು ನಿವಾರಣೆಗಾಗಿ ಜನರು ಮಾಸ್ತಿ ಅಮ್ಮನ ಮೊರೆ ಹೋಗುತ್ತಾರೆ. ಸ್ತ್ರೀಯರ ಕಷ್ಟ ಕೇಳಿದ ಪ್ರತಿಯೊಬ್ಬರೂ ಮಾಸ್ತಿ ಅಮ್ಮನಿಗೆ ಮೊರೆ ಹೋಗಲು ತಿಳಿಸುತ್ತಾರೆ. ಮಹಾಸತಿ ಸರಸಮ್ಮ ಅನುಗ್ರಹಿಸಿದರೆ ದಾಂಪತ್ಯದಲ್ಲಿ ಮೂಡಿರುವ ಕಷ್ಟಗಳು ನಿವಾರಣೆಯಾಗುತ್ತದೆಂಬುದು ಅಲ್ಲಿನ ಸುತ್ತಮುತ್ತಲಿನ ಜನರ ನಂಬಿಕೆ.

ಈ ಕಾದಂಬರಿಯಲ್ಲಿ ಸರಸಮ್ಮ, ಸೀತಮ್ಮ, ಜಾನಕಮ್ಮ, ಮಾಚಿ, ನಾಗವೇಣಿ, ಜಲಜಾಕ್ಷಿ, ಭಾಗೀರತಿ, ಸುನಾಲಿನಿ, ಬೆಳ್ಯಮ್ಮ, ಗುಲಾಬಿ ಮತ್ತು ಬೆಳ್ಯಕ್ಕ ಮೊದಲಾದ ಸ್ತ್ರೀ ಪಾತ್ರಗಳ ಚಿತ್ರಣವಿದೆ. ಒಬ್ಬೊಬ್ಬರದೂ ಒಂದೊಂದು ರೀತಿಯ ಗೋಳಿನ ಕಥೆ, ಅತೃಪ್ತಿಯ ಜೀವನ. ಕಥೆಯ ನಾಯಕನಾಗಿ ಸಿಗುವ ಅಡಾಉಡಿ ಚಂದ್ರಯ್ಯನ ವೈಚಾರಿಕ ಮನೋಪ್ರವೃತ್ತಿಯು ಅನೇಕರ ಸಾಂಸಾರಿಕ ಕಥನಗಳ ಗುಟ್ಟನ್ನು ಭೇದಿಸುತ್ತದೆ. ಜನರಿಗೆ ಈತ ಅಡಾಉಡಿ ಎನಿಸಿದ್ದರೂ ಆತನ ಮನಸ್ಸಿನ ಓಟ ಅನೇಕ ವಿಚಾರಗಳನ್ನು ವಿಜ್ಞಾನದ ಹಿನ್ನೆಲೆಯಲ್ಲಿ ಸ್ಪಷ್ಟೀಕರಿಸುತ್ತದೆ. ಊರಿಗೆ ಯಾರು ಬಂದರೂ, ಊರಲ್ಲಿ ಏನು ನಡೆದರೂ ತಿಳಿದುಕೊಳ್ಳುವ ಸಂಚಾರಿ ಈತ. ಬೆಳ್ಯಕ್ಕನ ಪ್ರೇತದ ಬಗ್ಗೆ ತಿಳಿಸಿದ ಈಶ್ವರಭಟ್ಟರು 'ಬೆಳ್ಯಕ್ಕನ ರೂಪ ಅಂದರೆ ಥೇಟು ರತಿ ರೂಪವಂತೆ' ಎಂದು ಚಂದ್ರಯ್ಯನಲ್ಲಿ ಕುತೂಹಲ ಮೂಡಿಸಿರುತ್ತಾರೆ. ಬೆಳ್ಯಕ್ಕನ ಪ್ರೇತದ ಶೋಧನೆಗೆ ನಿಂತ ಚಂದ್ರಯ್ಯನಿಗೆ ಎಲ್ಲ ಸಂಸಾರಗಳ ಸ್ತ್ರೀಯರು ನೊಂದು ಮಾಸ್ತಿಗುಡಿಗೆ ಹರಕೆ ಹೊತ್ತು ಬರುವ ದೃಶ್ಯಗಳು ಸಿಗುತ್ತವೆ.

ಜಾನಕಮ್ಮನ ಮಗಳು ನಾಗವೇಣಿಯನ್ನು ಒಕ್ಕಣ್ಣಿನ ಹುಡುಗನಿಗೆ ಕೊಡಲು ನಿರ್ಧರಿಸಿದ್ದ ತಿಮ್ಮಪ್ಪಯ್ಯ ಆನಂತರ ಶ್ರೀಮಂತರ ಸಂಬಂಧವೆಂದು ಸೀತಾರಾಮನಿಗೆ ಮೂರನೆಯ ಹೆಂಡತಿಯಾಗಿ ಲಗ್ನ ಮಾಡಿಕೊಡುತ್ತಾನೆ. ಹದಿನಾರರ ಹುಡುಗಿ 30ರ ವಯಸ್ಸಿನವನನ್ನು ಮದುವೆಯಾಗಿ ಹೊಂದಿಕೊಳ್ಳಲಾಗದೆ ಬಲವಂತದ ದಾಂಪತ್ಯದಲ್ಲಿ ಸಿಲುಕುತ್ತಾಳೆ. ಗೋಪಾಲಯ್ಯನ ಮಗಳು ಭಾಗೀರಥಿ ಹಿರಣ್ಯನನ್ನು ಮದುವೆಯಾದವಳು ಗಂಡನ ಮನೆಯಲ್ಲಿ ನಡೆದ ಮನಸ್ತಾಪದಿಂದ ಗಂಡನಿಂದ ಎರಡು ವರ್ಷ ದೂರ ಉಳಿಯುತ್ತಾಳೆ. ಸೀತಮ್ಮನ ತಾಯಿ ಮಾಚಿ ಬಹಳ ಧೈರ್ಯವಂತ ಹೆಣ್ಣು. ಸಂಸಾರದ ನೊಗವನ್ನು ಕಷ್ಟಪಟ್ಟು ಎಳೆಯುತ್ತಾಳೆ. ಈಕೆ ತನ್ನ ಹಿಡಿತಕ್ಕೆ ತನ್ನ ಸಂಸಾರವನ್ನು ತೆಗೆದುಕೊಳ್ಳುವುದಲ್ಲದೆ, ಮಗಳು ಸೀತಮ್ಮನಲ್ಲಿ ಧೈರ್ಯ ತುಂಬಲು ಯಶಸ್ವಿಯಾಗುತ್ತಾಳೆ. ಪ್ರತಿಭಟನೆ ತೋರಿರುವ ಎರಡು ಪಾತ್ರಗಳೆಂದರೆ ಸೊನಾಲಿನಿ ಮತ್ತು ಭಾಗೀರಥಿ. ಇಲ್ಲಿ ಇಬ್ಬರೂ ಪುರುಷ ಪ್ರಧಾನ ವ್ಯವಸ್ಥೆಯ ದೌರ್ಜನ್ಯಕ್ಕೆ ವಿರುದ್ಧವಾಗಿ ಬಂಡಾಯ ಹೂಡುತ್ತಾರೆ. ಭಾಗೀರಥಿಗೆ ಸಿಕ್ಕ ಯಶಸ್ಸು ಇಲ್ಲಿ ಸೊನಾಲಿನಿಗೆ ಸಿಗುವುದಿಲ್ಲ. ಹಿರಣ್ಯನ್ನು ಮದುವೆಯಾಗಿ ಗಂಡನ ಮನೆಗೆ ಕಾಲಿಟ್ಟಾಗ ಹಿರಣ್ಯನ ತಂದೆ ಆತನನ್ನು ಅಂಕೆಯಲ್ಲಿಡುವ ಪ್ರಯತ್ನದಲ್ಲಿ ಭಾಗೀರಥಿಯನ್ನು ಅವಮಾನಿಸುತ್ತಾನೆ. "ನಿನ್ನ ಮಗನಿಗೆ ಸ್ವಲ್ಪ ಬುದ್ಧಿಯನ್ನು ಹೇಳು, ಹೆಂಡತಿ ಮನೆಗೆ ಬಂದಳು ಎಂದು ನಾಯಿಯ ಹಿಂದಿನ ಬಾಲವಾಗುವುದಲ್ಲ. ಯಾವುದು ಎಲ್ಲೆಲ್ಲಿರಬೇಕೋ ಅಲ್ಲಲ್ಲಿ ಇದ್ದರೇನೆ ಚಂದ 'ಕಾಲಿನದ್ದು ಕಾಲಿಗೇ!' ತಲೆಗಲ್ಲ"[5] ಎಂದು ಹಿರಣ್ಯನ ತಂದೆ ವೆಂಕಟರಮಣಯ್ಯ ಹೇಳಿರುತ್ತಾನೆ. ಇದನ್ನೇ ಅನುಸರಿಸುವ ಹಿರಣ್ಯನ ತಾಯಿ 'ಹೆಂಡತಿಗೆ ಸಲಿಗೆ ಕೊಟ್ಟರೆ ನೆಸೆಕೊಟ್ಟ ನಾಯಿ ನೊಸಲು ನೆಕ್ಕೀತು ಎಂಬಂತಾದರೆ ಕಷ್ಟ ಅದಕ್ಕೇನೆ ಅವರೆಂದದ್ದು 'ಕಾಲಿಗಿರುವುದು ಕಾಲಿಗೇ ಇರಬೇಕು'[6] ಎಂದು ಮಗನಿಗೆ ಬುದ್ಧಿ ಹೇಳುತ್ತಾಳೆ. ಇದರಿಂದ ಅವಮಾನಗೊಂಡ ಭಾಗೀರಥಿಯು ಗಂಡನ ಮನೆಯನ್ನು ತಿರಸ್ಕರಿಸಿ ದೂರ ಉಳಿಯುತ್ತಾಳೆ. ಎರಡು ವರ್ಷಗಳ ನಂತರ ಹಿರಣ್ಯನೇ ಆಕೆಯೊಂದಿಗೆ ಬಂದು ಜೀವನ ರೂಪಿಸಿಕೊಳ್ಳುತ್ತಾನೆ. ಭಾಗೀರಥಿಯು ಪ್ರತಿಭಟಿಸುವುದಲ್ಲದೆ ಬೇರೊಂದು ಮದುವೆಗೂ ತಾನು ಸಿದ್ಧವೆಂದು ಸಮಾಜದ ನಿಂದನೆಗಳನ್ನು ಲೆಕ್ಕಿಸದೇ ಧೈರ್ಯವಾಗಿ ನಿಲ್ಲುವುದಲ್ಲದೇ ತನ್ನ ಸಂಸಾರ ಸರಿಯಾಗುವವರೆಗೆ ರಾಜಿಯಿಲ್ಲದೇ ಪ್ರತಿಭಟಿಸುತ್ತಾಳೆ.

ಸೊನಾಲಿನಿ ವಿದ್ಯೆ ಕಲಿತ ಹೆಣ್ಣು. ತಂದೆಯ ವ್ಯಾಪಾರ ನಷ್ಟವಾಗಿ ಹಳ್ಳಿಯ ಅಣ್ಣಪ್ಪ ಕಮ್ತಿಯನ್ನು ವಿವಾಹವಾಗಬೇಕಾಗುತ್ತದೆ. ತಂದೆಯ ಆರೋಗ್ಯ ಮತ್ತು ಮರ್ಯಾದೆ ದೃಷ್ಟಿಯಿಂದ ಗಂಡ ಮತ್ತು ಅತ್ತೆಯ ದೌರ್ಜನ್ಯಗಳನ್ನು ಸಹಿಸುತ್ತಾಳೆ. ಗಂಡನನ್ನು ಸರಿಪಡಿಸುವ ಪ್ರಯತ್ನದಲ್ಲಿ ಸೋತು ಸರಸಮ್ಮನ ಮೊರೆ ಹೋಗುತ್ತಾಳೆ. ಆದರೂ ಸೊನಾಲಿನಿ ಬಯಸಿದ ದಾಂಪತ್ಯ ಸುಖ ಅವಳಿಗೆ ಸಿಗುವುದಿಲ್ಲ. ಗಂಡ ಅಣ್ಣಪ್ಪ ಕಮ್ತಿ ತನ್ನ ಅಸಹಾಯಕತೆಯನ್ನು ಮುಚ್ಚಿಡಲು ವ್ಯಾಪಾರ ವಹಿವಾಟಿನಲ್ಲಿ ಮುಳುಗುತ್ತಾನೆ. ತಾಯಿಯೊಂದಿಗೆ ಸೇರಿ ಹೆಂಡತಿಯನ್ನು ಅವಮಾನಿಸುತ್ತಾನೆ. ಸೊನಾಲಿನಿ ಆತ್ಮಹತ್ಯೆಗೆ ಶರಣಾಗುವ ನಿರ್ಧಾರ ಮಾಡಿ ನೀರಿಗೆ ಧುಮುಕುತ್ತಾಳೆ. ಚಂದ್ರಯ್ಯ ಸೊನಾಲಿನಿಯನ್ನು ರಕ್ಷಿಸುವುದಲ್ಲದೇ ಆಕೆಗೆ ಹೊಸ ಬದುಕು ಕೊಡಲು ನಿರ್ಧರಿಸುವುದರಿಂದ ಸೊನಾಲಿನಿ ಕಷ್ಟಗಳಿಗೆ ಕೊನೆ ಸಿಕ್ಕಿರುವ ಸೂಚನೆ ಕಾದಂಬರಿಯಲ್ಲಿ ದೊರೆಯುತ್ತದೆ.

ನೀಲಾಚಲಯ್ಯನ ಪತ್ನಿ ಸರಸಮ್ಮ ಅನಾರೋಗ್ಯ ಪೀಡಿತ ಗಂಡನನ್ನು ಶುಶ್ರೂಷೆ

ಮಾಡಿದ್ದಲ್ಲದೇ ಆತನು ಸತ್ತಾಗ ಆತನೊಂದಿಗೆ ಸಹಗಮನ ಮಾಡಿ 'ಮಹಾಸತಿ' ಎಂದು ದೈವತ್ವಕ್ಕೆ ಏರಿದವಳು. ಸಾಂಸಾರಿಕ ತೊಂದರೆಗೆ ಗುರಿಯಾದ ಎಲ್ಲ ಜನರಿಂದ ಈಕೆಯು ಪೂಜಿಸಲ್ಪಡುತ್ತಾಳೆ. ಬೆಳ್ಯಕ್ಕ ಅತೃಪ್ತವಾದ ಆತ್ಮ, ಸಾಂಸಾರಿಕ ಸುಖಗಳಿಲ್ಲದೇ ಸತ್ತ ಆಕೆ ಮೋಕ್ಷವಿಲ್ಲದೇ ಗಂಡಿನ ಗೆಳೆತನ, ಒಡನಾಟ ಬಯಸಿ ಸುತ್ತುವ ಆತ್ಮ. ಪ್ರೇತದ ಶೋಧನೆಯಲ್ಲಿ ತೊಡಗಿದ ಚಂದ್ರಯ್ಯನಿಗೆ ಬೇಟಿಯಾಗಿ ಆತ ಧೈರ್ಯವಂತನೆಂದು ಅರಿತು ಅವನಲ್ಲಿ ಪ್ರೇಮಬಿಕ್ಷೆ ಬೇಡುತ್ತದೆ. ಎಷ್ಟೋ ವರ್ಷಗಳಿಂದ ಮುಕ್ತಿಯಿಲ್ಲದೇ ಗಂಡಿನ ಗೆಳೆತನ ಬಯಸಿ ಸುತ್ತುತ್ತಿರುವ ಬೆಳ್ಯಕ್ಕ ಚಂದ್ರಯ್ಯ ಒಪ್ಪುವನೆಂದು ಕಾಯುತ್ತಾಳೆ. ಆದರೆ ತಾನು ಯಾರೆಂಬುದನ್ನು ಮಾತ್ರಾ ಹೇಳುವುದಿಲ್ಲ. ಆಕೆಯ ಸೂಕ್ಷ್ಮ ಶರೀರಕ್ಕೆ ಗೆಳತನದ ತೃಪ್ತಿಕೊಡಲು ಚಂದ್ರಯ್ಯ ಒಪ್ಪಿದ ಮೇಲೆ ಬೆಳ್ಯಕ್ಕ ಬಹಳ ಸಂತೋಷ ಪಡುತ್ತಾಳೆ. ಚಂದ್ರಯ್ಯ ಆಕೆಯನ್ನು ಸರಸಮ್ಮನ ಸಮಾಧಿಯ ಒಳಕ್ಕೆ ಎಳೆದುಕೊಂಡು ಹೋದಾಗ ಹೆದರಿ ಅಲ್ಲಿಂದ ಹೊರಕ್ಕೆ ಓಡಿ ಬರುತ್ತಾಳೆ. ಚಂದ್ರಯ್ಯನಿಗೆ ತಾನೇ ಸರಸಮ್ಮನೆಂದು, ಆ ಗುಡಿ ತನ್ನ ಮನೆಯಾಗಿತ್ತೆಂದು, ಅಲ್ಲಿ ಗಂಡ ನೀಲಾಚಲಯ್ಯನ ಆತ್ಮ ತನ್ನನ್ನು ಅಂಕೆಯಲ್ಲಿಡುತ್ತದೆಂದು ಸತ್ಯವನ್ನು ಹೇಳುತ್ತಾಳೆ. ಯಾವುದೇ ದಾಂಪತ್ಯ ಸುಖವಿಲ್ಲದೇ ಬಲವಂತವಾಗಿ ಚಿತೆಯೇರಿ ಸತ್ತು, ಅತೃಪ್ತಿಯಿಂದ ಪ್ರೇತವಾಗಿ ಅಲೆಯುತ್ತಿರುವ ಬಗ್ಗೆ ವಿವರಿಸುತ್ತಾಳೆ.

ಎಲ್ಲ ಮನೆಯ ಹೆಣ್ಣುಗಳು ಒಂದಲ್ಲ ಒಂದು ರೀತಿ ನೋವಿನಿಂದ ನರಳುತ್ತಿರುವುದನ್ನು ಅರಿತು ತೀವ್ರವಾಗಿ ಸಮಾಜದ ನಡಾವಳಿಗಳನ್ನು ಚಂದ್ರಯ್ಯ ಖಂಡಿಸುತ್ತಾನೆ. ತನ್ನಿಂದ ಸಾಧ್ಯವಾದಷ್ಟು ಹೆಣ್ಣುಗಳಿಗೆ ಒಳಿತನ್ನು ಬಯಸುತ್ತಾನೆ. ನಾಗವೇಣಿ, ಭಾಗೀರಥಿ, ಜಲಜಾಕ್ಷಿ, ಸೊನಾಲಿನಿ, ಮತ್ತು ಬೆಳ್ಯಕ್ಕರ ಅತೃಪ್ತ ಸಂಕಟದ ಜೀವನ ಚಂದ್ರಯ್ಯನಲ್ಲಿ ಎಚ್ಚರವನ್ನು ಮೂಡಿಸುತ್ತದೆ. ಸಂಸಾರದ ದುಃಖಗಳು ಪುರುಷನ ಅಟ್ಟಹಾಸದಿಂದ ಹೆಚ್ಚುತ್ತವೆಂದು ಅರಿವಾಗುತ್ತದೆ. ಬೆಳ್ಯಕ್ಕನ ಪ್ರೇತಕ್ಕೆ ಮುಕ್ತಿ ದೊರಕಿಸಲು ಆಕೆಯ ಸೂಕ್ಷ್ಮ ಶರೀರಕ್ಕೆ ಗೆಳೆಯನಾಗಲು ಒಪ್ಪುತ್ತಾನೆ. ನೊಂದ ಜೀವ ಸೊನಾಲಿನಿಯನ್ನು ತನ್ನ ಸಂಗಾತಿಯಾಗಿ ಮಾಡಿಕೊಳ್ಳಲು ಬಯಸಿ ಒಬ್ಬ ಆದರ್ಶ ಪುರುಷನಾಗಿ ತೋರುತ್ತಾನೆ. ಹೆಣ್ಣಿನ ಪರವಾಗಿ ಸದಾ ತುಡಿವ ಜೀವ ಚಂದ್ರಯ್ಯ ಕಾರಂತರ ವೈಚಾರಿಕತೆ ಮತ್ತು ಮಾನವೀಯ ಪ್ರಜ್ಞೆಗೆ ಸಾಕ್ಷಿಯಾಗುತ್ತಾನೆ.

**ಅಡಿಟಿಪ್ಪಣಿಗಳು**

1. 'ಸ್ತ್ರೀವಾದಿ ಚಿಂತನೆ' (ಉದ್ಧೃತ : ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆ – ಡಾ.ವಿಜಯಾದಬ್ಬೆ ಪುಟ– 73.) ಪ್ರ.ಸಂ– ಡಾ. ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2020.
2. 'ಸರಸಮ್ಮನ ಸಮಾಧಿ', ಡಾ.ಕೆ.ಶಿವರಾಮ ಕಾರಂತ, ಎಸ್.ಬಿ.ಎಸ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ಮರುಮುದ್ರಣ – 1990. ಕಾದಂಬರಿಯ ಮುನ್ನುಡಿಯಿಂದ.
3. ಅದೇ, ಪುಟ–4.
4. ಅದೇ, ಪುಟ–5.
5. ಅದೇ, ಪುಟ–35.
6. ಅದೇ, ಪುಟ–36.

**ಪರಾಮರ್ಶನ ಗ್ರಂಥಗಳು**

1. ‘ಸಾಲುದೀಪಗಳು’ ಸಂ. ಜಿ.ಎಸ್. ಸಿದ್ಧಲಿಂಗಯ್ಯ ಮತ್ತು ಎಂ.ಎಚ್. ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು. ಮೊ.ಮುದ್ರಣ–1990.
2. ‘ಸ್ತ್ರೀವಾದಿ ಚಿಂತನೆ’ ಪ್ರ.ಸಂ– ಡಾ. ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2020.

❖❖❖

---

## Form IV

Statement about ownership and other particulars about
CHINTHANA BAYALU (Quarterly)

| | | | |
|---|---|---|---|
| 1. | Place of Publication | : | Bantwal, Dakshina Kannada |
| 2. | Periodicity of its publication | : | Quarterly |
| 3. | Printers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 4. | Publishers Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 5. | Editors Name | : | Reshma G. Bhat |
| | Nationality | : | Indian |
| | Address | : | No. 15-109, Modankapu<br>Bantwal Taluk, D.K. - 574 219 |
| 6. | Names and address of individuals who own the newspaper and partners or sharesholders holding more than one percent of the total capital | | |

I, Reshma G. Bhat, hereby declare that the particulars given above are true to the best of my knowledge and belief.

Date: 1 April 2024

**Reshma G. Bhat**
(Publisher)

# ಸ್ವಾತಂತ್ರ್ಯ ಹೋರಾಟದಲ್ಲಿ ಖಾದಿಯೆಂಬ ಸ್ವಾವಲಂಬನೆಯ ಸಂಸ್ಕೃತಿ

**ಡಾ. ಸುಂದ್ರೇಶ ಎನ್**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಕಟ್ಟೆ, ದಕ್ಷಿಣ ಕನ್ನಡ

**ಪೀಠಿಕೆ**

ಖಾದಿ ಎಂಬ ಶಬ್ದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ದೊಡ್ಡ ರಾಜಕೀಯ ಅಸ್ತ್ರವಾಗಿ ಬಳಕೆಯಾಯಿತು. ಭಾರತದಂತಹ ಬಡದೇಶದಲ್ಲಿ 20ನೇ ಶತಮಾನದ ಪ್ರಾರಂಭದಲ್ಲಿ ಖಾದಿಯೂ ಸ್ವಾವಲಂಬನೆಯ ಪ್ರತೀಕವಾಗಿ ಹೊರಹೊಮ್ಮಿದ್ದು ಇಂದು ಇತಿಹಾಸವಾಗಿದೆ. ಖಾದಿಯು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಜಕೀಯ ಪ್ರಯೋಗಾಲಯದ ಒಂದು ಅಸ್ತ್ರವಾಗಿ ಭಾರತೀಯರ ಮನೆಮನಗಳನ್ನು ಪ್ರಭಾವಿಸಿದ್ದು ಗಮನಾರ್ಹ ಐತಿಹಾಸಿಕ ಸಂಗತಿಯಾಗಿದೆ. ಖಾದಿಸಂಸ್ಕೃತಿಯೆಂದರೆ ಸ್ವಾವಲಂಬನೆಯ ಸಂಸ್ಕೃತಿ ಎನಿಸಿತು. ಸಾಮಾನ್ಯವಾದ ಒಂದು ವಸ್ತ್ರ ದೊಡ್ಡ ಸಾಂಕೇತಿಕ ಅಸ್ತ್ರವಾಗಿ ಬಲಿಷ್ಠವಾಗಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿಯಂತಹ ಬಿರುಗಾಳಿಯ ವಿರುದ್ಧ ಹೋರಾಡಲು ತಡೆಗೋಡೆಯಾಗಿ ನಿಂತುದನ್ನು ಪರಿಶೀಲಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

******

ಖಾದಿ ಎಂದರೆ ಕೈಯಿಂದ ನೂಲಲ್ಪಟ್ಟ ಹಾಗೂ ಕೈಯಿಂದಲೇ ನೇಯಲ್ಪಟ್ಟ ಒಂದು ವಸ್ತ್ರವಾಗಿದೆ. ಖಾದಿಯು ಪರಿಶುದ್ದತೆಯ, ಸರಳತೆಯ, ಸ್ವಾವಲಂಬನೆಯ, ಬಡತನದ, ಸ್ವಯಂಗೌರವ, ಸ್ವಯಂ ಆತ್ಮ ಶುದ್ಧೀಕರಣದ ಪ್ರತೀಕವಾಗಿ ಭಾರತೀಯರಿಗೆ ವಿದೇಶಿ ಶಕ್ತಿಯ ವಿರುದ್ಧ ಹೊರಾಡಲು ಒಂದು ಅವಕಾಶ ಒದಗಿಸಿತು. ಖಾದಿಯು ಅಸ್ತ್ರವಾಗಿ ರೂಪುಗೊಂಡದ್ದು 1905ರ ಸ್ವದೇಶಿ ಚಳುವಳಿಯ ಸಂದರ್ಭದಲ್ಲಿ. ಆ ಸಂದರ್ಭದಲ್ಲಿ ಸ್ವದೇಶಿ ಚಳುವಳಿಯ ಭಾಗವಾಗಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಸ್ವದೇಶಿ ನಿರ್ಮಿತ ವಸ್ತುಗಳನ್ನೇ ಬಳಸಬೇಕೆಂದು ಮತ್ತು ಅದರ ಜೊತೆಗೆ ಬ್ರಿಟಿಷ್ ಸಮ್ರಾಜ್ಯಶಾಹಿಯ ವಿರುದ್ಧ ಶಾಂತಿಯುತ ಪ್ರತಿಭಟನೆಯನ್ನು ಉತ್ತೇಜಿಸುವ ಸಲುವಾಗಿ ಖಾದಿಯನ್ನು ಅಹಿಂಸಾತ್ಮಕ ಚಳುವಳಿಯ ಭಾಗವಾಗಿ ಆರಂಭಿಸಲಾಯಿತು. ಮುಂದೆ ಮಹಾತ್ಮ ಗಾಂಧಿಯವರು ಖಾದಿಯನ್ನು ಭಾರತದ ಬಡತನಕ್ಕೆ ಒಂದು ಮದ್ದಾಗಿ, ಭಾರತೀಯರ ಮಧ್ಯಮ ವರ್ಗದವರಿಗೆ ಸ್ವಾವಲಂಬಿ ಬದುಕು, ಸ್ವಯಂ ಉದ್ಯೋಗಗಳನ್ನು ಸೃಷ್ಟಿಸುವ ಅವಕಾಶವಾಗಿ ಬೆಳೆಸುವ ಯತ್ನ ಮಾಡಿದರು.

**ಹಿನ್ನೆಲೆ**

ಖಾದಿಯು ಭಾರತೀಯ ವಸ್ತ್ರ ಪರಂಪರೆಯ ಚಿಹ್ನೆಯಾಗಿದೆ. ಭಾರತದಲ್ಲಿ ನೂಲು ಮತ್ತು ಬಟ್ಟೆಯ ಉಲ್ಲೇಖವು ಕ್ರಿ.ಪೂ. 4000ನಲ್ಲೆ ಮೆಹರ್‌ಘಡ್‌ನಲ್ಲಿ ಕಂಡುಬರುತ್ತದೆ.[1]

ಸಿಂಧೂ ನಾಗರಿಕತೆಯ ಜನರು ನೂಲಿನಿಂದ ಬಳಸಿದ ಬಟ್ಟೆಗಳನ್ನು ಬಳಸಿರುವ ಉದಾಹರಣೆಗಳಿವೆ. ಹಾಗಾಗಿ ಗ್ರೀಕರು ಇವರನ್ನು ಸಿಂಧೂ ಎಂದು ಕರೆಯುತ್ತಿದ್ದರು. ಸಿಂಧೂನ್ ಎಂಬ ಶಬ್ದವು ಸಿಂಧೂ ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ. ಇಷ್ಟೇ ಅಲ್ಲದೆ ಟೆರಾಕೊಟ್ಟಾ ಸ್ಪಿಂಡಲ್‌ಗಳು, ಮೂಳೆಯ ಸಾಧನಗಳು (ನೂಲುವ) ವಿಗ್ರಹಗಳನ್ನು ಬಳಸಿರುವ ನೆಯ್ದ ಬಟ್ಟೆಗಳ ಮಾದರಿಯು ಸಿಗುತ್ತದೆ. ಸಿಂಧೂ ನಾಗರಿಕತೆಯಲ್ಲಿ ತುಂಬಾ ಅಭಿವೃದ್ಧಿಗೊಂಡ ಮತ್ತು ಸಾಂಪ್ರದಾಯಿಕ ವಸ್ತ್ರದ ಬಳಕೆಯ ಬಗ್ಗೆ ಮಾಹಿತಿ ದೊರೆಯುತ್ತದೆ. ಕ್ರಿ.ಪೂ. 400ದಲ್ಲಿ ಹೆರೊಡೊಟಸ್ "tree growing wild, which produce a kind of wool better than sheep's wool in beauty and quality the Indians use this tree wool to make their cloths" ಗ್ರೀಕ್‌ನ ಸ್ಟ್ರಾಬೋ ಕೂಡ ಭಾರತೀಯ ಬಟ್ಟೆಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾನೆ. ಅಜಂತಾ ಚಿತ್ರಕಲೆಯಲ್ಲಿ ಕೂಡ ಗಿಡದಿಂದ ಹತ್ತಿಯನ್ನು ಬಿಡಿಸುತ್ತಿರುವ ಚಿತ್ರವನ್ನು ಗುರುತಿಸಬಹುದು. ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಕೂಡ ಸೂತ್ರಧ್ಯಕ್ಷನ ಉಲ್ಲೇಖವಿದ್ದು. ಇವನ ಕಾರ್ಯ ಬಟ್ಟೆ ನೂಲುವ ಕುಶಲಕರ್ಮಿಗಳ ನೇತೃತ್ವವನ್ನು ವಹಿಸಿಕೊಳ್ಳುವುದು. ಮಧ್ಯಕಾಲಿನ ಭಾರತದಲ್ಲಿ ಮಸ್ಲಿನ್ ಬಟ್ಟೆಯು ಅತ್ಯಂತ ಪ್ರಸಿದ್ದವಾಗಿತ್ತೆಂದು ತಿಳಿಯುತ್ತದೆ. ಮೊಘಲ್ ದೊರೆ ಔರಂಗಜೇಬ್‌ನ ಮಗಳು ಜೇಬ್-ಉನ್ನಿಸಾ ಏಳು ಪದರಗಳ ಮಸ್ಲಿನ್ ಬಟ್ಟೆ ಬಳಸಿದ್ದ ಬಗ್ಗೆ ಮಾಹಿತಿ ಇದೆ. 17ನೇ ಶತಮಾನದ ಹೊತ್ತಿಗೆ ಭಾರತದ ನೂಲಿನ ಮಸ್ಲಿನ್, ಕ್ಯಾಲಿಕೋ ಮತ್ತು ಚಿಂಟ್ಜ್ ಬಟ್ಟೆಯು ಯುರೋಪಿನಲ್ಲೆಲ್ಲ ವಿಶ್ವ ಪ್ರಸಿದ್ದವಾಗಿತ್ತು. 17 ಮತ್ತು 18ನೇ ಶತಮಾನದಲ್ಲಿ ಭಾರತೀಯ ಬಟ್ಟೆಯು ಯೂರೋಪಿನ ಪ್ರತಿ ಮನೆ ಮನೆಯಲ್ಲೂ ಸ್ಥಾನಮಾನವನ್ನು ಪಡೆದಿತ್ತು. ಅದು ಯಾವ ಮಟ್ಟಕ್ಕೆ ಎಂದರೆ 1686 ಮತ್ತು 1720ರಲ್ಲಿ ಭಾರತಿಯ ಬಟ್ಟೆಯ ರಫ್ತನ್ನು ನಿಷೇದಿಸಿ ಕಾಯ್ದೆಯನ್ನು ಜಾರಿಗೆ ತಂದಿತ್ತು. ಆ ಮಟ್ಟಕ್ಕೆ ಭಾರತೀಯ ವಸ್ತ್ರವು ಪ್ರಸಿದ್ದವಾಗಿತ್ತು.

**ಸ್ವಾತಂತ್ರ್ಯ ಹೋರಾಟದಲ್ಲಿ ಖಾದಿ**

ಮಹಾತ್ಮ ಗಾಂಧೀಜಿಯವರು ಖಾದಿಯನ್ನು ಸ್ವದೇಶಿ ಆಂದೋಲನದ ಸಂದರ್ಭದಲ್ಲಿ ಪ್ರಮುಖವಾಗಿ ಭಾರತೀಯ ಏಕತೆಯ ಮತ್ತು ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆಯ ಸಂಕೇತವೆಂದು ಪರಿಗಣಿಸಿದ್ದರಿಂದ ಬ್ರಿಟಿಷ್ ಜವಳಿಗಳಿಂದ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವನ್ನು ಸಾಧಿಸುವ ಸಲುವಾಗಿ 1918ರಲ್ಲಿ ಅವಿಭಜಿತ ಭಾರತದ ಜನರಿಗೆ ಖಾದಿಯನ್ನು ಪರಿಚಯಿಸಲಾಯಿತು. 1917 ಮತ್ತು 18 ವರ್ಷಗಳಲ್ಲಿ ಸಬರಮತಿ ಆಶ್ರಮದಲ್ಲಿ ಚರಕದಿಂದ ನೂಲು ತೆಗೆದು ಖಾದಿ ಬಟ್ಟೆ ತಯಾರಿಸಲು ಪ್ರಾರಂಭಿಸಿದರು. ಇದರಿಂದ ಪ್ರೇರಣೆಗೊಂಡು ಭಾರತದಾದ್ಯಂತ ಪ್ರಚಾರಗಳು ಆರಂಭವಾದವು. ಇದು ಒಂದು ಕ್ರಾಂತಿಯ ರೂಪ ಪಡೆದು ಜವಳಿ ಉದ್ಯಮಕ್ಕೆ ಅತೀ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಗಾಂಧೀಜಿಯ ಈ ಪ್ರಯತ್ನದಿಂದ ಗ್ರಾಮಗಳಲ್ಲಿ ಚಳುವಳಿಯಿಂದ ನೂರಾರು ಜನರಿಗೆ ಸ್ವಯಂ ಉದ್ಯೋಗಗಳು ಲಬಿಸಿದವು. ನೇಕಾರರು, ಗಾಣಿಗ, ಚಮ್ಮಾರ, ಕುಂಬಾರ ಮುಂತಾದ ವರ್ಗಗಳಿಗೆ ಉತ್ತೇಜನವಾಗಿ ಖಾದಿ ಟೋಪಿ, ವಸ್ತ್ರ, ಪಂಚೆ, ಸೀರೆ, ಪೇಟ ಇವೆಲ್ಲಾ ಜನಪ್ರಿಯತೆ ಜೊತೆಗೆ ಬಳಕೆಗೂ ಕೂಡ ಬಂದವು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾರತದ ಶ್ರೀಮಂತ ನಾಗರಿಕರು

ಈ ಖಾದಿ ಬಟ್ಟೆಯನ್ನು ಬಳಸುವುದರ ಮೂಲಕ ಒಳ್ಳೆ ಬೆಳವಣಿಗೆಗೆ ಕಾರಣರಾದರು ಮತ್ತು ವಿದೇಶದಿಂದ ಆಮದಾಗುತ್ತಿದ್ದ ವಸ್ತುಗಳನ್ನು ಬಹಿಷ್ಕರಿಸಿದರು.

'ಸ್ವದೇಶಿ ಎಂದರೆ ಅತ್ಯಂತ ಪರಿಪೂರ್ಣ ಸಂಘಟನೆಯ ಸೃಷ್ಟಿ, ಇದರಲ್ಲಿ ಪ್ರತಿಯೊಂದು ಭಾಗವು ಪರಸ್ಪರ ಪರಿಪೂರ್ಣ ಸಾಮರಸ್ಯದಿಂದ ಕಾರ್ಯನಿರ್ವಹಿಸುತ್ತದೆ. ಅಂತಹ ಸಂಘನೆಯನ್ನು ಹುಟ್ಟುಹಾಕುವಲ್ಲಿ ನಾವು ಯಶಸ್ವಿಯಾದರೆ, ಸ್ವದೇಶಿ ಯಶಸ್ಸು ಖಚಿತವಾಗುವುದು ಮಾತ್ರವಲ್ಲ ನಿಜವಾದ ಸ್ವರಾಜ್ಯವು ನಮಗೆ ಸಹಜವಾಗಿ ಬರುತ್ತದೆ.'[2]

ಹೀಗೆ ಕೆಲವೇ ಸಮಯದಲ್ಲಿ ಖಾದಿ ಭಾರತದ ರಾಷ್ಟ್ರೀಯ ವಸ್ತ್ರವಾಯಿತು. ಕೈಗಾರಿಕಿಕರಣದ ಕಾರಣದಿಂದಾಗಿ, ಬ್ರಿಟಿಷ್ ಜವಳಿ ಉದ್ಯಮವು ಹತ್ತಿಯಿಂದ ಸಿದ್ದಪಡಿಸಿದ ಸರಕುಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಲು ಪ್ರಾರಂಭಿಸಿತು. ಮತ್ತು ಇವುಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡಿತು. ಅವರು ಭಾರತವನ್ನು ಸಿದ್ದಪಡಿಸಿದ ಜವಳಿ ಉತ್ಪನ್ನಗಳ ಪೂರೈಕೆದಾರರಿಂದ ಬ್ರಿಟನ್‌ಗೆ ಕಚ್ಚಾ ವಸ್ತುಗಳ(ಹತ್ತಿ) ರಫ್ತುದಾರರಾಗಿ ಮತ್ತು ಅಗ್ಗದ ಕಡಿಮೆ ಗುಣಮಟ್ಟದ ಬಟ್ಟೆಗಳ ಆಮದುದಾರರಾಗಿ ಪರಿವರ್ತಿಸಿದರು. ಹೀಗಾಗಿ ಭಾರತೀಯ ಕುಶಲಕರ್ಮಿಗಳು ಭಾರಿ ಆರ್ಥಿಕ ಹೊಡೆತವನ್ನು ಎದುರಿಸಿದರು. ಈ ಸಂದರ್ಭದಲ್ಲಿ ಗಾಂದೀಜಿಯವರು ಸ್ವರಾಜ್ ಅಥವಾ ಸ್ವರಾಜ್ಯಕ್ಕಾಗಿ ಕರೆ ನೀಡಿದರು. ಗಾಂಧಿಯವರು ಜನಸಾಮಾನ್ಯರನ್ನು ಬಡತನದಿಂದ ಮೇಲೆತ್ತುವ ಮತ್ತು ಸ್ವಾವಲಂಬನೆಯ ವ್ಯವಸ್ಥೆಯನ್ನು ನಿರ್ಮಿಸುವ ಮಾರ್ಗವನ್ನಾಗಿ ಇದನ್ನು ಕಂಡರು. ಖಾದಿಯನ್ನು ಗ್ರಾಮ ಸಂವರ್ಧನೆಯ ಅಸ್ತ್ರವನ್ನಾಗಿಸಿದರು.

1920ರ ವಿಶೇಷ ಕಾಂಗ್ರೇಸ್ ಅಧಿವೇಶನದಲ್ಲಿಯೇ "ಕೈ ನೂಲು ಮತ್ತು ಕೈ ನೇಯ್ಗೆ ಹಾಗೂ ಖಾದಿಯನ್ನು ಧರಿಸುವುದನ್ನು ಪ್ರತಿ ಪುರುಷ ಮಹಿಳೆ ಮತ್ತು ಮಗುವಿಗೆ ಶಿಸ್ತು ಮತ್ತು ಸ್ವಯಂ ತ್ಯಾಗದ ಕ್ರಮಗಳಾಗಿ ಸೂಚಿಸಲಾಯಿತು." ಆ ಮೊದಲೇ ಗಾಂಧೀಜಿಯವರು ನೂಲುವ ಬಗ್ಗೆ 1908ರಲ್ಲಿ 'ಇಂಡಿಯನ್ ಹೋಮ್ ರೂಲ್'ನಲ್ಲಿ ಉಲ್ಲೇಖಿಸಿದ್ದರು. 'ನನಗೆ ಖಾದಿ ಧರಿಸುವುದು ಧರ್ಮದ ವಿಷಯವಾಗಿದೆ. ಖಾದಿಯನ್ನು ಬಳಸುವುದು ಸ್ವದೇಶಿಯ ಅಡಿಪಾಯವಾಗಿದೆ. ಏಕೆಂದರೆ ಖಾದಿಯು ನೂಲಿನಿಂದ ಸುಲಭವಾಗಿ ತಯಾರಿಸಬಹುದಾದ ಏಕೈಕ ವಸ್ತುವಾಗಿದೆ. ಖಾದಿಯಿಂದ ಲಕ್ಷಗಟ್ಟಲೇ ಬಡವರು ಮನೆಯಲ್ಲಿಯೇ ಇದ್ದು ಪ್ರಾಮಾಣಿಕ ಜೀವನ ನಡೆಸಲು ಸಾಧ್ಯವಾಗುತ್ತದೆ'.[3]

'ನನ್ನ ದೃಷ್ಟಿಯಲ್ಲಿ ಖಾದಿ ಸಾಕಷ್ಟು ಕಲಾತ್ಮಕವಾಗಿದೆ. ನನ್ನ ಮತ್ತು ಇತರ ಅನುಭವದಿಂದ ಹೇಳಬಲ್ಲೆ ಬೇಸಿಗೆಯಲ್ಲಿ ಬೆವರಿನಿಂದ ದೇಹಕ್ಕೆ ಅಂಟಿಕೊಳ್ಳುವ ಕ್ಯಾಲಿಕೋ ವಿರುದ್ಧವಾಗಿ ಖಾದಿಯು ತೇವಾಂಶವನ್ನು ಹೀರಿಕೊಳ್ಳುವ ಗುಣ ಹೊಂದಿದೆ. ಖಾದಿ ಹೆಚ್ಚು ಉಪಯುಕ್ತ ಮತ್ತು ಉತ್ತಮವಾದ ಬಟ್ಟೆಯಾಗಿದೆ. ಇದು ಕ್ಯಾಲಿಕೋಗಿಂತ ಹೆಚ್ಚು ಸುಂದರವಾಗಿದೆ. ಏಕೆಂದರೆ ಇದರಲ್ಲಿ ಆತ್ಮವಿದೆ. ಖಾದಿಯ ತುಂಡು ತನ್ನದೆ ಆದ ಆತ್ಮವನ್ನು ಹೊಂದಿದೆ.'[4]

ಭಾರತೀಯ ರಾಷ್ಟ್ರೀಯ ಜೀವನದಲ್ಲಿ ಚರಕವನ್ನು ಪರಿಚಯಿಸಿದುದು ಗಾಂಧೀಜಿಯವರ ಅನನ್ಯ ಮತ್ತು ವಿಶಿಷ್ಟ ಕೊಡುಗೆಯಾಗಿದೆ. ಗಾಂಧೀಜಿ ಪ್ರಕಾರ ಜನರ ಬಡತನಕ್ಕೆ ಏಕೈಕ ದಿವ್ಯೌಷಧ ಚರಕ. ನಾಯಕರು ಖಾದಿಯನ್ನು ಮೊದಲು ತಾವು ಧರಿಸುವುದರ ಮೂಲಕ ಚಳುವಳಿಗೆ ಮತ್ತಷ್ಟು ಉತ್ತೇಜನ ನೀಡುತ್ತಿದ್ದರು.

ಖಾದಿ ಉತ್ತೇಜನಗೊಳಿಸುವ ಸಲುವಾಗಿ ಸ್ಥಳಿಯ ಸಂಸ್ಥೆಗಳಾದ ಮುನ್ಸಿಪಾಲಿಟಿ, ತಾಲೂಕು ಮತ್ತು ಜಿಲ್ಲಾ ಬೋರ್ಡ್‌ಗಳು ಖಾದಿಯನ್ನು ತಾವೇ ಖರೀದಿಸಿ ಅವುಗಳನ್ನು ಆಸ್ಪತ್ರೆ, ಶಾಲೆಗಳು ಮತ್ತು ಇತರೆ ಸ್ಥಳೀಯ ಸಂಸ್ಥೆಗಳಿಗೆ ನೀಡುವುದರ ಮೂಲಕ ಉತ್ತೇಜನ ಕೊಡುತ್ತಿದ್ದರು. ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ಜಾತ್ರೆ ಮತ್ತು ಹಬ್ಬ, ಹರಿದಿನಗಳ ಸಂದರ್ಭದಲ್ಲಿ ಖಾದಿ ಮಳಿಗೆಯನ್ನು ಸ್ಥಾಪಿಸಿ ಖಾದಿ ಮಾರಾಟವನ್ನು ಉತ್ತೇಜಿಸುತ್ತಿದ್ದರು.[5] ನೂಲು ಪ್ರತಿಯೊಬ್ಬರಿಗೂ ಸುಲಭವಾಗಿ ತೆರೆದ ಮಾರುಕಟ್ಟೆಯಲ್ಲಿ ಸಿಗುವಂತೆ ವ್ಯವಸ್ಥೆ ಮಾಡಲಾಯಿತು. ಕಾರಣ ಗ್ರಾಮೀಣ ಭಾಗದವರಿಗೆ ನಿರಂತರ ಉದ್ಯೋಗ ಸೃಷ್ಟಿಮಾಡುವುದಾಗಿತ್ತು. ಆದರೆ ನೂತ ಬಟ್ಟೆಯನ್ನು ಇಟ್ಟುಕೊಳ್ಳುವ ವ್ಯವಸ್ಥೆ ಮಾತ್ರ ಸಾಮಾನ್ಯ ರೈತನ ಬಳಿ ಇರಲಿಲ್ಲ.[6]

1925ರ ಸಂದರ್ಭದಲ್ಲಿ ಗಾಂಧಿಜೀಯವರು ಖಾದಿಯನ್ನು ತಯಾರಿಸುವ ನೌಕರನು ಕೆಲವು ತತ್ವಗಳನ್ನು ಪಾಲಿಸಬೇಕು ಎಂದು ಹೇಳಿದ್ದಾರೆ. ಅಂದರೆ ಖಾದಿಯನ್ನು ಕೇವಲ ಒಮದು ಸಂಕೇತವಾಗಿ ಅಲ್ಲ; ಬದಲಾಗಿ ಒಮದು ರಾಷ್ಟ್ರೀಯ ಸಂಸ್ಕೃತಿಯಾಗಿ ರೂಪಿಸುವುದು ಗಾಂಧೀಜಿಯ ಉದ್ದೇಶವಾಗಿತ್ತು ಅನ್ನುವುದು ಅವರು ಹೇಳುವ ತತ್ತ್ವಗಳ ಮೂಲಕ ಗೊತ್ತಾಗುತ್ತದೆ.[7]

ವಿದೇಶದಿಂದ ತರುತ್ತಿದ್ದ ನೂಲಿನ ಪ್ರಮಾಣ 1912 ರಿಂದ 1923ರ ಕಾಲಘಟ್ಟದಲ್ಲಿ ಗಣನೀಯವಾಗಿ ಇಳಿಕೆಯಾದದನ್ನು ಗಮನಿಸಬಹುದು ಅಂದರೆ ಅದು 1912ರಲ್ಲಿ 57% ರಿಂದ 1923 ರಲ್ಲಿ 37% ಆಯಿತು.[8] ಪ್ರಸಿದ್ದ ಲೇಖಕ ಲಾರ್ಡ ಪೆಂಟ್‌ಲ್ಯಾಂಡ್ ಹೇಳುವ ಪ್ರಕಾರ ವಿಭಾರತೀಯರ ಬಹಿಷ್ಕಾರದಿಂದ ಬ್ರಿಟಿಷ್ ಸರ್ಕಾರಕ್ಕೆ ಆದ ನಷ್ಟದ ಅಂದಾಜು ರೂ. 80,000,000.

ಭಾರತವು 21ನೇ ಶತಮಾನಕ್ಕೆ ಕಾಲಿಡುತ್ತಿದ್ದಂತೆ ಭಾರತೀಯ ವಿನ್ಯಾಸಕರ ಹೊಸ ಪಡೆ ಈ ಖಾದಿ ಬಟ್ಟೆಯನ್ನು ಜನಪ್ರಿಯಗೊಳಿಸಲು ಪ್ರಾರಂಭಿಸಿದೆ. ಈ ಪರಿಸರಸ್ನೇಹಿ ಬಟ್ಟೆಗೆ ಸರಕಾರವು ಉತ್ತೇಜನವನ್ನೂ ನೀಡುತ್ತಿದೆ. “ಸರ್ವೋತ್ಕೃಷ್ಟವಾದ ಭಾರತೀಯ ಜವಳಿ” ಎಂದು ಹೊಸಯುಗದಲ್ಲಿ ಖಾದಿಯು ಮರುವ್ಯಾಖ್ಯಾನಕ್ಕೆ ಒಳಗಾಗಿದೆ. ಖಾದಿ ಸಂಸ್ಕೃತಿಯು ಇಂದು ಹೊಸರೂಪದಲ್ಲಿ ಆಧುನಿಕ ಸಂಸ್ಕೃತಿಯ ಭಾಗವೂ ಆಗಿದೆ.

**ಗ್ರಂಥಋಣ**


1. R.S.Sharma “India’s Ancient Past ”- Oxford Page -78

1A. Navajeevan 27/9/1925 “The Collected Works of Mahatma Gandhi XXVIII” (1925) - Page no. 236-38 and Clothing Gandhi Nation -Homespun and Modern India - Lisa Trivedi

2- “The Collected Works of Mahatma Gandhi Vol 17 - Page no. 331-332 - Young India 21/4/1920

3. “The Collected Works of Mahatma Gandhi Vol 17 ” - Page no. 16 -Navajeevan 8/2/1920

4. “The Collected Works of Mahatma Gandhi XXVIII”(1925) - Page no. 340 - Navajeevan 25/4/1920

5. HAND-SPINNING AND HAND WEAVING AN ESSAY-S.V. Puntambekar and N.S. Varadachari - Published By The All India Spinners Association .Ahmadabad- page- 231
6. HAND-SPINNING AND HAND WEAVING AN ESSAY-S.V. Puntambekar and N.S. Varadachari - Published By The All India Spinners Association .Ahmadabad- page- 232
7. “The Collected Works of Mahatma Gandhi XXVIII”(1925) - Page no. 236-8 - Navajeevan 27/9/1925
8. HAND-SPINNING AND HAND WEAVING AN ESSAY-S.V. Puntambekar and N.S. Varadachari - Published By The All India Spinners Association .Ahmadabad- page- 222


❖❖❖

ಮುಗುದೆಯ ಮೇಲುದ ಹಾರುತಲಿದೆ
ಮಿದುಗಾಳಿಯ ಜೊತೆ ಜೊತೆಗೆ
ಎದೆಗೂಡಿನಲೊಡೆದ ಒಲವಿನ ತತ್ತಿಯ
ಮರಿಗಳು ನಭದೆಡೆಗೆ

# ಬಳ್ಳಾರಿ ಸೀಮೆಯ ನವೋದಯ ಕವಿ
# ಜೋಳದರಾಶಿ ದೊಡ್ಡನಗೌಡರು

**ಡಾ. ಜಾಜಿ ದೇವೇಂದ್ರಪ್ಪ**
ಮುಖ್ಯಸ್ಥರು, ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ನವೋದಯ ಕಾವ್ಯದ' ಕಾಲಘಟ್ಟ ಪ್ರಮುಖವಾದದ್ದು. ಕಾವ್ಯದಲ್ಲಿ ವಿಭಿನ್ನ ಪ್ರಯೋಗಗಳನ್ನು ಕಂಡ ಕಾಲ. ನವೋದಯ ಕಾವ್ಯದ ಸಂದರ್ಭದಲ್ಲಿ ಬರೆದ ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಪುತಿನ, ಪಂಜೆ, ಗೋವಿಂದ ಪೈ, ಕಡೆಂಗೋಡ್ಲು ಮುಂತಾದವರು ಗಾಢವಾಗಿ ಕನ್ನಡ ಕಾವ್ಯದ ಓದುಗರಿಗೆ ದಕ್ಕಿದರು. ಈ ದಕ್ಕುವಿಕೆಯಲ್ಲಿ ಸಾಹಿತ್ಯ ಚರಿತ್ರೆಕಾರರು ಮತ್ತು ವಿಮರ್ಶಕರೂ ಮಾಧ್ಯಮವಾಗಿ ನಿಂತದ್ದು ಇದೆ. ಸಾಹಿತ್ಯ ಚರಿತ್ರೆಯನ್ನು ಬರೆಯುವಲ್ಲಿಯೂ ಕೆಲವು ಗಂಭೀರ ಲೋಪಗಳಾಗಿವೆ. ಈ ಲೋಪಗಳನ್ನು ಪ್ರಧಾನವಾಗಿ ಎರಡು ನೆಲೆಯಲ್ಲಿ ಗುರುತಿಸಬಹುದು.

1. ದಕ್ಷಿಣದ ವಿದ್ವಾಂಸರು ಮಾಡಿದ ಅಲಕ್ಷ್ಯ
2. ಪ್ರಧಾನ ಧಾರೆಯಲ್ಲಿದ್ದ ಬರೆಹಗಾರರನ್ನು ಮಾತ್ರ ದಾಖಲೀಕರಣ ಮಾಡಿರುವುದು.

ಸಾಹಿತ್ಯ ಚರಿತ್ರೆಯನ್ನು ಬರೆದ ಕನ್ನಡದ ಚರಿತ್ರೆಕಾರರು ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಸೀಮೆಯ ಬರೆಹಗಾರರನ್ನು ಪ್ರಧಾನವಾಗಿ ಪರಿಗಣಿಸಿಲ್ಲ. ಆರ್. ನರಸಿಂಹಾಚಾರ್ಯ, ತ.ಸು.ಶಾಮರಾಯ, ಕೆ.ವೆಂಕಟರಾಮಪ್ಪ ಮುಂತಾದ ಮುಖ್ಯವಾದವರ ಜೊತೆಗೆ ಬಿಡಿಬಿಡಿಯಾಗಿ ಲೇಖನ ರೂಪದಲ್ಲಿ ಆಯಾ ಕಾಲಘಟ್ಟದಲ್ಲಿ ಸಾಹಿತ್ಯ ಚರಿತ್ರೆಯನ್ನು ಬರೆದವರೂ ಕೂಡ ಉತ್ತರ ಮತ್ತು ಕಲ್ಯಾಣ ಕರ್ನಾಟಕ ಭಾಗದ ಸತ್ವಯುತ ಬರಹಗಾರರನ್ನು ದಾಖಲಿಸಲು ವಿಫಲರಾದರು. ಮಾಹಿತಿಯ ಕೊರತೆಯೆಂಬ ಸರಳವಾದ ಉತ್ತರವನ್ನು ಇದಕ್ಕೆ ನೀಡಲಾಗುವುದಿಲ್ಲ. ಪ್ರಧಾನ ಧಾರೆಯಲ್ಲಿದ್ದ ಕೆಲವೇ ಜನ ಲೇಖಕರನ್ನು ಅಂದು ದಾಖಲಿಸಲಾಯಿತು. ಮಾತ್ರವಲ್ಲ ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದ ಎಲ್.ಎಸ್.ಶೇಷಗಿರಿರಾವ್ ಅವರೂ ಕೂಡ ಈ ಉಪೇಕ್ಷೆಯನ್ನು ಮಾಡಿದರು. ಇದಕ್ಕೆ ಉದ್ದೇಶಗಳು ಮಾತ್ರ ನಿಗೂಢವಾಗಿವೆಯೆನ್ನಬಹುದು.

ಕಲ್ಯಾಣ ಕರ್ನಾಟಕ ಭಾಗದಲ್ಲಿ 17ನೇ ಶತಮಾನದಿಂದ 20ನೇ ಶತಮಾನದವರೆಗೆ ವಿಫುಲವಾದ ಸಾಹಿತ್ಯರಾಶಿಯು ರಚನೆಯಾಯಿತು. ಅಂತೆಯೇ ಇದ್ಯಾವುದನ್ನು ಪರಿಗಣಿಸದೇ ಆಧುನಿಕ ಸಾಹಿತ್ಯ ಚರಿತ್ರೆಯಲ್ಲಿ ಬುದ್ಧಿಜೀವಿ ವರ್ಗವು 17 ರಿಂದ 20ನೇ ಶತಮಾನದವರೆಗೆ ಕಲ್ಯಾಣ ಕರ್ನಾಟಕ ಭಾಗ ಸಾಹಿತ್ಯ ರಚನೆಯ ದೃಷ್ಟಿಯಿಂದ 'ಕತ್ತಲೆ ಯುಗ' ಎಂದು ಘೋಷಿಸಿತು. ಆದರೆ ಈ ಕತ್ತಲೆಯುಗವೆಂದು ಹೇಳಿದ ಸಂದರ್ಭದಲ್ಲಿಯೇ 350 ಜನ ತತ್ವಪದಕಾರರು ಪ್ರಖರವಾಗಿ ಬರೆಯುತ್ತಿದ್ದರು.

ಹಾಡುತ್ತಿದ್ದರು. ಜನಮಾನಸದಲ್ಲಿ ನೆಲೆಯೂರಿ ಸೌಹಾರ್ದ ಬದುಕನ್ನು ಕಟ್ಟಿಕೊಳ್ಳಲು ದುಡಿದರು. ಸಾಮಾಜಿಕ ಸ್ವಾಸ್ಥ್ಯವನ್ನು ಆ ಮೂಲಕ ಕಾಪಾಡುತ್ತ ಬಂದರು.

ನವೋದಯ ಕಾಲಮಾನದಲ್ಲಿ ಮೈಸೂರು–ಧಾರವಾಡ–ಮಂಗಳೂರು ಭಾಗದ ಸಾಹಿತ್ಯಕ್ಕೆ ಪ್ರಾಧಾನ್ಯ ಸಿಕ್ಕಿತು. ಉತ್ತರದ, ಅದರಲ್ಲಿಯೂ ಹೈದ್ರಾಬಾದ್ ಕರ್ನಾಟಕ ಅಲಕ್ಷ್ಯಕ್ಕೆ ಒಳಗಾಯಿತು. ಇದೇ ಸಂದರ್ಭದಲ್ಲಿ ಜೋಳದರಾಶಿ, ದೊಡ್ಡನಗೌಡ, ಸಿದ್ಧಯ್ಯ ಪುರಾಣಿಕ, ಜಯತೀರ್ಥ, ರಾಜ ಪುರೋಹಿತ, ಸಿದ್ಮರಾಮ ಜಂಬಲದಿನ್ನಿ, ರಂ.ರಾ. ನಿಡುಗುಂದಿ ಮುಂತಾದವರು ಗಂಭೀರವಾಗಿ ಕಾವ್ಯ ಪ್ರಯೋಗದಲ್ಲಿ ತೊಡಗಿಕೊಂಡಿದ್ದರು. ವ್ಯಾಕರಣ ತೀರ್ಥ, ಚಂದ್ರಶೇಖರ ಶಾಸ್ತ್ರಿ, ಕೋ. ಚೆನ್ನಬಸಪ್ಪ, ಮುದೇನೂರ ಸಂಗಣ್ಣನವರಂತಹ ಕೆಲವರನ್ನು ಮಾತ್ರ ವಿಮರ್ಶಾಲೋಕ ಗಮನಿಸಿತು. ಆದರೆ ಹೊಸಗನ್ನಡ ಸಾಹಿತ್ಯ ಚರಿತ್ರೆ ಬರೆದವರು ಇತರರ ಬಗ್ಗೆ ಚರ್ಚೆಯಿರಲಿ, ಹೆಸರೂ ಕೂಡ ಪಟ್ಟಿ ಮಾಡುವ ಗೋಜಿಗೆ ಹೋಗದಿರುವುದು ಸೋಜಿಗವೇ ಸರಿ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನವೋದಯ ಕಾಲಮಾನದಲ್ಲಿ ಪ್ರಖರವಾಗಿ ಬರೆದು ಪ್ರಸಿದ್ಧಿಯಾದವರಲ್ಲಿ ಜೋಳದರಾಶಿ ದೊಡ್ಡನಗೌಡ ಪ್ರಮುಖರು. ಬಹುಮುಖ ಪ್ರತಿಭೆಯ ದೊಡ್ಡನಗೌಡರು ಕಾವ್ಯದಲ್ಲಿ ಸಂಪ್ರದಾಯದ ಗುಣವನ್ನು ಕಾಪಿಟ್ಟುಕೊಂಡೇ ಗೇಯತೆಯನ್ನು ಬೆರೆಸಿ ವಿನೂತನ ಶೈಲಿಯಲ್ಲಿ ಬರೆದರು. ಏಕಕಾಲದಲ್ಲಿ ಅವರ ಕವಿತೆಯು ಗಮಕಕ್ಕೆ ಒಳಪಡುವಂತೆ ಬರೆದದ್ದು ಗೌಡರ ವಿಶೇಷ. ಕುವೆಂಪು, ಬೇಂದ್ರೆ, ಪುತಿನ, ಗೋವಿಂದ ಪೈ, ಪಂಜೆಯವರಂತೆ ಭಾವಗೀತೆಯ ಶಾಸ್ತ್ರೀಯ ಲಕ್ಷಣಗಳನ್ನು ಅನುಸರಿಸಲಿಲ್ಲವಾದರೂ ಭಿನ್ನ ಗೇಯಲಕ್ಷಣ ಹೊಂದಿರುವ ಕಾವ್ಯ ಪ್ರಯೋಗ ಮಾಡಿದರು. ದೊಡ್ಡನಗೌಡರು ಸ್ವತಃ ಕವಿ ಮತ್ತು ವಾಗ್ಗೇಯಕಾರ. 'ಗಮಕ ಕಲಾನಿಧಿ' ಎಂಬ ಬಿರುದನ್ನು ಸಹೃದಯದಿಂದಲೇ ಪಡೆದವರು. ಕುವೆಂಪು, ಬೇಂದ್ರೆ, ಶ್ರೀರಂಗ, ಕೈಲಾಸಂ, ಜಿ.ಪಿ.ರಾಜರತ್ನಂ, ಪುತಿನ, ಬಿಎಂಶ್ರೀ, ಬಳ್ಳಾರಿ ರಾಘವ ಮುಂತಾದ ಪ್ರಸಿದ್ಧ ಬರಹಗಾರರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಗೌಡರ ನಟನೆ, ಹಾಡುಗಾರಿಕೆ ಕಾವ್ಯ ರಚನೆಗಳನ್ನು ಅವರೆಲ್ಲ ಮನದುಂಬಿ ಮೆಚ್ಚಿಕೊಂಡಿದ್ದರು. ಬಳ್ಳಾರಿ ಜಿಲ್ಲೆಯ ಜೋಳದ ರಾಶಿಯಲ್ಲಿ ಜನಿಸಿದ ದೊಡ್ಡನಗೌಡರು ತೆಲುಗು–ಕನ್ನಡ–ಎರಡೂ ಭಾಷೆಯಲ್ಲಿ ಸಾಹಿತ್ಯ ರಚಿಸಿದರು. ಗಮಕವನ್ನು ಎರಡೂ ಭಾಷೆಯಲ್ಲಿ ಹಾಡುತ್ತಿದ್ದರು. ಆ ಕಾಲದ ತೆಲುಗಿನ ಪ್ರಸಿದ್ಧಾತಿಪ್ರಸಿದ್ಧ ಬರಹಗಾರರೊಂದಿಗೆ ಗೌಡರ ಒಡನಾಟವಿತ್ತು.

ದೊಡ್ಡನಗೌಡರ ಬರಹಗಳನ್ನು ಪ್ರಧಾನವಾಗಿ ಈ ಕೆಳಗಿನಂತೆ ಎಂದು ವಿಭಾಗಿಸಬಹುದು.

ಎ) ಕವಿತೆ

ಬಿ) ಹಾಡುಗಳು

ಸಿ) ನಾಟಕಗಳು

ಡಿ) ಆತ್ಮಚರಿತ್ರೆ

ಇ) ಅನುವಾದಗಳು

ಎಫ್) ವಚನಗಳು

ದೊಡ್ಡನಗೌಡರ ಕಾವ್ಯದಲ್ಲಿ ಭಕ್ತಿ ಮತ್ತು ಭಾವಸೌಂದರ್ಯ ಅಂತರಂಗದ ಸ್ಥಾಯಿಗುಣವಾಗಿದೆ. ಅವರ ಪ್ರತೀ ಬರೆಹ ಅಧ್ಯಾತ್ಮಮಾರ್ಗ ಮತ್ತು ಸಾಮಾಜಿಕ

ದರ್ಶನದ ಸಮ್ಮಿಲನವೆಂಬಂತಿದೆ. ಅವರು ತಮ್ಮ ಕವಿತೆಯ ಬರೆಹದ ಕುರಿತು ಹೇಳುತ್ತಾ "ನಾನು ಕವಿತೆ ಬರೆದು ಆಮೇಲೆ ಅವಕ್ಕೆ ಧಾಟಿ ಕೂಡಿಸುವುದಿಲ್ಲ. ನನ್ನಲ್ಲಿ ಸಹಜವಾಗಿ ಮೂಡಿ ಬಂದ ಧಾಟಿಗಳು ಪಲ್ಲವಿಗಳು ಕವಿತೆ ಬರೆಯಲು ಒತ್ತಾಯಿಸುತ್ತವೆ. ಹೀಗಾಗಿ ಕವಿತೆಯ ಭಾಗಕ್ಕೆ ತಕ್ಕ ಧಾಟಿಗಳು ಏಕಕಾಲಕ್ಕೆ ಸ್ಪಷ್ಟ ಆಕಾರ ಪಡೆಯುತ್ತವೆ." ಎಂದಿದ್ದಾರೆ. (ಉದಯವಾಣಿ–ದೀಪಾವಳಿ ವಿಶೇಷಾಂಕ –86)

ಡಾ. ಜೋಳದ ರಾಶಿ ದೊಡ್ಡನಗೌಡರ ಕಾವ್ಯದಲ್ಲಿ ನಮ್ಮ ಹಳಗನ್ನಡ ಕಾವ್ಯದ ಪಾರಂಪರಿಕ ಶೈಲಿ, ಜಾನಪದದ ಲಯಗಳು, ಹಾಡಲು ಸುಲಭವಾಗುವ ಪ್ರಾಸಬದ್ಧ ರಚನೆಗಳು ಧಾರಾಳವಾಗಿ ಮೂಡಿ ಬಂದಿವೆ. ಶ್ರೀಯುತರು 1941ರಲ್ಲಿ 'ಲಾವಣಿಗಳು' ಎಂಬ ರಚನೆಯನ್ನು ಮಾಡಿದರು. ಇದರಲ್ಲಿ ತಮ್ಮ ಮೇಲೆ ಅಪಾರ ಪ್ರಭಾವ ಬೀರಿದ್ದ ಉರವಕೊಂಡ ಚೆನ್ನಬಸವಸ್ವಾಮಿಗಳ ಕುರಿತು ಬರೆದಿದ್ದಾರೆ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಉರವಕೊಂಡ 1941ರಲ್ಲಿ ಇನ್ನೂ ಕರ್ನಾಟಕದಲ್ಲಿತ್ತು. ಚನ್ನಬಸವಸ್ವಾಮಿಗಳ ಸಂಕ್ಷಿಪ್ತ ಜೀವನಚರಿತ್ರೆ ಈ ಲಾವಣಿಯಲ್ಲಿದೆ.

**ಜಾತಿಮತಗಳ ಭೇದಗಳೆನಿಸದೆ**
**ಮತ್ಸರವಿಲ್ಲದ ಭಾವದಲಿ**
**ಸತ್ಯಧರ್ಮದ ಮಾರ್ಗದಲಿ**
**ಹಿತವನು ಪೇಳುತ ಸರಸದಲಿ'**

**........................**

**ಪ್ರೀತಿಯತೋರುವ ಎಲ್ಲರಲಿ (ಲಾವಣಿಗಳು –1941 ಪುಟ–07)**

ಎಂದು ಬರೆಯುತ್ತ ಆ ಕಾಲಘಟ್ಟದಲ್ಲಿ ಲಿಂಗಾಯತ ಮಠಾಧೀಶರುಗಳು ಸಾಧಿಸಿದ್ದ ಜಾತ್ಯಾತೀತ ಮನೋಭಾವದ ಸಂಗತಿಗಳನ್ನು ದಾಖಲಿಸಿದ್ದಾರೆ.

ದೊಡ್ಡನಗೌಡರು 1947ರಲ್ಲಿ ಬರೆದ ನಮ್ಮ ನುಡಿಗಳ ಮೇಲ್ಮೆ ಎಂಬ ಬರಹಗಳು ಪ್ರಮುಖವಾದವು. ನವೋದಯ ಕವಿಗಳು ಆ ಕಾಲದ ತುರ್ತಾಗಿದ್ದ ನುಡಿ ಹೋರಾಟ, ನಾಡು ನುಡಿಯ ಅಭಿಮಾನವನ್ನು ತಮ್ಮ ಬರಹಗಳಲ್ಲಿ ಪ್ರಧಾನವಾಗಿಸಿಕೊಂಡಿದ್ದರು. ಬಿಎಂಶ್ರೀ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಸಮನ್ವಯದ ನೆಲೆಯಲ್ಲಿ ಮಾತನಾಡುತ್ತಲೇ ಕನ್ನಡ ನುಡಿಯನ್ನು ಉಳಿಸಿಕೊಂಡ ಬಗೆಯ ಕುರಿತು ಬರೆದರು. ಕುವೆಂಪು ಅವರು ನಾಡು–ನುಡಿಯ ಅಪ್ರತಿಮ ರಚನೆಗಳನ್ನು ನೀಡಿದರು. ಅಂತೆಯೇ ಬಳ್ಳಾರಿ ಸೀಮೆಯಲ್ಲಿದ್ದ ದೊಡ್ಡನಗೌಡರು ತಮ್ಮದೇ ಶೈಲಿಯಲ್ಲಿ ನುಡಿಯ ಮೇಲ್ಮೆಯನ್ನು ಕುರಿತು–

**ಇಂತ ಬಂಗಾರದಂತ ಪದಗಾಳು ನಮ್ಮವು**
**ಇಂದು ಇಂಗ್ಲಿಷ್ ಕಲ್ತು ಬೈತಾರೆ ಟಸ್‌ಪುಸ್ ಅಂತಾರೆ**
**ಇವರ್ನೋಡಿ ನಮ್ಮಳ್ಳಿ ಜನರಂಗೆ ಕಲ್ತಾರೆ**
**ಒಳ್ಳೆ ಒಳ್ಳೆ ಪದಗಳೆನ್ನೆಲ್ಲಾ ಮತ್ತು ಬಿಟ್ಟು ಕುಂತಾರೆ (ನಮ್ಮ ನುಡಿಗಳ ಮೇಲ್ಮೆ ಪು–12)**

ಎಂದು ಬರೆಯುವಲ್ಲಿ ಇಂಗ್ಲಿಷ್ ಭಾಷೆ ಕನ್ನಡದ ಗ್ರಾಮೀಣ ಜನರನ್ನೂ ತಲುಪಿ ಮಾಡಿದ ಪ್ರಭಾವವನ್ನು ಗಮನಿಸಬೇಕು. ಕನ್ನಡದ ಆತಂಕವನ್ನು ಈ ಪದ್ಯ ಸೂಕ್ಷ್ಮವಾಗಿ ದಾಖಲಿಸುತ್ತದೆ. ಗೌಡರಿಗೆ ಶಿಷ್ಟ ದಾಖಲು ಸಾಹಿತ್ಯಕ್ಕಿಂತ ನಮ್ಮ ತೋಂಡಿ ಪರಂಪರೆಯ ಕುರಿತು ಅಪಾರ ಶ್ರದ್ಧೆಯಿದೆ.

ಅಂತೆಯೇ ಕನ್ನಡಿಗರನ್ನು ತಮ್ಮ ಸಿಂಹನಾದದಿಂದ ಹಾಡುತ್ತಾ ಎಚ್ಚರಿಸುತ್ತಾರೆ

ಕವಿ ದೊಡ್ಡನಗೌಡರು.

**ಓ ಯೆನ್ನ ಕನ್ನಡದ ಬಾಂಧವರೆ**

– – – – –

– – – –

**ಕಾಳರಾತ್ರಿಯು ಕಳೆದು ಬೆಳಗಾಯ್ತು ಏಳಿನ್ನು**

**ಚೆಲುವು ಕನ್ನಡನಾಡ ತೇಜವಂ ಬೆಳಗಿನ್ನು** **(1947 ಪುಟ–16)**

ಇಡೀ ಕವಿತೆಯಲ್ಲಿ ಕನ್ನಡದ ಚಂಪೂ ಕವಿಗಳ ಸಾಧನೆ, ಸಾಹಿತ್ಯ ನೆನೆದು, ಭವ್ಯ ಚರಿತ್ರೆಯನ್ನು ಅವಲೋಕಿಸಿ ಮುಂದೆ ಕನ್ನಡಿಗರು ಮಾಡಬೇಕಾದ ಸಂಗತಿಗಳನ್ನು ಬರೆದಿದ್ದಾರೆ.

ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಬಳ್ಳಾರಿ ಪರಿಸರದಲ್ಲಿ ತೆಲುಗು–ಕನ್ನಡಿಗರ ಸಂಘರ್ಷಗಳು ಆರಂಭವಾಗಿದ್ದವು. ಸಹಜವಾಗಿ ದ್ವಿಭಾಷಿಕ ಪರಿಸರದಲ್ಲಿ ತೆಲುಗರು–ಕನ್ನಡಿಗರು ಎರಡೂ ಸಮುದಾಯ ಸಂಸ್ಕೃತಿ, ಆಚರಣೆಗಳಿದ್ದವು. ಪ್ರತ್ಯೇಕ ರಾಜ್ಯದ ವಿಷಯ–ಹೋರಾಟ ಆರಂಭವಾದಾಗ ಆಂಧ್ರಿಗರು ಬಳ್ಳಾರಿಯನ್ನು ಕೇಳಿದರು. ಬಳ್ಳಾರಿಯಲ್ಲಿದ್ದ ಬಹುತೇಕ ತೆಲುಗು ಭಾಷೆಯನ್ನಾಡುವ ರಾಜಕಾರಣಿಗಳ ಒಲವು ಕೂಡ ಬಳ್ಳಾರಿಯು ಆಂಧ್ರಪ್ರದೇಶಕ್ಕೆ ಸೇರಬೇಕೆಂಬುದಾಗಿತ್ತು. ಅಪ್ಪಟ ಕನ್ನಡದ ಪ್ರದೇಶಗಳಾಗಿದ್ದ ಈಗ ಆಂಧ್ರದಲ್ಲಿರುವ ಆದವಾನಿ–ಆಲೂರು–ರಾಯದುರ್ಗ–ಮಡಕಶಿರ–ಕಲ್ಯಾಣದುರ್ಗ–ಅನಂತಪುರಗಳಲ್ಲಿಯೂ ಕನ್ನಡನಾಡಿಗೆ ನಮ್ಮನ್ನು ಸೇರಿಸಲೇಬೇಕೆಂದು ಹೋರಾಟ ನಡೆಸುತ್ತಿರುವಾಗ ಬಳ್ಳಾರಿ ಆಂಧ್ರಕ್ಕೆ ಸೇರಬೇಕೆಂಬ ಪ್ರಬಲ ಹೋರಾಟವೂ ನಡೆಯಿತು. ಅಂತಹ ಸಂದರ್ಭದಲ್ಲಿ ಬಳ್ಳಾರಿಯಲ್ಲಿದ್ದ ಭಾರತದ ಪ್ರಸಿದ್ಧನಟ ತೆಲುಗು ಭಾಷಿಕರಾಗಿದ್ದ ದೊಡ್ಡನಗೌಡರ ಗುರುಗಳಾಗಿದ್ದವರು ಬಳ್ಳಾರಿಯ ರಾಘವಲು, ಹೋರಾಟಗಾರರಾದ ಕೋಲಾಚಲಂ ವೆಂಕಟರಾವ್ ಮುಂತಾದವರು ತೆಲುಗರು. ಇಂತಹ ಸಂಕೀರ್ಣ ಸಮಯದಲ್ಲಿ ದೊಡ್ಡನಗೌಡರು ಸ್ವತಃ ತೆಲುಗು ಕನ್ನಡ ಪಂಡಿತರಾಗಿದ್ದರೂ ಅವರ ಸ್ಪಷ್ಟವಾದ ನಿಲುವು ಕನ್ನಡ ನೆಲದ್ದಾಗಿತ್ತು.

**ಆದದ್ದೆಲ್ಲ ಒಳಿತೇ ಆಯಿತು**

**ಆಂಧ್ರ ಭೇರಿಯದು ಬಡಿದೆಬ್ಬಿಸಿತು.**

**ಇಲ್ಲದಿದ್ದರೆ ನಾವ್ ಏಳುತ್ತಿದ್ದೆವೆ**

........................................

**ತೆಲುಗು ಕನ್ನಡದ ಭೇದವರಿಯದ**

**ಎಮಗೆ ಭೇದವವರುಹಿದರಾಂಧ್ರರು** **(1947–ಪುಟ–17)**

ಎಂದು ಕಟುವಾಗಿ ಬರೆದರು. ಆ ಕಾಲಘಟ್ಟದಲ್ಲಿ ಬಳ್ಳಾರಿ ಸೀಮೆಯು ಸಂಪೂರ್ಣ ತೆಲುಗುಮಯವಾಗಿತ್ತು. ಆದರೆ ಏಕೀಕರಣವಾಗುವಾಗ ಕರ್ನಾಟಕದಲ್ಲಿ ಉಳಿದದ್ದು ಹೋರಾಟದ ಫಲದಿಂದ. ಆದರೆ ಆದವಾನಿ–ಆಲೂರು–ರಾಯದುರ್ಗ–ಗುಂತಕಲ್ಲು–ಅನಂತಪುರಗಳು ಆಂಧ್ರಕ್ಕೆ ಸೇರಿದವು. ಅಲ್ಲಿನ ಕನ್ನಡ ಜನತೆಯ ಬಗೆಗೆ ಅಪಾರವಾದ ಕಾಳಜಿಯನ್ನು ಗೌಡರು ತೋರಿಸಿದರು. ಸಮಯ ದೊರೆತಾಗಲೆಲ್ಲ ಆಂಧ್ರಕ್ಕೆ ಸೇರಿದ ಕನ್ನಡ ಪ್ರದೇಶಗಳಲ್ಲಿ ಕನ್ನಡ ಕಾವ್ಯಗಳ ಗಮಕ ಹಾಡುತ್ತಾ, ಪ್ರವಚನ ಮಾಡುತ್ತಾ, ಮಠಮಾನ್ಯಗಳಲ್ಲಿ ಕನ್ನಡ ಪದಗಳನ್ನು ಹಾಡುತ್ತಾ, ಕನ್ನಡದ ನಾಟಕಗಳನ್ನು

ಪ್ರಯೋಗಿಸುತ್ತಾ ಅವರೊಂದಿಗೆ ನಿಕಟವಾದ ಸಂಪರ್ಕದಲ್ಲಿದ್ದರು. ಬೇಂದ್ರೆ–ಮಾಸ್ತಿ–ಕಾರಂತರಂತಹ ಮಹಾ ಲೇಖಕರನ್ನು ಆದವಾನಿಗೆ ಕರೆಸಿ ಕಾರ್ಯಕ್ರಮ ಮಾಡಿಸುವಲ್ಲಿ ಗೌಡರ ಪಾತ್ರ ಹಿರಿದು ಆಗಿತ್ತು. ಅಲ್ಲಿನ ಕನ್ನಡದ ಕಟ್ಟಾಳುಗಳಾಗಿದ್ದ ಬದನೇಹಾಳು ರಂಗನಗೌಡ, ಬಾ.ರಾ.ದತ್ತಾತ್ರೇಯ ಗೌಡರೊಂದಿಗೆ ಕನ್ನಡದ ಕಾರ್ಯಕ್ರಮಗಳನ್ನು ಮಾಡುತ್ತಾ ಕನ್ನಡಿಗರ ಮನಗೆದ್ದರು. ಅಲ್ಲೆಲ್ಲ ತಾವೇ ರಚಿಸಿದ ಕವಿತೆಗಳನ್ನು ಸ್ವರವೆತ್ತಿ ಹಾಡುತ್ತಿದ್ದರು.

ದೊಡ್ಡನಗೌಡರು 1945ರಲ್ಲಿ ಬರೆದ ಮತ್ತೊಂದು ಕಾವ್ಯಕೃತಿ 'ನಮ್ಮ ಹಂಪೆ' ಈ ಕೃತಿಗೆ ಮುನ್ನುಡಿಯನ್ನು ಬರೆಯುತ್ತಾ ಶಿ.ಶಿ.ಬಸವನಾಳ ಅವರು "ದೊಡ್ಡನಗೌಡರು ಶ್ರೇಷ್ಠ ಗಮಕಿಗಳು, ಗಮಕ ಕಲೆ ಅವರಿಗೆ ದೇವದತ್ತವಾಗಿ ಬಂದಿದೆ. ಮೇಲಾಗಿ ಸಾಹಿತಿಗಳೂ ಅಹುದು. ಒಳ್ಳೆಯ ಕವಿಗಳೂ ಅಹುದು. ಆಳವಾದ ಸಾಹಿತ್ಯ ಪರಿಚಯದ ಉಚ್ಚ ಸಂಸ್ಕಾರ ಎದ್ದು ಕಾಣುತ್ತಿದೆ ಅವರ ಕೃತಿಗಳಲ್ಲಿ, ಕೋಮಲ ಕವಿ ಹೃದಯದ ಸೂಕ್ಷ್ಮ ಮಿಡಿತ ಒಲಿದು ತೋರುತ್ತಿದೆ. ಅವರ ಕವನಗಳಲ್ಲಿ ಇಂತಹ ಬಹುಮುಖ ಕಲಾ ಕೋವಿದರನ್ನು ಆಂಧ್ರನಾಡು ಅನಾಯಾಸವಾಗಿ ಉಪಯೋಗಿಸಿಕೊಳ್ಳುತ್ತಿರುವಾಗ ಕನ್ನಡನಾಡು ಚೆನ್ನಾಗಿ ಗುರುತಿಸದೇ ಹೋದುದು ಕನ್ನಡಕ್ಕೆ ಒಂದು ಕೊರತೆ." ಎಂದು ಬರೆದಿದ್ದಾರೆ. 'ನಮ್ಮ ಹಂಪೆ' ಕೃತಿಯಲ್ಲಿ 33 ಪದ್ಯಗಳಿವೆ. ಇದೊಂದು ಪುಟ್ಟ ಖಂಡ ಕಾವ್ಯ. ಸಂಪೂರ್ಣ ಖಂಡ ಕಾವ್ಯದ ಶಾಸ್ತ್ರೀಯ ಲಕ್ಷಣಗಳ ಹಂಗು ತೊರೆದು ಷಟ್ಪದಿ ರೂಪದಲ್ಲಿ ಬರೆದ ಅಪರೂಪದ ರಚನೆ. ಗತಕಾಲದ ಹಂಪೆಯ ಕಥನವನ್ನು ಇಲ್ಲಿ ದಾಖಲು ಮಾಡಿದ್ದಾರೆ ಕವಿ. ಈ ಪುಟ್ಟಕಾವ್ಯವನ್ನು ಗೌಡರು ಆಂಧ್ರದಾದ್ಯಂತ ಕನ್ನಡದಲ್ಲಿಯೇ ಹಾಡಿ ಜನಮನ ಗೆದ್ದುದ್ದೊಂದು ವಿಶೇಷ. ನವೋದಯ ಕಾಲದಲ್ಲಿ ಚರಿತ್ರೆಯ ಮರುರೂಪಕ್ಕಿಳಿಸುವ, ಅದರ ವೈಭವವನ್ನು ಬರೆವ ಅನೇಕ ಕವಿಗಳಿದ್ದರು. ಕುವೆಂಪು ಅವರು ಸೋಮನಾಥಪುರ ದೇವಾಲಯ, ಚರಿತ್ರೆಯ ಬಗೆಗೆ ಕೆಲವಾರು ಕವಿತೆಗಳು ಬರೆದಿದ್ದಾರೆ. 'ಕೂಗುತಿವೆ ಕಲ್ಲುಗಳು ಕಿವಿವೆತ್ತ ಕಿವುಡರಿರ ಕೇಳಿ ಆ ಸೊಲ್ಲು, ಸತ್ತವರು ನಾವಲ್ಲ ನೀವು ಎಂದು' ಕವಿ ಪುಟ್ಟಪ್ಪ ಬರೆದ ಸಂದರ್ಭದಲ್ಲಿಯೇ ದೊಡ್ಡನಗೌಡರು ಗತಕಾಲದ ಹಂಪೆಯ ಕುರಿತು ಬರೆದದ್ದು ಕಾಕತಾಳೀಯ. ಹಾಗಂತಲೇ ಸಮಾನ ವಸ್ತು–ಧೋರಣೆಗಳಿದ್ದ ಕಾಲವದು.

**"ಅಂದು ತಾ ಕಳೆವೆತ್ತ ಹಂಪೆಯು**
**ಇಂದು ಹಾಳಾದುದನು ನೋಡುತ**
**ಕುಂದಿ ಕರಗಿದ ಹೃದಯ ಸಹಿಸದೆ ಬಹಳ ಶೋಕದಲಿ" (1945–ಪುಟ–32)**

ಎಂದು ದೊಡ್ಡನಗೌಡರು ವಿಷಾದದಿಂದ ಬರೆಯುತ್ತಾರೆ.

'ರಸವರ್ಷ' –1953ರಲ್ಲಿ ರಚನೆಯಾದ ಕಾವ್ಯಗಳ ಗುಚ್ಛ. ಇದಕ್ಕೆ ಅ.ನ.ಕೃ ಅವರು ಮುನ್ನುಡಿಯನ್ನು ಬರೆದಿದ್ದಾರೆ. ಇದರಿಂದ ದೊಡ್ಡನಗೌಡರ ಕಾವ್ಯದ ಅಂತಃಶಕ್ತಿಯನ್ನು ಅರಿಯಬಹುದು. ರಸವರ್ಷ ಕಾವ್ಯಸಂಕಲನದಲ್ಲಿ ಒಟ್ಟು ಒಂದು ನೂರು ಪದ್ಯಗಳಿವೆ. ಶ್ರೀಯುತರ ಕಾವ್ಯಪ್ರತಿಭೆ ಇಲ್ಲೆಲ್ಲಾ ಮಡುಗಟ್ಟಿ ನಿಂತಿದೆ. ಆಧ್ಯಾತ್ಮಿಕ ಸರಕು ಬೆರೆಸಿ ಬರೆದ ಈ ಕಾವ್ಯದ ಒಡಲಲ್ಲಿ ಸಾಮಾಜಿಕ ವಾಸ್ತವಗಳು ತುಂಬಿಕೊಂಡಿವೆ. ಈ ಸಂಕಲನದಲ್ಲಿ–

ಅ. ಭಕ್ತಿಗೀತೆಗಳು
ಆ. ನಾಡಗೀತೆಗಳು

ಇ. ಜೀವನ ವಿಮರ್ಶೆ

ಈ. ಪ್ರಕೃತಿಗೀತೆಗಳು

ಇದೆ. ನವೋದಯ ಕಾಲದ ಎಲ್ಲಾ ಕವಿಗಳಲ್ಲಿ ಸಹಜ ಸೌಂದರ್ಯವೆಂಬಂತೆ ಆಧ್ಯಾತ್ಮಿಕ ಚೆಲುವು-ವೈಚಾರಿಕ ಭಕ್ತಿಯು ಎಡೆಪಡೆದಿದೆ. ಅಂತೆಯೇ ಬಳ್ಳಾರಿ ಸೀಮೆಯ ಈ ಕವಿಗಳಲ್ಲಿಯೂ ಸಹಜವಾಗಿ ಬಂದಿವೆ.

**ಘನಪರ್ವತ ನೀನು**
**ತೃಣಜೀವಿಯು ನಾನು**
**ದೀನ ರಕ್ಷಕ ನೀನು**
**ದೀನಳು ನಾನು.** **(ರಸವರ್ಷ ಪು. 101)**

**

**ಗುರುವಿನ ಮಾಡಿಕೊಂಡೆ ನಾನು**
**ಅರುವನು ಪಡಕೊಂಡೆ.** **(ರಸವರ್ಷ ಪು. 118)**

ಹೀಗೆ ಅದಮ್ಯವಾದ ಭಕ್ತಿಯ ನೆಲೆಯನ್ನು ಅಭಿವ್ಯಕ್ತಿ ಪಡೆಸಿದ್ದಾರೆ. ಬಸವಣ್ಣ-ಎರ್ರಿತಾತ, ಶ್ರೀಶೈಲ ಮಲ್ಲಿಕಾರ್ಜುನ ಇತ್ಯಾದಿ ಶರಣರ, ದೈವಗಳ ಕುರಿತಾದ ಕವಿತೆಗಳೂ ಇವೆ. ದೊಡ್ಡನಗೌಡರ ಭಕ್ತಿ ಸಂಬಂಧೀ ಕವಿತೆಗಳಲ್ಲಿ ಧ್ಯಾನಸ್ಥವಾದ ಕವಿಯೊಬ್ಬನ ಅಂತರಂಗದ ನಿಜ ಹಾಡುಗಾರಿಕೆಯಂತೆ ವಸ್ತುವಿನ ವಿನ್ಯಾಸವಿದೆ. ಹೈದ್ರಾಬಾದ್ ಕರ್ನಾಟಕ ನೆಲದ ಸ್ವಾಭಾವಿಕ ಗುಣವೇಯೆಂಬಂತೆ ಗೌಡರ ನವೋದಯ ಕವಿತೆಗಳನ್ನು ಸೂಕ್ಷ್ಮವಾಗಿ ಓದಿದರೆ ಅಲ್ಲಲ್ಲಾ ತತ್ವಪದಗಳ ಶೈಲಿ ಕಂಡುಬರುತ್ತದೆ. ದಾಸರ ಕೀರ್ತನೆಗಳ ಧಾಟಿ ಮತ್ತು ಬರಹದ ಪ್ರೇರಣೆ ಪ್ರಗಾಢವಾಗಿರುವುದು ಢಾಳಾಗಿ ಕಂಡುಬರುತ್ತದೆ. ಹಂಪೆಯೆಂಬ ನೆಲವನ್ನು ಬಹುವಾಗಿ ಎದೆಗಪ್ಪಿಕೊಂಡು ಭಾವನಾತ್ಮಕವಾಗಿ ಪರವಶರಾಗುತ್ತಿದ್ದ ಕವಿ ದೊಡ್ಡನಗೌಡರು. ಅದೇ ನೆಲದಲ್ಲಿ ಓಡಾಡಿ ಬರೆದ ಪುರಂದರ-ಕನಕ ದಾಸಾದಿ ಹರಿದಾಸರನ್ನು ಅನೇಕ ಕವಿತೆಗಳಲ್ಲಿ ಅನುಸರಿಸಿದ್ದಾರೆ. ಅಂತೆಯೇ ತತ್ವಪದಗಳೂ ಇವೆ. ಶರಣರ ಪ್ರೇರಣೆಯೂ ಇದೆ. ಆದ್ದರಿಂದ ಅನೇಕ ವಚನಗಳನ್ನೂ ಗೌಡರು ಬರೆದಿದ್ದಾರೆ. ಇವರ ಕಾವ್ಯದ ಬಹುತೇಕ ಭಾಗ ಭಕ್ತಿ ಮತ್ತು ನಾಡುನುಡಿಯ ಅಭಿಮಾನವು ಆವರಿಸಿಕೊಂಡಿದೆ. ಆದರೂ ಮಿಂಚಿನಂತೆ ವೈಚಾರಿಕ ಪ್ರಜ್ಞೆಯೂ ಕವಿತೆಗಳಲ್ಲಿ ಬಂದು ಹೊಸಮಾರ್ಗವನ್ನು ಸಮಾಜಕ್ಕೆ ತೋರಿದೆ.

**ಸ್ಥಿರಚಿತ್ತನಾಗಣ್ಣ ಬರಿಭ್ರಾಂತಿ ತೊರೆಯಣ್ಣ**
**ಕುರುಡು ಶಾಸ್ತ್ರಗಳೋದಿ ಮರುಳಾಗ ಬೇಡಣ್ಣ**
**ಹೊಲೆಯರೆಂಬುವ ಕೀಳುಭಾವನೆ ಏಕಣ್ಣ**
**ಬೆಳಗುವ ಜ್ಯೋತಿಯು ಎಲ್ಲರೊಳೊಂದಣ್ಣ** **(ರಸವರ್ಷ ಪು. 100)**

ಎಂಬ ವೈಚಾರಿಕ ನಿಲುವನ್ನು ನಾವು ಗಮನಿಸಬೇಕು. ಜಾತಿ ಮೆತ್ತಿಕೊಂಡ ಸಮಾಜಕ್ಕೆ 'ಬೆಳಗುವ ಜ್ಯೋತಿಯು ಎಲ್ಲರೊಳೊಂದಣ್ಣ' ಎಂಬ ವಿಶ್ವಮಾನವತಾ ಸಂದೇಶವನ್ನು ಕವಿ ನೀಡುತ್ತಾರೆ.

ಎಲ್ಲ ನವೋದಯ ಕವಿಗಳಂತೆ ದೊಡ್ಡನಗೌಡರು ಗಾಢವಾಗಿ ಪ್ರಕೃತಿಯ ಆರಾಧಕರಾಗಿದ್ದರು. ಸಹಜವಾಗಿ ಬಳ್ಳಾರಿ ಸೀಮೆಯು ಬೆಂಗಾಡು ಬಿಸಿಲು. ಬಯಲು,

ಬರಿದೇ ಒಡಲು, ಆದರೂ ಕವಿ ತನ್ನ ನೆಲದೊಡಲಲ್ಲಿ ಪ್ರಕೃತಿಯ ಜೊತೆ ಅನುಸಂಧಾನ ಮಾಡುವುದು ವಿಶೇಷ.

**ಕೂಗುಕೂಗು ಕೋಗಿಲೆ**
**ನರಕನಾಕವಾಗುವಂತೆ** **(ರಸವರ್ಷ ಪುಟ 123)**
**ಸುಳಿ ಸುಳಿದು ಸುಳಿದೇಳುತಿದೆ ಬಿರುಗಾಳಿ**
**ಮೇಲಡರುತಿದೆ ಕೆಂದೂಳಿ** **(ರಸವರ್ಷ ಪುಟ 128)**

ಎಂಬಲ್ಲಿ ಅವರು ತಾವು ಬದುಕಿದ ನೆಲದ ಚಹರೆಯನ್ನು ಕಂಡರಿಸಿದ್ದಾರೆ.

ಬಳ್ಳಾರಿ ಸೀಮೆಯ ಜೀವದಾಹಾರವಾದ ಸ್ವತಃ ಅವರು ಬದುಕಿದ ಜೋಳದರಾಶಿ ಎಂಬ ಊರಿನ ಹೆಸರಿನಲ್ಲಿರುವ ಜೋಳದ ಕುರಿತು ಸುಂದರವಾದ ಕವಿತೆಯನ್ನು ನೇಯ್ದಿದ್ದಾರೆ. 'ಜೋಳದ ಝೋಕ್' ಎಂಬ ಕವಿತೆಯಲ್ಲಿ–

**ಯಂಗಂತ ಹೇಳಲಿ ನಿನ್ನ ಪ್ರತಾಪ**
**ಜಗಜಗಿಸುವ ಜೋಳ ರಾಜ್ಯದ ಭೂಪ**
.................. ..................
**ನೆಲ್ಲಪ್ಪ ಗೋದೆಪ್ಪ ಮುಂತಾದೋರೆಲ್ಲ**
**ಬಲ್ಲಂತೆ ನಿನ್ನನು ಬೈದವರೆಲ್ಲ**
**ಹಲ್ಕಿರಿದಿಂದಿನ ಶರಣೆಂದರಲ್ಲ**
**ಭಲರೇ ನಿಸ್ಸೀಮ ಲೋಕದೊಳಿಲ್ಲ.**
.................. ..................
**ಬಡವ ಬಲ್ಲಿದರೆಂಬ ಭೇದವನು ನೀಗಿ**
**ಸಡಗರದೆಲ್ಲರ ಗೆಳೆಯ ನೀನಾಗಿ**
**ನಡೆಯಿಂದ ರಾಮೇಶಗೊಪ್ಪುವ ಮಗನಾಗಿ**
**ನಾಡ ಬೋನದ ಬೊಮ್ಮನೆನಿಸಿದ ತ್ಯಾಗಿ** **(ರಸವರ್ಷ–ಪುಟ–152)**

ಈ ಕವಿತೆಯು ಬಯಲುಸೀಮೆಯ ಬಹುಜನರ ಆಹಾರ ಸಂಸ್ಕೃತಿಯನ್ನು ಬಹುನಿಚ್ಚಳವಾಗಿ ನಿರೂಪಿಸುತ್ತದೆ. ಈ ಕವಿತೆಯು ಕನಕದಾಸರ ರಾಮಧ್ಯಾನಚರಿತೆಯ ವಸ್ತುವೊಂದನ್ನು ಪ್ರೇರಣೆಯಾಗಿ ಪಡೆದಂತಿದೆ. ನವೋದಯ ಈ ಕವಿ ದೊಡ್ಡನಗೌಡರು ಜೋಳವನ್ನು 'ನಾಡಬೋನ' ಎಂದು ಕರೆದರು. 'ನಾಡ ಬೋನದ ಬೊಮ್ಮ' ಎಂಬ ಅಭಿಧಾನ ನೀಡಿ, ಜೋಳದ ಬಹುಸಾಂಸ್ಕೃತಿಕ ವೈಭವವನ್ನು ಕವಿ ಕೊಂಡಾಡಿದ್ದಾರೆ.

ಕವಿ ದ.ರಾ.ಬೇಂದ್ರೆಯವರು 'ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ' ಎಂದು ಹೊಸಕಾಲಕ್ಕೆ ನಾಂದಿ ಹಾಡಿದರು. ಕವಿ ದೊಡ್ಡನಗೌಡರು

**ಒಸೆದೊಸೆದು ಪೊಸಹರುಷ ದೆಸೆದೆಸೆಗೆ ಪಸರಿಸುತೆ**
**ಸ್ವಸ್ತಿ ಸಮ್ಮುದವಾಂತು ಬಂದುದೈ ಪೊಸವರುಷ**
.....................................
**ಹಲವರಿಗೂ ಕೆಲವರಿಗೂ ಈ ಯುಗಾದಿಯ ಹಬ್ಬ**
**ಎಲ್ಲರದು ಆದೇನವರವರ ಬಗೆಯಂತೆ**
**ನಲಿದಾಟ ನಗೆಯಾಟ ಅವರವರ ಮನದಂತೆ**
**ಒಲವರಿತು ಫಲವೀವ ರಾಮೇಶನತಿಶಯದೆ** **(ರಸವರ್ಷ–ಪುಟ–124–125)**

ಎಂದು ಬರೆಯುತ್ತಾ ಯುಗಾದಿಯ ಜೀವನೋತ್ಸಾಹಗಳು, ಹೊಸ ಚೈತ್ರದ ಚಿಗುರು, ನೂತನ ಭಾವಗಳು, ನೂತನವಸ್ತ್ರಗಳು ಮನುಷ್ಯ ಜೀವನದ ಚಲನಶೀಲವಾದ ಸಂಗತಿಗಳಾಗಿವೆಯೆಂದು ತಿಳಿಸುತ್ತಾರೆ.

ದೊಡ್ಡನಗೌಡರು ನವೋದಯದ ಇತರೆ ಕವಿಗಳಂತೆ ನಾಡುನುಡಿಯ ಅಭಿಮಾನದಿಂದ ನಾಡಗೀತೆಗಳೆಂದು ಹೆಸರಿಟ್ಟು ಕೆಲವಾರು ಕವನಗಳನ್ನು ರಚಿಸಿದ್ದಾರೆ. ಭಾರತ ಸ್ವಾತಂತ್ರ್ಯ ಕುರಿತಾಗಿಯೂ ಕವಿತೆಗಳನ್ನು ರಚಿಸಿದ್ದಾರೆ.

**ಮಾತೆ ಜಗವಂದಿತೆ ಕರ್ನಾಟಕ**
**ಎಮ್ಮ ಮನದಿ ಸದಾ ನೆಲಸಿರುವ ಖ್ಯಾತೆ** (ರಸವರ್ಷ–ಪುಟ–156)
**ಕೇಳುತಿದೆ ಜಯ ಕನ್ನಡ ಭೇರಿಯು**
**ಧನಾಧನಾಧನ ಧೀಂ ಜಯನಾದದಿ** (ರಸವರ್ಷ–ಪುಟ–157)
**ಕರೆಯುವಳು ನಮ್ಮನ್ನ ಕನ್ನಡದ ಮಾದೇವಿ**
**ಕರುನಾಡಿನಲಿ ಹಂಚಿಬೇರಾದ ಮಕ್ಕಳನು** (ರಸವರ್ಷ–ಪು–163)
**ಧನ್ಯ ಧನ್ಯ ಸ್ವತಂತ್ರ ಭಾರತ**
**ಮಾನ್ಯ ಮಾನ್ಯ ಗುರು ಗಾಂಧಿ ಭಾರತ**
**ಭಾಗ್ಯ ಭಾಗ್ಯಯುತ ಭವ್ಯಭಾರತ** (ರಸವರ್ಷ–ಪು–157)

ಹೀಗೆ ಕನ್ನಡ ಕರ್ನಾಟಕ–ಭಾರತದ ಕುರಿತಾದ ತಮ್ಮದೇ ಧಾಟಿಯಲ್ಲಿ ಅಭಿವ್ಯಕ್ತಿ ಮಾಡಿದರು. ಗೌಡರು ಬರೆದ ನಾಡಗೀತೆಗಳು ಕೇವಲ ಬರಹದಲ್ಲಿ ಉಳಿಯಲಿಲ್ಲ. ಅವರು ತಮ್ಮದೇ ರಾಗ–ಧಾಟಿ–ಸಂಗೀತವನ್ನು ಸಂಯೋಜಿಸಿ ಸ್ವರವೆತ್ತಿ ಪಾಡಿದರು. ಹಳ್ಳಿಹಳ್ಳಿಗಳಲ್ಲಿ ಅಂದಿನ ಯುವ ವಿದ್ಯಾರ್ಥಿಗಳು ತಮ್ಮ ಶಾಲೆಗಳಲ್ಲಿಯೂ ಈ ಹಾಡನ್ನು ರಾಗಬದ್ಧವಾಗಿ ಹಾಡುತ್ತಿದ್ದರು (ಗುತ್ತಿ ಚಂದ್ರಶೇಖರರೆಡ್ಡಿ–ಹೈದರಾಬಾದು–ಮಾತುಕತೆ–2014–ಸಂದರ್ಶಕರು –ಜಾಜಿ ದೇವೇಂದ್ರಪ್ಪ).

ಹೀಗೆ ನವೋದಯ ಕಾಲದ ಸಂದರ್ಭಕ್ಕೆ ತಕ್ಕಂತೆ ಗೌಡರ ಕವಿತೆಗಳು ಆಶಯ–ಅಭಿವ್ಯಕ್ತಿ–ವಸ್ತು ಶೈಲಿಯನ್ನು ಖಂಡಿತಾ ಒಳಗೊಂಡಿದೆ. ಮುಂದೆ 1969ರಲ್ಲಿ ದೇಶಿಯ ವಚನಗಳನ್ನು ರಚಿಸಿದರು. ಈ ಕೃತಿಯಲ್ಲಿಯೂ ನವೋದಯ ಕಾಲದ ಆಶಯಗಳನ್ನು ಕಾಣಬಹುದು. 23 ಕವಿತೆಗಳ ಈ ಪುಟ್ಟಕಾವ್ಯಗುಚ್ಛದಲ್ಲಿ ಮುಖ್ಯವಾಗಿ ಗಾಂಧಿ ಚಿಂತನೆಗಳಿವೆ. ಗಾಂಧಿಯೋತ್ತರ ಭಾರತದಲ್ಲಾಗುತ್ತಿರುವ ಹಲಾಲುಕೋರತನ, ರಾಜಕೀಯ ಭ್ರಷ್ಟಾಚಾರದ ಕುರಿತು ಕವಿತೆಗಳಿವೆ. ಈ ಸಂಕಲನ ತುಂಬ ಗೌಡರ ಸಮಕಾಲೀನ ಸಮಾಜದ ನೈಜಚಿತ್ರಣವನ್ನು ಬಂಡಾಯದ ಧ್ವನಿಯಲ್ಲಿ ಬರೆದಿದ್ದಾರೆ. ಭಕ್ತಿಯಲ್ಲಿ ಲೀನನಾಗುತ್ತಿದ್ದ ಇವರ ರಚನೆಗಳು ಈ ಸಂಕಲನದಲ್ಲಿ ಸಾಮಾಜಿಕ ರಾಜಕೀಯ ನೆಲೆಯನ್ನು ಪಡೆದದ್ದೊಂದು ಕ್ರಾಂತಿಯೆನ್ನಬಹುದು. ಇಲ್ಲಿ ಕಾಂಗ್ರೆಸ್ಸಿನ ಬಗ್ಗೆ ಟೀಕೆ ಮಾಡಿದ್ದಾರೆ. ಗಾಂಧಿ ಚಿಂತನೆಗಳನ್ನು ಗಾಳಿಗೆ ತೂರಿದ ರಾಜಕಾರಣಿಗಳನ್ನು ಗೇಲಿಗೆ ತಳ್ಳಿದ್ದಾರೆ. ಸತ್ಯ–ಅಹಿಂಸೆಗಳನ್ನು ಬಿಟ್ಟವರನ್ನು ಬೈದಿದ್ದಾರೆ. ಚುನಾವಣೆಗಳ ನೀಚತನವನ್ನು, ಮಂತ್ರಿಗಳ ಬಡಿವಾರವನ್ನು, ಅತ್ಯಂತ ಕಠಿಣವಾಗಿ ತರಾಟೆಗೆ ತೆಗೆದುಕೊಂಡು ಕವಿತೆ ಬರೆದಿದ್ದಾರೆ.

**ಟೋಪಿಗೆ ಗಾಂಧಿಯೆಂಬ ಹೆಸರಿಟ್ಟು ಆ ಟೋಪಿಯ ಹಾಕಿ ಜನರ ವಂಚಿಸುತಿಪ ಗಾಂಧಿಭಕ್ತರ ನೋಡಿರೆ (ದೇಶಿಯ ವಚನಗಳು–ಪು–185)**

**ಸೂಳೆಯ ಸೊಬಗಿನಂತಾಯಿತ್ತು**

**ರಾಜಕೀಯ ಚುನಾವಣೆಯ ರಂಗ (ದೇಶೀಯ ವಚನಗಳು-ಪು-192)**

ಹೀಗೆ ನೇರವಾಗಿ ಬಂಡಾಯದ ದನಿಯನ್ನು ಎತ್ತಿ, ಬಂಡಾಯ ಕಾವ್ಯದ ಆರಂಭಕಾಲಘಟ್ಟದ ಕವಿಯಾಗಿಯೂ ದೊಡ್ಡನಗೌಡರು ಬರೆದರೆಂಬುದನ್ನು ಗಮನಿಸಬೇಕು. ಅಂತೆಯೇ 1969ರಲ್ಲಿ ಬರೆದ 'ತಾತನ ಗೀತಾಂಜಲಿ'ಯು ಚೇಳ್ಳಗುರಿಕೆ ಎರ್ರಿತಾತನೆಂಬ ಆರೂಢನ ಬಗೆಗಿನ ಪುಟ್ಟ ಕಾವ್ಯ, 1970ರಲ್ಲಿ ರಾಮೇಶ ಎಂಬ ಅಂಕಿತವನ್ನಿಟ್ಟುಕೊಂಡು 'ರಾಮೇಶನ ವಚನಗಳು' ಎಂಬ ಕೃತಿಯಲ್ಲಿ ಪಿಂಡಸ್ಥಲದಿಂದ-ಐಕ್ಯಸ್ಥಲದವರೆಗೆ ಶರಣ ಪರಂಪರೆಯ ಶೋಧದಲ್ಲಿ ಕಾವ್ಯ ಬರೆದರು. 1977ರಲ್ಲಿ 'ಗೌಡತಿ ಬರಲಿಲ್ಲ' ಎಂಬ ತ್ರಿಪದಿ ಕಾವ್ಯ ಪ್ರಯೋಗದಲ್ಲಿ ಯಶಸ್ವಿಯಾದರು. 1978ರಲ್ಲಿ ದೇಶೀಯ ವಚನಗಳು ಭಾಗ-2ರಲ್ಲಿ 34 ಕವಿತೆಗಳಿವೆ. 1988ರಲ್ಲಿ ಬರೆದ ಮಹತ್ವದ ಕಾವ್ಯ ಬರೆಹ 'ಜೋಳದ ರಾಶಿ ಕಾವ್ಯ' ಸಂಕಲನದಲ್ಲಿ 129 ಕವಿತೆಗಳಿವೆ. ಇದು ದೊಡ್ಡಗೌಡರ ಕಾವ್ಯದಲ್ಲಿ ಹೊಸತನವನ್ನು ಸಾಧಿಸಿದುದಕ್ಕೆ ಹಿಡಿದ ಕನ್ನಡಿಯಂತಿದೆ. ಹೀಗೆ ನವೋದಯದ ಅಬ್ಬರದಲ್ಲಿ ದಕ್ಷಿಣ ಕರ್ನಾಟಕವಷ್ಟೇ ಕಾವ್ಯ ಬೆಳೆಯಿತೆಂಬ ಕೃತಕನುಡಿಗಳಿಗೆ ಅಪವಾದವೆಂಬಂತೆ ಕಲ್ಯಾಣ ಕರ್ನಾಟಕದಲ್ಲಿ ಪ್ರಖರವಾಗಿ ಬರೆದ ದೊಡ್ಡನಗೌಡರೂ ಕೂಡ ಕನ್ನಡದ ವಿಶಿಷ್ಟ ನವೋದಯ ಕವಿಯೆಂಬುದನ್ನು ಸಾಹಿತ್ಯ ಚರಿತ್ರೆಯಲ್ಲಿ ಮರುದಾಖಲಿಸಬೇಕಾಗಿದೆ.

**ಆಕರ ಗ್ರಂಥಗಳು**


1. ಜೋಳದರಾಶಿ ದೊಡ್ಡನಗೌಡರ ಸಮಗ್ರ ಕಾವ್ಯ - ಸಂ. ಡಾ. ಮಲಶೆಟ್ಟಿ ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸಂಡೂರು, 2011
2. ನಮ್ಮ ಹಂಪೆ - ಜೋಳದರಾಶಿ ದೊಡ್ಡನಗೌಡರು, 1945
3. ರಸವರ್ಷ - ಜೋಳದರಾಶಿ ದೊಡ್ಡನಗೌಡರು, 1953
4. ದೇಶೀಯ ವಚನಗಳು ಭಾಗ-1 - ಜೋಳದರಾಶಿ ದೊಡ್ಡನಗೌಡರು, 1969
5. ತಾತನ ಗೀತಾಂಜಲಿ - ಜೋಳದರಾಶಿ ದೊಡ್ಡನಗೌಡರು 1969
6. ರಾಮೇಶ ವಚನಗಳು - ಜೋಳದರಾಶಿ ದೊಡ್ಡನಗೌಡರು 1970
7. ಗೌಡತಿ ಬರಲಿಲ್ಲ - ಜೋಳದರಾಶಿ ದೊಡ್ಡನಗೌಡರು 1977
8. ದೇಶೀಯ ವಚನಗಳು ಭಾಗ-1 - ಜೋಳದರಾಶಿ ದೊಡ್ಡನಗೌಡರು 1978
9. ಜೋಳದ ರಾಶಿ ಕಾವ್ಯ - ಜೋಳದರಾಶಿ ದೊಡ್ಡನಗೌಡರು 1988
10. ಗುತ್ತಿ ಚಂದ್ರಶೇಖರ ರೆಡ್ಡಿ, ಹೈದರಾಬಾದ್, ಅವರ ಸಂದರ್ಶನ, 2014 ಸಂದರ್ಶಕರು - ಜಾಜಿ ದೇವೇಂದ್ರಪ್ಪ


❖❖❖

# 'ಬೆಳಗು ಜಾವ' ಕವಿತೆಯ ಒಳನೋಟ

**ಡಾ. ಸಿ.ಎಸ್. ಕೆಂಡಗಣ್ಣೇಗೌಡ**
ಕನ್ನಡ ಸಹ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು

ಹೊಸಗನ್ನಡ ಭಾವಗೀತದ ಮೂಲ ಪ್ರವರ್ತಕರೆಂದು ಪ್ರಸಿದ್ಧರಾದ ದ.ರಾ ಬೇಂದ್ರೆಯವರು ಆಧುನಿಕ ಕನ್ನಡ ಕಾವ್ಯ ಪರಂಪರೆಗೆ ಹೊಸ ತಿರುವನ್ನು ನೀಡಿದ ಯುಗ ಪ್ರವರ್ತಕ ಕವಿ. ಭಾವಗೀತ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆ ನೀಡಿ 37ಕ್ಕೂ ಹೆಚ್ಚು ಕವನ ಸಂಕಲನಗಳನ್ನು ರಚಿಸಿ, ಕನ್ನಡದ ವರಕವಿಯಾಗಿದ್ದಾರೆ.

'ಬೆಳಗು ಜಾವ' ಕವನವು ಇಂಗ್ಲೀಷಿನ ಸಾನೆಟ್ ಛಂದೋರೂಪಕ್ಕೆ ಸಂವಾದಿಯಾಗಿ 14 ಸಾಲುಗಳಲ್ಲಿಯೇ ರಚಿತವಾಗಿದೆ. ಮನುಷ್ಯನ ಅನುದಿನದ ಬಾಳಿಗೆ ಚೈತನ್ಯವನ್ನು ನೀಡುವ ವಿಶಿಷ್ಟ ಕಾಲವೇ ಬೆಳಗು ಜಾವ. ಜೊತೆಗೆ ಯೌವ್ವನವು ಮನುಷ್ಯನ ಬದುಕಿನ ಬೆಳಗಿನ ಜಾವ. ಬೆಳಗು ಜಾವ ಕವನದಲ್ಲಿ ಮನುಷ್ಯನ ಬದುಕನ್ನು ಹಗಲೊಂದಕ್ಕೆ ಸಮೀಕರಿಸಿ ಬರೆದಿದ್ದಾರೆ. ಕವಿ ಬೇಂದ್ರೆ ಬೆಳಗಿನ ಸುಂದರವಾದ ಪ್ರಕೃತಿಯನ್ನು ವರ್ಣಿಸುತ್ತಾ ಯೌವ್ವನವನ್ನು ಸಮೀಕರಿಸಿ ವಿಶಷ್ಟವಾಗಿ ಕಟ್ಟಿದ್ದಾರೆ. ಈ ಕವನದಲ್ಲಿ ಕವಿಯು ಮಾನವನ ಬದ್ಧತೆಯನ್ನು, ಯೌವ್ವನದಲ್ಲಿ ಮಾಡಬೇಕಾದ ಕಾರ್ಯ ತತ್ಪರತೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಮಾನವನ ಜೀವನದಲ್ಲಿ ಬರುವ ಮೂರು ಬಹು ಮುಖ್ಯ ಘಟ್ಟಗಳೆಂದರೆ ಬಾಲ್ಯ–ಯೌವನ–ಮುಪ್ಪು. ಬಾಲ್ಯವು ತಂದೆ ತಾಯಿಯ ಆಶ್ರಯದಲ್ಲಿ ಕಳೆಯುವುದರಿಂದ ಇಲ್ಲಿ ದುಡಿದು ದಣಿಯುವುದಕಿಂತ ಇತರರ ಅವಲಂಬನೆಯಲ್ಲಿ ಕಾಲ ನಡೆಯುತ್ತದೆ. ಆದರೆ ಯೌವನದಲ್ಲಿ ದುಡಿದು ದಣಿದಾಗ ಮುಂದಿನ ಮುಪ್ಪು ಆರಾಮದಾಯಕವಾಗಿರಲು ಸಾಧ್ಯ. ಆದುದರಿಂದಲೇ ಶಬ್ದ ಗಾರುಡಿಗನಾದ ಕವಿಯು ಬೆಳಗನ್ನು ಮನುಷ್ಯನ ಯೌವನಕ್ಕೆ ಹೋಲಿಸಿದ್ದಾರೆ. ಬೆಳಗು ಜಾವ ಎಂಬ ಕವಿತೆಯಲ್ಲಿ ಬೆಳಗೆಂಬ ಬೆಳಕು ಉದಯಿಸಿ ನಮ್ಮ ಬಾಳನ್ನು ಬೆಳಗುವುದನ್ನು ಯೌವನವೆಂಬ ಮಾನವ ಜೀವನ ಬೆಳಗಿನಲ್ಲಿ ಕ್ರಿಯಾಶೀಲ ಬದುಕಿನ ಸಫಲತೆಯನ್ನು ಅನುಭವಿಸಬೇಕೆಂದು ಚನ್ನಾಗಿ ನಿರೂಪಿಸಿದ್ದಾರೆ.

**ಏಳು ಚಿನ್ನ, ಬೆಳಗಾಯಿತು ಅಣ್ಣ. ಮೂಡಲವು ತೆರೆಯೆ ಕಣ್ಣ.**
**ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಿಹುದು ಬಾನ ಬಣ್ಣ.**
**ಜೇನ್ನೊಣದ ಹೆದೆಗೆ ಹೂಬಾಣ ಹೂಡಿ, ಝುಂ ಎಂದು ಬಿಟ್ಟ ಮಾರ**
**ಗುಡಿಗೋಪುರಕ್ಕು, ಬಲೆ ಬೀಸಿ ಬಂದ, ಅಗೋ ಬೆಳಕು – ಬೇಟೆಗಾರ.**

ಕವಿತೆಯ ಆರಂಭದ ಸಾಲುಗಳು ಯುವಕರನ್ನು ಕುರಿತು ಕವಿಯು ಎಚ್ಚರಿಸುತ್ತಿದ್ದಾರೆ. ಮಲಗಿ ನಿದ್ರಿಸುವ ಯುವಕರನ್ನು ಏಳು ಚಿನ್ನ ಎಂದು ಸಂಭೋಧಿಸುತ್ತಾ ತಾರುಣ್ಯದ ಆರಂಭದಲ್ಲಿ ದುಡಿಯುವ ಕಾಲ ಬಂದಿದೆ ಎಂದು ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದ್ದಾರೆ. ಹೀಗೆ ಬೆಳಕಿನ ಆಗಮನವನ್ನು ಬಹಳ ಸೊಗಸಾಗಿ ಯುವ ಮನಸ್ಸುಗಳನ್ನು ಎಬ್ಬಿಸುವ ಪ್ರಯತ್ನ ಮಾಡಿದ್ದಾರೆ. ಕವಿತೆಯ ಆರಂಭವು ಏಳು

ಚಿನ್ನ, ಬೆಳಗಾಯಿತು ಅಣ್ಣ... ಎಂದು ಕರೆಯುವಾಗ ಹಿರಿಯರು ಬಂದು ಯುವಕರನ್ನು ಪ್ರೀತಿಯಿಂದ ಎಚ್ಚರಿಸುವ ರೀತಿ ಇದಾಗಿದೆ. ಯೌವನ ಬಂದಾಗ ತಾಳ್ಮೆಯಿಂದ,. ಪ್ರೀತಿಯಿಂದ ದುಡಿಯುವ ಕಾಯಕಕ್ಕೆ ಅಣಿಯಾಗಬೇಕು. ಕವಿತೆಯಲ್ಲಿ ಬಳಕೆ ಮಾಡಿರುವ ಜೇನು ಎಂಬ ಶಬ್ದವು ಚಮತ್ಕಾರದಿಂದ ಕೂಡಿದೆ. ಜೇನು ಎಂಬ ಶಬ್ದದಲ್ಲಿ ಕಾಯಕ ತತ್ವ ಅಡಗಿದೆ. ಅದರಲ್ಲಿ ಸಿಹಿಯಂತೂ ಇದ್ದೇ ಇದೆ. ಆ ಸಿಹಿಯು ದೊರೆಯಬೇಕಾದರೆ ಪರಿಶ್ರಮವೂ ಕೂಡ ಅತ್ಯಗತ್ಯವಾಗಿದೆ. ಹಾಗೆಯೇ 'ಮಾರ' ಎಂಬ ಶಬ್ದ ಬಳಕೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆಸೆ, ಬಯಕೆಯನ್ನು ಸೂಚಿಸುತ್ತದೆ. ಆಸೆಯಂಬುದು ಎಲ್ಲರಲ್ಲಿಯೂ ಸಹಜ ಮನುಷ್ಯ ತನ್ನ ಬಾಳಿನ ಆಸೆಯನ್ನು ಸಾರ್ಥಕಗೊಳಿಸಿಕೊಳ್ಳಲು ಶ್ರಮ ಪಡಬೇಕು. ಕವಿ ಇಲ್ಲಿ ಸೂರ್ಯನನ್ನು ಬೇಟೆಗಾರನಿಗೆ ಹೋಲಿಸುತ್ತಾ, ಸೂರ್ಯ ಬೆಳಕಿನ ಮೂಲಕವಾಗಿ ಕತ್ತಲೆಯನ್ನು ಬೇಟೆಯಾಡುತ್ತಾನೆ. ಅದನ್ನೇ ಕವಿ ಹೇಳಿರುವುದು ಯೌವನ ಕಾಲದಲ್ಲಿ ಬಯಕೆಗಳು ಸಹಜವಾಗಿ ಮೂಡುತ್ತವೆ. ಅವುಗಳಿಗೆ ಕಡಿವಾಣ ಹಾಕಿ, ಕಾಯಕ ಮಾಡಬೇಕು. ಹೊಸ ಚೈತನ್ಯವನ್ನು ತುಂಬಿಕೊಂಡು ಕಾರ್ಯ ಪ್ರವೃತ್ತರಾದಾಗ ಮಾತ್ರ ಸಾರ್ಥಕತೆಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಕವಿ ಅದಕ್ಕಾಗಿಯೇ ಏಳಿ ಎಂಬ ಕರೆ ನೀಡುತ್ತಾ ನಿದ್ರೆಯಿಂದ ಎಚ್ಚತ್ತು ನಿಮ್ಮ ಬದುಕನ್ನು ಸಾರ್ಥಕ್ಯ ಮಾಡಿಕೊಳ್ಳಿ ಎಂದು ತಿಳಿಸಿದ್ದಾರೆ.

**ನಿಶೆಯಿಳಿದ ಉಷೆಯ, ಎಳನಗೆಯ ಬಗೆಗೆ, ಸೋತಿರಲು ಜಗವು ಸವಿಗೆ**
**ಕಣ್ಣೆದಿರು ಒಂದು ಕಟ್ಟಿತ್ತು ಕನಸು; ಕೂಗೊಂದು ಬಂತು ಕಿವಿಗೆ.**
**ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು**
**ಈ ತುಂಬಿಬಾಳು, ತುಂಬಿರುವ ತನಕ, ತುಂತುಂಬಿ ಕುಡಿಯಬೇಕು.**

ಈ ಮೇಲಿನ ಸಾಲುಗಳಲ್ಲಿ ಮಾನವರು ಬಾಲ್ಯ ಮುಗಿದು ಯೌವನ ಆಗಮಸಿದರೂ ಕೇವಲ ಕನಸಿನ ಗೋಪುರದಲ್ಲಿ, ಮೋಜಿನ ಜೀವನದಲ್ಲಿ ಸ್ವೇಚ್ಚೆಯ ಬದುಕನ್ನು ಕಳೆಯುತ್ತಿರುವ ಯುವ ಮನಸ್ಸುಗಳಿಗೆ ಜಾಗೃತಿಯ ಸಂದೇಶವನ್ನು ನೀಡಿದ್ದಾರೆ. ಯೌವನದ ವಯಸ್ಸು ಕನಸು ಕಾಣುವುದು ಸಹಜ. ಕಂಡ ಕನಸಿನ ಸಾಕಾರವೂ ಕೂಡ ಅಲ್ಲಿಯೇ ನಡೆಯಬೇಕು. ಇಲ್ಲಿ ಕಷ್ಟಪಟ್ಟು ಶ್ರಮವಹಿಸಿ ದುಡಿಯಬೇಕು ಎಂದೇಳುತ್ತಾ 'ಹುಸಿನಿದ್ದೆಗಿದ್ದೆ ಸಾಕು' ಎಂಬ ಮಾತಿನ ಮೂಲಕವಾಗಿ ಯುವಕರಲ್ಲಿ ಎಚ್ಚರಿಕೆಯ ಘಂಟೆಯನ್ನು ಬಾರಿಸಿದ್ದಾರೆ. ಜೀವನವೆಂಬ ನದಿಯ ಸುಳಿಗೆ ಸಿಲುಕಿ ಸಾವು ಬರುವ ಮುಂಚಿತವಾಗಿಯೇ ದುಡಿದು ದಣಿಯುವುದರ ಮುಖಾಂತರ ಸಾರ್ಥಕತೆ ಪಡೆದುಕೊಳ್ಳಿ ಎಂದು ಕವಿ ಬೇಂದರೆಯವರು ತಿಳಿಸಿದ್ದಾರೆ.

**ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ**
**ಮೊದಲಾಗಲೀಗ ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ**
**ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರಳಿ**
**ಹೋದವರು ತಿರಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.**

ನಮ್ಮ ಜೀವನದ ಬೆಳಗು ಜಾವದಲ್ಲಿ ಕರ್ತವ್ಯದ ಕೋಳಿ ಕೂಗುತ್ತದೆ. ಹೇಗೆ ಕೋಳಿ ಕೂಗುವುದರ ಮೂಲಕ ಬೆಳಕಿನ ಬರುವಿಕೆಯನ್ನು ತಿಳಿಸುತ್ತದೆಯೋ ಹಾಗೆಯೇ ಯೌವನದಲ್ಲಿ ನಮಗೆ ದುಡಿಯಲು ಅನೇಕ ಅವಕಾಶಗಳು ಒದಗಿ ಬರುತ್ತವೆ. ಅವಕಾಶಗಳು ಒದಗಿ ಬರುವ ಸಂದರ್ಭದಲ್ಲಿ ಯೌವನದ ಪಾನಮತ್ತರಾಗದೆ,

ಅರಿಷಡ್ವರ್ಗಗಳಿಗೆ ಬಲಿಯಾಗದೆ ಎಚ್ಚರಿಕೆಯಿಂದ ನಮಗೆ ಒದಗಿ ಬಂದ ಅವಕಾಶಗಳನ್ನು ಸಾರ್ಥಕವಾಗಿ ಬಳಸಿಕೊಳ್ಳಬೇಕು.

ಮನುಷ್ಯ ತನ್ನ ಹುಸಿ ನಿದ್ದೆ, ಆಲಸ್ಯತನಗಳನ್ನು ತೊರೆದು ಬದುಕಿನ ವ್ಯಾಪಾರದ ಅಂಗಡಿಯ ಬಾಗಿಲನ್ನು ತೆರೆದು ಕಾರ್ಯೋನ್ಮುಕನಾಗಬೇಕು. ಇಂತಹ ಸಮಯದಲ್ಲಿ ಸೋಮಾರಿತನ ಮನೆ ಮಾಡಿದರೆ ಮುಂದೆ ತುಂಬಾ ಕಷ್ಟ ಪಡಕಾಗುತ್ತದೆ. ಜೀವನದಲ್ಲಿ ಆಕಸ್ಮಿಕವಾದ 'ಸಾವು' ಎಂಬ ಸುಳಿ ಯಾವಾಗಲಾದರೂ ಸಂಭವಿಸಬಹುದು. ಅಷ್ಟರೊಳಗೆ ಸಾವು ಬರುವ ಮುನ್ನ ಸಾಧ್ಯವಾದಷ್ಟು ಕಷ್ಟಪಟ್ಟು ದುಡಿದು ಏನಾದರು ಸಾಧಿಸಬೇಕು. ಜೀವನದ ಯಾತ್ರೆ ಮುಗಿದ ಮೇಲೆ ಮತ್ತೆ ಬರಲು ಸಾಧ್ಯ ಇಲ್ಲ. ಹಾಗಾಗಿ ಪ್ರತಿಯೊಬ್ಬರು ತಮ್ಮ ಯೌವನ ಕಾಲದಲ್ಲಿಯೇ ಸಾಧ್ಯವಾದಷ್ಟು ದುಡಿದು, ದಣಿಯಬೇಕು ಎಂದು ತಿಳಿಸಿದ್ದಾರೆ.

ಪ್ರಕೃತಿ ಧರ್ಮವನ್ನು ಹೇಳುವುದರೊಂದಿಗೆ ಮಾನವ ಬದುಕಿನ ನಶ್ವರತೆಯನ್ನು ಕವಿತೆಯ ಮೂಲಕ ಎಚ್ಚರಿಸಿದ್ದಾರೆ. ಆಕಾಶದಲ್ಲಿ ಮೂಡುವ ಸೂರ್ಯ ಮತ್ತೆ ಮತ್ತೆ ಬರಬಹುದು, ಮರಗಳು ಮತ್ತೆ ಮತ್ತೆ ಚಿಗುರೊಡೆಯಬಹುದು. ಆದರೆ ಕಳೆದ ಸುಗ್ಗಿ, ಕಳೆದ ದಿನ, ಕಳೆದು ಹೋದ ಯೌವನ ಮತ್ತೆ ಬರಲು ಸಾಧ್ಯವೇ? ಎಂಬ ಜಾಗೃತಿಯನ್ನು ನೀಡಿದ್ದಾರೆ. ಮಾನವನಿಗೆ ಮುಪ್ಪಿನ ಚಿಂತೆ ಇರಬೇಕು, ಆ ಮುಪ್ಪು ಚಿಂತೆಯಲ್ಲಿ ಕಳೆಯುವಂತಾಗಬಾರದು. ಇದರರ್ಥ ಪ್ರತಿಯೊಬ್ಬರೂ ಯೌವನದಲ್ಲಿ ಜಾಗ್ರತರಾಗಿರಬೇಕು. ಕವಿತೆಯ ಕೊನೆಯಲ್ಲಿ ಹರೆಯಕ್ಕೆ ಬೇರೆ ಹೊತ್ತೇ? ಎಂದು ಪ್ರಶ್ನಿಸುವ ಮೂಲಕ ಯೌವನದ ಮಹತ್ವವನ್ನು ಮನದಟ್ಟು ಮಾಡಿಸಿ ಪ್ರಶ್ನೆಯ ಮೂಲಕವಾಗಿ ಉತ್ತರವನ್ನು ಪ್ರತಿಯೊಬ್ಬರೂ ಕಂಡುಕೊಳ್ಳಬೇಕೆಂದು ಎಚ್ಚರಿಸುವ ಪ್ರಯತ್ನ ಮಾಡಿದ್ದಾರೆ.

ಮಾನವ ಬದುಕು ಅಶಾಶ್ವತವಾದುದು. ಬದುಕುವ ನಾಲ್ಕು ದಿನಗಳಲ್ಲಿ ಅರಿವು ಎಂಬ ಮಹಾಘನ ನಮ್ಮಲ್ಲಿಯೇ ಮೂಡಬೇಕು. ಅದಕ್ಕಾಗಿಯೇ ಕವಿ ಬೇಂದ್ರೆಯು ಪ್ರಕೃತಿಯ ನಿತ್ಯ ನೂತನತೆಯನ್ನು ಯೌವನಕ್ಕ ಸಮೀಕರಿಸಿ ಹೇಳುತ್ತಾ ತಾರುಣ್ಯದ ಅವಧಿಯನ್ನು ವ್ಯರ್ಥ ಮಾಡಿಕೊಳ್ಳಬೇಡಿ ಎಂಬ ಎಚ್ಚರಿಕೆಯ ಸಂದೇಶವನ್ನು ಈ ಕವಿತೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ದಾರ್ಶನಿಕ ಕವಿಯಾದ ಬೇಂದ್ರೆಯವರ 'ರಸವೇ ಜನನ, ವಿರಸ ಮರಣ, ಸಮರಸವೇ ಜೀವನೇ' ಎಂಬ ಸಕಾರಾತ್ಮಕ ಚಿಂತನೆಯು ಇಲ್ಲಿ ವ್ಯಕ್ತಗೊಂಡಿದೆ. ಮೊದಲ ಎಂಟು ಸಾಲುಗಳಲ್ಲಿ ಯುವಜನತೆಯ ಸ್ಥಿತಿಯನ್ನು ಹೇಳುತ್ತಾ, ಕೊನೆಯ ಆರು ಸಾಲುಗಳಲ್ಲಿ ಸಕಾರಾತ್ಮಕ ನಿಲುವಿನೊಂದಿಗೆ ಜಾಗೃತಗೊಳಿಸುವ ಕೆಲಸವನ್ನು ನಿರೂಪಿಸುವ ಕೆಲಸವನ್ನು ಈ ಕವಿತೆಯು ಉಂಟು ಮಾಡಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಯೌವನವು ಮನುಷ್ಯ ಜೀವನದ ಬೆಳಗು ಜಾವ. ಈ ಕವಿತೆಯು ಮಾನವನ ಬದುಕನ್ನು ಹಗಲೊಂದಕ್ಕೆ ಸಮೀಕರಿಸಿ ಹೇಳಿರುವ ಹಾಗಿದೆ. ಇಲ್ಲಿ ಸೂರ್ಯೋದಯವೇ ಹುಟ್ಟು, ಎಳೆಬಿಸಿಲೇ ಯೌವನ, ನಡುಹಗಲೇ ನಡುವಯಸ್ಸು, ಕೊನೆಗೆ ಸೂರ್ಯಾಸ್ತವೇ ಸಾವು ಎಂಬಂತೆ ಅರ್ಥಗರ್ಭಿತವಾಗಿ ಚಿತ್ರಿಸಲಾಗಿದೆ. ನಿತ್ಯ ನಿರಂತರವಾದ ಕ್ರಿಯೆಗಳಲ್ಲಿ ಯೌವನವನ್ನು ದುಡಿದು ದಣಿಯುವುದರ ಮೂಲಕವಾಗಿ ಸಾಫಲ್ಯ ಪಡೆಯಬೇಕೆಂದು ಈ ಕವನವು ಪ್ರಸ್ತುತಪಡಿಸುತ್ತದೆ.

❖❖❖

# ಹಳಗನ್ನಡ ವ್ಯಾಕರಣಾಂಶಗಳು : ಒಂದು ಅನುಸಂಧಾನ

**ಡಾ. ಕೆ. ಚಂದ್ರಕಾಂತ್**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ

ಮಾನವನ ಜೀವವಿಕಾಸದ ಹಾದಿಯಲ್ಲಿ ಭಾಷೆ ಒಂದು ಅವಿಭಾಜ್ಯ ಅಂಗ. ಅಂತೆಯೇ ಯಾವುದೇ ಭಾಷೆಯ ವ್ಯಾಕರಣ ಆಯಾ ಭಾಷೆಯಲ್ಲಿ ನಡೆಯುವ ಎಲ್ಲಾ ವ್ಯವಹಾರ ಸಾಧ್ಯತೆಗಳ ಮೂಲ. ವ್ಯಾಕರಣವು ಭಾಷೆಯ ಅಂತರಾಳದಲ್ಲಿ ಅಂತರಗಾಮಿನಿಯಾಗಿ ಕಾರ್ಯನಿರ್ವಹಿಸುತ್ತ, ಭಾಷೆಯ ನಿಯಮ–ತತ್ತ್ವಗಳನ್ನು ವ್ಯವಸ್ಥಿತವಾಗಿ ನಿರೂಪಿಸುತ್ತದೆ. ವೇದಗಳಷ್ಟೇ ಪ್ರಾಚೀನಶಾಸ್ತ್ರವಾದ ವ್ಯಾಕರಣ, ಭಾಷೆಯನ್ನು ಶುದ್ಧರೂಪದಲ್ಲಿ ಸಂರಕ್ಷಿಸಲು ಅದನ್ನು ಪರಿಣಾಮಕಾರಿಯಾಗಿ ಅಧ್ಯಯನ ಮಾಡುವ ಸಲುವಾಗಿ ಹುಟ್ಟುಕೊಂಡ ಒಂದು ಶಾಸ್ತ್ರ. ವ್ಯಾಕರಣ ಎಂದರೆ "ವ್ಯಾಕ್ರಿಯಂತೇ ವ್ಯುತ್ಪಾದ್ಯಂತೇ, ಅಸಾಧುಭ್ಯೋ ಶಬ್ದೇಭ್ಯಃ ವಿವಿಚ್ಯ ಬೋಧ್ಯಂತೇಯತ್ರತತ್ ವ್ಯಾಕರಣಂ" (ಶಬ್ದಗಳ ಸಾಧುತ್ವವನ್ನು ಎಂದರೆ ಪ್ರಯೋಗಾರ್ಹತೆಯನ್ನು ಬೋಧಿಸುವ ಗ್ರಂಥಕ್ಕೆ ವ್ಯಾಕರಣ ಎಂದು ಹೆಸರು.) ವ್ಯಾಕರಣ ಎಂಬ ಶಬ್ದಕ್ಕೆ ವಿಭಜನೆ, ವಿಶ್ಲೇಷಣೆ ಎಂಬ ನಿಷ್ಪತ್ತಿಯನ್ನು ನೀಡುವುದರೊಂದಿಗೆ, ವಿ+ಆ+ಕರಣ ಎಂದು ಬಿಡಿಸಿ ಭಾಷೆಯ ವಿಭಜನಾತ್ಮಕ ಅಧ್ಯಯನ ಎಂತಲೂ ಅರ್ಥ ಬರೆದಿದ್ದಾರೆ. ಅಂದರೆ ಒಂದು ಭಾಷೆಯ ರಚನಾವಿನ್ಯಾಸವನ್ನು ವಿಶ್ಲೇಷಿಸುವ, ಭಾಷೆಗೆ ವಿಧಿಸಲಾದ ನಿಯಮ ನಿಬಂಧನೆಗಳನ್ನು ದರ್ಶಿಸುವ, ವಾಕ್ಯ–ಶಬ್ದಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡುವ ಶಾಸ್ತ್ರವೇ ವ್ಯಾಕರಣ ಎನಿಸಿಕೊಂಡಿದೆ.

ಸಾವಿರಾರು ವರ್ಷಗಳ ಸಾಹಿತ್ಯ ಪರಂಪರೆಯನ್ನು ಹೊಂದಿರುವ ಕನ್ನಡ ಭಾಷೆಗೆ ಅತ್ಯಂತ ಪ್ರಾಚೀನವಾದ ಇತಿಹಾಸವಿದೆ. ಕ್ರಿಸ್ತಪೂರ್ವದಲ್ಲಿಯೇ ಕನ್ನಡ ಭಾಷೆ ಬಳಕೆಯಲ್ಲಿತ್ತು ಎಂಬುದಕ್ಕೆ ಅನೇಕ ಸೂಕ್ತ ಉಲ್ಲೇಖಗಳು ಉಪಲಬ್ದವಾಗಿವೆ. ಪ್ರಾಚೀನ ಕನ್ನಡ ಭಾಷೆಯ ವ್ಯಾಕರಣಕ್ಕೆ ಸಂಬಂಧಿಸಿದಂತೆ ಸಂಸ್ಕೃತ ಭಾಷೆಯ ವ್ಯಾಕರಣ ಪರಂಪರೆಯ ಗ್ರಂಥಗಳೇ ಮೂಲಾಧಾರವಾಗಿ ಮಾರ್ಗದರ್ಶಿಯಾಗಿವೆ. ಸಂಸ್ಕೃತದ ಶಾಸ್ತ್ರಪರಂಪರೆಯಲ್ಲಿ ವ್ಯಾಕರಣದ ಅಧ್ಯಯನಕ್ಕೆ ಅತ್ಯಂತ ಮಹತ್ವಪೂರ್ಣವಾದ ಸ್ಥಾನವಿದೆ. ಇದರಿಂದ ಸಂಸ್ಕೃತ ವ್ಯಾರಣದ ಪ್ರೇರಣೆಯ ಫಲಿತವಾಗಿ "ಸಂಸ್ಕಾರೇಣಯಥಾಹೀನಾಂ ವಾಚಾಂ ಅರ್ಥಾಂತರಾಗತಾಂ" (ವ್ಯಾಕರಣದ ಸಂಸ್ಕಾರವಿಲ್ಲದೆ ಸರಿಯಾದ ಅರ್ಥವನ್ನು ಬೋಧಿಸಲಾಗದು) ಎಂಬಂತೆ ನಮ್ಮ ಸಾಹಿತ್ಯಕೃತಿಗಳಲ್ಲಿ ವ್ಯಾಕರಣಾಂಶಗಳು ಆಂತರ್ಯದಲ್ಲಿ ವಿಶಿಷ್ಟಗಾಮಿನಿಯಾಗಿ ಹರಿದುಬಂದಿವೆ ಎನ್ನಬೇಕು.

ಕನ್ನಡದ ಮೊತ್ತಮೊದಲ ಉಪಲಬ್ದ ಕೃತಿ ಕವಿರಾಜಮಾರ್ಗ. ಇದರಲ್ಲಿ ಕೆಲವು ವ್ಯಾಕರಣ ವಿಷಯಗಳು ಉಕ್ತಗೊಂಡಿದ್ದರೂ ಇದಕ್ಕೂ ಹಿಂದೆ ವ್ಯಾಕರಣಗ್ರಂಥಗಳು ರಚನೆಗೊಂಡಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕವಿರಾಜ

ಮಾರ್ಗದಲ್ಲಿಯೇ ವ್ಯಾಕರಣ, ಕಾವ್ಯ, ನಾಟಕ, ಅಲಂಕಾರಗಳಲ್ಲಿ ಪರಿಣಿತನಾದವನು ಮಾತ್ರ 'ವಿವೇಕ ಬೃಹಸ್ಪತಿ' ಅಥವಾ ನೃಪತುಂಗನ ಆಸ್ಥಾನಕ್ಕೆ ಪ್ರವೇಶ ಪಡೆಯುತ್ತಾನೆ ಎಂಬ ಉಕ್ತಿಯಿದೆ. ಜತೆಗೆ ಕವಿರಾಜಮಾರ್ಗಕಾರನೇ 'ಪೂರ್ವಶಾಸ್ತ್ರವಿಧಿ ಪೂರ್ವಚಾರ್ಯರ್' ಎಂಬ ಉಕ್ತಿಯನ್ನು ಬಳಸಿದ್ದಾನೆ. ಇದರಿಂದ ಈ ಹಿಂದೆ ವ್ಯಾಕರಣ ಪರಂಪರೆ ಇತ್ತೆಂಬುದಕ್ಕೆ ಇದು ಆಧಾರವಾಗುತ್ತದೆ. ಇದಕ್ಕಿಂತ ಮುಖ್ಯವಾಗಿ ಆತ ಗದ್ಯಕವಿಗಳ ಪಟ್ಟಿಯನ್ನು ನೀಡುತ್ತಾ ದುರ್ವಿನೀತನ ಹೆಸರನ್ನು ಬಳಸಿದ್ದಾನೆ. ಈ ದುರ್ವಿನೀತ ಕ್ರಿ.ಶ.5ನೆಯ ಶತಮಾನದಲ್ಲಿ ಆಳುತ್ತಿದ್ದ ಗಂಗದೊರೆ, ಈತ 'ಶಬ್ದವತಾರ' ಎಂಬ ಕೃತಿಯ ಕರ್ತೃ ಎಂಬುದಾಗಿ ಗುಮ್ಮರೆಡ್ಡಿಪುರದ ಶಾಸನದಿಂದ ತಿಳಿದು ಬರುತ್ತದೆ. ಕೃತಿಯ ಹೆಸರನ್ನು ನೋಡಿದರೆ ಇದು ವ್ಯಾಕರಣ ಕೃತಿ ಇರಬಹುದೆಂದು ಭಾಸವಾಗುತ್ತದೆ. ಪೂಜ್ಯಪಾದ ಎಂಬಾತ ಸಂಸ್ಕೃತದ ಪಾಣಿನಿಯ ಅಷ್ಟಾಧ್ಯಾಯಿಗೆ ಶಬ್ದವತಾರ ಎಂಬ ಟೀಕು ಬರೆದಿದ್ದಾನೆ. ದುರ್ವಿನೀತನ ಈ ಕೃತಿ ಬಹುಶಃ ಈ ರೂಪದ ಕನ್ನಡ ಅನುವಾದವಿರಬಹುದು ಅಥವಾ ಸ್ವತಂತ್ರ ವ್ಯಾಕರಣ ಇರಬಹುದು. ಆದರೆ ದುರದುಷ್ಟವಶಾತ್ ನಮಗೆ ಇದು ಲಭ್ಯವಾಗಿಲ್ಲ, ಉಪಲಬ್ದವಾಗದೆ ನಿರ್ಣಯ ಹೇಳುವುದು ಕಷ್ಟ. ಆದರೂ ಈ ಕೃತಿಯಿಂದ ಕನ್ನಡ ವ್ಯಾಕರಣ ಪರಂಪರೆ ರೂಢಿಯಲ್ಲಿತ್ತು ಎಂದು ಊಹೆ ಮಾಡಲು ಅಡ್ಡಿಯಿಲ್ಲ.

ಕವಿರಾಜಮಾರ್ಗ ಪ್ರಧಾನವಾಗಿ ಅಲಂಕಾರಶಾಸ್ತ್ರವನ್ನು ಹೇಳುತ್ತದೆಯಾದರೂ ಆನುಷಂಗಿಕವಾಗಿ ವ್ಯಾಕರಣ, ಛಂದಸ್ಸು, ನಾಡು-ನುಡಿಯ ಪ್ರಸ್ತಾಪ ನಿಚ್ಚಳವಾಗಿ ಬಂದಿದೆ. ಇದರ ಮೊದಲ ಪರಿಚ್ಛೇದದಲ್ಲಿಯೇ ಸಮಸಂಸ್ಕೃತ, ಅರಿಸಮಾಸ, ಶ್ರುತಿದುಷ್ಟಸಂಧಿ, ಶ್ರುತಿಕಷ್ಟಸಂಧಿ, ವಿಸಂಧಿ,ವಿರೂಪ ಸಂಧಿ, ಕಾರಕ, ಅವಧಾರಣ, ವಚನ, ವಿಶಂಕಾದೋಷಗಳನ್ನು ತಿಳಿಸಿದ್ದಾನೆ. ಅಲ್ಲದೆಎರಡನೆಯ ಪರಿಚ್ಛೇದದಲ್ಲಿ ಕ್ರಿಯಾವಿಶೇಷಣ, ವಿಭಕ್ತಿಗಳ ವಿಚಾರವನ್ನು ಪ್ರಸ್ತಾಪಿಸಿದ್ದಾನೆ. ಇದು ಪ್ರಸ್ತಾವಿಕ ಚರ್ಚೆಯಾದರೂ ಮುಂದಿನ ವೈಯಾಕರಣಿಗಳಿಗೆ ಅಮೂಲ್ಯವಾದ ಮಾಹಿತಿಯನ್ನು ನೀಡಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ರತ್ನತ್ರಯರಲ್ಲಿ ಕೊನೆಯವನಾದ ರನ್ನ ತನ್ನ ಅಜಿತಪುರಾಣದಲ್ಲಿ "ಅಭಿಮತಜೈನೇಂದ್ರ ವಚೋ ವಿಭವಂ, ಶಬ್ದಾನುಶಾಸನ ಪ್ರಭವ ವಚೋ ವಿಭವಂ ಒಡನೆಸೆಯೆ ರಂಜಿಪೆನ್ ಉಭಯ ವ್ಯಾಕರಣ ಪರಿಣಿತಂಕವಿರತ್ನಂ"[ಅ.ಪು-12-43] ಎಂದುಕೊಂಡಿದ್ದಾನೆ. ಅಲ್ಲದೆ ರನ್ನಕಂದ ಎಂಬ ನಿಘಂಟೊಂದನ್ನು ರಚಿಸಿರುವುದು ತಿಳಿದುಬರುತ್ತದೆ. ಅಲ್ಲದೆ ಕವಿಚಕ್ರವರ್ತಿಗಳಲ್ಲಿ ಕೊನೆಯವನಾದ ಜನ್ನ, ತನ್ನ ಬಗ್ಗೆ ಹೇಳಿಕೊಳ್ಳುತ್ತಾ 'ರನ್ನಂ ವೈಯಾಕರಣಿ ಮೇಣ್ ಜನ್ನಂ ಕವಿಯೊಳಗೆ ವೈಯಾಕರಣಿ' ಎಂದಿದ್ದಾನೆ. ಈ ಎಲ್ಲಾ ಅಂಶಗಳು ರನ್ನ ಒಬ್ಬ ವ್ಯಾಕರಣಕಾರನಿರಬಹುದೆಂದು ಊಹೆ ಮಾಡಲು ಅವಕಾಶ ಮಾಡಿಕೊಡುತ್ತವೆ.

ಎರಡನೆಯ ನಾಗವರ್ಮ ತನ್ನ ಕೃತಿಯಾದ ಕರ್ನಾಟಕ ಭಾಷಾಭೂಷಣಂನಲ್ಲಿ 'ದೀರ್ಘೋಕ್ತಿ ನಯಸೇನಸ್ಯ' ಎಂದು ತನ್ನ ಸೂತ್ರಯೊಂದರಲ್ಲಿ ಉಲ್ಲೇಖಿಸಿದ್ದಾನೆ. ಆತ ಹೇಳುವಂತೆ ನಯಸೇನನ ಮತದಂತೆ ಸಂಬೋಧನಾ ವಿಭಕ್ತಿಗೆ ದೀರ್ಘವುಂಟು. ಇಲ್ಲಿ ಉಲ್ಲೇಖಿತವಾದಂತೆ ಇರುವ ನಯಸೇನ ಧರ್ಮಾಮೃತದ ನಯಸೇನನಲ್ಲ. ಏಕೆಂದರೆ ಧರ್ಮಾಮೃತದ ನಯಸೇನನ ಕಾಲ ಕ್ರಿ.ಶ.1112, ಭಾಷಾಭೂಷಣದ ಕಾಲ ಕ್ರಿ.ಶ.1050.

ಅದರಿಂದ ಈ ನಯಸೇನ ಬೇರೊಬ್ಬ ನಯಸೇನನೇ ಆಗಿರಬೇಕು. ಮುಳಗುಂದದ ಶಾಸನವೊಂದರಲ್ಲಿ ನರೇಂದ್ರಸೇನ ಮುನಿಯ ಶಿಷ್ಯನು ಛಾಂದ್ರ, ಕಾತಂತ್ರ, ಶಾಕಟಾಯನ, ಜೈನೇಂದ್ರ, ಪಾಣಿನಿ, ಐಂದ್ರ ಮುಂತಾದವುಗಳಲ್ಲಿ ಪ್ರವೀಣನಾದ ಒಬ್ಬ ನಯಸೇನನನ್ನು ಉಲ್ಲೇಖಿಸಿದೆ. ಈ ನಯಸೇನನೇ ಭಾಷಾಭೂಷಣದಲ್ಲಿ ಉಲ್ಲೇಖಿತವಾದ ನಯಸೇನ ಇರಬಹುದು ಎಂಬ ಊಹೆಯಿದೆ. ಈತ ಕನ್ನಡದಲ್ಲಿ ವ್ಯಾಕರಣ ಕೃತಿ ರಚಿಸಿರಬಹುದೆಂದು ವಿದ್ವಾಂಸರು ಜಿಜ್ಞಾಸೆ ನಡೆಸಿದ್ದಾರೆ. ಈ ಎಲ್ಲಾ ಉಲ್ಲೇಖಗಳಿಂದ ಎರಡನೆಯ ನಾಗವರ್ಮನಿಗಿಂತ ಹಿಂದೆ ಕನ್ನಡದಲ್ಲಿ ಒಂದು ವ್ಯಾಕರಣ ಪರಂಪರೆ ಇತ್ತೆಂದು ಖಚಿತವಾಗಿ ಹೇಳಬಹುದು.

ಎರಡನೆಯ ನಾಗವರ್ಮ ಶಾಸ್ತ್ರಸಾಹಿತ್ಯದ ಅಧ್ಯಯನದಲ್ಲಿ ಚಿರಸ್ಮರಣೀಯ ವ್ಯಕ್ತಿ. ಅಲಂಕಾರ, ವ್ಯಾಕರಣ, ಛಂದಸ್ಸು, ನಿಘಂಟು ಮುಂತಾದ ಕ್ಷೇತ್ರಗಳಲ್ಲಿ ಕೃತಿರಚನೆ ಮಾಡಿ ಶಾಸ್ತ್ರಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದ್ದಾನೆ. ಆತನ 'ಕಾವ್ಯಾವಲೋಕನ' 5 ಅಧ್ಯಾಯಗಳನ್ನು ಒಳಗೊಂಡ ಒಂದು ಅಲಂಕಾರಕೃತಿ. ಇದರ ಮೊದಲ ಅಧ್ಯಾಯ 'ಶಬ್ದಸ್ಮೃತಿ'ಯಲ್ಲಿಯೇ ಕನ್ನಡದ ಮೊದಲ ವ್ಯಾಕರಣದ ಪ್ರಸ್ತಾಪವಿರುವುದು. ಒಟ್ಟು 6 ಪ್ರಕರಣ 96 ಸೂತ್ರಗಳಲ್ಲಿ ನಾಗವರ್ಮ ಹಳಗನ್ನಡದ ವ್ಯಾಕರಣವನ್ನು ಸಂಕ್ಷಿಪ್ತವಾಗಿ ಚರ್ಚೆ ಮಾಡಿದ್ದಾನೆ. ಕಂದ ಪದ್ಯಗಳಲ್ಲಿ ಸೂತ್ರ, ಪ್ರಯೋಗಕ್ಕಾಗಿ ಪ್ರಾಚೀನ ಕಾವ್ಯಗಳ ಪದ್ಯಗಳನ್ನು ಅವಲಂಬಿಸಿ 'ಲಕ್ಷಣ ಲಕ್ಷ್ಯನಿರ್ವಚನ ಪದ್ಧತಿ'ಯನ್ನು ಅನುಸರಿಸಿದ್ದಾನೆ. ಪ್ರತಿ ಹಂತದಲ್ಲಿಯೂ ಕವಿರಾಜಮಾರ್ಗವನ್ನು ಅನುಸರಿಸಿ, ಸಂಸ್ಕೃತ ವ್ಯಾಕರಣ ಪರಂಪರೆಯಿಂದ ಪ್ರೇರಿತನಾಗಿ ಹಳಗನ್ನಡ ವ್ಯಾಕರಣದ ಮೂಲರೇಖೆಗಳನ್ನು ಇಲ್ಲಿ ಬಿಡಿಸಿದ್ದಾನೆ. ಆದರೆ 'ಶಬ್ದಸ್ಮೃತಿ' ಕಾವ್ಯಾವಲೋಕನದ ಒಂದು ಅಧ್ಯಾಯವಾದ್ದರಿಂದ ಅದನ್ನು ಸ್ವತಂತ್ರ ವ್ಯಾಕರಣ ಎಂದು ಕರೆಯಲು ಸಾಧ್ಯವಿಲ್ಲ.

'ಕರ್ಣಾಟಕ ಭಾಷಾಭೂಷಣಂ' ಎರಡನೆಯ ನಾಗವರ್ಮನಿಂದಲೇ ರಚಿತವಾಗಿರುವ ಹಳಗನ್ನಡದ ಬೃಹತ್ ವ್ಯಾಕರಣಗ್ರಂಥ. ಕನ್ನಡ ವ್ಯಾಕರಣ ತತ್ತ್ವಗಳನ್ನು ಸವಿವರವಾಗಿ ನಿರೂಪಿಸಿರುವ ಸ್ವತಂತ್ರವಾದ ಸಮಗ್ರವಾದಕೃತಿ. ಇಲ್ಲಿ ನಾಗವರ್ಮ ಅಧ್ಯಾಯಗಳನ್ನು ವಿಧಾನಗಳನ್ನಾಗಿ ವಿಂಗಡಿಸಿ 10 ವಿಧಾನಗಳಲ್ಲಿ 269 ಸೂತ್ರಗಳಲ್ಲಿ ಹಳಗನ್ನಡ ವ್ಯಾಕರಣವನ್ನು ನಿರೂಪಿಸಿದ್ದಾನೆ. ಸೂತ್ರಗಳೆಲ್ಲ ಚಿಕ್ಕಚಿಕ್ಕವಾಕ್ಯಗಳಂತೆ ಇವೆ. ಸೂತ್ರಾರ್ಥವನ್ನು ವಿಷದೀಕರಿಸಲು ಸಂಸ್ಕೃತಗದ್ಯದಲ್ಲಿ ವೃತ್ತಿ ಬರೆದಿದ್ದಾನೆ. ಜತೆಗೆ ವಿಷಯ ಸ್ಪಷ್ಟೀಕರಣಕ್ಕೆ ಪ್ರಾಚೀನ ಕನ್ನಡಕಾವ್ಯಗಳಿಂದ ಪ್ರಯೋಗಗಳನ್ನು ನೀಡಿದ್ದಾನೆ. ಭಾಷಾಭೂಷಣ ಸಂಪೂರ್ಣವಾಗಿ ಸಂಸ್ಕೃತ ವ್ಯಾಕರಣ ಪರಂಪರೆಯನ್ನು ಅಂದರೆ ಸೂತ್ರ–ವೃತ್ತಿ–ಪ್ರಯೋಗ ಎಂಬ ಮೂರು ಮಜಲುಗಳನ್ನು ಅನುಕರಿಸಿದೆ. ಶಬ್ದಸ್ಮೃತಿಗಿಂತ ಭಾಷಾಭೂಷಣ ವ್ಯಾಕರಣದ ವಿಷಯದ ದೃಷ್ಟಿಯಿಂದ ಹಲವು ಹೆಜ್ಜೆ ಮುಂದಿದೆ. ಆದರೆ ಇಡೀ ಕೃತಿ ಸಂಸ್ಕೃತಭಾಷೆಯಲ್ಲಿದೆ; ಅದರಿಂದ ಇದನ್ನು ಕನ್ನಡದ ಪ್ರಥಮ ಸ್ವತಂತ್ರ ವ್ಯಾಕರಣಗ್ರಂಥ ಎಂದು ಕರೆಯಲು ಸಾಧ್ಯವಿಲ್ಲ.

ಅನಂತರದಲ್ಲಿ ಕಂಡುಬರುವ ಕೇಶಿರಾಜ ದಕ್ಷಿಣಭಾರತದ ವೈಯಾಕರಣಿಗಳಲ್ಲಿ ಅಗ್ರಗಣ್ಯ. ಕೇಶಿರಾಜ ತಾನು ಬರೆದಿರುವ 'ಶಬ್ದಮಣಿದರ್ಪಣಂ' ಎಂಬ ವ್ಯಾಕರಣದಿಂದ ಕನ್ನಡ ಸಾಹಿತ್ಯದಲ್ಲಿ ಸುಪ್ರಸಿದ್ಧನಾಗಿದ್ದಾನೆ. ಹೊಯ್ಸಳ ದೊರೆ 2ನೆಯ ನರಸಿಂಹನ ಆಶ್ರಯದಾತನಾದ ಈತ, ಚೋಳಪಾಲಕ ಚರಿತ್ರೆ, ಸುಭದ್ರಾ ಹರಣ, ಶ್ರೀಚಿತ್ರಮಾಲೆ,

ಪ್ರಬೋಧಚಂದ್ರ, ಕಿರಾತ ಗ್ರಂಥಗಳನ್ನು ರಚಿಸಿರುವುದಾಗಿ ಶಬ್ದಮಣಿದರ್ಪಣಂ ನಿಂದ ತಿಳಿದು ಬರುತ್ತದೆ. ಆದರೆ ದುರದುಷ್ಟವಶಾತ್ ದರ್ಪಣ ಹೊರತುಪಡಿಸಿ ಉಳಿದ ಯಾವ ಕೃತಿಗಳು ದೊರೆತಿಲ್ಲ. ಕೇಶೀರಾಜನ ಶಬ್ದಮಣಿದರ್ಪಣಂ ಕನ್ನಡದ ಪ್ರಪ್ರಥಮ ಸ್ವತಂತ್ರ ವ್ಯಾಕರಣಗ್ರಂಥ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಂಸ್ಕೃತದ ಪಾಣಿನಿಯ ಅಷ್ಟಾಧ್ಯಾಯಿ ಕೃತಿಯನ್ನು ಕೇಶಿರಾಜ ಅನುಸರಿಸಿ ಎಂಟು ಪ್ರಕರಣಗಳಲ್ಲಿ 337 ಸೂತ್ರಗಳಲ್ಲಿ ಹಳಗನ್ನಡ ವ್ಯಾಕರಣವನ್ನು ಸವಿವರವಾಗಿ ನಿರೂಪಿಸಿದ್ದಾನೆ. ಸೂತ್ರಗಳನ್ನು ಕಂದಪದ್ಯಗಳಲ್ಲಿ ಅಡಕಗೊಳಿಸಿ ಸೂತ್ರಾರ್ಥದ ಸ್ಪಷ್ಟೀಕರಣಕ್ಕೆ ಹಳಗನ್ನಡದ ಗದ್ಯದಲ್ಲಿ ವೃತ್ತಿ ಬರೆದಿದ್ದಾನೆ. ಜತೆಗೆ ಲಕ್ಷ್ಯವನ್ನು ನೀಡುವ ಸಲುವಾಗಿ ಪ್ರಾಚೀನ ಕನ್ನಡ ಕಾವ್ಯದ ತುಣುಕುಗಳನ್ನು ಯಥೋಚಿತವಾಗಿ ಬಳಸಿಕೊಂಡಿದ್ದಾನೆ.

ಶಬ್ದಮಣಿದರ್ಪಣಂ ರಚಿತವಾಗಿರುವುದು ನಡುಗನ್ನಡಕಾಲದಲ್ಲಿ; ಆದರೆ ಅದು ಪ್ರಸ್ತಾಪಿಸಿರುವುದು ಹಳಗನ್ನಡ ಭಾಷಾವ್ಯವಸ್ಥೆಯ ವ್ಯಾಕರಣವನ್ನು. ಹಳಗನ್ನಡ ಭಾಷೆಯ ವ್ಯಾಕರಣವನ್ನು ಈತನಷ್ಟು ಸಮಗ್ರವಾಗಿ ವೈಜ್ಞಾನಿಕವಾಗಿ ವಿವರಿಸಿರುವ ಮತ್ತೊಬ್ಬ ವ್ಯಾಕರಣಕಾರನಿಲ್ಲ. ಸಮಕಾಲೀನ ಆಡುಭಾಷೆಯನ್ನು ಗಮನಿಸಿ ವ್ಯಾಕರಣವನ್ನು ಶುಷ್ಕವಾಗಿ ವಿವರಿಸದೆ ಕಾವ್ಯರೂಪದ ಶಾಸ್ತ್ರವಾಗಿ ನಿರೂಪಿಸಿರುವುದು ಕೃತಿಯ ಅಧಿಕಾಂಶ. ದೇಶಿತನವನ್ನು ಪ್ರತಿಹಂತದಲ್ಲಿಯೂ ಪ್ರಕಟಿಸುತ್ತಾ ಕನ್ನಡ ಸಂಸ್ಕೃತಕ್ಕಿಂತ ಭಿನ್ನ ಎಂಬುದನ್ನು ಸಾಕ್ಷಿ ಸಮೇತ ಸಾಬೀತು ಪಡಿಸಿದ್ದಾನೆ. ಅದಕ್ಕಾಗಿಯೇ ಆತ ಸಂಸ್ಕೃತದಲ್ಲಿ ಇಲ್ಲದ, ಕನ್ನಡದಲ್ಲಿ ಮಾತ್ರವೇ ಇರುವ 9 ಲಕ್ಷಣಗಳನ್ನು ಪಟ್ಟಿ ಮಾಡಿ ಅದನ್ನು ಕನ್ನಡದ ಅಸಾಧಾರಣ ಲಕ್ಷಣ ಎಂದು ಕರೆದಿದ್ದಾನೆ. ವ್ಯಾಕರಣದ ಪ್ರತಿ ವಿಷಯವನ್ನು ಎಳೆಎಳೆಯಾಗಿ ಸವಿವರವಾಗಿ ನಿರೂಪಿಸುತ್ತ ಕೇಶಿರಾಜ ಒಬ್ಬ ವರ್ಣನಾತ್ಮಕ ವ್ಯಾಕರಣಕಾರನಾಗಿ ಕಂಗೊಳಿಸಿದ್ದಾನೆ. ಯಾವುದೇ ವಿಷಯವನ್ನು ಸಾಧಾರವಾಗಿ ಸಹಿತವಾಗಿಯೇ ಹೇಳುವುದು, ನಿರ್ಣಯ ಹೇಳುವೆಡೆ ನಿರ್ಭಿಡೆಯಿಂದ ಉತ್ತರಿಸುವುದು, ಅಕ್ಷರಗಳು ಹುಟ್ಟುವ ತಾಣಗಳನ್ನು ವೈಜ್ಞಾನಿಕವಾಗಿ ಹೇಳಿರುವುದು, ರಳ ಪಟ್ಟಿ, ಧಾತು ಪಟ್ಟಿ, ಪ್ರಯೋಗಸಾರದ ಪಟ್ಟಿ ನೀಡಿರುವುದು ಆತನ ವೈಶಿಷ್ಟ್ಯ.

ಕೇಶಿರಾಜ ತನಗಿಂತ ಹಿಂದಿನ ವ್ಯಾಕರಣಕೃತಿಗಳನ್ನು ಗಮನಿಸಿದ್ದಾನೆ. ಅದರಲ್ಲೂ ನಾಗವರ್ಮನ ಕೃತಿಗಳನ್ನು ಪ್ರತಿಹಂತದಲ್ಲಿಯೂ ಅನುಕರಿಸಿದ್ದಾನೆ. ಆದರೆ ಅನೇಕ ಸ್ವೋಪಜ್ಞ ವಿಷಯಗಳನ್ನು ಈತ ಸೇರಿಸಿದ್ದಾನೆ. ಶಿಥಿಲದ್ವಿತ್ವದ ಪ್ರಸ್ತಾಪ, ಸಮಸಂಸ್ಕೃತ, ಗಮಕ ಸಮಾಸ, ಅರಿಸಮಾಸ, ವ<ಮ,ಹ<ಪ ಭೇದ, ಸತಿಸಪ್ತಮಿ ಮುಂತಾದ ವಿಚಾರಗಳಲ್ಲಿ ಕೇಶಿರಾಜತನ ಸ್ಪಷ್ಟವಾಗಿ ಗೋಚರವಾಗುತ್ತದೆ. ಶಬ್ದಮಣಿದರ್ಪಣದ ಗ್ರಂಥವ್ಯಾಪ್ತಿಯನ್ನು ಗಮನಿಸಿದರೆ ಅದರ ವಿಸ್ತಾರ ವೈಶಾಲ್ಯಗಳು ಮನವರಿಕೆಯಾಗುತ್ತದೆ. ಇಷ್ಟು ವೈಜ್ಞಾನಿಕವಾಗಿ ತಾರ್ಕಿಕವಾಗಿ ಹೃದ್ಯವಾಗಿ ವ್ಯಾಕರಣ ಸಂಗತಿಯನ್ನು ನಿರೂಪಿಸಿರುವುದು ಕನ್ನಡದಲ್ಲಿರಲಿ ದ್ರಾವಿಡಭಾಷೆಗಳಲ್ಲಿಯೇ ಅತ್ಯಂತ ವಿರಳ ಎನ್ನಬೇಕು. ಸಮಗ್ರತೆ ಮತ್ತು ಸ್ವೋಪಜ್ಞತೆ ಎರಡು ದೃಷ್ಟಿಯಿಂದಲೂ ಶಬ್ದಮಣಿದರ್ಪಣ ಒಂದು ಅನನ್ಯಕೃತಿ. ಆದ್ದರಿಂದಲೇ ಶತಶತಮಾನಗಳು ಕಳೆದರೂ ಹಳಗನ್ನಡಕ್ಕೆ ಇದೇ ಅಧಿಕೃತ ವ್ಯಾಕರಣವೆನಿಸಿದೆ.

ಭಟ್ಟಕಳಂಕನ 'ಶಬ್ದಾನುಶಾಸನಂ' ಹಳಗನ್ನಡ ವ್ಯಾಕರಣಗಳಲ್ಲೇ ಅತಿ ಬೃಹತ್‌ಗ್ರಂಥ. ಹಳಗನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಇದೇ ಕೊನೆಯ ಕೃತಿ.

ಇದರಲ್ಲಿಒಟ್ಟು 592 ಸೂತ್ರಗಳಿವೆ. ಕೃತಿಯನ್ನು 4 ಭಾಗಗಳಾಗಿ ವಿಗಂಡಿಸಿ, ಸೂತ್ರಗಳನ್ನು ಸಂಸ್ಕೃತದಲ್ಲಿ, ವೃತ್ತಿಯನ್ನು ಶಬ್ದಮಂಜರಿ ಎಂಬ ಹೆಸರಿನ ಗದ್ಯದಲ್ಲಿ, ಸೂತ್ರಾರ್ಥವನ್ನು ವಿವರಿಸಲು ಮಂಜರಿ ಮಕರಂದ ಎಂಬ ವ್ಯಾಖ್ಯಾನದ ಮೂಲಕ ಮೂರು ಹಂತಗಳಲ್ಲಿ ನಿರೂಪಿಸಿದ್ದಾನೆ. ಲಕ್ಷ್ಯಗಳಿಗೆ ಪ್ರಾಚೀನಕಾವ್ಯದ ಪೂರ್ಣಪ್ರಮಾಣದ ಪದ್ಯಗಳನ್ನು ಹಾಗೂ ಬಿಡಿಪದಗಳನ್ನು ನೀಡಿದ್ದಾನೆ. ಶಬ್ದಾನುಶಾಸನ ಒಂದು ವಿದ್ವತ್ಸಾಹಸ ಪಂಡಿತ ಪ್ರಿಯಕೃತಿ. ಕನ್ನಡ ವ್ಯಾಕರಣವನ್ನು ಸಂಸ್ಕೃತಭಾಷೆಯಲ್ಲಿ ಹೇಳುವ ಮೂಲಕ ಅದಕ್ಕೆ ಅಖಿಲಭಾರತ ವ್ಯಾಪ್ತಿಯನ್ನು ತಂದುಕೊಡುವುದು ಭಟ್ಟಕಳಂಕನ ಗುರಿ.

ಪ್ರತಿ ಹಂತದಲ್ಲಿಯೂ ಸಂಸ್ಕೃತ ವ್ಯಾಕರಣ ಪರಂಪರೆಯನ್ನು ಅನುಕರಿಸುತ್ತ, ಪ್ರತಿ ಸೂತ್ರದಲ್ಲಿಯೂ ವ್ಯಾಪಕ ವ್ಯಾಖ್ಯಾನವನ್ನು ನೀಡುತ್ತಾ ಪೂರ್ವಪರ ವಿಶ್ಲೇಷಿಸಿ ಕೃತಿಗೆ ಪ್ರೌಢಿಮೆ ಮತ್ತು ಪ್ರಖಂಡತೆಯನ್ನು ಒದಗಿಸಿದ್ದಾನೆ ಭಟ್ಟಕಳಂಕ. ಶಬ್ದಾನುಶಾಸನ ರಚನೆಯಾಗಿರುವುದು 17 ನೆಯ ಶತಮಾನಲದಲ್ಲಿ.ಅಂದರೆ ಭಾಷಿಕವಾಗಿ ನಡುಗನ್ನಡ ಹೊಸಗನ್ನಡಕ್ಕೆ ಹೊರಳುತ್ತಿರುವ ಕಾಲ. ಆದರೆ ಭಟ್ಟಕಳಂಕ ತನ್ನ ಕಾಲದ ಭಾಷಿಕ ಬದಲಾವಣೆಯನ್ನು ಗಮನಿಸಿಲ್ಲ. ನಾಗವರ್ಮ ಮತ್ತು ಕೇಶಿರಾಜನನ್ನು ಅಡಿಅಡಿಗೆ ಗಮನಿಸಿರುವುದು ಸುವ್ಯಕ್ತವಾಗಿದ್ದರೂ ಹಳಗನ್ನಡ ವ್ಯಾಕರಣವನ್ನು ಪಾಂಡಿತ್ಯಪೂರ್ಣವಾಗಿ ಹೇಳಲು ಹೋಗಿ ಸಂಸ್ಕೃತದಲ್ಲಿ ಕೃತಿರಚನೆ ಮಾಡಿ ಒಂದು ಸೊಗಸಾದ ಅವಕಾಶವನ್ನು ಭಟ್ಟಾಕಳಂಕ ಕಳೆದುಕೊಂಡಿದ್ದಾನೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಒಟ್ಟಿನಲ್ಲಿ ಹಳಗನ್ನಡ ವ್ಯಾಕರಣಾಂಶಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯದ ಕವಿಗಳಲ್ಲಿ ಹಾಗೂ ಕೃತಿಗಳಲ್ಲಿ ಸುಪ್ತಗಾಮಿನಿಯಾಗಿ ಅಲ್ಲಲ್ಲಿ ಯಥೋಚಿತವಾಗಿ ಬಳಕೆಗೊಂಡಿರುವುದು ಸುಸ್ಪಷ್ಟವಾಗಿದೆ. ಅಲ್ಲದೆ ಹಳಗನ್ನಡ ವ್ಯಾಕರಣಕ್ಕೆ ಸಂಬಧಿಸಿದಂತೆ ಒಟ್ಟು ನಾಲ್ಕು ಕೃತಿಗಳು ರಚನೆಗೊಂಡಿದ್ದು, ಅವುಗಳಲ್ಲಿ ಎರಡು ಕನ್ನಡ ಹಾಗೂ ಎರಡು ಸಂಸ್ಕೃತ ಭಾಷೆಯವಾಗಿವೆ. ಇವುಗಳ್ಲಿ ಒಂದರಿಂದ ಒಂದು ವಿಕಾಸಗೊಳುತ್ತಾ ಒಂದರಿಂದ ಒಂದು ಉಪಕೃತಗೊಳ್ಳುತ್ತ ಸಾಗಿವೆ. ಅಂದರೆ ಶಬ್ದಸ್ಮೃತಿಯಿಂದ ಭೂಷಣ, ಭೂಷಣದಿಂದ ದರ್ಪಣ, ದರ್ಪಣದಿಂದ ಶಬ್ದಾನುಶಾಸನ ಪಾತ, ಗಾತ್ರ, ಪ್ರಮಾಣದಲ್ಲಿ ಬೆಳೆದಿವೆ. ಆದರೆ ಸಂಸ್ಕೃತ ಭಾಷೆಯಂತೆ ಕನ್ನಡಭಾಷೆಯಲ್ಲಿ ಹಳಗನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಬಹಳಷ್ಟು ಸಂಖ್ಯೆಯಲ್ಲಿ ಟೀಕು, ಟಿಪ್ಪಣಿ, ವ್ಯಾಖ್ಯಾನ, ವಿವರಣೆ, ವಿಶ್ಲೇಷಣೆಗಳು ಬಾರದೆ ಇರುವುದು ಗಮನಾರ್ಹ ಸಂಗತಿಯಾಗಿದೆ.

ಇಂದು ನಮ್ಮ ಚಿಂತನೆ ವಿಚಾರಗಳ ಅಭಿವ್ಯಕ್ತಿಗೆ ಭಾಷೆ ಕೇವಲ ಸಂವಹನ ಮಾಧ್ಯಮವಾಗಿದ್ದರೆ ಸಾಕು, ಅದರೊಳಗಿನ ವ್ಯಾಕರಣ ಏಕೆ ಬೇಕು? ಎನ್ನುವ ವಾದ ಕೇಳಿಬರುತ್ತಿದೆ. ವ್ಯಾಕರಣ ಆಯಾ ಭಾಷೆಗೆ ಕಟ್ಟಳೆಗಳನ್ನು ನಿರ್ಮಿಸಿ ಅದರ ಬೆಳವಣಿಗೆಗೆ ಅಡ್ಡಿ ಮಾಡಿದೆ ಎನ್ನುವವರೂ ಇದ್ದಾರೆ. ಆದರೆ ಯಾವುದೇ ಭಾಷೆಗೆ ವ್ಯಾಕರಣ ಆತ್ಮವಿದ್ದಂತೆ; ಆತ್ಮವಿದ್ದರೆ ದೇಹಕ್ಕೆ ಬೆಲೆ; ಸಂವಹನದ ಭಾಷೆಯನ್ನು ತಿಳಿಯಲು ವ್ಯಾಕರಣ ಅನಗತ್ಯ. ಆದರೆ ಭಾಷೆಯ ಮೇಲೆ ಹಿಡಿತ ಸಾಧಿಸಲು ಮತ್ತು ಭಾಷೆಯನ್ನು ಬೇಕಾದಂತೆ ದುಡಿಸಿಕೊಳ್ಳಲು ವ್ಯಾಕರಣ ಬೇಕೇ ಬೇಕು. ಅಲ್ಲದೆ ವ್ಯಾಕರಣ ಭಾಷೆಯ ವಿವಿಧ ಮಜಲುಗಳನ್ನು ಅಂದರೆ ಅಕ್ಷರ, ಪದ, ವಾಕ್ಯ, ವ್ಯಾಕ್ಯಾರ್ಥಗಳನ್ನು ಪ್ರತ್ಯಕ್ಷ್ಯವಾಗಿ ದರ್ಶಿಸುವ ಒಂದು ಸುಂದರ ದರ್ಪಣವಾಗಿದೆ. ಅಂತೆಯೇ ಅನ್ಯಭಾಷಿಕರು ಒಂದು

ಭಾಷೆಯನ್ನು ಸುಲಭವಾಗಿ ಪ್ರವೇಶ ಮಾಡಲು ವ್ಯಾಕರಣ ಒಂದು ಕೀಲಿಕೈ ಇದ್ದಂತೆ. ಯಾವುದೇ ಭಾಷೆಯ ಹೊಸ ಸಾಧ್ಯತೆಯನ್ನು ತಿಳಿಯಲು, ಉತ್ಕೃಷ್ಟ ಮಾದರಿಗಳನ್ನು ನಿರ್ಮಿಸಲು, ಭಾಷೆಯನ್ನು ಸದಾ ಜಾಗ್ರತೆಯಾಗಿ ನಿಯಂತ್ರಿಸಲು ವ್ಯಾಕರಣ ಒಂದು ಸಿದ್ಧಸೂತ್ರವಾಗಿದೆ. ವ್ಯಾಕರಣವು ಭಾಷೆಯ ಹಿತೈಷಿಯಾಗಿ ಸಹಚರನಾಗಿ ಕಾರ್ಯನಿರ್ವಹಿಸುತ್ತದೆಯೇ ಹೊರತು ಒಡೆಯನಾಗಿ ಸವಾರಿ ಮಾಡುವುದಿಲ್ಲ. ಈ ಹಿನ್ನಲೆಯಲ್ಲಿ ಯಾವುದೇ ಭಾಷೆಯ ಸಂಸ್ಕಾರ, ಸಾರಸೂತ್ರ ಆ ಭಾಷೆಯ ವ್ಯಾಕರಣದಲ್ಲಿ ಅಡಗಿದೆ ಎನ್ನಬಹುದು. ಆದ್ದರಿಂದ ವ್ಯಾಕರಣವನ್ನು ಅಲ್ಲಗಳೆದರೆ ಅದು ಭಾಷೆಯ ಅಸ್ತಿತ್ವವನ್ನು ಪ್ರಶ್ನಿಸಿದಂತೆಯೇ ಸರಿ.

**ಪರಾಮರ್ಶನ ಗ್ರಂಥಗಳು**


1. ಅನಂತರಾಮು.ಕೆ : ಕನ್ನಡ ವ್ಯಾಕರಣಗಳು, ಕನ್ನಡ ಭಾಷಾಭಿವೃದ್ಧಿ ಯೋಜನೆ ಜನಪ್ರಿಯ ಕನ್ನಡ ಮಾಲೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರ ಮೊದಲ ಮುದ್ರಣ–2010
2. ತಾರಾನಾಥ್.ಎನ್.ಎಸ್.: ಹಳಗನ್ನಡ ತೌಲನಿಕ ವ್ಯಾಕರಣ, ವಿಷಯ ಕುರಿತಂತೆ ತರಗತಿಯಲ್ಲಿ ನೀಡಿದ ಬೋಧನಾ ಟಿಪ್ಪಣಿಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. 2003–2004
3. ಸೀತಾರಾಮಯ್ಯ.ಎಂ.ವಿ. : ಪ್ರಾಚೀನ ಕನ್ನಡ ವ್ಯಾಕರಣಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. ಎರಡನೆಯ ಮುದ್ರಣ–1988


❖❖❖

ಹೂವಿನ ಭಾರಕೆ ಬಳ್ಳಿಯು ಜಾರಿ
ಅಪ್ಪಿದೆ ಬುವಿಯನ್ನು
ಕಂದನನೆತ್ತಿದ ಅಮ್ಮನ ಕಣ್ಣು ನೋಡಿದೆ
ಊರಿನ ದಾರಿಯನು

# ದಿಟ್ಟ ನಿಲುವಿನ ವೈಚಾರಿಕ ಚಿಂತಕ : ಕಿನ್ನರಿ ಬೊಮ್ಮಯ್ಯ

**ಡಾ. ಗೋವಿಂದರಾಯ ಎಂ.**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್ – 572130

ಬಸವಾದಿ ಶರಣರ ಕಾಯಕ ತತ್ವದಲ್ಲಿ ಎಲ್ಲ ವೃತ್ತಿಗಳಿಗೂ ಸಮಾನ ಗೌರವವಿದ್ದು, ಮೇಲು–ಕೀಳುಗಳಿಗೆ ಅವಕಾಶವಿರಲಿಲ್ಲ. ಕಲ್ಯಾಣದಲ್ಲಿದ್ದ ಅನೇಕ ಶರಣರು ತಾವು ಮಾಡುವ ಕಾಯಕವನ್ನು ತಮ್ಮ ಹೆಸರಿನ ಮುಂದೆ ಸೇರಿಸಿಕೊಂಡು ಯಾವುದೇ ಅಳುಕಿಲ್ಲದೆ ತಮ್ಮ ವೃತ್ತಿ ಗೌರವದ ಜೊತೆಗೆ ತಮ್ಮ ಆತ್ಮಗೌರವವನ್ನು ಬೆಳೆಸಿಕೊಂಡಿದ್ದರು. ಅವರಿಗೆ ತಾವು ಮಾಡುವ ಕಾಯಕವನ್ನು ಹೇಳಿಕೊಳ್ಳುವಾಗ ಯಾವುದೇ ರೀತಿಯ ಮುಜುಗರವಾಗಲಿ, ಕೀಳರಿಮೆಯಾಗಲಿ ಕಾಣುತ್ತಿರಲಿಲ್ಲ. ಇಂತಹ ಕಾಯಕ ಜೀವಿಗಳ ಸಾಲಿಗೆ ಕಿನ್ನರಿ ಬೊಮ್ಮಯ್ಯನು ಸೇರುತ್ತಾನೆ. ಕಿನ್ನರಿಯನ್ನು ನುಡಿಸಿ ಅದರಿಂದ ಬಂದ ಪ್ರತಿಫಲದಿಂದ ಸಂತೋಷವಾಗಿ ದಾಸೋಹ ನಡೆಸುತ್ತಾ ಜೀವನ ಸಾಗಿಸಿ ಶಿವನ ಒಲುಮೆಯನ್ನು ಪಡೆದ ಶರಣನಾಗಿದ್ದಾನೆ. ಕಿನ್ನರಿ ಬೊಮ್ಮಯ್ಯ ಬಹಳ ವಿಶಿಷ್ಟ ಬಗೆಯ ವೈಚಾರಿಕ ಚಿಂತಕನಾಗಿ ಮತ್ತು ದಿಟ್ಟ ನಿಲುವನ್ನು ಹೊಂದಿದ ಶರಣನಾಗಿ ಕಂಡುಬರುತ್ತಾನೆ. ಈತನ ಈ ಬಗೆಯ ನೇರ ನಡೆ–ನುಡಿಗೆ ಮೆಚ್ಚಿದ ಬಸವಣ್ಣ ಬಸವಕಲ್ಯಾಣದ ಅನುಭವ ಮಂಟಪಕ್ಕೆ ಬರುವ ಹೊಸ ಹೊಸ ಶರಣರನ್ನು ಪರೀಕ್ಷಿಸುವ ಹೊಣೆಗಾರಿಕೆಯನ್ನು ವಹಿಸಿದ್ದರು.

ಕಿನ್ನರಿ ಬೊಮ್ಮಯ್ಯನ ಬಾಲ್ಯವೃತ್ತಾಂತ ಅಷ್ಟಾಗಿ ತಿಳಿದುಬರುವುದಿಲ್ಲ. ಅವನ ಜನ್ಮಸ್ಥಳ ಆಂಧ್ರಪ್ರದೇಶದ ಪುಂತೂರು ಎಂಬ ಪುಣ್ಯ ಗ್ರಾಮ. ಅದು ಈಗಿನ ತೆಲಂಗಾಣ ರಾಜ್ಯದ ಮೆಹಬೂಬ್ ನಗರ ಜಿಲ್ಲೆಯ ಗದ್ವಾಲ ತಾಲ್ಲೂಕು ಅಥವಾ ಮಂಡಲದ ಪೂಡೂರು ಗ್ರಾಮ. ಕಂಚಿ ಶಂಕರಾಧ್ಯರು ತಮ್ಮ ಕೃತಿ ಸಂಸ್ಕೃತದ ಬಸವ ಪುರಾಣದಲ್ಲಿ ಈ ಊರನ್ನು ಪುರೂಡು ಎಂದು ಉಲ್ಲೇಖಿಸಿದ್ದಾರೆ. ಪುರೂಡು ಎನ್ನುವದು ಪೂಡೂರು ಎಂದು ವರ್ಣಪಲ್ಲಟ ಆಗಿರಬಹುದೆಂಬ ಅಭಿಪ್ರಾಯವಿದೆ. ಅನೇಕ ಕಾವ್ಯ, ಪುರಾಣಗಳಲ್ಲಿ ಜನ್ಮಸ್ಥಳದ ಬಗ್ಗೆ ಭಿನ್ನವಾದ ಉಲ್ಲೇಖವಿದ್ದರೂ ಬಸವ ಪುರಾಣ, ಬಸವರಾಜ ವಿಜಯ, ಭೈರವೇಶ್ವರ ಕಾವ್ಯ, ಶಿವಶರಣರ ವಿಲಾಸಗಳಲ್ಲಿ ಈತನ ಜನ್ಮಸ್ಥಳವನ್ನು ಪೂಡೂರು ಎಂದು ಉಲ್ಲೇಖಿಸಿರುವುದು ಕಂಡುಬಂದಿದ್ದು, ಅಲ್ಲಿನ ಪ್ರಾಚೀನ ಐತಿಹಾಸಿಕ ಕುರುಹುಗಳನ್ನು ಗಮನಿಸಿದಾಗ ಕಿನ್ನರಿ ಬೊಮ್ಮಯ್ಯನ ಜನ್ಮಸ್ಥಳವು ಪೂಡೂರು ಎಂದಿರುವುದನ್ನು ಗಮನಿಸಬಹುದಾಗಿದೆ. ಈತನ ಹೆಸರಿನ ಬಗ್ಗೆ ಗೊಂದಲಗಳಿವೆಯಾದರೂ ಒಂದು ಖಚಿತ ಒಮ್ಮತವಿದೆ. ಕೆಲವರು ಕಿನ್ನರಿ ಬೊಮ್ಮಯ್ಯ ಎಂದೂ, ಮತ್ತೆ ಕೆಲವರು ಕಿನ್ನರಿ ಬ್ರಹ್ಮಯ್ಯ ಎಂದು ಕರೆಯುತ್ತಾರೆ. ಸಂಸ್ಕೃತದಲ್ಲಿನ ಬ್ರಹ್ಮ ಕನ್ನಡದಲ್ಲಿ ಬೊಮ್ಮ ಆಗಿದೆ. ಕಿನ್ನರಿಯ ವಿಶೇಷಣದೊಂದಿಗೆ ಹೆಸರು ಸೇರಿರುವುದರಿಂದ ಇಬ್ಬರೂ ಒಂದೇ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಈತನ ತಾಯಿಯ ಹೆಸರು ಕಲಿದೇವಿ ಅಥವಾ ಕಲಿದೇವಿನಿ. ತಂದೆಯ ವಿಷಯವಾಗಿ ಹೆಚ್ಚಾಗಿ ತಿಳಿದುಬಂದಿಲ್ಲ. ಈತನ ತಂದೆ ಚಿಕ್ಕವಯಸ್ಸಿನಲ್ಲಿ

ಕಾರಣಾಂತರಗಳಿಂದ ದೂರವಾಗಿರಬಹುದು. ತಾಯಿಯಾದ ಕಲಿದೇವಿಯೆ ಈತನ ಜವಾಬ್ದಾರಿಯನ್ನು ಹೊತ್ತು ಸುಸಂಸ್ಕೃತ ವ್ಯಕ್ತಿಯನ್ನಾಗಿ ರೂಪಿಸಿರಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಅವನ ಮಡದಿ ಮಕ್ಕಳ ವಿಚಾರಗಳು ಎಲ್ಲಿಯೂ ತಿಳಿದು ಬಂದಿಲ್ಲ. ಬೊಮ್ಮಯ್ಯನು ವೃತ್ತಿಯಲ್ಲಿ ಅಕ್ಕಸಾಲಿಗನಾಗಿದ್ದು ತಂದೆಯಿಂದ ಪರಂಪರಾನುಗತವಾಗಿ ಬಂದ ಅಕ್ಕಸಾಲಿಗ ವೃತ್ತಿಯನ್ನು ಆತ ಮಾಡುತ್ತಿದ್ದಿರಬಹುದು ಎಂಬುದನ್ನು ಅಲ್ಲಗಳೆಯುವಂತಿಲ್ಲ. ವೃತ್ತಿಯಲ್ಲಿ ಅಕ್ಕಸಾಲಿಗನಾದ ಬೊಮ್ಮಯ್ಯ ಕಿನ್ನರಿ ಬೊಮ್ಮಯನ್ನಾಗಿ ಪರಿವರ್ತನೆ ಹೊಂದಲು ಅವನ ಜೀವನದಲ್ಲಿ ನಡೆದ ಆಕಸ್ಮಿಕ ಘಟನೆಯೊಂದು ಕಾರಣವಾಗುತ್ತದೆ. ಒಮ್ಮೆ ಬೊಮ್ಮಯ್ಯನು ಗಿರಾಕಿ ಒಬ್ಬನಿಗೆ ಮಾಡಿಕೊಡಲು ಆಭರಣಗಳ ಸಿದ್ಧತೆಯಲ್ಲಿ ತೊಡಗಿದ್ದಾಗ ಜಂಗಮ ಬಂದು ಬೇಡಲು ಸ್ವಲ್ಪ ಭಾಗವನ್ನು ಜಂಗಮನಿಗೆ ನೀಡುತ್ತಾನೆ. ಮತ್ತೊಂದು ದಿನ ಬೊಮ್ಮಯ್ಯನ ಗುರುಗಳು ತಮಗೆ ಆಭರಣ ಮಾಡಿಕೊಡು ಎಂದು ಹೇಳಿ ಒಡವೆಯನ್ನು ಕೇಳಿ, ಒಡವೆ ಮಾಡಿದ ಮಾಡಿ ಪೂರ್ಣಗೊಂಡಾಗ ಒಡವೆಯ ತೂಕದಲ್ಲಿ ಕಡಿಮೆ ಇರುವುದನ್ನು ಗಮನಿಸಿ ಕೋಪಿಸಿಕೊಳ್ಳುತ್ತಾರೆ. ಇದರಿಂದ ತನ್ನ ವೃತ್ತಿಯಲ್ಲಿ ವಿರಕ್ತತೆ ಉಂಟಾಗಿ ಗುರುವಿನ ಮಾರ್ಗದರ್ಶನದಿಂದ ಅಕ್ಕಸಾಲಿಗ ವೃತ್ತಿಯನ್ನು ಬಿಟ್ಟು ಕಿನ್ನರಿಯನ್ನು ಹಿಡಿಯುತ್ತಾನೆ. ಅವನು ಕಿನ್ನರಿ ನುಡಿಸುವುದರಲ್ಲಿ ಪಾರಂಗತನಾಗುತ್ತಾನೆ.

ಹೀಗೆ ಜನಪದ ತಂತಿ ವಾದ್ಯವಾದ ಕಿನ್ನರಿಯನ್ನು ನುಡಿಸುತ್ತಾ ಬಸವಣ್ಣನವರ ಸಾಮಾಜಿಕ–ಧಾರ್ಮಿಕ ಕೆಲಸ ಕಾರ್ಯಗಳು ಈತನ ಗಮನ ಸೆಳೆದು ಬಸವಣ್ಣನವರ ದರ್ಶನ ಭಾಗ್ಯವನ್ನು ಪಡೆಯಲು ಕಲ್ಯಾಣಕ್ಕೆ ಬಂದಾಗ, ಈತನ ಶಿವಭಕ್ತಿಯನ್ನು ಕಂಡು ಬಸವಣ್ಣನವರು ತುಂಬು ಸಂತೋಷದಿಂದ ಸ್ವಾಗತಿಸುತ್ತಾರೆ, ಅನುಭವ ಮಂಟಪಕ್ಕೆ ಆಹ್ವಾನಿಸುತ್ತಾರೆ. ಅನುಭವ ಮಂಟಪದಲ್ಲಿ ಶರಣರ ಸಮ್ಮುಖದಲ್ಲಿ ವಚನಗಳನ್ನು ರಚಿಸಿ ಕಿನ್ನರಿ ವಾದ್ಯದ ಹಿನ್ನೆಲೆಯಲ್ಲಿ ಹಾಡುತ್ತಾ ಶಿವತತ್ವವನ್ನು ಪ್ರಚಾರ ಮಾಡುವ ಅತ್ಯಂತ ಪ್ರೀತಿಯ ಶರಣಾಗುತ್ತಾನೆ.

ಸಾಹಿತ್ಯ ಚರಿತ್ರೆಯಲ್ಲಿ ಬಸವಣ್ಣನವರ ಕಾಲವನ್ನು ಕ್ರಿ.ಶ.1131 ಎಂದು ನಿರ್ಧರಿಸಿರುವುದರಿಂದ ಬಸವಣ್ಣನ ಸಮಕಾಲೀನರಾದರೂ ಸ್ವಲ್ಪ ಹಿರಿಯನಾಗಿ ಈತನನ್ನು ಗುರುತಿಸಲಾಗಿದೆ. ಬಸವಣ್ಣನವರು ತಮ್ಮ ವಚನದಲ್ಲಿ 'ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ' ಎಂದು ಹೇಳಿರುವ ಮಾತು ಇದಕ್ಕೆ ಪೂರಕವಾಗಿದೆ. ಅಲ್ಲದೆ ಅಕ್ಕಮಹಾದೇವಿ 'ಕಿನ್ನರನಂತಪ್ಪ ಸೋದರನೆನಗೆ' ಎಂದಿರುವುದರಿಂದ ಇವರಿಬ್ಬರಿಗಿಂತ ಸ್ವಲ್ಪ ಹಿರಿಯನಾಗಿರಬಹುದು ಎಂಬ ಅಭಿಪ್ರಾಯಗಳನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ ಬಸವಣ್ಣನ ಕಾಲ ಕ್ರಿ.ಶ.1131 ಆಗಿರುವುದರಿಂದ ಅವರಿಗಿಂತ ಕಿನ್ನರಯ್ಯ 10–15 ವರ್ಷಗಳಷ್ಟು ಹಿರಿಯನಾಗಿದ್ದು ಕ್ರಿ.ಶ.1110ರಿಂದ ಕ್ರಿ.ಶ.1125ರ ಮಧ್ಯೆ ಈತ ಜನಿಸಿರಬಹುದು ಎಂಬ ಅಂಶವನ್ನು ಊಹಿಸಲು ಅವಕಾಶವಿದೆ.

ಹೀಗೆ ತನ್ನ ಕುಲಕಸುಬನ್ನು ಬಿಟ್ಟು, ತನ್ನ ಗ್ರಾಮವನ್ನು ತೊರೆದು ಕಲ್ಯಾಣಕ್ಕೆ ಆಗಮಿಸಿದ ಮೇಲೆ ಈರುಳ್ಳಿಯ ಪ್ರಸಂಗದಿಂದ ಬಡವರಿಗೆ ಹೆಚ್ಚು ಪ್ರಿಯ ಹಾಗೂ ಆಧಾರವಾಗಿದ್ದ ಈರುಳ್ಳಿಯನ್ನು ಹೀಯಾಳಿಸಿದ ಬಸವಣ್ಣನವರಿಗೆ ಅದರ ಮಹತ್ವ ಮತ್ತು ಅರಿವನ್ನು ಮೂಡಿಸುವ ಮೂಲಕ ಈರುಳ್ಳಿಯ ಮಹಿಮೆಯನ್ನು ತಿಳಿಸಿದ ಮೇಲೆ ಬಸವಣ್ಣ ಮತ್ತು ಕಿನ್ನರಿ ಬೊಮ್ಮಯ್ಯನವರ ನಡುವಿನ ಆತ್ಮೀಯತೆ ಮತ್ತಷ್ಟು ಗಾಢವಾಗುತ್ತದೆ.

ಕಿನ್ನರಿ ಬೊಮ್ಮಯ್ಯನ ಜೀವನದಲ್ಲಿ ನಡೆದ ಹರಕೆಯ ಕುರಿಯೊಂದರ ಘಟನೆ ಈತನ ಸತ್ಯಸಂಧತೆಗೆ ಸಾಕ್ಷಿಯಾಗುತ್ತದೆ. ಕಲ್ಯಾಣದ ರಾಜ ಬಿಜ್ಜಳನಾಥನ ಆಪ್ತ ವಲಯದ ಬೊಜ್ಜು ನಾಯಕನು ತಾನು ಪ್ರೀತಿಸಿದ ವೇಶ್ಯೆಯ ಆರಾಧ್ಯ ದೇವತೆಯ ಸಂತೃಪ್ತಿಗಾಗಿ ಬಲಿ ಕೊಡಲು ಇರಿಸಿದ್ದ ಹರಕೆಯ ಕುರಿಯೊಂದು ಕೊರಳಿನ ಹಗ್ಗವನ್ನು ಕಿತ್ತುಕೊಂಡು ಭಯದಿಂದ ಪ್ರಾಣ ರಕ್ಷಣೆ ಮಾಡಿಕೊಳ್ಳಲು ತ್ರಿಪುರಾಂತಕೇಶ್ವರ ದೇವಾಲಯಕ್ಕೆ ಬರುತ್ತದೆ. ಅದನ್ನು ಬೆನ್ನತ್ತಿ ಬಂದ ಆ ವಿಟ ಆ ದೇಗುಲವನ್ನು ಪ್ರವೇಶಿಸುತ್ತಾನೆ. ಆಗ ಅವನಿಗೆ ಬುದ್ಧಿಯನ್ನು ಕಲಿಸಿ ಅವನು ಕುರಿಯನ್ನು ಬಿಟ್ಟರೆ ನೀನು ಬೇಡಿದ್ದು ಕೊಡುವೆ ಎಂದು ಹೇಳಿದ ಕಿನ್ನರಿ ಬೊಮ್ಮಯ್ಯನ ಮಾತಿಗೆ ಆ ವಿಟ ಅಹಂಕಾರದ ಮಾತಿನ ಮೂಲಕ ಚರ್ಚೆ ಮಾಡುತ್ತಾನೆ. ನಂತರ ಇಬ್ಬರ ಮಧ್ಯೆ ಬಲವಾದ ಚರ್ಚೆ ನಡೆದು ವಿಟನ ಶಿರವನ್ನು ಕತ್ತರಿಸುತ್ತಾನೆ. ಈ ಘಟನೆ ಕಲ್ಯಾಣದಲ್ಲಿ ಕೋಲಾಹಲವನ್ನು ಉಂಟು ಮಾಡಿ ಬಿಜ್ಜಳನ ಹತ್ತಿರ ದೂರು ಕೊಡಲಾಗುತ್ತದೆ. ಕಿನ್ನರಿ ಬೊಮ್ಮಯ್ಯ ನಡೆದ ವಿಚಾರವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿದರೂ ಇದಕ್ಕೆ ಸಾಕ್ಷಿ ಯಾರು? ಎಂಬ ಮಾತು ಎದುರಾಗುತ್ತದೆ. ಆಗ ತ್ರಿಪ್ರಪುರಾಂತಕೇಶ್ವರ ಬಂದು ಸಾಕ್ಷಿ ಹೇಳಲಿ ಎಂದು ಕಿನ್ನರಿ ಬೊಮ್ಮಯ್ಯ ನುಡಿಯುತ್ತಾನೆ. ಆಗ ಕಿನ್ನರಿ ಬೊಮ್ಮಯ್ಯನ ಪರ ಶಿವನೇ ಸಾಕ್ಷಿ ಹೇಳುತ್ತಾನೆ. ಇದರಿಂದ ಕಲ್ಯಾಣದಲ್ಲೆಲ್ಲ ಇವನ ಶಿವಭಕ್ತಿಯ ಮಹಿಮೆ ತಿಳಿಯುತ್ತದೆ.

ಇಂತಹ ಕಿನ್ನರಿ ಬೊಮ್ಮಯ್ಯ ಒಬ್ಬ ವಚನಕಾರನೂ ಆಗಿದ್ದು, ಆತನ 18 ವಚನಗಳು ನಮಗೆ ದೊರಕಿವೆ. ಅವನ ವಚನಗಳ ಅಂಕಿತ 'ತ್ರಿಪುರಾಂತಕ ಲಿಂಗ'. ಶಿವನನ್ನು, ಶಿವಶರಣರನ್ನು ಹಾಗೂ ಕಾಯದ ಮಹತ್ವವನ್ನು ಕುರಿತು ಬರೆದಿರುವ ಆತನ ವಚನಗಳಲ್ಲಿ ಅತ್ಯಂತ ವೈಚಾರಿಕ ಚಿಂತನೆಯನ್ನು ಕಾಣಬಹುದಾಗಿದೆ.

**ಆಕಾರವೆಂಬನೆ ನಿರಾಕಾರವಾಗಿದೆ**
**ನಿರಾಕಾರವೆಂಬೆನೆ ಅತ್ತತ್ತ ತೋರುತ್ತದೆ**
**ತನ್ನನಳಿದು ನಿಜವುಳಿದ**
**ಮಹಾಲಿಂಗ ತ್ರಿಪುರಾಂತಕನ ನಿಲವ ಕಂಡು**
**ಒಳಗೊಂಡ ಮರುಳ ಶಂಕರ ದೇವರ ಮೂರ್ತಿಯ ಕಂಡು**
**ಬದುಕಿದೆನು ಕಾಣಾ ಸಂಗನಬಸವಣ್ಣ**

ನಾವು ಆದರ್ಶವನ್ನಾಗಿ, ಮಾದರಿಯನ್ನಾಗಿ ಯಾರನ್ನೋ ತೆಗೆದುಕೊಳ್ಳುವ ಬದಲು, ನಮ್ಮ ಮುಂದೆಯೇ ಇರುವ, ಹೆಸರಿಗಾಗಿ ಪರಿತಪಿಸದೆ, ಜೀವನ ಸಾಗಿಸುವ ಮರುಳ ಶಂಕರದೇವರಂತವರ ನಿಜವಾದ ನಿಲುವು ಮಾದರಿ ಎಂದಿದ್ದಾರೆ ಕಿನ್ನರಿ ಬೊಮ್ಮಯ್ಯನವರು.

ಕಲ್ಯಾಣದ ತ್ರಿಪುರಾಂತಕೇಶ್ವರ ದೇವಾಲಯದಿಂದ ಕಿನ್ನರಿಯ ಸ್ವರ ತೆರೆತೆರೆಯಾಗಿ ಹರಿದು ಬರುತ್ತದೆ. ಅದರೊಡನೆ ಈ ವಚನದ ಉದಾರ ವಾಣಿಯೂ ನರುಗಂಪಿನಂತೆ ಬೆರೆತು ಬರುತ್ತಿರುತ್ತದೆ.

**ನಿನ್ನ ಹರೆಯದ ರೂಹಿನ ನುಡಿಯ ಚಾಗಿನ ಚೆಲುವಿನ ಸಿರಿಯ**
**ಸಂತೋಷದ ಕರಿ ತುರಗ ರಥ ಪದಾತಿಯ ನೆರವಿಯ**
**ಸತಿ ಸುತರ ಬಂಧುಗಳ ಸಮೂಹದ**
**ನಿನ್ನ ಕುಲದಭಿಮಾನದ ಗರ್ವವ ಬಿಡು, ಮರುಳಾಗದಿರು**
**ಅಕಟಕಟಾ, ರೋಜನಿಂದ ಹಿರಿಯನೆ**

**ಮದನನಿಂದ ಚೆಲುವನೆ ಸುರಪತಿಯಿಂದ ಸಂಪನ್ನನೆ**

**ವಾಮದೇವ ವಶಿಷ್ಠರಿಂದ ಕುಲಜನೆ**

**ಅಂತಕನ ದೂತರು ಬಂದು ಕೈವಿಡಿದೆಳೆದೊಯ್ಯುವಾಗ ನುಡಿಗೆಡರಯಿಲ್ಲ**

**ಕೇಳೋ ನರನೆ ಎನ್ನ ಮಹಾಲಿಂಗ ತ್ರಿಪುರಾಂತಕ ದೇವರ ಪೂಜಿಸಿದೆಯಾದರೆ**

**ಕೇಡಿಲ್ಲದ ಪದ ದೊರಕೊಂಬುದು ಮರುಳೆ.**

ರೂಪ, ಯೌವ್ವನ, ಸಂಪತ್ತು, ಕುಲ, ಬಂಧುಗಳು – ಇಂಥ ಎಲ್ಲ ಸೌಭಾಗ್ಯಗಳಿಗಿಂತ ತ್ರಿಪುರಾಂತಕ ದೇವರ ಪೂಜೆಯೇ ದೊಡ್ಡದು ಎನ್ನುತ್ತದೆ ಈ ವಚನ.

ದಯಾಮಯನಾದ ಭಕ್ತರ ಅಧೀನನಾದ ಶಿವನು ಭಕ್ತರಿಗೆ ಒಲಿಯುವ ರೀತಿ ಅತ್ಯಂತ ವಿಶಿಷ್ಟವಾದುದು. ಇದಕ್ಕೆ ಪುರಾಣಗಳಲ್ಲಿ ಬರುವ ನಿದರ್ಶನಗಳನ್ನು ಬೊಮ್ಮಯ್ಯ ತನ್ನ ವಚನ ಒಂದರಲ್ಲಿ ಹೀಗೆ ಕೊಂಡಾಡುತ್ತಾನೆ....

**ಕಲ್ಲಿಲಿಟ್ಟವಂಗೊಲಿದೆ ಕಾಲಲೊದ್ದವಂಗೊಲಿದೆ**

**ಬಾಯಲ್ಲಿ ಉಗಿದವಂಗೊಲಿದೆ**

**ಅದು ನಿನ್ನ ಭಕ್ತಿಯೋ ಸತ್ಯವೋ ಗರ್ವವೋ**

ಶಿವನು ಮುಗ್ಧ ಭಕ್ತರ ಭಕ್ತಿಗೆ ಒಲಿಯುವಂತಹ ದೇವನು. ರಾವಣನಿಗೆ ಆತ್ಮಲಿಂಗವನ್ನೇ ಕೊಟ್ಟ ಕರುಣಾಮಯಿ. ಭಕ್ತನ ಕ್ರಿಯೆಗಿಂತ, ಭಕ್ತಿ ಅವನಿಗೆ ಮುಖ್ಯ. ಮಾದಾರ ಚೆನ್ನಯ್ಯ, ಕೋಳೂರ ಕೊಡಗೂಸು ಇಂತಹ ಮಹಾನ್ ಶರಣರಿಗೆ ಬೇರೆ ಬೇರೆಯಾಗಿಯೇ ತಾನು ಕಂಡಿದ್ದಾನೆ. ತಮಿಳುನಾಡಿನ 63 ಪುರಾತನದಲ್ಲಿ ಬರುವ ಸಾಂಖ್ಯನಾಯರು ಮತ್ತು ಬೇಡರ ಕಣ್ಣಪ್ಪನ ಮುಗ್ಧ ಭಕ್ತಿಯನ್ನು ಕಿನ್ನರಯ್ಯ ಇಲ್ಲಿ ಹೇಳಿದ್ದಾನೆ. ಶಿವನ ಮಹಿಮೆಯನ್ನು ಮೂರು ಲೋಕಗಳೂ ತಿಳಿದು ನಡೆಯಬೇಕು. ಆಗ ಮನುಷ್ಯನ ಜೀವನ ಸಾರ್ಥಕವಾಗುತ್ತದೆ ಎನ್ನುತ್ತಾನೆ ಕಿನ್ನರಯ್ಯ.

**ಕಾಯದಲ್ಲಿ ಕಳವಳವಿರಲು**

**ಪ್ರಾಣದಲ್ಲಿ ಮಾಯೆಯಿರಲು**

**ಏತರ ಮನ, ಇದೇತರ ನಿರ್ವಾಣ?**

**ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಹಾರಿಯೆಂಬನಲ್ಲದೇ**

**ಸಜ್ಜನೆಯೆಂದು ಕೈವಿಡೆವನಲ್ಲ ಕೇಳಾ ಮರುಳೆ**

ಎಂದು ಅಕ್ಕಮಹಾದೇವಿಯನ್ನು ಪ್ರಶ್ನಿಸುವ ಮೂಲಕ ಆಕೆಯ ಮಾನಸಿಕ ಸ್ಥಿರತೆಯನ್ನು ಪರೀಕ್ಷಿಸಿದ ಕಿನ್ನರಿ ಬೊಮ್ಮಯ್ಯ ಬಹುಮುಖ್ಯ ವಚನಕಾರನಾಗಿ ಕಂಡುಬರುತ್ತಾನೆ. ಬೊಮ್ಮಯ್ಯನ ಈ ಮುಂದಿನ ವಚನವನ್ನು ಅವಲೋಕಿಸಿದಾಗ ಬೊಮ್ಮಯ್ಯ ಅಕ್ಕಮಹಾದೇವಿಯನ್ನು ಪರೀಕ್ಷಿಸುವಾಗ ಕಂಡುಕೊಂಡ ಬೆರಗು ಮತ್ತು ನಿಷ್ಠೆಯನ್ನು ಬಿಂಬಿಸುತ್ತಾನೆ.

**ವಿವಿಷಯಂಗಳು ನಿರ್ವಿಷಯವಾದವಿಂದು**

**ಕರ್ಣಂಗಳು ತರಹರಿಸಿದವಿಂದು**

**ಎನ್ನ ಅಳುವೆಂಬ ಅರೆವಾವು ಮಡಿಯಿತ್ತಿಂದು**

**ಎನ್ನ ಹೃದಯದ ಕಲ್ಮಶ ತೊಡೆಯಿತ್ತಿಂದು**

**ಮಹಾಲಿಂಗ ತ್ರಿಪುರಾಂತಕ,**

**ಮಹಾದೇವಿಯಕ್ಕಗಳ ಧರ್ಮದಿಂದ**

**ಹಿಂದಣ ಹುಟ್ಟು ಮುರಿಯಿತ್ತಿಂದು**

ಎಂಬ ವಚನದಲ್ಲಿ ಮಹಾದೇವಿ ಅಕ್ಕನನ್ನು ಪರೀಕ್ಷಿಸಿದ ಕಿನ್ನರಯ್ಯ ಈಗ ಅಕ್ಕನ ಧರ್ಮದಿಂದ ತನ್ನ ಹಿಂದಣ ಜನ್ಮದ ಕರ್ಮ ತೊಡೆಯಿತು ಎನ್ನುತ್ತಾನೆ. ಹೃದಯದ ಕಲ್ಮಶವೆಲ್ಲ ತೊಡೆದು ಹೋಯಿತೆಂದು ಅಕ್ಕನಿಗೆ ಕೃತಜ್ಞತೆಯನ್ನು ಅರ್ಪಿಸಿದ್ದಾನೆ.

**ಶರಣಾರ್ಥಿ ಶರಣಾರ್ಥಿ ಎಲೆ ನಮ್ಮವ್ವ**
**ಶರಣು ಶರಣಾರ್ಥಿ**
**ಕರುಣಾ ಸಾಗರ ನಿಧಿಯೆ, ದಯಾಮೂರ್ತಿ ತಾಯೆ, ಶರಣಾರ್ಥಿ!**
**ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕು**
**ನೀವು ಬಿಡಿಸಿದರಾಗಿ**
**ನಿಮ್ಮ ದಯದಿಂದ ನಾನು ಹುಲಿ ನೆಕ್ಕಿ ಬದುಕಿದೆನು**
**ಶರಣಾರ್ಥಿ ಶರಣಾರ್ಥಿ ತಾಯೆ**

ಎಂದು ಅಕ್ಕಮಹಾದೇವಿಗೆ ಶರಣಾರ್ಥಿ ತಾಯಿ ಎಂದು ಸಂಬೋಧಿಸುತ್ತಾರೆ.

ಕಿನ್ನರಿ ಬೊಮ್ಮಯ್ಯ ವಿಚಾರದಲ್ಲಿಯೂ ಆಚಾರದಲ್ಲಿಯೂ ಕಟ್ಟಾ ಶರಣ. ಹೀಗಾಗಿ ಮುಂದೆ ಕಲ್ಯಾಣದ ಕ್ರಾಂತಿಯಾದಾಗ ಚನ್ನಬಸವಣ್ಣ, ಮಡಿವಾಳ ಮಾಚಯ್ಯನವರೊಂದಿಗೆ ಶರಣರಿಗೆ ರಕ್ಷಣೆ ಒದಗಿಸುವ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತಾನೆ. ಶತ್ರುಗಳು ಶಿವಶರಣರ ಮೇಲೆ ಕಾಳಗಕ್ಕೆ ನಿಂತಾಗ ಗಣನಾಯಕನಾಗಿ ಶೌರ್ಯದಿಂದ ಹೋರಾಟ ಮಾಡುತ್ತಾನೆ. ಕೊನೆಗೆ ಗೊಂಡಾರಣ್ಯದ ಮಧ್ಯದಲ್ಲಿರುವ ಮಹಾಮನೆಯ ಮುಂದೆ ಬಿಜ್ಜಳನಾಡಿನ ನೇತೃತ್ವದ ಸೈನ್ಯದೊಡನೆ ಕೊನೆಯ ಕಾಲದವರೆಗೂ ಯುದ್ಧ ಮಾಡುತ್ತಾನೆ. ಬಾವಿಯಲ್ಲಿ ಹರಿದು ಬರುತ್ತಿದ್ದ ನೀರನ್ನು ಮಹಾಮನೆಯ ಗುಹೆಯ ದ್ವಾರದಿಂದ 300 ಅಡಿ ಎತ್ತರದಲ್ಲಿ ಭೂಮಿ ಅಗೆದು ಒಳಕ್ಕೆ ನೀರು ಹರಿಯುವಂತೆ ಮಾಡಿ ಪರಿವರ್ತಿಸುತ್ತಾನೆ. ಕೊನೆಯವರೆಗೂ ಶಿವಶರಣರೊಡಗೂಡಿ ಕಲಿತನದಿಂದ ಹೋರಾಡಿ ವೀರ ಮರಣವನ್ನು ಹೊಂದುತ್ತಾನೆ. ಇಂದಿಗೂ ಆ ಹೊಳೆ ಕಿನ್ನರಿ ಬೊಮ್ಮಯ್ಯನ ಹೊಳೆಯೆಂದು ಪ್ರಸಿದ್ಧವಾಗಿರುವುದನ್ನು ಗಮನಿಸಬಹುದು. ಕಿನ್ನರ ಬೊಮ್ಮಯ್ಯನ ಸಮಾಧಿಯ ಮೇಲೆ ಶೋಭಿಸುವ ಕಿನ್ನರಯ್ಯ ಎಂಬ ಉಲ್ಲೇಖವಿರುವ ಶಿಲಾ ಶಾಸನವೂ ಕಿನ್ನರಿ ಬೊಮ್ಮಯ್ಯನ ನಿರ್ಮಲ ಚರಿತ್ರೆಯನ್ನು ಪ್ರಸ್ತುತಪಡಿಸುತ್ತದೆ. ಬಸವಕಲ್ಯಾಣಕ್ಕೆ ಸರಿಸುಮಾರು 40 ಕಿಲೋಮೀಟರ್ ಅಂತರದಲ್ಲಿ ಹುಮನಾಬಾದ್ ತಾಲೂಕಿಗೆ ಸೇರಿದ ಕಲಬುರಗಿ–ಹುಮ್ನಾಬಾದ್ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಹಳ್ಳಿಕೇಡ ಎಂಬ ಗ್ರಾಮವಿದೆ. ಇಲ್ಲಿ ಶರಣ ಕಿನ್ನರಿ ಬೊಮ್ಮಯ್ಯನವರ ಸುಂದರ ಸ್ಮಾರಕವಿದೆ. ಗರ್ಭಗುಡಿಯಲ್ಲಿ ಕಿನ್ನರಯ್ಯನ ಪೀಠವಿದ್ದು, ಅದಕ್ಕೆ ಹಿತ್ತಾಳೆಯ ಲೋಹದ ಮುಖವನ್ನು ಮಾಡಿಸಿದ್ದಾರೆ. ನಿತ್ಯ ಅಭಿಷೇಕ ನಡೆಯುತ್ತದೆ. ಕಿನ್ನರಯ್ಯ ಸಂಗೀತ ಕಲಾವಿದನಾಗಿದ್ದರ ಪ್ರತೀಕವಾಗಿ ನಿತ್ಯವೂ ಭಕ್ತಿ– ಸಂಗೀತ–ಭಜನೆ ನಡೆಯುತ್ತದೆ ಎಂಬುದು ವಿಶೇಷ.

**ಪರಾಮರ್ಶನ ಗ್ರಂಥಗಳು**

1. ಶರಣ ಚರಿತಾಮೃತ – ಶ್ರೀ ಸಿದ್ಧಯ್ಯ ಪುರಾಣಿಕರು
2. ಬಸವ ಪಥ – ಸಂಚಿಕೆಗಳು
3. ಬಸವ ಭವನ, ಬೆಂಗಳೂರು

❖❖❖

# ವಸಾಹತುಶಾಹಿ ಕಾಲದ ಕರ್ನಾಟಕದಲ್ಲಿ ಕೃಷಿಸಂಸ್ಕೃತಿ ಎದುರಿಸಿದ ಸವಾಲುಗಳು

**ಡಾ. ರಮೇಶ ಟಿ.**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು, ಮೈಸೂರು

ಕೃಷಿ ಭಾರತದ ವಸಾಹತು ಆರ್ಥಿಕತೆಯ ಬೆನ್ನುಮೂಳೆಯಾಗಿದ್ದ ಕಾರಣ, ಕೃಷಿಯಲ್ಲಿ ನಿರತವಾಗಿದ್ದ ರೈತ ಆಧುನಿಕ ಭಾರತದ ಅತ್ಯಂತ ಪ್ರಮುಖವಾದ ಅಂಗವಾಗಿ ಪರಿಣಮಿಸಿದ್ದು ಸಹಜವಾಗಿದೆ. ತನಗಿಷ್ಟ ಬಂದ ರೀತಿಗೆ ಕೃಷಿ ರಚನೆಯನ್ನು ಬದಲಾಯಿಸಿಕೊಂಡ ಈಸ್ಟ್ ಇಂಡಿಯಾ ಕಂಪನಿಯು ಗುರುತು ಹಿಡಿಯಲಾರದ ರೀತಿಯಲ್ಲಿ ಕೃಷಿ ಸಂಬಂಧಗಳನ್ನು ವಿರೂಪಗೊಳಿಸಿತು. ಭೂ ಕಾಯಿದೆಯ ಮೂರು ಪದ್ಧತಿಗಳಿಂದ ಹೆಚ್ಚು ತೊಂದರೆಗೊಳಗಾದವರೆಂದರೆ ರೈತಾಪಿ ಜನರು. ವಸಾಹತು ಆಳ್ವಿಕೆಯು ರೈತರ ನಡುವೆ ಶ್ರೇಣೀಕರಣವನ್ನು ಸೃಷ್ಟಿ ಮಾಡಿತ್ತೆಂಬುದು ನಿಜವಾದರೂ ಛಿದ್ರಗೊಂಡಿದ್ದ ಕರ್ನಾಟಕದ ವಿಷಯದಲ್ಲಿ ಯಾವ ಭಾಗ ಯಾವ ಭೂ ಕಾಯಿದೆಯಡಿಯಲ್ಲಿ ಬರುತ್ತದೆಂಬುದನ್ನು ಹೇಳುವುದು ಕಷ್ಟವಾಗಿತ್ತು. (ಜೇಮ್ಸ್ ಮೇನರ್, ಪೊಲಿಟಿಕಲ್ ಚೇಂಜ್ ಇನ್ ಆ್ಯನ್ ಇಂಡಿಯನ್ ಸ್ಟೇಟ್, ಮೈಸೂರ್, 1917–1955, (ನವದೆಹಲಿ, 1977),

ಪು.28–30.) ಮೈಸೂರು ಸಂಸ್ಥಾನ, ಬೊಂಬಾಯಿ ಕರ್ನಾಟಕ ಪ್ರಾಂತ್ಯಗಳು, ಮತ್ತು ಹೈದರಾಬಾದ್ ಕರ್ನಾಟಕ ಪ್ರಾಂತ್ಯಗಳಲ್ಲಿನ ಕೃಷಿ ಪದ್ಧತಿಯಲ್ಲಿದ್ದ ವೈವಿಧ್ಯ, ಬದಲಾವಣೆ, ಕೃಷಿಯಲ್ಲಾದ ಅತಿಹೆಚ್ಚಿನ ವಾಣಿಜ್ಯೀಕರಣ, ಕಂದಾಯ ಪದ್ಧತಿಯ ಶೋಷಣೆ, ನೀರಾವರಿಯನ್ನು ಕಡೆಗಣಿಸಿದ ವಸಾಹತು ಪ್ರಭುತ್ವದ ಬೇಜವಾಬ್ದಾರಿ, ಇತ್ಯಾದಿಗಳಿಂದಾಗಿ ರೈತರು ಹೆಚ್ಚು ನಿರ್ಗತಿಕರಾಗತೊಡಗಿದರು.

ರೈತರು ಬಡವರಾಗುತ್ತಾ ಹೋದ ಕಾರಣವೇ 19ನೇ ಶತಮಾನದ ಉದ್ದಕ್ಕೂ ಅವರು ದಂಗೆಯೇಳುವ ಮನಸ್ಥಿತಿಯನ್ನು ಹೊಂದಿದ್ದರೂ ವಸಾಹತುಶಾಹಿಯ ಮುನ್ನುಗ್ಗುವಿಕೆಯ ವಿರುದ್ಧ ಯಾವುದೇ ದಂಗೆ ಸಾಧ್ಯವಾಗುತ್ತಿರಲಿಲ್ಲ. ಪ್ರಾಂತ್ಯದಲ್ಲಿ ಕಲ್ಯಾಣಸ್ವಾಮಿ ಹಾಗೂ ಸ್ವಾಮಿ ಅಪರಂಪರರವರು ದಂಗೆ ಎದ್ದಾಗ ಬ್ರಿಟಿಷರು ಆಕರ್ಷಣೀಯವಾದ ಅನುಕೂಲತೆಗಳನ್ನು ರೈತರ ಮುಂದೆ ಆಮಿಷವಾಗಿ ಒಡ್ಡಬೇಕಾದ ಅಗತ್ಯ ಬಿದ್ದಿತು. (ಹಾಲಪ್ಪ ಹಾಗೂ ಕೃಷ್ಣರಾವ್, ಎಂ.ವಿ.(ಸಂ): ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಸಂಪುಟ–1,

(ಬೆಂಗಳೂರು,1992), ಪು–81–97.) ರಾಷ್ಟ್ರೀಯ ಹೋರಾಟದ ಮೇಲೆ ರೈತರ ದಂಗೆಗಳು ನಿರ್ಣಾಯಕವಾದ ಪರಿಣಾಮ ಬೀರಿದವು.

ಸ್ವಾತಂತ್ರ್ಯಪೂರ್ವದ ವರ್ಷಗಳ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಭೂ ನಿಯಂತ್ರಣ ವ್ಯವಸ್ಥೆ ವಿವಿಧ ರೀತಿಯ ರೂಪವನ್ನು ಹೊಂದಿದ್ದಿತು. ವಸಾಹತು ಸಂದರ್ಭದಲ್ಲಿ ನಡೆದ ರೈತ ಚಳವಳಿಗಳ ಇತಿಹಾಸವನ್ನು ಗಮನಿಸಿದಾಗ ಇರ್ವಿನ್

ನಾಲಾ ರೈತ ಚಳವಳಿ ಅತ್ಯಂತ ಮಹತ್ವದಾಗಿತ್ತು. ಕಾನೂನು ಭಂಗ ಚಳವಳಿಯ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಇದು ನಡೆದದ್ದು ಕುತೂಹಲಕಾರಿಯಾಗಿದೆ. ಕೃಷ್ಣರಾಜಸಾಗರದ ನೀರನ್ನು ನೀರಾವರಿಗಾಗಿ ಬಿಡುಗಡೆ ಮಾಡಿದ ಬಳಿಕ ಮಂಡ್ಯ ಜಿಲ್ಲಾ ರೈತರ ಮೇಲೆ ಮಹಾರಾಜರ ಸರ್ಕಾರ ಹೇರಿದ ನೀರಾವರಿ ತೆರಿಗೆಯನ್ನು ಪ್ರತಿಭಟಿಸಲು ಚಳವಳಿಯನ್ನು ಪ್ರಾರಂಭಿಸಲಾಯಿತು. ಇದು ಮುಂದೆ ಹೆಚ್.ಕೆ. ವೀರಣ್ಣಗೌಡರ ನಾಯಕತ್ವದಲ್ಲಿ ಜರುಗಿ ಶಾಂತಿಯುತವಾಗಿ ಬಗೆಹರಿಯಿತು. ರೈತರು ಗಾಂಧೀಜಿಯವರ ಮಾರ್ಗದಿಂದ ಸ್ಫೂರ್ತಿಗೊಂಡು ಒಂದು ನವೀನ ಮಾದರಿಯನ್ನು ಅಳವಡಿಸಿಕೊಂಡಾಗ ಸರ್ಕಾರವೂ ಸಹ ರೈತರ ವಿರುದ್ಧ ಯಾವ ನಿರ್ಬಂಧಗಳನ್ನೂ ಹೇರಲಿಲ್ಲ.

ರಾಷ್ಟ್ರವಾದಿ ಚಳುವಳಿ ಹಾಗೂ ವಸಾಹತು ವಿರೋಧಿ ಚಳುವಳಿಗಳ ಜೊತೆಗೆ ಅಂದು ಸಂಭವಿಸಿದ ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಎಲ್ಲಾ ಕೃಷಿ ಉತ್ಪನ್ನಗಳ ಬೆಲೆಗಳೂ ಇಳಿಮುಖವಾದುದು ಮತ್ತು ಭೂಕಂದಾಯ ಹೆಚ್ಚಾದುದು ಜನರಲ್ಲಿ ಅತೃಪ್ತಿಯನ್ನುಂಟು ಮಾಡಿತು. (ಜೇಮ್ಸ್ ಮೇನರ್, ಅದೇ, ನಂ.9, ಪು–126–129.) ವಸಾಹತುಪೂರ್ವ ಭಾರತವು ಕೃಷಿಯಾಧಾರಿತ ಆರ್ಥಿಕತೆಯನ್ನು ಹೊಂದಿದ್ದು, ಬಹುಪಾಲು ಜನರ ಉದ್ಯೋಗವೂ ಇದೇ ಆಗಿದ್ದು, ಮತ್ತು ಕೈಗಾರಿಕೆಗಳಾದ ಹತ್ತಿ ಕೈಗಾರಿಕೆ, ಸಕ್ಕರೆ, ಎಣ್ಣೆ ಮುಂತಾದ ಕೈಗಾರಿಕೆಗಳು ಕೃಷಿಯನ್ನವಲಂಭಿಸಿದ್ದವು. ಆದರೆ ಬ್ರಿಟಿಷರು ತಮ್ಮ ಆಡಳಿತದಲ್ಲಿ ತಂದ ಭೂ ಒಡೆತನ, ಭೂ ಕಂದಾಯ ವಿಧಿಸುವಿಕೆ ಮತ್ತು ವಸೂಲಾತಿಯ ಬಗ್ಗೆ ಕೈಗೊಂಡ ಕ್ರಮಗಳು ಹಿಂದಿನ ಭಾರತದ ಕೃಷಿ ವ್ಯವಸ್ಥೆಯಾದ ಗ್ರಾಮೀಣ ಸ್ವಾವಲಂಬನೆಯ ತತ್ವವನ್ನೇ ನಾಶಮಾಡಿದವು. ಬ್ರಿಟಿಷ್ ಕಂಪನಿಯು ಭಾರತೀಯ ಕರಕುಶಲ ವಸ್ತುಗಳು ಮತ್ತಿತರ ವಸ್ತುಗಳನ್ನು ವಿದೇಶಗಳಿಗೆ ರಫ್ತು ಮಾಡಲು ಮತ್ತು ಭಾರತವನ್ನು ಸಂಪೂರ್ಣವಾಗಿ ಜಯಿಸಲು ಬೇಕಾಗುವ ವೆಚ್ಚಕ್ಕೆ ಭಾರತದ ಭೂಕಂದಾಯವನ್ನೇ ಅವಲಂಭಿಸಿತ್ತು. ಹಾಗೆಯೇ ಭಾರತದಲ್ಲಿ ನೇಮಕಗೊಂಡಿದ್ದ ಬ್ರಿಟಿಷ್ ಅಧಿಕಾರಿಗಳು, ಸೈನಿಕರು ಮುಂತಾದ ವರ್ಗಕ್ಕೆ ಹೆಚ್ಚಿನ ವೇತನ ನೀಡಲು ವಸಾಹತುವಿನ ಎಲ್ಲಾ ಹಂತದ ಆಡಳಿತ ವ್ಯವಸ್ಥೆಗೆ ಬೇಕಾದ ಖರ್ಚು ವೆಚ್ಚಕ್ಕೆ ಭೂ ಕಂದಾಯವನ್ನೇ ಅವಲಂಭಿಸಿತ್ತು. (ಕಾಮತ್, ಎಸ್.ಯು: ಅಗ್ರೇರಿಯನ್ ಏಜಿಟೇಷನ್ಸ್ ಅಂಡ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಕೊ.ಜೆ.ಎಂ.ಎಸ್. ಸಂಪುಟ–73, ಸಂಚಿಕೆ, 2 (ಮಿಥಿಕ್ ಸೊಸೈಟಿ), (ಬೆಂಗಳೂರು, 1982), ಪು–14–23.) ಅಂದರೆ ಭಾರತೀಯ ರೈತರ ಮೇಲೆ ಅಧಿಕ ತೆರಿಗೆಯ ಹೊರೆ ವಿಧಿಸುವುದೇ ಆಗಿತ್ತು. 1813ರ ವರೆಗೆ ಆದ ಆಡಳಿತಾತ್ಮಕ ಮತ್ತು ನ್ಯಾಯಾಂಗ ವ್ಯವಸ್ಥೆಯ ಬದಲಾವಣೆಗಳು ಸಹ ಭೂ ಕಂದಾಯವನ್ನು ಹೆಚ್ಚಿಸುವ ಉದ್ದೇಶವನ್ನೇ ಹೊಂದಿದ್ದವು. ಹೀಗೆ ಬ್ರಿಟಿಷರ ವ್ಯಾಪಾರಕ್ಕೆ ಬಂಡವಾಳ ಆಡಳಿತಾತ್ಮಕ ವೆಚ್ಚ ಮತ್ತು ಬ್ರಿಟಿಷರ ವಿಸ್ತಾರಣಾ ನೀತಿಗೆ ಅವಶ್ಯಕ ಸಂಪತ್ತು ಭಾರತೀಯ ರೈತರಿಂದ ಹರಿದು ಬರುತ್ತಿದ್ದಿತು. ಹೀಗೆ ಬ್ರಿಟೀಷರು ಭೂ ಕಂದಾಯವನ್ನು ಹೇರಳವಾಗಿ ಹೆಚ್ಚಿಸದಿದ್ದರೆ ವಿಶಾಲ ಭಾರತವನ್ನು ಗೆಲ್ಲಲಾಗುತ್ತಿರಲಿಲ್ಲ. (ಡಾ. ಸದಾಶಿವ: ಆಧುನಿಕ ಭಾರತದ ಇತಿಹಾಸ (ಮೈಸೂರು, 1998), ಪು–305–307).

ಬ್ರಿಟಿಷ್ ಕಂದಾಯ ಪದ್ಧತಿಯು ಭಾರತೀಯ ರೈತ ಆರ್ಥಿಕತೆಯ ಮೇಲೆ ಅನರ್ಥವನ್ನುಂಟು ಮಾಡಿತು. ಈ ಹೊಸ ಒಪ್ಪಂದಗಳಿಂದ ಬಂದ ಜಮೀನ್ದಾರರು

ಕಂದಾಯ ವಸೂಲಿಗೆ ಗಮನಕೊಟ್ಟರೇ ಹೊರತು ಕೃಷಿಯ ಅಭಿವೃದ್ಧಿಗೆ ಗಮನಕೊಡದೆ ವಿದೇಶಿ ಶಕ್ತಿಯೊಂದಿಗೆ ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುವಂತಾದರು. ಇದರಿಂದಾಗಿ ಬ್ರಿಟಿಷ್ ಕಂದಾಯ ಪದ್ಧತಿಯು ಕೃಷಿಯನ್ನು ವಾಣಿಜ್ಯೀಕರಣಗೊಳಿಸಿತು. ಹೆಚ್ಚಿನ ಕಂದಾಯ ವಿಧಿಸುವಿಕೆಯು ಕೃಷಿ ಬೆಳವಣಿಗೆಯನ್ನು ಕುಂಠಿತಗೊಳಿಸಿದಲ್ಲದೆ ಮತ್ತು ಸಾಗುವಳಿದಾರ ವರ್ಗವನ್ನು ಬಡತನಕ್ಕೆ ದೂಡಿತು. ಕೃಷಿಯ ಮೇಲಾದ ದುಷ್ಪರಿಣಾಮವು ಗ್ರಾಮೀಣ ಸಾಲ, ಕ್ಷಾಮ, ರೋಗ ರುಜಿನ ಮತ್ತು ನಿರುದ್ಯೋಗ ಸೃಷ್ಟಿಗೆ ಕಾರಣವಾಯಿತು. ರೈತನು ತನಗೆ ಬಂದೊದಗಿದ ಸಮಸ್ಯೆಗಳಿಂದ ಪಾರಾಗಲು ಸಾಲ ಮಾಡಿದ. ಆದರೆ ಅದನ್ನು ಹಿಂತಿರುಗಿಸಲು ವಿಫಲನಾದಾಗ ಸಾಲಗಾರನಾದ.

1799ರ ನಂತರದಲ್ಲಿ ದೇಶೀಯ ರಾಜರು ಸಿಂಹಾಸನವೇರಿದರೂ, ಮೈಸೂರು ರಾಜ್ಯವು ಬ್ರಿಟಿಷರ ಅಧೀನದಲ್ಲಿ ಬಂದಿತು. ಬ್ರಿಟಿಷ್ ಪರಮಾಧಿಕಾರಕ್ಕೆ ವಾರ್ಷಿಕ ಕಪ್ಪವನ್ನು ಕೊಡುವುದು ಒಡೆಯರು ಅಧಿಕಾರ ವಹಿಸಿಕೊಳ್ಳುವುದಕ್ಕೆ ಪೂರ್ವಭಾವಿ ಶರತ್ತಾಗಿದ್ದಿತು. ಆಗಿನ ಪರಿಸ್ಥಿತಿಯಲ್ಲಿ ಭೂಕಂದಾಯವೇ ವರಮಾನದ ಪ್ರಧಾನಮೂಲವಾಗಿದ್ದು, ಇದು ರಾಜ್ಯದ ಒಟ್ಟು ವರಮಾನದ ಶೇ.88 ಭಾಗವಾಗಿದ್ದಿತು. ಟಿಪ್ಪುವಿನ ಕಾಲದಲ್ಲಿ ರೈತರು ವಿಪರೀತ ಕಂದಾಯ ತೆತ್ತು ಬಳಲಿದ್ದರ ಪ್ರಯುಕ್ತ 1799ರ ನಂತರ ದಿವಾನ್ ಪೂರ್ಣಯ್ಯನವರು ಪರಿಷ್ಕೃತ ತೆರಿಗೆ ದರಗಳನ್ನು ವಿಧಿಸಿದರು. ಆದರೆ ಇದು ವಾಸ್ತವವಾಗಿ ಅನುಷ್ಠಾನಕ್ಕೆ ಬರಲಿಲ್ಲ. ಮೈಸೂರು ಪ್ರಾಂತ್ಯದಲ್ಲಿ ಭಿನ್ನವಾದ ಭೂ ಅವಧಿ ಪದ್ಧತಿ ಜಾರಿಯಲ್ಲಿದ್ದು 1799ರಲ್ಲಿ ಒಡೆಯರ ಆಳ್ವಿಕೆಯ ಪುನರಾರಂಭವಾದಾಗಲೂ ಏಕರೂಪದ ವ್ಯವಸ್ಥೆ ಅನುಷ್ಠಾನಕ್ಕೆ ಬರಲಿಲ್ಲ. (ಗೋಪಾಲ್,ಎಂ. ಹೆಚ್., : ದಿ ಫೈನಾನ್ಸ್ ಆಫ್ ಮೈಸೂರ್ ಸ್ಟೇಟ್ : 1799–1831, (ಮೈಸೂರ್, 1960), ಪುಟ–162–163.)

ಮೈಸೂರಿನ ಕಂದಾಯ ಆಡಳಿತದಲ್ಲಿ ಭೂ ಅವಧಿ ಪದ್ಧತಿಯು ಸಂಪೂರ್ಣವಾಗಿ ಇಲ್ಲವಾಗಿ ಅದರ ಜಾಗದಲ್ಲಿ ಅತಿಹೆಚ್ಚು ಹರಾಜು ಕೂಗಿದವರಿಗೆ ಭೂಮಿ ಸಾಗುವಳಿ ಅವಕಾಶ ದೊರೆಯುವಂತಾಯಿತು. ಹೆಚ್ಚು ತೆರಿಗೆ ವಸೂಲಿ ಮಾಡಲು ಅನುಕೂಲವಾದ ಕಾರಣದಿಂದ ಈ ಪದ್ಧತಿಯಲ್ಲಿ ರೈತರು ಹೆಚ್ಚು ಕಿರುಕುಳ ಅನುಭವಿಸಿದರು. ಪರಿಣಾಮವಾಗಿ ಮೈಸೂರು ಸಂಸ್ಥಾನದ ನಗರ ವಿಭಾಗದಲ್ಲಿ ಕೃಷಿಕರ ಅತೃಪ್ತಿ ಸ್ಫೋಟಗೊಂಡು ನಗರ ದಂಗೆ ಸಂಭವಿಸಿತು. ರೈತರು ತಮ್ಮ ಕೃಷಿ ಕಾಯಕವನ್ನು ನಿಲ್ಲಿಸಿಯೇ ಬಿಟ್ಟರು. ಹಾಗಾಗಿ ಒಂದರ್ಥದಲ್ಲಿ ನಗರ ದಂಗೆಯನ್ನು ಮೈಸೂರಿನ ಆರ್ಥಿಕ ರಾಷ್ಟ್ರೀಯವಾದದ ನಾಂದಿ ಎಂದು ಬಣ್ಣಿಸಬಹುದಾಗಿದೆ. (ಮುನೇಗೌಡ,: ಡೆವಲಫ್‌ಮೆಂಟ್ ಆಫ್ ಕರ್ನಾಟಕ ಲೆಜಿಸ್ಲೇಚರ್(ಮೈಸೂರು, 1988), ಪು–24–25)

ಮೈಸೂರು ರಾಜ್ಯದ ರೈತ ಹೋರಾಟದ ಇತಿಹಾಸದಲ್ಲಿ ಮೊಟ್ಟಮೊದಲ ರೈತ ಹೋರಾಟ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಧಾರ್ಮಿಕ ನಂಬಿಕೆ, ಸುಂಕ ಹಾಗೂ ಗೇಣಿ ವಿಷಯಗಳ ಕಾರಣವಾಗಿ ನಡೆದಿದ್ದಿತು. ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಂತ್ಯಗಳಲ್ಲಿ ಬಲತ್ಕಾರದ ವಸೂಲಿ, ತಂಬಾಕಿನ ಮೇಲೆ ಏಕಸ್ವಾಮ್ಯತೆ, ದಿನನಿತ್ಯದ ಪದಾರ್ಥಗಳ ಮೇಲಿನ ಹೆಚ್ಚಿನ ಕರ, ಗೇಣಿ ವಸೂಲಿ, ಮೊದಲಾದ ಉದ್ದೇಶಗಳು ರೈತ ಹೋರಾಟಕ್ಕೆ ಕಾರಣವಾಗಿದ್ದವು. ಅಲ್ಲದೆ ಶಿವಮೊಗ್ಗ ಜಿಲ್ಲೆಯ ನಗರ ಪ್ರಾಂತ್ಯಗಳಲ್ಲಿ ನಡೆದಿದ್ದ ರೈತರ ಹೋರಾಟವು ಇತಿಹಾಸದಲ್ಲಿ ನಡೆದ ಹೋರಾಟಗಳಲ್ಲಿ ಅತ್ಯಂತ ಪ್ರಬಲ, ತೀಕ್ಷ್ಣ ಹಾಗೂ ವಿಶಾಲವಾಗಿತ್ತು. ಇದು ವಸಾಹತುಶಾಹಿ ಹಾಗೂ ಪ್ರಾಂತೀಯ

ರಾಜ್ಯದೊಂದಿಗೆ ನೇರವಾಗಿ ಸಂಘರ್ಷಕ್ಕಿಳಿದಿದ್ದಿತು. (ನಾಡಕರ್ಣಿ, ಎಂ.ವಿ. ಕರ್ನಾಟಕದ ರೈತ ಹೋರಾಟಗಳು (ಬೆಂಗಳೂರು, 1989), ಪು–1–2.)

ಪರಿಣಾಮವಾಗಿ ಮೈಸೂರು ಸಂಸ್ಥಾನ ಮುಂದೆ ಐವತ್ತು ವರ್ಷಗಳ ಕಾಲ ಅಧಿಕಾರದಿಂದ ವಂಚಿತವಾಯಿತು. ಇದಾದನಂತರ ಸುಮಾರು ಒಂದು ಶತಮಾನಗಳ ಕಾಲ ಸಂಸ್ಥಾನದಲ್ಲಿ ರೈತ ಹೋರಾಟಗಳು ಕುಂಠಿತಗೊಂಡಿದ್ದಿತು. ಕಾರಣ ರೈತ–ಭೂಮಾಲೀಕ ಪ್ರಜ್ಞೆ ರಾಜಕೀಯ ಚೌಕಟ್ಟು ಮತ್ತು ಸಾಂಘಿಕ ರೂಪದಲ್ಲಿ ಬೆಳವಣಿಗೆ ಹೊಂದಿದ್ದಿತು. ಅಲ್ಲದೆ ಮೈಸೂರು ಪ್ರಾಂತ್ಯದ ಆರ್ಥಿಕ ಬೆಳವಣಿಗೆಯೂ ಕಾರಣವಾಗಿತ್ತು.

1830ರ ದಶಕದಲ್ಲಿ ಆರಂಭಗೊಂಡಿದ್ದ ಬಂಡವಾಳಶಾಹಿ ಉತ್ಪಾದನ ಬೆಳವಣಿಗೆ ಪ್ರಾಂತ್ಯಾದ್ಯಂತ ಒಂದೇ ಕಾಲದಲ್ಲಿ ಒಂದೇ ರೂಪದಲ್ಲಿ ವಿಸ್ತಾರಗೊಳ್ಳದೆ ಕೆಲವು ಸ್ಥಳಗಳಿಗೆ ಮತ್ತು ವರ್ಗಗಳಿಗೆ ಸೀಮಿತವಾಗಿತ್ತು. ಬಂಡವಾಳಶಾಹಿ ಬೆಳವಣಿಗೆಯಲ್ಲಿ ವಾಣಿಜ್ಯ ಬೆಳೆಗಳಲ್ಲೊಂದಾದ ಕಾಫಿ ಬೆಳೆಯು ಪ್ರಮುಖವಾಗಿದ್ದು, ಮಲೆನಾಡು ಪ್ರಾಂತ್ಯದಲ್ಲಿ ಬೆಳವಣಿಗೆಗೊಂಡಿತು. ಇದರಿಂದಾಗಿ ವರ್ಗಪ್ರಜ್ಞೆ ಬೆಳವಣಿಗೆಗೊಂಡು ಕೆಲವು ಬೇಡಿಕೆಗಳನ್ನು ನೇರವಾಗಿ ಮಂಡಿಸಲು ಸಾಧ್ಯವಾಗದೆ ಹೋರಾಟ ಪ್ರಜ್ಞೆ ಸಂಸ್ಥೆಗಳನ್ನು ಕಟ್ಟುವುದರ ಮುಖಾಂತರ, ಬೇಡಿಕೆಗಳನ್ನು ಮುಂದಿಡುವುದುರ ಮುಖಾಂತರ, ಅಥವಾ ರಾಜಕೀಯ ಚೌಕಟ್ಟಿನಲ್ಲಿ ಪ್ರಶ್ನೆಗಳನ್ನು ಎತ್ತುವುದರ ಮೂಲಕ ವ್ಯಕ್ತವಾಗುತ್ತಿತ್ತು. 1890–1910ರ ನಡುವೆ ಮೂರು ಸಂಘಟನೆಗಳು ಹುಟ್ಟಿಕೊಂಡಿದ್ದು, ಇವು ಕಾಫಿ ಪ್ಲಾಂಟರ್ಸ್‌ಗಳಿಗೆ ಸಾಲ, ಸಾಲಮಾಫ್ತಿ, ಕಾಫಿ ಸಂಶೋಧನಾ ಕೇಂದ್ರ ಸ್ಥಾಪನೆ, ಕಾಫಿ ಕಳ್ಳತನ ತಡೆಗಟ್ಟಲು ಕಾಯಿದೆ ಮುಂತಾದ ಬೇಡಿಕೆಗಳನ್ನಿಡುತ್ತಿದ್ದವು. (ಶ್ರೀಧರ. ಹೆಚ್.ಪಿ., ಪ್ಲಾಂಟೇಶನ್ ಇಂಡಸ್ಟ್ರೀಸ್ ಇನ್ ಪ್ರಿನ್ಸ್‌ಲೀ ಮೈಸೂರು, (ಬೆಂಗಳೂರು, 2001), ಪು.126–132.) ಹೀಗೆ ಬಂಡವಾಳಶಾಹಿ ಬೆಳವಣಿಗೆಯ ವೈರುಧ್ಯದಿಂದ ಹುಟ್ಟಿಕೊಂಡ ಹೋರಾಟ ಮುಂದುವರೆದಿದ್ದಿತು. ಮಂಡ್ಯಜಿಲ್ಲೆಯ ಕಾಲುವೆ ನೀರಾವರಿಯಿಂದಾಗಿ ಇರ್ವಿನ್‌ನಾಲಾ ರೈತ ಹೋರಾಟ

ಹೆಚ್.ಕೆ. ವೀರಣ್ಣಗೌಡರ ನಾಯಕತ್ವದಲ್ಲಿ ನಡೆದು ಒಂದು ಶಾಂತರೂಪದ ಜಾಥದ ಮೂಲಕ ರೈತರು ಅಂದು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರವರ ಮುಂದೆ ತಮ್ಮ ರೈತಾಪಿ ಬೇಡಿಕೆಗಳನ್ನು ಮುಂದಿಟ್ಟು ಸರ್ಕಾರದ ಸಕಾರಾತ್ಮಕ ಈಡೇರಿಕೆಗೆ ಕಾರಣವಾಗಿದ್ದಿತು.

ಭಾರತ ರಾಷ್ಟ್ರೀಯ ಚಳವಳಿಯ ನೇತಾರ ಗಾಂಧೀಜಿಯವರ ಪ್ರಭಾವ ಮೈಸೂರು ಪ್ರಾಂತ್ಯದ ಗಡಿ ಪ್ರದೇಶದಲ್ಲಿ ಆರಂಭಗೊಂಡು ರಾಷ್ಟ್ರೀಯ ಹೋರಾಟದಲ್ಲಿ ರೈತರ ಸೇರ್ಪಡೆ ಇನ್ನಷ್ಟು ಹೋರಾಟದ ಸ್ಫೂರ್ತಿಯಾಗುತ್ತದೆಂಬುದು ಅವರ ನಂಬಿಕೆಯಾಗಿತ್ತು. ರೈತರು ಗಾಂಧೀಜಿಯವರ ಕರೆಗೆ ಮಹತ್ವವನ್ನು ನೀಡುತ್ತಿದ್ದರು. 1930ರ ದಶಕದ ಅರಣ್ಯ ಸತ್ಯಾಗ್ರಹ ಚಳವಳಿಗೆ ಗಾಂಧೀಜಿ ಕರೆಕೊಟ್ಟಾಗ ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ರೈತರು ಅರಣ್ಯದ ಮೇಲಿನ ಹಕ್ಕನ್ನು ಪುನರ್‌ಸ್ಥಾಪಿಸುವ ಗೇಣಿ ವಿಷಯ ಮೊದಲಾದ ಬೇಡಿಕೆಗಳನ್ನು ಮಂಡಿಸಿ ಕರ್ನಾಟಕದ ರೈತರು ಪ್ರಥಮ ಬಾರಿಗೆ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದ್ದರು. ಇವುಗಳಿಂದಾಗಿ ವಸಾಹತೋತ್ತರ ಕಾಲಾವಧಿಯಲ್ಲಿ ರೈತ ಹೋರಾಟಕ್ಕೆ ಹೊಸ ಆಯಾಮ ದೊರೆಯಿತು. ಪ್ರಜಾಪ್ರಭುತ್ವ ಸರ್ಕಾರದ ಸ್ಥಾಪನೆ, ಉಳುವವನೆ ಭೂ ಒಡೆಯ, ಊಳಿಗ ಮಾನ್ಯ, ಸರಂಜಾಮಶಾಹಿ

ಮುಂತಾದ ವಿಷಯಗಳು ರೈತ ಹೋರಾಟದಲ್ಲಿ ಪ್ರಮುಖ ಸ್ಥಾನವನ್ನು ಪಡೆದವು. (ಶಾಮರಾವ್, ಮೈಸೂರು ಸಂಸ್ಥಾನದ ಚರಿತ್ರಸಾರ, (ಬೆಂಗಳೂರು, 1919), ಪು-20-24.)

ಭಾರತದಲ್ಲಿನ ರೈತ ಚಳವಳಿಗಳು ಆರ್ಥಿಕ ಬಿಕ್ಕಟ್ಟು, ಪರಿಸರ ಸಮಸ್ಯೆ, ವಾಣಿಜ್ಯೀಕರಣ, ಪಟ್ಟಣ-ಗ್ರಾಮಗಳ ದ್ವಂದ್ವ ಪ್ರಭುತ್ವಗಳಿಂದಾಗಿ, ರೈತರ ನಡುವಿನ ದ್ವಂದ್ವಗಳ ವಿಶ್ಲೇಷಣೆ ಮೊದಲಾದವುಗಳ ಜೊತೆಗೆ ವಸಾಹತು ಆಳ್ವಿಕೆಯಲ್ಲಿ ಹೊಸ ಉತ್ಪಾದನಾ ವ್ಯವಸ್ಥೆ ಹಾಗೂ ಸಂಬಂಧಗಳು, ಆರ್ಥಿಕ ಮತ್ತು ಸಾಮಾಜಿಕ ರಚನೆಗಳಿಂದುಂಟಾದ ಸಂಘರ್ಷಣೆಗಳಿಂದಾಗಿ ರೈತ ಚಳವಳಿಗಳುಂಟಾಗುತ್ತವೆ. ಭಾರತದ ರೈತವರ್ಗವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ರೈತರನ್ನು ಪಾಶ್ಚಾತ್ಯ ದೇಶಗಳಲ್ಲಿ ಗುರುತಿಸಿದ ಲಕ್ಷಣಗಳಲ್ಲಿಯೇ ಗುರುತಿಸಲಾಗುತ್ತಿದೆ. ಅವುಗಳೆಂದರೆ ಅವರು ನಿಷ್ಕ್ರಿಯರು, ನಮ್ರರು, ಪ್ರತಿಗಾಮಿಗಳು, ಸಾಂಪ್ರದಾಯಿಕರು, ಮೌಲ್ಯನಿಷ್ಠರು, ಅಲ್ಲದೆ ರೈತರು ಮೂಲತಃವಾಗಿ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವುದಾಗಲೀ, ಸಾಮಾಜಿಕ ಸಂಬಂಧಗಳಲ್ಲಿ ಯಾವುದೇ ಬದಲಾವಣೆಯನ್ನೂ ಬಯಸಲಾರರು ಎಂಬ ಪೂರ್ವಾಗ್ರಹದಿಂದ ಅವರನ್ನು ಶಕ್ತಿಹೀನವರ್ಗವೆಂದೂ ಗುರುತಿಸಲಾಗುತ್ತಿದ್ದಿತು.

ಇಂತಹ ಗ್ರಹಿಕೆಗಳಿಂದಾಗಿ ರೈತವರ್ಗವು ಸಮಗ್ರ ಭಾರತದಲ್ಲಿ ಏಕರೂಪದ ಪ್ರತಿಭಟನೆಯನ್ನು ನಡೆಸುವ ಶಕ್ತಿ ಹೊಂದಿಲ್ಲವೆಂಬ ತೀರ್ಮಾನಕ್ಕೆ ಬಂದುದರಿಂದ ಮತ್ತು ಇದರೊಂದಿಗೆ ಸಾಂಪ್ರದಾಯಿಕ ಮೌಲ್ಯಗಳು ರೈತರ ಹೋರಾಟದ ಚೈತನ್ಯವನ್ನು ಕುಂದಿಸಿವೆ. ರೈತ ಹೋರಾಟಗಳು ಗ್ರಾಮೀಣ, ಪ್ರಾಂತೀಯ, ಹಾಗೂ ವಸಾಹತುಶಾಹಿ ರಾಜ್ಯ, ಸ್ವದೇಶಿ ರಾಜಕೀಯ ಮತ್ತು ಆರ್ಥಿಕತೆಯಿಂದ ಬೆಳೆದಿದ್ದವು. ನಿಷ್ಕ್ರಿಯತೆ ಅಥವಾ ಗ್ರಾಮೀಣ ಚೌಕಟ್ಟು ಅವುಗಳಿಗೆ ಅಡ್ಡಿ ಬರಲಿಲ್ಲ. ಇವುಗಳಿಂದಾಗಿ ಭಾರತದ ರೈತ ವರ್ಗವು ಪ್ರತಿಭಟನೆಯ ಆಂತರಿಕ ಗುಣಗಳನ್ನು ಹೊಂದಿರುವುದನ್ನು ನೋಡಬಹುದಾಗಿದೆ. (ಧನಗೆರೆ, ಡಿ.ಎನ್., ಫಿಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ, 1920-50, ನವದೆಹಲಿ, 1982, ಪು-210-213.). ವಸಾಹತು ಪ್ರಭುತ್ವದಲ್ಲಿ ಹೊಸ ಉತ್ಪಾದನಾ ಸಂಬಂಧ ಮತ್ತು ವಿಧಾನಗಳ ಹೇರುವಿಕೆಯ ಜೊತೆಗೆ ರೈತ ಚಳುವಳಿಗಳು ನಿಷ್ಕ್ರಿಯ ಹೋರಾಟದಿಂದ ಉಗ್ರ ಹೋರಾಟದವರೆಗೆ ವಿಭಿನ್ನ ರೂಪಗಳನ್ನು ಪಡೆದುಕೊಂಡಿದ್ದವು. ಆದರೆ ವಸಾಹತು ಕಾಲದ ಆಭಾಸವೆಂದರೆ ಹೆಚ್ಚಿನ ಹೋರಾಟಗಳು ಕೆಲವೇ ಕ್ಷೇತ್ರಗಳಿಗೆ, ಪ್ರದೇಶಗಳಿಗೆ ಅಥವಾ ವಿಷಯಗಳಿಗೆ ಸೀಮಿತವಾಗಿದ್ದವು. ಇದರಿಂದಾಗಿ ಸಮಗ್ರ ಭಾರತದಲ್ಲಿ ಏಕರೂಪದ ಪ್ರತಿಭಟನೆಗೆ ಅವಕಾಶವಾಗಲಿಲ್ಲ.

ಕೃಷಿಯಲ್ಲಿ ಬಂಡವಾಳಶಾಹಿಯನ್ನು ತರಲು ವಸಾಹತುಶಾಹಿಯು ಮುಖ್ಯವಾಗಿ ಜಮೀನ್ದಾರಿ ಹಾಗೂ ರೈತವಾರಿ, ಮಹಲವಾರಿಗಳೆಂಬ ಪದ್ಧತಿಗಳನ್ನು ಜಾರಿಗೆ ತಂದಿತು. (ಭವಾನಿಸೇನ್., ರೆವಲ್ಯೂಶನ್ ಆಫ್ ಅಗ್ರೇರಿಯನ್ ರಿಲೇಶನ್ಸ್ ಇನ್ ಇಂಡಿಯ ಇನ್‌ಕ್ಲುಡಿಂಗ್ ದಿಸ್ಟಡಿ ಆಫ್ ನೇಚರ್ ಅಂಡ್ ಕ್ವಾನ್ಸೆಕನ್ಸಸ್ ಆಫ್ ಪೋಸ್ಟ್ ಇಂಡಿಪೆಂಡೆನ್ಸ್ ಅಗ್ರೇರಿಯನ್ ರಿಲೇಶನ್ಸ್, ನವದೆಹಲಿ, 1962, ಪು.24-71.) ಗೇಣಿದಾರರು ಜಮೀನ್ದಾರಿ ಕ್ಷೇತ್ರಗಳಲ್ಲಿ ಶಾಸನ ಬಾಹ್ಯ ಶೋಷಣೆಗಳಿಗೆ ಬಲಿಪಶುಗಳಾಗಿದ್ದರು. ಅವರು ಭೂಮಿಯನ್ನು ಮಾರುವ ಅಥವಾ ಪರಭಾರೆ

ಮಾಡುವ ಹಕ್ಕನ್ನು ಕಳೆದುಕೊಂಡಿದ್ದರು. ಜಮೀನ್ದಾರರು ವಿವಿಧ ತೆರಿಗೆ ಹಾಗೂ ಕೃತಕ ಲೆಕ್ಕಪತ್ರಗಳಿಂದ ರೈತರ ಆಸ್ತಿಯನ್ನು ಕಬಳಿಸಿ ಅವರನ್ನು ನಿರ್ಗತಿಕರನ್ನಾಗಿ ಮಾಡುತ್ತಿದ್ದರು. ಇದರಿಂದಾಗಿ ಜಮೀನ್ದಾರಿ ಪ್ರದೇಶಗಳಲ್ಲಿ ಮೂರು ವಿಧದ ಪರಸ್ಪರ ವಿರೋಧಗಳು ಹುಟ್ಟಿಕೊಂಡಿದ್ದವು. ಅವುಗಳೆಂದರೆ ಗೇಣಿದಾರ ಮತ್ತು ವಸಾಹತು ರಾಜ್ಯ, ಗೇಣಿದಾರ ಮತ್ತು ಪ್ರಾಥಮಿಕ ಜಮೀನ್ದಾರ ಹಾಗೂ ಸಾಲ ನೀಡುವ ಲೇವಾದೇವಿದಾರ ಮತ್ತು ಗೇಣಿದಾರ. ಹಾಗೆಯೇ ರೈತವಾರಿ ಪ್ರದೇಶಗಳಲ್ಲೂ ರೈತ ಹೋರಾಟಗಳಿಗೆ ಅನೇಕ ದೃಷ್ಟಾಂತಗಳಿದ್ದು, ಗೇಣಿಪದ್ಧತಿಯ ಬದಲಾವಣೆಯಿಂದಾಗಿ ಹುಟ್ಟಿಕೊಂಡು, ಮಧ್ಯವರ್ತಿಗಳ ಶೋಷಣೆಯಿಂದಾಗಿ ಗೇಣಿದಾರ, ರೈತ ಮತ್ತು ವಸಾಹತು ಹಾಗೂ ಸಂಸ್ಥಾನ ರಾಜ್ಯಗಳಲ್ಲಿಯೂ, ರೈತ ಮತ್ತು ಭೂಮಾಲಿಕ ಮಧ್ಯವರ್ತಿಗಳ ನಡುವೆ ಘರ್ಷಣೆ ನಡೆದು ಹೋರಾಟಗಳು ಪ್ರಾರಂಭಗೊಂಡವು. ಇದಲ್ಲದೆ ಈಗಾಗಲೇ ಅಸ್ತಿತ್ವಲ್ಲಿದ್ದ ಒಂದು ಸಾಂಪ್ರದಾಯಿಕ ವ್ಯವಸ್ಥೆಯ ಮೇಲೆ ವಸಾಹತುಶಾಹಿ ಪ್ರಭುತ್ವವು ಹೊಸ ಉತ್ಪಾದನಾ ಸಂಬಂಧವನ್ನು ಬಲತ್ಕಾರವಾಗಿ ಹೇರಿದ್ದರಿಂದ ರೈತ ಮತ್ತು ರಾಜ್ಯದ ಘರ್ಷಣೆ ಪ್ರಾರಂಭವಾಯಿತು. ಉದಾಹರಣೆಗೆ, ಇದುವರೆಗೆ ರೈತರು ಶ್ರಮ ಹಾಗೂ ಉತ್ಪಾದನೆಯ ರೂಪದಲ್ಲಿ ಗೇಣಿಯನ್ನು ನೀಡುತ್ತಿದ್ದು, ವಸಾಹತುಶಾಹಿಯು ಅದನ್ನೂ ಹಣದ ರೂಪಕ್ಕೆ ಬದಲಾಯಿಸಿತು. ಈ ಬದಲಾವಣೆ ಸಂಘರ್ಷಕ್ಕೆಡೆಮಾಡಿತು. 1900ರಲ್ಲಿ ದಕ್ಷಿಣ ಕನ್ನಡದ ರೈತರ ಶಾಂತ ಪ್ರತಿಭಟನೆ ಇದಕ್ಕೊಂದು ಅತ್ಯುತ್ತಮ ಉದಾಹರಣೆಯಾಗಿದೆ. (ರಂಗನಾಥ ದಿವಾಕರ., ಕರನಿರಾಕರಣೆಯ ವೀರಕಥೆ, (ಮೈಸೂರು, 1955), ಪು–9–12.)

**ಪರಾಮರ್ಶನ ಗ್ರಂಥಗಳು**


1. ಜೇಮ್ಸ್ ಮೇನರ್, ಪೊಲಿಟಿಕಲ್ ಚೇಂಜ್ ಇನ್ ಆ್ಯನ್ ಇಂಡಿಯನ್ ಸ್ಟೇಟ್, ಮೈಸೂರ್, 1917–1955, ನವದೆಹಲಿ, 1977
2. ಹಾಲಪ್ಪ ಹಾಗೂ ಕೃಷ್ಣರಾವ್, ಎಂ.ವಿ. (ಸಂ) : ಹಿಸ್ಟರಿ ಆಫ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಸಂಪುಟ–1, ಬೆಂಗಳೂರು, 1992,
3. ಕಾಮತ್, ಎಸ್.ಯು., : ಅಗ್ರೇರಿಯನ್ ಏಜಿಟೇಷನ್ಸ್ ಅಂಡ್ ಫ್ರೀಡಂ ಮೂವ್‌ಮೆಂಟ್ ಇನ್ ಕರ್ನಾಟಕ, ಕೊ.ಜೆ.ಎಂ.ಎಸ್. ಸಂಪುಟ–73, ಸಂಚಿಕೆ, 2 (ಮಿಥಿಕ್ ಸೊಸೈಟಿ), ಬೆಂಗಳೂರು, 1982
4. ಡಾ. ಸದಾಶಿವ : ಆಧುನಿಕ ಭಾರತದ ಇತಿಹಾಸ ಮೈಸೂರು, 1998.
5. ಗೋಪಾಲ್ ಎಂ.ಹೆಚ್. : ದಿ ಫೈನಾನ್ಸ್ ಆಫ್ ಮೈಸೂರ್ ಸ್ಟೇಟ್ : 1799–1831, (ಮೈಸೂರ್, 1960)
6. ಮುನೇಗೌಡ, : ಡೆವಲಫ್‌ಮೆಂಟ್ ಆಫ್ ಕರ್ನಾಟಕ ಲೆಜಿಸ್ಲೇಚರ್, (ಮೈಸೂರು, 1988),
7. ನಾಡಕರ್ಣಿ, ಎಂ.ವಿ. ಕರ್ನಾಟಕದ ರೈತ ಹೋರಾಟಗಳು (ಬೆಂಗಳೂರು, 1989),
8. ನಾಡಕರ್ಣಿ, ಎಂ.ವಿ., ಫಾಮರ್ಸ್ ಮೂವ್‌ಮೆಂಟ್ಸ್ ಇನ್ ಇಂಡಿಯಾ, (ದೆಹಲಿ, 1987),
9. ಶ್ರೀಧರ. ಹೆಚ್.ಪಿ., ಪ್ಲಾಂಟೇಶನ್ ಇಂಡಸ್ಟ್ರೀಸ್ ಇನ್ ಪ್ರಿನ್ಸ್‌ಲೀ ಮೈಸೂರು, (ಬೆಂಗಳೂರು, 2001)
10. ಶಾಮರಾವ್, ಮೈಸೂರು ಸಂಸ್ಥಾನದ ಚರಿತ್ರಸಾರ, (ಬೆಂಗಳೂರು, 1919),

11. ಮುಜಾಫರ್ ಅಸ್ಸಾದಿ, : ಪೆಸೆಂಟ್ ಮೂವ್‌ಮೆಂಟ್ಸ್ ಇನ್ ಕರ್ನಾಟಕ, (ದೆಹಲಿ, 1997)
12. ಧನಗೆರೆ, ಡಿ.ಎನ್., ಫಿಸೆಂಟ್ ಮೂವ್‌ಮೆಂಟ್ ಇನ್ ಇಂಡಿಯಾ, 1920–50, (ನವದೆಹಲಿ, 1982).
13. ಭವಾನಿಸೇನ್., ರೆವಲ್ಯೂಶನ್ ಆಫ್ ಅಗ್ರೇರಿಯನ್ ರಿಲೇಶನ್ಸ್ ಇನ್ ಇಂಡಿಯ ಇನ್‌ಕ್ಲುಡಿಂಗ್ ದಿಸ್ಟಡಿ ಆಫ್ ನೇಚರ್ ಅಂಡ್ ಕ್ವಾನ್ಸೆಕನ್ಸ್ ಆಫ್ ಪೋಸ್ಟ್ ಇಂಡಿಪೆಂಡೆನ್ಸ್ ಅಗ್ರೇರಿಯನ್ ರಿಲೇಶನ್ಸ್, (ನವದೆಹಲಿ, 1962),
14. ರಂಗನಾಥ ದಿವಾಕರ., ಕರನಿರಾಕರಣೆಯ ವೀರಕಥೆ, (ಮೈಸೂರು, 1955), ಪು–9–12.
15. ಸೂರ್ಯನಾಥ್ ಯು ಕಾಮತ್., (ಸಂ) ಉತ್ತರ ಕನ್ನಡ ಜಿಲ್ಲಾ ಗೈಸೆಟಿಯರ್, ಗೈಸೆಟಿಯರ್ ಆಫ್ ಕರ್ನಾಟಕ, (ಬೆಂಗಳೂರು, 1985)

❖❖❖

ಹುಲುಮನೆ ಒಳಗಿನ ಮಣ್ಣಿನ ಹಣತೆ
ಮಿನುಗುತ ಉರಿಯುತಿರೆ
ದನಕರು ಹಟ್ಟಿಯು ಮೆಲುಕುವ ಉಸಿರದು
ಚಂದ್ರನ ಮುಟ್ಟುತಿರೆ

# ಬೇಡ ಬುಡಕಟ್ಟು ಮಹಿಳೆಯರ ಆಹಾರ ಕ್ರಮಗಳು

**ಡಾ ವಿಜಯಕುಮಾರ ಹೆಚ್ ವಿಶ್ವಮಾನವ; ಡಾ ಮಹಾಂತ ಗೌಡ**
**ಡಾ ಆಶಾರಾಣಿ ಎಂ. ಪಿ.; ಡಾ. ಧನಂಜಯ ಪಿ.ಕೆ.**

ಭಾರತದಂತಹ ಬಹುಸಂಸ್ಕೃತಿಗಳ ದೇಶದಲ್ಲಿ ಅನೇಕ ಬಗೆಯ ಆಹಾರಗಳು ಮತ್ತು ಬ ಅವುಗಳನ್ನು ತಯಾರಿಸುವ ಬೇರೆ ಬೇರೆ ಕ್ರಮಗಳು ಇವೆ. ಇವು ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಆಧುನಿಕತೆಗೆ ತೆರೆದುಕೊಂಡ ಸಮುದಾಯಗಳು ಮತ್ತು ಜಾತಿಗಳು ತಮ್ಮ ಸಾಂಪ್ರದಾಯಿಕ ಕ್ರಮನಗಳನ್ನು ಬಿಟ್ಟು ಏಕರೂಪದ ಆಹಾರಕ್ರಮದತ್ತ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆಾದರೆ ಇನ್ನೂ ಕುಡ ಆಧುನಿಕತೆಯ ಪ್ರವೇಶವಾಗದ ಬುಡಕಟ್ಟು ಸಮುದಾಯಗಳಲ್ಲಿ ಕೆಲವು ಸಾಂಪ್ರದಾಯಿಕ ಆಹಾರಪದ್ಧತಿಗಳು ಉಳಿದುಕೊಂಡು ಬಂದಿವೆ. ಅದಕ್ಕೆ ಪ್ರಮುಖ ಕಾರಣಗಳು ಆಹಾರವನ್ನು ಕುರಿತಂತೆ ಅವರಲ್ಲಿರುವ ನಂಬಿಕೆಗಳು.

ಇಂದಿನ ಆಧುಬಿಕ ವೈದ್ಯಕೀಯ ಪದ್ಧತಿಯು ಗರ್ಭಿಣಿಯರಿಗೆ ಮತ್ತು ಹಾಲೂಡುವ ತಾಯಂದಿರಿಗೆ ಅಗತ್ಯವಾದ ವಿಟಮಿನ್ ಇತ್ಯಾದಿ ಇರುವ ಆಹಾರಗಳನ್ನು ಶಿಫಾರಸು ಮಾಡುವುದು ಸಾಮಾನ್ಯ. ಅದೇ ರೀತಿ ಪ್ರತಿಯೊಂದು ಸಾಂಪ್ರದಾಯಿಕ ಸಮಾಜವೂ ಗರ್ಭಿಣಿ ಮತ್ತು ಬಾಣಂತಿಯರ ಆಹಾರದ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿರುತ್ತದೆ. ಬುಡಕಟ್ಟುಗಳಲ್ಲಿಯೂ ಗರ್ಭಿಣಿಯರ ಆರೈಕೆಗೆ ಬಹಳ ಮಹತ್ತ್ವವಿದೆ.

ಸ್ತ್ರೀ ಗರ್ಭಿಣಿಯಾದಾಗ ಗರ್ಭದಲ್ಲಿರುವ ಮಗುವಿನ ಬೆಳವಣಿಗೆ ಹಾಗೂ ತಾಯ್ತನದ ತಯಾರಿಗಾಗಿ ಹೆಚ್ಚುವರಿ ಪೋಷಕಾಂಶಗಳ ಅವಶ್ಯಕತೆ ಇರುತ್ತದೆ. ಈ ಒಂದು ಅವಶ್ಯಕತೆಯನ್ನು ನೀಗಿಸಲು ನಮ್ಮ ಪರಂಪರೆಯಲ್ಲಿ ಹಲವು ಬಗೆಯ ಸಂಪ್ರದಾಯಗಳು ಹುಟ್ಟಿಕೊಂಡು ರೂಢಿಗತವಾಗಿರುವುದನ್ನು ಕಾಣುತ್ತೇವೆ. ಗರ್ಭಿಣಿ ಎಂದು ತಿಳಿದಾಗ ಸಾಮಾನ್ಯವಾಗಿ ಗರ್ಭಿಣಿ ಸ್ತ್ರೀಯ ತವರುಮನೆಯವರು, ಪರಿಚಯಸ್ಥರು, ನೆರೆಹೊರೆಯವರು ಅವಳಿಗೆಂದೇ ವಿಶೇಷವಾಗಿ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ತಯಾರಿಸಿ ಕೊಡುವುದುಂಟು ಮತ್ತು ಅದಕ್ಕೆಂದೇ ವಿಶೇಷ ಆಚರಣೆಗಳನ್ನು ರೂಢಿಸಿಕೊಂಡಿರುವುದುಂಟು. ಯಾವುದೇ ನಿರ್ದಿಷ್ಟ ಕಟ್ಟುಪಾಡುಗಳು ಬೇಡ ಬುಡಕಟ್ಟುಗಳಲ್ಲಿ ಆಚರಣೆಯಲ್ಲಿಲ್ಲದಿದ್ದರೂ ಸಹ ಈ ಸಮಯದಲ್ಲಿ ಅವಳು ಇಷ್ಟಪಡುವ ಆಹಾರವನ್ನು ಸೇವಿಸಲು ಕೊಡುತ್ತಾರೆ. ಇಲ್ಲದಿದ್ದರೆ, ಗರ್ಭಿಣಿ ಯಾವುದಾದರೂ ಆಹಾರ ಪದಾರ್ಥದ ಮೇಲೆ ಆಸೆ ಇಟ್ಟಿಕೊಂಡೂ ಸಹ ಸೇವಿಸದಿದ್ದರೆ, ಹುಟ್ಟುವ ಮಗುವಿಗೆ ಅಂಗವೈಕಲ್ಯ ಅಥವಾ ಬುದ್ಧಿಮಾಂದ್ಯತೆ ಉಂಟಾಗಬಹುದೆಂದು ಇವರು ನಂಬಿದ್ದಾರೆ.

ಬೇಡ ಬುಡಕಟ್ಟುಗಳಲ್ಲಿ ಗರ್ಭಿಣಿಯರಿಗಾಗಿ ಪ್ರತ್ಯೇಕವಾಗಿ ಯಾವುದೇ ವಿಶೇಷ ಆಹಾರ ತಯಾರಿಸಿ ಕೊಡುವುದಿಲ್ಲ, ಆದರೆ ಸೊಪ್ಪಗಳು, ಹಣ್ಣುಗಳು, ಮಾಂಸಾಹಾರ, ಕೋಳಿ ಮಾಂಸ, ಏಡಿ ಮತ್ತು ಅಣಬೆ ಇವುಗಳನ್ನು ಮಾಮೂಲಿಗಿಂತ ಹೆಚ್ಚಿಗೆ ಸೇವಿಸಲು ಕೊಡುತ್ತಾರೆ. ಗರ್ಭದಲ್ಲಿನ ಶಿಶುವಿನ ಬೆಳವಣಿಗೆಗೆ ಉತ್ತಮ ಎನ್ನುವುದು ಇದಕ್ಕೆ ಕಾರಣ.

ಗರ್ಭಿಣಿ ಸ್ತ್ರೀ ಪಪ್ಪಾಯ ಸೇವಿಸಿದರೆ ಗರ್ಭಪಾತವಾಗುವ ಸಂಭವವಿರುತ್ತದೆಂದು ನಂಬಿದ ಇವರು ಗರ್ಭಿಣಿಯವರಿಗೆ ಪಪ್ಪಾಯ ಸೇವಿಸಲು ಕೊಡುವುದಿಲ್ಲ. ಅಲ್ಲದೆ, ಮೆಣಸು, ಶುಂಠಿ ಮತ್ತು ಕೊಬ್ಬರಿ ಹೊಟ್ಟೆಯ ಆಮ್ಲತೆಗೆ ಕಾರಣವೆಂದು ಇಂತಹ ಆಹಾರಗಳನ್ನು ಸಹ ಗರ್ಭಿಣಿಯರಿಗೆ ಸೇವಿಸಲು ಕೊಡುವುದಿಲ್ಲ. ಈ ನಂಬಿಕೆಗಳು ಕೊಂಡ, ಗಡಬ ಮತ್ತು ಪೊರ್ಜ ಬುಡಕಟ್ಟುಗಳಲ್ಲಿ ಕಾಣಬಹುದು. ಇವರು ಬದನೆಕಾಯಿ, ಯಾಮ್, ಮೊಟ್ಟೆಯನ್ನು ಗರ್ಭಿಣಿಯರು ಸೇವಿಸುವುದರಿಂದ ಚರ್ಮವ್ಯಾಧಿಗೆ ಕಾರಣವಾಗುತ್ತದೆಂದು ತಿಳಿದು ಇಂತಹ ಆಹಾರಗಳನ್ನು ಸೇವಿಸಲು ಕೊಡುವುದಿಲ್ಲ.

ಬಾಣಂತಿಯರಿಗೆ ಕೊಬ್ಬರಿಖಾರಾ, ಸಬ್ಬಕ್ಕಿ ಪಾಯಸ, ಮಾಂಸದ ಊಟ ಇತ್ಯಾದಿ ನೀಡುತ್ತಾರೆ. ಇವುಗಳಿಂದ ತಾಯಿಹಾಲು ಹೆಚ್ಚು ಉತ್ಪತ್ತಿಯಾಗುತ್ತದೆ ಎಂದು ನಂಬುತ್ತಾರೆ. ಇಂತಹ ಆಹಾರಗಳು ಬಾಣಂತಿಯರಿಗೆ ಹೆಚ್ಚಿನ ಪೋಷಕಾಂಶಗಳ ಅವಶ್ಯಕತೆಯನ್ನು ನೀಗಿಸಲು ಪ್ರಯೋಜನಕಾರಿಯಾಗಿವೆ. ಬಾಣಂತಿಯರು ತಂಪು ಆಹಾರ ಮತ್ತು ಅಧಿಕ ಮಸಾಲೆಯುಕ್ತ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ಮಗುವಿನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆಂದು ತಿಳಿದು ಇಂತಹ ಆಹಾರಗಳನ್ನು ಬೇಡರು ಬಾಣಂತಿಯರಿಗೆ ಸೇವಿಸಲು ಕೊಡುವುದಿಲ್ಲ. ಇಂತಹ ಆಹಾರಗಳನ್ನು ಬಾಣಂತಿ ಸೇವಿಸುವುದರಿಂದ ಮಗುವಿಗೆ ವಾಂತಿ ಬೇಧಿ ಉಂಟಾಗುತ್ತದೆಂದು ಇವರು ನಂಬಿದ್ದಾರೆ. ಅಲ್ಲದೆ, ಅಸಮರ್ಪಕ ಹಾಲಿನ ಉತ್ಪಾದನೆಗೆ ಕಾರಣವಾಗುತ್ತದೆ ಎಂಬ ನಂಬಿಕೆ ಇವರಲ್ಲಿದೆ.

ಬೇಡ ಸಮುದಾಯದವರು ಸಾಮಾನ್ಯವಾಗಿ ಮೇಲು ಆಹಾರವನ್ನು ಮಗುವಿಗೆ 4–6 ತಿಂಗಳು ತುಂಬಿದಾಗ ಆರಂಭಿಸುತ್ತಾರೆ. ಉಪ್ಪಿಟ್ಟು, ಬೆಲ್ಲ ಅಥವಾ ಉಪ್ಪು ಬೆರಸಿ ತಯಾರಿಸಿದ ರವೆ ಗಂಜಿ ಮತ್ತು ಕಾಡು ಸೊಪ್ಪಿನ ಸಾರು ಇವುಗಳನ್ನು ಬೇಡರು ಐದು ತಿಂಗಳಿನಿಂದ ಎರಡು ವರ್ಷದ ಮಕ್ಕಳಿಗೆ ವಿಶೇಷವಾಗಿ ತಯಾರಿಸಿ ಕೊಡುವ ಆಹಾರ ಪದಾರ್ಥಗಳಾಗಿವೆ. ಏಲಕ್ಕಿ ಮತ್ತು ಲವಂಗ ಬೆರಸಿ ತಯಾರಿಸಿ ಕೊಡುವ ಮುದ್ದೆಯು ಜೇನುಕುರುಬರ ಚಿಕ್ಕ ಮಕ್ಕಳ ವಿಶೇಷ ಆಹಾರವಾಗಿದೆ.

ಬೇಡ ಬುಡಕಟ್ಟುಗಳಲ್ಲಿ ಮೊಸರು, ಮಜ್ಜಿಗೆ, ಸವತೆಕಾಯಿ, ಬಾಳೆಹಣ್ಣು ಮುಂತಾದವುಗಳು ತಂಪು ಪದಾರ್ಥಗಳೆಂದು ನಂಬಿರುವ ಬೇಡ ಮಕ್ಕಳಿಗೆ ಇಂತಹ ಆಹಾರಗಳನ್ನು ಸೇವಿಸಲು ಕೊಡುವುದಿಲ್ಲ. ಇವು ಮಕ್ಕಳಲ್ಲಿ ನೆಗಡಿ, ಕೆಮ್ಮು ಉಂಟು ಮಾಡುತ್ತವೆಂದು ನಂಬಿದ್ದಾರೆ. ಮಾಂಸಾಹಾರ ಅಜೀರ್ಣ ಉಂಟುಮಾಡುತ್ತದೆಂದು ತಿಳಿದು ಮಾಂಸಾಹಾರವನ್ನು ಮಕ್ಕಳಿಗೆ ಸೇವಿಸಲು ಕೊಡುವುದಿಲ್ಲ.

ಸೋರೆಕಾಯಿ, ನುಗ್ಗೆಕಾಯಿ, ಕೋಸು, ಬೀನ್ಸ್, ದಂಟುಸೊಪ್ಪು, ಪುಂಡಿಸೊಪ್ಪು, ಕಳಲೆ, ಯಾಮ್, ಬಾಳೆಹಣ್ಣು, ಪಪ್ಪಾಯ, ಕುಂಬಳಕಾಯಿ, ಹುಚ್ಚೆಳ್ಳು, ಉದ್ದಿನಬೇಳೆ, ಹೆಸರುಬೇಳೆ, ಮಾಂಸಾಹಾರವಾದ ಕೋಳಿ, ಆಡು ಮತ್ತು ದನದ ಮಾಂಸ, ಏಡಿಯನ್ನು ಗರ್ಭಿಣಿ ಹಾಗೂ ಬಾಣಂತಿಯರ ಆರೋಗ್ಯಕ್ಕೆ ಉತ್ತಮ ಆಹಾರಗಳೆಂದು ನಂಬಿರುವ ಕೊಂಡ ಬುಡಕಟ್ಟು ಇಂತಹ ಆಹಾರಗಳನ್ನು ಗರ್ಭಿಣಿ ಬಾಣಂತಿಯರಿಗೆ ಹೆಚ್ಚಾಗಿ ಸೇವಿಸಲು ಕೊಡುತ್ತಾರೆ. ಹಾಗಲಕಾಯಿ, ಪಡುವಲಕಾಯಿ, ಆಲೂಗೆಡ್ಡೆ, ಬದನೆ, ಟೊಮ್ಯಾಟೊ, ಅಣಬೆ, ಹಸಿ ಹುಣಸೆಕಾಯಿ, ತೆಂಗಿನಕಾಯಿ, ಮಾವಿನ ಹಣ್ಣು, ಕಲ್ಲಂಗಡಿ ಹಣ್ಣು, ಒಣಗಿಸಿದ ಮತ್ತು ಸಂಸ್ಕರಿಸಿದ ಮೀನು, ಕಾಡುಬೆಕ್ಕಿನ

ಮಾಂಸ, ಜಿಂಕೆಮಾಂಸ, ಮೊಟ್ಟೆ, ಮುಸುಕಿನಜೋಳ, ಬಾರ್ಲಿ, ಕಡಲೆಬೇಳೆ/ ಕಡಲೆಕಾಳು, ಹೆಸರುಕಾಳು, ಹುರಳಿ, ಗಿಣ್ಣು ಸ್ಥಳೀಯವಾಗಿ ತಯಾರಿಸಿದ ಮದ್ಯವನ್ನು ಗರ್ಭಿಣಿ ಹಾಗೂ ಬಾಣಂತಿಯರ ಆರೋಗ್ಯಕ್ಕೆ ಒಳ್ಳೆಯದಲ್ಲವೆಂದು ತಿಳಿದು ಇಂತಹ ಆಹಾರಗಳನ್ನು ಸೇವಿಸಲು ನೀಡುವುದಿಲ್ಲ. ನಿಂಬೆಎಲೆ, ಜೀರಿಗೆ ಮತ್ತು ಅರಿಶಿಣದಿಂದ ತಯಾರಿಸಿದ ಪೇಸ್ಟ್‌ನ್ನು ಚಿಕ್ಕಮಕ್ಕಳಿಗೆ ನೆಕ್ಕಿಸುವುದರಿಂದ ಜೀರ್ಣಕ್ರಿಯೆ ಸರಾಗವಾಗಲು ಸಹಕಾರಿಯಾಗುತ್ತದೆಂದು ನಂಬಿದ ಇವರು ಮಕ್ಕಳಿಗೆ ಇದನ್ನು ನೆಕ್ಕಿಸುತ್ತಾರೆ. ಅಲ್ಲದೆ, ಜೇನಿನೊಂದಿಗೆ ಉಪ್ಪನ್ನು ಬೆರಸಿ ಕೊಡುವುದರಿಂದ ಮಕ್ಕಳ ಧರ್ಮ ಕಾಂತಿಯುಕ್ತವಾಗುತ್ತದೆಂದು ನಂಬಿದ್ದಾರೆ.

ಒಣಗಿಸಿದ ಮೀನು, ಮಾಂಸಾಹಾರ ದಂಟಿನಬೀಜದಿಂದ ತಯಾರಿಸಿದ ಅರಳು, ಪಾಮ್ ಗಿಡದಿಂದ ತಯಾರಿಸಿದ ಬೆಲ್ಲವನ್ನು ಬಾಣಂತಿಯರಿಗೆ ವಿಶೇಷ ಆಹಾರವಾಗಿ ನೀಡುವ ಪದ್ಧತಿಯನ್ನು ತಮಿಳುನಾಡಿನ ಪೆರಿಯಾರ್ ಬುಡಕಟ್ಟು ಸಮುದಾಯದವರು ಪಾಲಿಸುತ್ತಿದ್ದಾರೆ. ಇವರು ವಾಂತಿಭೇದಿ ಮತ್ತು ಚಿಕನ್ ಫಾಕ್ಸ್‌ನಿಂದ ಬಳಲುವವರಿಗೆ ಬೇಗ ಗುಣಮುಖರಾಗಲು ಹುರಿದ ಅರಿಶಿಣದ ಬೇರಿನ ಪುಡಿಯನ್ನು ಬಿಸಿನೀರಿನಲ್ಲಿ ಬೆರಸಿ ಸೇವಿಸಲು ಕೊಡುತ್ತಾರೆ.

ಕೊಬ್ಬರಿಖಾರ, ಸಬ್ಬಕ್ಕಿ ಪಾಯಸ ಮತ್ತು ಮಾಂಸವನ್ನು ಲಂಬಾಣಿ ಬುಡಕಟ್ಟು ಜನರು ಬಾಣಂತಿಯರಿಗೆ ಕೊಡುವ ವಿಶೇಷ ಆಹಾರಗಳು (ಜ್ಯೋತಿಲಕ್ಷ್ಮಿ 1995). ಬಾಣಂತಿಯರಿಗೆ ಅಕ್ಕಿಯಿಂದ ಹುದುಗುಬರಿಸಿ ತಯಾರಿಸಿದ 'ಮಂದಿ' ಎಂಬ ಪಾನೀಯವನ್ನು ಮತ್ತು ಅರಿಶಿಣದಿಂದ ತಯಾರಿಸಿದ ಸೂಪ್ ಹಾಗೂ ಉದ್ದಿನಬೇಳೆ, ಪಪ್ಪಾಯ ಮತ್ತು ಶತಾವರಿ ಸೊಪ್ಪನ್ನು ವಿಶೇಷ ಆಹಾರವಾಗಿ ಕೊಡುವ ಪದ್ಧತಿಯನ್ನು ಮತ್ತು ಮೊಸರು, ಕರಿದ ತಿಂಡಿ ತಿನಿಸುಗಳು ಬಾಣಂತಿಯರಿಗೆ ನಿಷಿದ್ಧಗೊಳಿಸಿರುವುದನ್ನು ಆರತಿ ಮತ್ತು ಹೇಮಾರವರು 1998ರಲ್ಲಿ ಬಿಹಾರ್‌ನ ಹೋ ಬುಡಕಟ್ಟು ಜನಾಂಗದ ಆಹಾರ ಪದ್ಧತಿಯ ಕುರಿತು ದಾಖಲಿಸಿದ ವರದಿಯು ತಿಳಿಸುತ್ತದೆ.

**ಪರಾಮರ್ಶನ ಗ್ರಂಥಗಳು**


1. ಮ್ಯಾಸಬೇಡರ ಸಂಸ್ಕೃತಿ, ಡಾ. ಕೃಷ್ಣಮೀತಿ ಹನೂರು, 1993
2. ಮ್ಯಾಸಮಂಡಲ, ಡಾ. ಮೀರಾಸಾಬಿಹಳ್ಳಿ ಶಿವಣ್ಣ, 2003
3. ಘಟ್ಟ ಹೊಸಹಳ್ಳಿ ಗಟ್ಟಿಗ, (ಸಂ) ಹರ್ತಿಕೋಟೆ ವೀರೇಂದ್ರಸಿಂಹ, ಡಾ. ತೇಜಸ್ವಿ ಕಟ್ಟಿಮನಿ
4. ಮ್ಯಾಸನಾಯಕರು ಒಂದು ಜನಾಂಗೀಯ ಅಧ್ಯಯನ, ಡಾ. ಕರಿಶೆಟ್ಟಿ ರುದ್ರಪ್ಪ
5. ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ
6. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಡಾ. ವಿರೂಪಾಕ್ಷಿ ಪೂಜಾರಹಳ್ಳಿ
7. ಬುಡಕಟ್ಟು ಅರ್ಥಯಯನ ನೆಲೆಯಲ್ಲಿ ಬೇಡನಾಯಕರು (ಲೇಖನ) ಕೆ.ಎಂ. ಮೈತ್ರಿ ಇದರಲ್ಲಿ "ಘಟ್ಟಿ ಹೊಸಳ್ಳಿ ಘಟ್ಟಿಗ", ಸಂ. ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ
8. ಮ್ಯಾಸಬೇಡರ ಸಂಸ್ಕೃತಿ, ಕೃಷ್ಣಮೂರ್ತಿ ಹನೂರು, ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು. 1993
9. ಮ್ಯಾಸ ಮಂಡಲ", ಮೀರಾಸಾಬಿಹಳ್ಳಿ ಶಿವಣ್ಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು 2003

10. ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಗಂಗಾಧರ ದೈವಜ್ಞ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2000
11. ಪ್ರಾಚೀನ ಭಾರತದ ಚರಿತ್ರೆ, (ಡಿ.ಡಿ. ಕೊಸಂಬಿಯವರ ಚಿಂತನೆಗಳು), ಮೂಲ. ಬಾಲಗೋಪಾಲ್, ಅನು. ಎಚ್.ಎಸ್.ಶ್ರೀಮತಿ, ಬೆಳ್ಳಿ–ಚಿಕ್ಕಿ ಟ್ರಸ್ಟ್, ಬೆಂಗಳೂರು, 1998

* ಡಾ ವಿಜಯಕುಮಾರ ಹೆಚ್ ವಿಶ್ವಮಾನವ, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಮಾನವಿಕ ಮತ್ತು ಭಾಷಾ ನಿಕಾಯ, ಕನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಆಳಂದ ರೋಡ್, ಕಡಗಂಚಿ, ಕಲಬುರಗಿ–585 367

** ಡಾ ಆಶಾರಾಣಿ ಎಂ. ಪಿ. ಯು.ಜಿ.ಸಿ. ಪೋಸ್ಟ್ ಡಾಕ್ಟರಲ್ ಫೆಲೋ ಕನ್ನಡ ಅಧ್ಯಯನ ವಿಭಾಗ, ಮಾನವಿಕ ಮತ್ತು ಭಾಷಾ ನಿಕಾಯ, ಕನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಆಳಂದ ರೋಡ್, ಕಡಗಂಚಿ, ಕಲಬುರಗಿ–585 367

*** ಡಾ ಮಹಾಂತ ಗೌಡ ಕನ್ನಡ ಸಹಾಯಕ ಪ್ರಾಧ್ಯಾಪಕರು, ದೇವಾನಂಪ್ರಿಯಾ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು ಜಿಲ್ಲೆ ಮಸ್ಕಿ–585124.

**** ಡಾ.ಧನಂಜಯ ಪಿ ಕೆ ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕೆ. ಆರ್. ಪೇಟೆ ಮಂಡ್ಯ–571426.

❖❖❖

ಜೊನ್ನವು ಇಳೆಯನು ಏರುತಲಿತ್ತು
ಸೂರ್ಯನು ಕೆಳಗುಳಿಯೆ
ಮೌನದ ಕತ್ತಲು ಟಿಸಿಲೊಡೆದಿತ್ತು
ನಿದಿರೆಯ ಅರಿವಳಿಯೆ

# ಕುಮಾರವ್ಯಾಸ ಭಾರತದಲ್ಲಿ ಸ್ತ್ರೀತ್ವದ ಪ್ರತಿನಿಧಿಯಾಗಿ ಕುಂತಿ

**ಡಾ. ಅರುಣಕುಮಾರಿ ಬಿ.ಎನ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು(ಸ್ವಾಯತ್ತ), ಗುಬ್ಬಿ

ಭಾರತದಲ್ಲಿ ರಾಮಾಯಣ ಮತ್ತು ಮಹಾಭಾರತಗಳೆಂಬ ಮಹಾಕಾವ್ಯಗಳು ಸಾಂಸ್ಕೃತಿಕವಾಗಿ ಅತ್ಯಂತ ಮಹತ್ತ್ವವನ್ನು ಹೊಂದಿವೆ. ಅನೇಕರ ಪಾಲಿಗೆ ಇವು ಮೌಲ್ಯದ ನೆಲೆಗಳು ಕೂಡ ಹೌದು. ಇವು ಸ್ಫೂರ್ತಿಯ ಸಂಕೇತಗಳಾಗಿರುವಂತೆಯೇ ಜನಮಾನಸದ ಪ್ರತಿಬಿಂಬಗಳೆಂದರೆ ತಪ್ಪಾಗಲಾರದು. ವ್ಯಾಸನಿಂದ ರಚಿತವಾದ ಮಹಾಭಾರತ ರಾಮಾಯಣಕ್ಕಿಂತಲೂ ಹೆಚ್ಚು ಸಂಕೀರ್ಣವಾದ ಬದುಕನ್ನು ತೋರಿಸುತ್ತದೆ. ಇಲ್ಲಿ ಜನಮಾನಸದಲ್ಲಿ ಉಳಿದುಕೊಳ್ಳುವ ಅನೇಕ ಪಾತ್ರಗಳಿವೆ. ವ್ಯಾಸ ಭಾರತವನ್ನು ಆಧರಿಸಿ ಕನ್ನಡದಲ್ಲಿ ಬರೆದ ಕುಮಾರವ್ಯಾಸ ಕನ್ನಡ ಕವಿಗಳ ಅಗ್ರಪಂಕ್ತಿಯಲ್ಲಿ ಬರುತ್ತಾನೆ. ಬಡತನ, ಹಸಿವು, ಕ್ರೌರ್ಯ, ಮಾತ್ಸರ್ಯ ಉಳ್ಳವರಲ್ಲೂ ಸಹಜವೆಂಬಂತೆ ಕುಮಾರವ್ಯಾಸ ಪಾತ್ರಕ್ಕೆ ಜೀವ ತುಂಬುತ್ತಾನೆ. ಕಾವ್ಯ ಗಾಯನ, ವ್ಯಾಖ್ಯಾನ, ಪ್ರವಚನಗಳ ಮೂಲಕ ಕುಮಾರವ್ಯಾಸನ ಗದುಗಿನ ಭಾರತ ನಿತ್ಯನೂತನವಾಗಿ ಇಂದಿಗೂ ಉಳಿದಿದೆ. ಅಂದಿನ ಪಾತ್ರಗಳು ಇಂದಿನ ನಿಜಜೀವನದ ದರ್ಶನಕ್ಕೆ ಉದಾಹರಣೆಗಳಂತಿವೆ. ಪಂಪನಿಗೆ ಅರ್ಜುನ ಕಥಾನಾಯಕನಾದರೆ ಕುಮಾರವ್ಯಾಸ 'ತಿಳಿಯ ಹೇಳುವೆ ಕೃಷ್ಣಕಥೆಯನು, ಇಳೆಯ ಜಾಣರು ಮೆಚ್ಚುವಂತೆ' ಎಂದಿದ್ದಾನೆ. ಕೃಷ್ಣನ ಮೂಲಕ ಧರ್ಮ ಸಂಸ್ಥಾಪನೆ ಮಾಡುವ ಬಗೆಯನ್ನು ಇದು ತಿಳಿಸುತ್ತದೆ.

ಕುಮಾರವ್ಯಾಸನ ಕಾವ್ಯದಲ್ಲಿ ಕುಂತಿಯು ರಾಜಮಾತೆಯಾಗಿಯೋ ಅಥವಾ ಮಹಾರಾಣಿಯಾಗಿಯೋ ಕಂಡುಬರದೆ ಸಾಮಾನ್ಯ ಜನವರ್ಗದ ಮಹಿಳೆಯಾಗಿ ಕಾಣಿಸುತ್ತಾಳೆ. ಋಷಿಗಳ ಸೇವೆಯಿಂದ ಮಂತ್ರಸಿದ್ಧಿಯನ್ನು ಪಡೆದ ಕುಂತಿ ಸಹಜ ಕುತೂಹಲಕ್ಕೆ ಬಲಿಯಾಗಿ ಮಂತ್ರಪ್ರಯೋಗದಿಂದ 'ತಾಯಿ'ಯಾಗುತ್ತಾಳೆ. ಆದರೆ ಆ 'ತಾಯ್ತನ'ದಿಂದ ಅವಳು ವಂಚಿತಳಾಗಬೇಕಾಗುತ್ತದೆ. ಲೋಕಾಪವಾದದ ಭಯದಿಂದ ಸೂರ್ಯಪುತ್ರನಾದ ಕರ್ಣನನ್ನು ದೂರ ಮಾಡಿಕೊಳ್ಳುವ ಸಂದರ್ಭ ಅತಿ ನೋವಿನದು.

ಪಾಂಡುರಾಜನನ್ನು ಮದುವೆಯಾದ ಕುಂತಿ ತನ್ನ ವೇದನೆಯನ್ನು ಯಾರೊಡನೆಯೂ ಮುಕ್ತವಾಗಿ ಹಂಚಿಕೊಳ್ಳಲಾರದೆ ಹಪಹಪಿಸುವ ಸಾಮಾನ್ಯ ಸ್ತ್ರೀಯಾದಳು. ಪಾಂಡುವಿಗಿದ್ದ ಶಾಪದಿಂದಾಗಿ ಕುಂತಿಯದು ಪತಿಯಿದ್ದರೂ ಇಲ್ಲದಂತಹ ಬದುಕು. ಮಾದ್ರಿಯ ಬದುಕು ಕೂಡ ಹಾಗೆಯೇ. ಮುಂದೆ ಪತಿವಿಯೋಗದಿಂದ ಗಾಂಧಾರಿ ಮತ್ತು ಧೃತರಾಷ್ಟ್ರನ ನೆರಳಿನಲ್ಲಿ ಬಾಳು ಸಾಗಿಸುವ ಸಂದರ್ಭಕ್ಕೆ ಒಳಗಾದಳು.

ಅರಿತೋ ಅರಿಯದೆಯೋ ಕುಂತಿ ತನ್ನ ಮಕ್ಕಳ ಒಗ್ಗಟ್ಟನ್ನು ಜೀವಂತವಾಗಿಡಲು ತನ್ನ ಸೊಸೆಯಾದ ದ್ರೌಪದಿಯನ್ನು ಐವರಿಗೂ ಹಂಚಿದಳು. ಪಂಚಪಾಂಡವರನ್ನು ವರಿಸಿದ ದ್ರುಪದಕುವರಿ ಪಾಂಚಾಲಿ ಹೆಸರಿಗೆ ತಕ್ಕಂತೆಯೋ ಎನ್ನುವಂತೆ

ಪಂಚಪತಿಗಳುಳ್ಳವಳಾದಳು. ಧರ್ಮರಾಯ ದ್ಯೂತಕ್ರೀಡೆಯಲ್ಲಿ ಸೋತ ವಿಷಯದಿಂದ ನೊಂದ ಕುಂತಿ ಅಲ್ಲಿ ರಾಜಮಾತೆಯಾಗಲಿಲ್ಲ. ಎಲ್ಲವನ್ನು ಕಳೆದುಕೊಂಡು ಮುಂದಿನ ಬದುಕನ್ನು ಅರಿಯದ ಒಬ್ಬ ಸಾಮಾನ್ಯ ಸ್ತ್ರೀಯಾದಳು.

ಕೃಷ್ಣನ ಸಂಧಾನ ವಿಫಲವಾದ ಬಳಿಕ ಆತನ ಸೂಚನೆಯಂತೆ ಕರ್ಣನ ಬಳಿ ಬೇಡಿಕೊಳ್ಳುವ ಸಂದರ್ಭ ಬಂದಾಗ ಕುಂತಿಯ ಮನಸ್ಥಿತಿ ಎಂತಹದ್ದಿರಬಹುದು ಎನ್ನುವುದನ್ನು ವರ್ಣಿಸುವುದು ಕಷ್ಟವೇ ಸರಿ. ಮಗನಿಗೆ ಮೋಸ ಮಾಡಿದ ಅಸಹಾಯಕ ತಾಯಿಯಾಗಿ ನಿಲ್ಲುತ್ತಾಳೆ. ಸ್ವಾರ್ಥ ಮತ್ತು ಅಸಹಾಯಕತೆಗೆ ಬಲಿಯಾದ ಹೆಣ್ಣಿನ ಪ್ರತಿಮೆ ಕುಂತಿ ಎಂದರೆ ತಪ್ಪಾಗಲಾರದು. ಕುಮಾರವ್ಯಾಸನ ಕುಂತಿ ಮತ್ತು ಗಾಂಧಾರಿ ಪಾತ್ರಗಳು ಎರಡು ಮನೆತನಗಳ ಪ್ರತಿರೂಪ. ನೂರೊಂದು ಮಕ್ಕಳನ್ನು ಹಡೆದ ಗಾಂಧಾರಿ ನಮ್ಮ ಕಣ್ಮುಂದೆ ಬರುವುದು ರಾಜಮಾತೆಯಾಗಿ. ಐದುಜನ ಪಂಚಪಾಂಡವರೆಂಬ ಪರಾಕ್ರಮಿಗಳನ್ನು ಪಡೆದ ಕುಂತಿ ಸಾಮಾನ್ಯ ಹೆಂಗಸಾಗಿಯೇ ಪ್ರತಿಬಿಂಬಿತಳಾಗುತ್ತಾಳೆ. ಅಂದರೆ ಕುಮಾರವ್ಯಾಸನ ಕಲ್ಪನೆಯ ಕುಂತಿ ಹೋರಾಟದ ಮಹಿಳೆಯಾಗಿ ತನ್ನ ಅಸ್ತಿತ್ವವನ್ನು ಸಾಧಿಸಿಕೊಳ್ಳುವ ಛಲ ಇರುವ ಹೆಣ್ಣಿನ ಪ್ರತೀಕದಂತೆ ಕಾಣುತ್ತಾಳೆ. ಅಂಥ ಛಲ ಹೆಣ್ಣಿನ ಸಹಜಗುಣವೆಂಬಂತೆ ಬಿಂಬಿತವಾಗಿದೆ.

ಯುದ್ಧದಲ್ಲಿ ಸತ್ತ ಕರ್ಣನನ್ನು ತನ್ನ ಮಕ್ಕಳಿಗೆ ತೋರಿಸಿ ಸತ್ಯವನ್ನು ಹೇಳುವ ಸಂದರ್ಭದಲ್ಲಿ ಕುಂತಿ ಪಶ್ಚಾತ್ತಾಪದಲ್ಲಿ ಬೇಯುವ ಅಪರಾಧಿ ಪ್ರಜ್ಞೆಯ ಹೆಣ್ಣಾಗಿ ಕಂಡುಬರುತ್ತಾಳೆ. ಲೋಕಾಪವಾದದ ಬೇಗುದಿಯಲ್ಲಿ ಬೇಯುವ ಹೆಣ್ಣಾಗಿ ಒಂದು ಕಡೆ ನೆಲೆ ನಿಂತರೆ ತನ್ನ ಉಳಿದ ಮಕ್ಕಳ ದೃಷ್ಟಿಯನ್ನು ಎದುರಿಸಲಾಗದಅ ಸಹಾಯಕತೆಯ ಪಾತ್ರವಾಗಿ ಕುಂತಿ ಕಂಡುಬರುತ್ತಾಳೆ. ಬಾಲ್ಯವನ್ನು ಯಾದವ ಶೂರಸೇನಾ ಮತ್ತು ಕುಂತಳದ ರಾಜ ಇಬ್ಬರು ರಾಜರಲ್ಲಿ ಕಳೆದು ಸೂರ್ಯ, ಯಮ, ವಾಯು, ಇಂದ್ರ ಮತ್ತು ಪಾಂಡುರಾಜನಿಗೆ ಸತಿಯಾದರೂ ಮುಪ್ಪಿನಲ್ಲಿ ಜೀವನವೆಲ್ಲ ದಾಯಾದಿಗಳೊಂದಿಗೆ ಹೋರಾಟ, ಕಾಡು ಮತ್ತು ಬೆಟ್ಟಗುಡ್ಡಗಳಲ್ಲಿ ಬದುಕನ್ನು ಸವೆಸುತ್ತಲೇ ಹೋರಾಟಗಾರ್ತಿಯಾಗಿ ಮತ್ತು ಮಾತೃತ್ವದ ಪ್ರತೀಕವಾಗಿ ಕುಂತಿ ಬದುಕಿದಳೆನ್ನಬಹುದು. ಹೆಣ್ಣಿನ ಸಹಜ ಪಾತ್ರಚಿತ್ರಣ ಮತ್ತು ಅಸ್ಮಿತೆಯ ನೆಲೆಯಾಗಿ ಕುಮಾರವ್ಯಾಸ ಕುಂತಿಯ ಉದಾತ್ತ ವ್ಯಕ್ತಿತ್ವ ಚಿತ್ರಿಸಿದ್ದಾನೆ.

ಕುಂತಿಯ ಪಾತ್ರವನ್ನು ದ್ರೌಪದಿಯ ಪಾತ್ರದೊಂದಿಗೆ ಹೋಲಿಸಿ ನೋಡುವುದು ಕೂಡ ಕುತೂಹಲಕರ. ಮಹಾಭಾರತದಲ್ಲಿ ಅತಿ ಮಹತ್ವದ ಸ್ತ್ರೀಪಾತ್ರ ದ್ರೌಪದಿಯದು. ದ್ರೌಪದಿ ಹಾಗೆ ಪಾತ್ರವಾಗಿ ಬೆಳೆಯುವುದರಲ್ಲಿ ಕುಂತಿಯ ಕೊಡುಗೆಯೂ ಇದೆ. ಆಕೆ ಅತ್ತೆಯಾಗಿ ಸೊಸೆಯ ಬಗ್ಗೆ ಮತ್ಸರವನ್ನು ಹೊಂದಿದವಳಲ್ಲ. ಕುಂತಿ ಪಂಚಪಾಂಡವರ ತಾಯಿಯಾದರೆ ದ್ರೌಪದಿ ಪಂಚಪಾಂಡವರ ಪತ್ನಿ. ಕುಂತಿ ಮಕ್ಕಳ ಒಗ್ಗಟ್ಟನ್ನು ಉಳಿಸಬಯಿಸಿದವಳಾದರೆ, ದ್ರೌಪದಿ ಕೂಡ ಐವರಿಗೆ ಸತಿಯಾಗಿಯೂ ಒಗ್ಗಟ್ಟನ್ನು ಬಲಗೊಳಿಸಿದ ಗಟ್ಟಿಗಿತ್ತಿ ಹೆಣ್ಣುಮಗಳು. ವನವಾಸ ಸಂದರ್ಭ ಬಂದಾಗ ತನ್ನ ಮಕ್ಕಳನ್ನು ತವರು ಮನೆಯಲ್ಲಿ ಬಿಟ್ಟು ಮಕ್ಕಳಿಂದ ಮಾನಸಿಕವಾಗಿ ದೂರಾದವಳು ದ್ರೌಪದಿ. ಮಹಾಭಾರತದ ಉದ್ದಕ್ಕೂ ಕ್ರಿಯಾಶೀಲ ವ್ಯಕ್ತಿತ್ವದ ಪಾತ್ರವಾಗಿ ದ್ರೌಪದಿ ಕಂಡುಬರುತ್ತಾಳೆ. ಕುಂತಿ ಮತ್ತು ದ್ರೌಪದಿ ಇಬ್ಬರಲ್ಲೂ ಸ್ತ್ರೀಗೆ ಸಹಜವಾದ ಪಾಲನಾಗುಣ ಇದ್ದರೂ ದ್ರೌಪದಿಗೆ ಅದರ ಅಭಿವ್ಯಕ್ತಿಗೆ ಅವಕಾಶ ಸರಿಯಾಗಿ ಸಿಗುವುದೇ ಇಲ್ಲ.

ಅವಮಾನಕ್ಕೆ ಸೇಡು ತೀರಿಸುವ ಮನೋಭಾವವೇ ಅವಳಲ್ಲಿ ಕಾವ್ಯದ ಓದುಗರು ಪ್ರಧಾನವಾಗಿ ಕಾಣುವುದು. ಕುಂತಿಯಲ್ಲೂ ಬೇರೆ ಬೇರೆ ಕಾರಣಗಳಿಂದಾಗಿ ಅಷ್ಟೇ ಸಿಟ್ಟು ಸೇಡು ಇರಬಹುದಾಗಿತ್ತಾದರೂ ಅದು ಕಾಣುವುದಿಲ್ಲ. ಕೃಷ್ಣನೆಂದರೆ ಕುಂತಿಗೂ ದ್ರೌಪದಿಗೂ ಸಮವಾಗಿಯೇ ಪ್ರೀತಿ, ಸಲಿಗೆ, ಗೌರವ ಮತ್ತು ಭಕ್ತಿ ಇರುವುದು ವಿಶೇಷ.


**ಆಕರ ಗ್ರಂಥಗಳು**

- ಕುಮಾರವ್ಯಾಸ ಭಾರತ ಕಥಾಮಿತ್ರ : ಅ.ರಾ ಮಿತ್ರ
- ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ : ಸಂಪಾದನೆ. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್
- ಕುಮಾರವ್ಯಾಸ ವಿರಚಿತ ಗದುಗಿನ ಭಾರತ : ಸಂಯೋಜನೆ – ಡಾ. ಸಿ.ಪಿ. ಕೃಷ್ಣಕುಮಾರ್


❖❖❖

ಹೊಲದ ಬೆಳೆಗಳಲಿ ಮರದ ಫಲಗಳಲಿ
ಗೋಳದ ಮಣ್ಣಿನ ಸಾರವಿದೆ
ಕಾವ್ಯ ಕಥೆಗಳಲಿ ಮನುಜ ವ್ಯಥೆಗಳಲಿ
ಸೃಷ್ಟಿಯ ಅನಂತ ಸೆಲೆಯು ಇದೆ.

# ಜಾನಪದ ಸಾಹಿತ್ಯದಲ್ಲಿ ರಾಣಿ ಚೆನ್ನಮ್ಮಾಜಿ ಶೌರ್ಯ ಮತ್ತು ಸ್ವಾತಂತ್ರ್ಯ ಹೋರಾಟ

**ಡಾ. ಫಕೀರನಾಯ್ಕ ಡಿ. ಗಡ್ಡಿಗೌಡರ**
ಕನ್ನಡ ಸಹಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನೇಸರಗಿ–591121

ಕಿತ್ತೂರು ರಾಣಿಯ ವಿಜಯೋತ್ಸವವನ್ನು ಜಾನಪದ ಸಾಹಿತ್ಯವು ಪರಿಚಯಿಸಿದ ಕ್ರಮ ಸುಂದರವಾಗಿದೆ. ಈ ಬಗ್ಗೆ ತುಸು ಬೆಳಕು ಚೆಲ್ಲುವ ಯತ್ನ ಈ ಲೇಖನದಲ್ಲಿದೆ.

ಕಿತ್ತೂರು ಸಂಸ್ಥಾನವು ವಿಜಯನಗರೋತ್ತರ ಕಾಲಘಟ್ಟದಲ್ಲಿ ಕಂಡುಬರುವ ಸಂಸ್ಥಾನವಾಗಿದೆ. 1585ರಿಂದ 1824ರವರೆಗೆ ಅಂದರೆ 239 ವರ್ಷಗಳಕಾಲ 12 ಜನ ಅರಸರು ರಾಜ್ಯಭಾರ ಮಾಡಿದ್ದಾರೆ. ಈ ಕಿತ್ತೂರು ರಾಜ್ಯವನ್ನು ಮೊದಲು ಆಳಿದವರು 4ನೆಯ ಶತಮಾನದಲ್ಲಿ ಕದಂಬರು, 6ನೇ ಶತಮಾನದಲ್ಲಿ ಬದಾಮಿ ಚಾಲುಕ್ಯರು, 8ನೇ ಶತಮಾನದಲ್ಲಿ ರಾಷ್ಟ್ರಕೂಟರು, 10ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರು ಮತ್ತು ಸೇವಣರು. 16–18ನೇ ಶತಮಾನದಲ್ಲಿ ಕಿತ್ತೂರು ಸಂಸ್ಥಾನ.

ಸ್ವತಂತ್ರಪೂರ್ವ ಭಾರತದಲ್ಲಿ 568 ಸಣ್ಣ ದೊಡ್ಡ ರಾಜ್ಯಸಂಸ್ಥಾನಗಳಿದ್ದವು. ಆದರೆ, ಕರ್ನಾಟಕದಲ್ಲಿ 15 ಮುಖ್ಯ ಸಂಸ್ಥಾನಗಳಿದ್ದವು. ಅದರಲ್ಲಿ ಬೆಳಗಾವಿ ಜಿಲ್ಲೆಯ ಕಿತ್ತೂರು ಸಂಸ್ಥಾನವು ಒಂದು ಆಗಿತ್ತು. ಕಿತ್ತೂರು, ಬೆಳವಡಿ, ವಂಟಮುರಿ, ರಾಮದುರ್ಗ ಸಂಸ್ಥಾನಗಳಲ್ಲಿ 120 ದೇಶಗತಿ ಮನೆತನವು ಇದ್ದವು. ಕಿತ್ತೂರು 800 ಹಳ್ಳಿಗಳನ್ನು ಒಳಗೊಂಡ ಸಂಸ್ಥಾನವಾಗಿತ್ತು.

ಕಿತ್ತೂರು ಸಂಸ್ಥಾನದ ಮೂಲ ಸಂಸ್ಥಾಪಕರೆಂದರೆ ಹಿರಿಮಲ್ಲಪ್ಪ ಶೆಟ್ಟಿ ಮತ್ತು ಕಿರಿಮಲ್ಲಪ್ಪ ಶೆಟ್ಟಿ ಇವರು ಸಂಪಗಾಂವ ಗ್ರಾಮವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಇಂದಿನ ವಿಜಯಪುರದ ಅಂದಿನ ಅಸದಖಾನ ಎಂಬ ಅರಸನಿಗೆ ಯುದ್ಧ ಸಾಮಗ್ರಿಗಳನ್ನು ಪೂರೈಸುತ್ತಿದ್ದರು. ಮುಂದೆ, 1660ರಿಂದ 1691ರವರೆಗೆ ಅಲ್ಲಪ್ಪಗೌಡ ಸರದೇಸಾಯಿ ಎಂಬ ಅರಸನು 5ನೇ ಅರಸನಾಗಿ ಕಿತ್ತೂರು ಸಂಸ್ಥಾನದ ರಾಜ್ಯಭಾರ ಮಾಡಿದನು. ಆತ, ತನ್ನ ಕಾಲಾವಧಿಯಲ್ಲಿ ಕಿತ್ತೂರು ಸಂಸ್ಥಾನದ ರಾಜಧಾನಿಯನ್ನು ಸಂಪಗಾಂವದಿಂದ ಕಿತ್ತೂರಿಗೆ ವರ್ಗಾಯಿಸಿಕೊಳ್ಳುತ್ತಾನೆ. ಅಲ್ಲಪ್ಪಗೌಡ ಸರದೇಸಾಯಿ ಕಿತ್ತೂರಿನಲ್ಲಿ ಭವ್ಯವಾದ ಅರಮನೆಯೊಂದನ್ನು ನಿರ್ಮಿಸಿದ್ದು ಆತನ ಆಡಳಿತಕ್ರಮಕ್ಕೆ ಸಾಕ್ಷಿಯಾಗಿದೆ.

12ನೇ ಅರಸನಾಗಿ ಮಲ್ಲಸರ್ಜನ ಮಗನಾದ ಶಿವಲಿಂಗ ರುದ್ರಸರ್ಜನು 1816 ರಿಂದ 1824ರವರೆಗೆ ಆಳ್ವಿಕೆ ಮಾಡುತ್ತಾನೆ. ಆದರೆ, ಕೆಲವರ್ಷಗಳಲ್ಲಿಯೇ ಕ್ಷಯರೋಗದಿಂದ ಅನಾರೋಗ್ಯಪೀಡಿತನಾಗಿ ಅಸುನೀಗಿದ್ದರಿಂದ ಮುಂದೆ ಮಲ್ಲಸರ್ಜನ ಕಿರಿಯ ಮಡದಿಯಾದ ಚೆನ್ನಮ್ಮ ಕಿತ್ತೂರು ಸಂಸ್ಥಾನದ ಉತ್ತರಾಧಿಕಾರಿಯಾಗಿ ಬೆಳಗಾವಿ ತಾಲೂಕಿನ ಮಾಸ್ತಮರಡಿಯ ಗೌಡರಮಗ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಳ್ಳುತ್ತಾಳೆ. ಆದರೆ, ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಬ್ರಿಟೀಷರು ಬಲವಾಗಿ ಪ್ರಯೋಗಿಸಿದಾಗ ಸಹಜವಾಗಿ ಚೆನ್ನಮ್ಮ ಕೆರಳಿ ಕೆಚ್ಚೆದೆಯಿಂದ ಹೋರಾಡಲು

ಮುಂದಾಗುತ್ತಾಳೆ. ದತ್ತುಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿ ಮತ್ತು ಬ್ರಿಟೀಷ ರಾಜ್ಯ ವಿಸ್ತರಣೆ ನೀತಿಯ ವಿರುದ್ಧ ಮೊಟ್ಟಮೊದಲು ಬಂಡಾಯವೆದ್ದಿದ್ದು ಝಾನ್ಸಿರಾಣಿ ಲಕ್ಷ್ಮೀಬಾಯಿ ಎಂಬ ಮಾತು ನಾವು ಕೇಳಿದ್ದೇವೆ. ಆದರೆ, ಅವಳಿಗಿಂತ 33 ವರ್ಷಗಳ ಮೊದಲೇ ಬ್ರಿಟೀಷರ ವಿರುದ್ಧ ದನಿ ಎತ್ತಿದ ವೀರರಾಣಿ ಎಂದರೆ ಕಿತ್ತೂರು ರಾಣಿ ಚೆನ್ನಮ್ಮ ಎಂಬುದಾಗಿ ನಮಗೆ ತಿಳಿದುಬರುತ್ತದೆ.

ಪತಿ ಮಲ್ಲಸರ್ಜನು ಮರಣ ಹೊಂದಿದ ನಂತರ, ಚೆನ್ನಮ್ಮ ಚಿಂತಾಕ್ರಾಂತಳಾಗುತ್ತಾಳೆ ಅವಳ ದುಃಖದ ಪರಿ ಮನಮಿಡಿಯುತ್ತದೆ. ಇದನ್ನು ಲಾವಣಿಕಾರರು ಕಾವ್ಯರೂಪದಲ್ಲಿ ಸೆರೆ ಹಿಡಿದ ಬಗೆ ಸುಂದರವಾಗಿದೆ.

**ಬೋರ್ಯಾಡಿ ಚೆನ್ನಮ್ಮ ಮಾಡ್ಯಾಳೋ ದುಃಖ**
**ಅರಮನೆಯವರಿಗೆಲ್ಲ ತಪ್ಪಿತೋ ದಿಕ್ಕ**

ಪತಿ ಮಲ್ಲಸರ್ಜನು ಚೆನ್ನಮ್ಮನ ಕನಸಲ್ಲಿ ಬಂದುಹೇಳಿದ ಮಾತುಗಳು ಚೆನ್ನಮ್ಮನನ್ನು ಯುದ್ಧಕ್ಕೆ ಅಣಿ ಮಾಡುತ್ತವೆ ಎಂಬ ಕವಿಯ ಸಾಲುಗಳು ಹೀಗೀವೆ.

**ಮಲಿಗಿಯ ನನ್ನ ಮಡದಿ**
**ಕುಂತಿಯ ನನ್ನ ಮಡದಿ**
**ಲಾಲಿಸಿ ಕೇಳ ನನ್ನ ಮಾತ ನನ್ನ ಸತಿ**
**ಚಿತ್ತಿಟ್ಟ ಕೇಳ ನನ್ನ ಮಾತ**
**ಹೊಟ್ಟೀಯ ಮಗನಿದ್ರ ಬೊಟ್ಟು ಮಾಡದ ಮುನ್ನ**
**ರಣದಾಗ ಈಸು ಬೀಳುತ್ತಿದ್ದ ನನ್ನ ಮಡದಿ**
**ಗಂಡಾಗಿ ಮಾಡ ಕಾಳಗ**

ಗಂಡನ ಆಸೆಯಂತೆ ಚೆನ್ನಮ್ಮ ಯುದ್ಧಕ್ಕೆ ಸನ್ನದಳಾಗುತ್ತಾಳೆ. ಚೆನ್ನಮ್ಮ ಸೌಜನ್ಯದಲ್ಲಿ ಸ್ತ್ರೀ ಆದರೆ ಪರಾಕ್ರಮದಲ್ಲಿ ಪುರುಷರನ್ನೇ ಮೀರಿಸುವ ಶೌರ್ಯ ಸಾಹಸವನ್ನು ಹೊಂದಿದವಳು. ಚೆನ್ನಮ್ಮ ಯುದ್ಧಕ್ಕೆ ಹೇಗೆ ಸಿದ್ಧಳಾದಳು ಎಂಬ ಪರಿಯನ್ನು ಚಿತ್ರಿಸಿದ ಲಾವಣಿಕಾರನ ಮಾತುಗಳು ಅವಳ ಯುದ್ಧೋತ್ಸಾಹವನ್ನು ಪ್ರತಿಬಿಂಬಿಸುತ್ತವೆ.

**ಕಿತ್ತೂರು ಚಾಮುಂಡಿ ಹತ್ತಿ ಬತ್ತಲಗುದುರಿ,**
**ಕುತ್ತು ತಂದಾಳೋ ವೈರಿಗೆ ಗಂಡಸೂದ,**
**ಗೊತ್ತಿಗೆ ಹಚ್ಯಾಳೋ ರಣದಾಗಾ**

ಚೆನ್ನಮ್ಮ ಪ್ರಾಣದ ಹಂಗನ್ನು ತೊರೆದು ವೀರಾವೇಶದಿಂದ ಹೋರಾಡುತ್ತಾಳೆ. ಹೆಣ್ಣು ಅಬಲೆಯಲ್ಲ ಸಬಲೆ ಎಂಬ ಮಾತನ್ನು ಸತ್ಯ ಮಾಡಿ ತೋರಿಸುತ್ತಾಳೆ. ಚೆನ್ನಮ್ಮಳು ಅಶ್ವಾರೋಹಿಯಾಗಿ ಖಡ್ಗವನ್ನು ಹಿಡಿದು ರಣರಂಗಕ್ಕೆ ಧುಮುಕಿದರೆ ವೈರಿಗಳ ಸಂಹಾರ ಆಗುವಂತಿತ್ತು. ಅವಳ ಯುದ್ಧದ ವೈಖರಿಯನ್ನು ಕಂಡು ಲಾವಣಿಕಾರರು ಹೀಗೆ ಹಾಡುತ್ತಾರೆ.

**ಚಂಡಿಯೋ ಚೌಡಿಯೋ**
**ಮಾರಿಯೋ ಮಸಣಿಯೋ**
**ಖಂಡಿತ ಮಾನವಳಿವಳಲ್ಲ**
**ಪುಂಡ ರಕ್ಕಸರ ತರಿವಳು,**
**ಚಾಮುಂಡಿಯೇ ಇವಳು ಬೇರಲ್ಲ**

ಕಪ್ಪ ಕೇಳಲು ಬಂದ ಬ್ರಿಟೀಷ ಕುನ್ನಿಗಳಿಗೆ ಚೆನ್ನಮ್ಮಳು ತಕ್ಕ ಉತ್ತರವನ್ನು ನೀಡುತ್ತಾಳೆ.

**ಕಪ್ಪ ಕೊಡಬೇಕೆ ಕಪ್ಪ**

**ನಿಮಗೇಕೆ ಕೊಡಬೇಕು ಕಪ್ಪ?**

**ನೀವೇನು ಉತ್ತಿದ್ದೀರಾ, ಬಿತ್ತಿದ್ದೀರಾ ನಿಮಗೇಕೆ ಕೊಡಬೇಕು ಕಪ್ಪ?**

**ಕಪ್ಪ ಕಾಣಿಕೆ ಬೇಡಾಕ ಬಂದೀರಿ,**

**ನೀವೇನು ನಮ್ಮ ವಂಶಕೆ ಹುಟ್ಟಿರೇನು?**

**ಹಣಕೊಟ್ಟ ನಿಮ್ಮನ್ನು ಸಂತೈಸಕಾ**

**ಬೆನ್ನಿಗೆ ಬಿದ್ದ ಅಣ್ಣ ತಮ್ಮರೇನು?**

**ಹಿಂದೂಸ್ಥಾನ ಬಿಟ್ಟು ಎದ್ದೇಳ್ರಿ**

ಇಲ್ಲಿ ಕುತೂಹಲಕರ ಸಂಗತಿಯೆಂದರೆ, ಚೆನ್ನಮ್ಮ ಇಡೀ ಹಿಂದೂಸ್ತಾನದ ಮಾತನ್ನು ಹೇಳಿದ್ದಳೋ ಇಲ್ಲವೋ ಎನ್ನುವುದು ಗೊತ್ತಿಲ್ಲ. ಆದರೆ ನಂತರದ ಕಾಲಘಟ್ಟದಲ್ಲಿ ಲಾವಣಿ ಹಾಡುವವರಿಗೆ ಬ್ರಿಟಿಷರು ತೊಲಗಬೇಕೆಂಬ ರಾಷ್ಟ್ರೀಯತೆಯ ಭಾವನೆ ಗಟ್ಟಿಯಾಗಿಯೇ ಇತ್ತು. ಸ್ವಾತಂತ್ರ್ಯ ಎನ್ನುವ ಪದವನ್ನೂ ಲಾವಣಿಕಾರರು ಬಳಸುತ್ತಾರೆ.

**ಅವಳದಾಯಿತು ಒಂದೇ ಮಂತ್ರ**

**ನಮ್ಮ ನೆಲದಿ ನಾವೇ ಸ್ವತಂತ್ರ**

**ರಾಯಣ್ಣ ಬಾಳಣ್ಣಂತವರು**

**ಸಾವಿರ ಆನೆಯ ಬಲದವರು**

ಕಿತ್ತೂರು ನಮ್ಮದು ನಾವು ಈನೆಲದ ಒಡೆಯರು ಎಂಬ ಸ್ಪೂರ್ತಿದಾಯಕ ಮಾತುಗಳನ್ನು ಆಡುತ್ತಾ, ಜೀವದ ಹಂಗು ತೊರೆದು ಹೋರಾಡುವಂತೆ ಹುರಿದುಂಬಿಸುತ್ತಾಳೆ. ಅನುಪಮ ದೇಶಭಕ್ತರಾದ ಶೂರ ಸಂಗೊಳ್ಳಿ ರಾಯಣ್ಣ, ಅಮಟೂರು ಬಾಳಣ್ಣ ಮತ್ತು ಬಿಚ್ಚುಗತ್ತಿ ಚನ್ನಬಸಪ್ಪ, ಅವರಾದಿ ಈರಪ್ಪ, ತಿಗಡೊಳ್ಳಿ ಅಪ್ಪೋಜಿ ಮುಂತಾದ ಮಹಾಸೇನಾನಿಗಳ ಬೆಂಬಲದಿಂದ ಯುದ್ಧಕ್ಕೆ ಸಿದ್ದಳಾಗುತ್ತಾಳೆ. 1824 ಅಕ್ಟೋಬರ್ 21ರಂದು ಬೊಕ್ಕಸದ ಸುರಕ್ಷಿತ ಪತ್ರಕ್ಕೆ ಸಹಿ ಹಾಕುವಂತೆ ಥ್ಯಾಕರೇ ಸೂಚಿಸುತ್ತಾನೆ. ಆದರೆ, ಚೆನ್ನಮ್ಮ ಮತ್ತುಮಂತ್ರಿಗಳು ಥ್ಯಾಕರೆಯ ಈ ನೀತಿಯನ್ನು ನೇರವಾಗಿ ನಿರಾಕರಿಸುತ್ತಾರೆ. ಇದರಿಂದ ಕುಪಿತನಾದ ಥ್ಯಾಕರೆ 1824 ಅಕ್ಟೋಬರ್ 23ರಂದು ಕಿತ್ತೂರು ಕೋಟೆಯ ಮೇಲೆ ತೋಪು ಹಾರಿಸಲು ತನ್ನ ಸೈನ್ಯದ ಮುಖ್ಯಾಧಿಕಾರಿಗೆ ನಿರ್ದೇಶಿಸುತ್ತಾನೆ.

**ಸುತ್ತೂರ ಒಡತ್ಯಾಗಿ,**

**ಕತ್ತಿಕವಟಗಳ ಉಡುಪುಟ್ಟು,**

**ಅಬ್ಬರದಿ ಬತ್ತಲಗುದುರಿಯ ಜಗಿಯುತ್ತಾಳೆ**

ಚೆನ್ನಮ್ಮನ ಸೈನಿಕರು ಥ್ಯಾಕರೆಯ ಮುಂಡವನ್ನು ಭರ್ಚಿಗೆ ಸಿಕ್ಕಿಸಿ ರಣರಂಗದ ತುಂಬ ಓಡಾಡತೊಡಗಿದರು. ಹೀಗೆ 38 ಗಂಟೆಗಳ ಕಾಲ ನಡೆದ ಯುದ್ಧದಲ್ಲಿ ಸ್ಟೀಫನ್ಸನ್ ಮೊದಲಾಗಿ ಬ್ರಿಟಿಷ್ ಸೈನಿಕರನ್ನು ಬಂಧಿಸಿದರು. ಗೆಲವು ಸಾಧಿಸಿದ ಕಿತ್ತೂರಿನ ಸೈನ್ಯ ಚೆನ್ನಾಮಾಜಿಯ ಸಮ್ಮುಖದಲ್ಲಿ ವಿಜಯೋತ್ಸವನ್ನು ಆಚರಿಸಲು ಆರಂಭಿಸಿತು. ಆ ವಿಜೃಂಭಣೆಯ ಸವಿನೆನಪೇ ನಾಡಹಬ್ಬವಾಗಿ ಆಚರಿಸಲ್ಪಡುತ್ತಿರುವ ಕಿತ್ತೂರು ಉತ್ಸವ.

ಅವಮಾನಕ್ಕೊಳಗಾದ ಬ್ರಿಟೀಷರು 1824, ಡಿಸೆಂಬರ್ 22ರಂದು ಚಾರ್ಲಿ

ಚಾಪ್ಲಿನ ನೇತೃತ್ವದಲ್ಲಿ ಅಪಾರ ಸೈನ್ಯದೊಂದಿಗೆ ಕಿತ್ತೂರಿನ ಮೇಲೆ ದಾಳಿ ಮಾಡಿದರು. ನಮ್ಮವರೇ ಆದ ದೇಶದ್ರೋಹಿಗಳು ಕೊಣ್ಣೂರು ವೀರಸಂಗಪ್ಪ ಮತ್ತು ಊದಕಡಿ ಮಲ್ಲಪ್ಪ ಮದ್ದಿನಲ್ಲಿ ಲದ್ದಿಯನ್ನು ಬೆರೆಸಿ ಚೆನ್ನಮ್ಮ ಸೋಲುವಂತೆ ಮಾಡಿದರು. ಆಗ ಆಂಗ್ಲರು ಚೆನ್ನಮ್ಮನ್ನು ಬಂಧಿಸಿ ಬೈಲಹೊಂಗಲದ ಬಂಧಿಖಾನೆಯಲ್ಲಿ ಇಟ್ಟರು.

ನಂತರ, ಕಿತ್ತೂರು ಸೈನ್ಯದ ಮುಂದಾಳತ್ವವನ್ನು ಚೆನ್ನಮ್ಮಾಜಿಯ ಬಲಗೈ ಬಂಟನಾದ ಶೂರ ಸಂಗೊಳ್ಳಿರಾಯಣ್ಣನು ವಹಿಸಿಕೊಂಡನು. ಈತ ಬ್ರಿಟೀಷರ ಪಾಲಿಗೆ ಸಿಂಹಸ್ವಪ್ನನಾಗಿದ್ದನು. ಬ್ರಿಟೀಷರು ರಾಯಣ್ಣನಿಗೆ ಎಷ್ಟೇ ಬೆದರಿಕೆ ಹಾಕಿದರೂ ರಾಯಣ್ಣನು,

**ಹೆದರಲಿಲ್ಲ ಬೆದರಲಿಲ್ಲ**
**ಸೋಲಲಿಲ್ಲ ಸೊರಗಲಿಲ್ಲ**
**ಮಿಂಚಿನಂತೆ ಗುಡುಗಿದ**
**ಸಿಂಹದಂತೆ ಎರಗಿದ**
**ಕೆಂಪು ಮೂತಿಗಳು ಮೌನವಾದವು**
**ದಿಕ್ಕು ತಪ್ಪಿ ಓಡಿಹೋದವು**
**ರಾಯಣ್ಣನ ನುಡಿಯ ರಭಸಕ್ಕೆ**
**ಗಟ್ಟಿ ಏಟಿನ ಹೊಡೆತಕ್ಕೆ**

ರಾಯಣ್ಣನು ತನ್ನ ಸೈನ್ಯದಲ್ಲಿ ಶಿಸ್ತನ್ನು ಕಾಪಾಡಿಕೊಂಡು ಸೈನಿಕರಲ್ಲಿ ದೇಶಾಭಿಮಾನದ ಕಿಚ್ಚನ್ನು ಹೊತ್ತಿಸುತ್ತಾ ಸಾಗುತ್ತಾನೆ. ಮುಂದೆ ನಮ್ಮವರೇ ದೇಶದ್ರೋಹಿಗಳ ಮೋಸಕ್ಕೆ ಬಲಿಯಾಗಿ 1829ರಲ್ಲಿ ಗಲ್ಲಿಗೆ ಗುರಿಯಾಗುತ್ತಾನೆ.

ರಾಯಣ್ಣನನ್ನು ಗಲ್ಲಿಗೆ ಏರಿಸುವ ಸಂದರ್ಭದಲ್ಲಿ ರಾಯಣ್ಣನು ಬ್ರಿಟೀಷರನ್ನು ಕುರಿತು "ನನ್ನಂತಹ ಒಬ್ಬ ರಾಯಣ್ಣನನ್ನು ಕೊಂದರೇನು? ಭಾರತದ ಪ್ರತಿ ಮನೆ ಮನೆಯಲ್ಲಿ ನನ್ನಂತಹ ರಾಯಣ್ಣ ಹುಟ್ಟಿ ಬರುತ್ತಾರೆ. ನಿಮ್ಮ ಅಟ್ಟಹಾಸವನ್ನು ಸರ್ವನಾಶ ಮಾಡಿಯೇ ಮಾಡುತ್ತಾರೆ" ಎಂದು ಹೇಳಿದ ಮಾತು ಮುಂದೊಂದು ದಿನ ನಿಜವಾಗುತ್ತದೆ.

ರಾಯಣ್ಣನನ್ನು ಬಂಧಿಸಿದ ಸುದ್ದಿ ಕೇಳಿದ ಚೆನ್ನಮ್ಮಾಜಿ ಕಣ್ಣೀರಿಡುತ್ತಾಳೆ.

**ಹೊಂಗಲದ ಮಠದಾಗ**
**ಲಿಂಗಪೂಜೆಯ ಮಾಡಿ**
**ಭಂಗವಾದುದೆಂದು ಎದೆಗುಂದಿ**

ಚೆನ್ನಮ್ಮಾಜಿಯು 1829 ಫೆಬ್ರುವರಿ 02ರಂದು ಬೈಲಹೊಂಗಲದ ಸೆರೆಮನೆಯಲ್ಲಿಯೇ ಮರಣ ಹೊಂದುತ್ತಾಳೆ. ಚೆನ್ನಮ್ಮಾಜಿಯು ಭೌತಿಕವಾಗಿ ನಮ್ಮ ಮುಂದೆ ಇಲ್ಲದಿದ್ದರೂ ಭಾರತೀಯರು ಅನುಭವಿಸುತ್ತಿರುವ ಸಡಗರದ ಸಂಭ್ರಮದ ಸ್ವಾತಂತ್ರ್ಯದ ಪ್ರತಿ ಉಸಿರಿನಲ್ಲಿ ಜೀವಂತವಾಗಿದ್ದಾಳೆ ಎಂದರೆ ಅತಿಶಯೋಕ್ತಿಯಾಗಲಾರದು.

**ಆಕರ ಗ್ರಂಥಗಳು**


1. ತಲ್ಲೂರು ರಾಯಣಗೌಡರು, ಕಿತ್ತೂರು ಬಂಡಾಯ–ಕಿತ್ತೂರು ರಾಣಿ ಚೆನ್ನಮ್ಮನ ಇತಿಹಾಸ ಮಂಡಲ– ಬೈಲಹೊಂಗಲ, 1947
2. ಗ.ಸ. ಹಾಳಪ್ಪ ಭಾರತ ಸ್ವಾತಂತ್ರದ ಬೆಳ್ಳಿಚುಕ್ಕಿ–ಕಿತ್ತೂರು ರಾಣಿ ಚೆನ್ನಮ್ಮ ಕರ್ನಾಟಕ

ಸಹಕಾರಿ ಸಂಗ್ರಾಮ ಮೈಸೂರು ಸಂಸ್ಥಾನದ ಸರಕಾರ–1966
3. ನಿಂಗಣ್ಣ ಸಣ್ಣಕ್ಕಿ, ಶಿವಲಿಂಗಪ್ಪ ಬಾವಿಕಟ್ಟಿ – ಜಾನಪದದಲ್ಲಿ ಕಿತ್ತೂರು ಶ್ರೀ ಗಿರಿ ಪ್ರಕಾಶನ ಅಕ್ಕತಂಗೀರಹಾಳ –1976
4. ವಿ.ಜಿ. ಮಾರಿಹಾಳ–ಕಿತ್ತೂರಿನ ಇತಿಹಾಸ, ಕವಿವಿ ಧಾರವಾಡ 1976
5. ಡಾ. ಎಂ.ಎಂ. ಕಲಬುರ್ಗಿ, ಡಾ. ಚೆನ್ನಕ್ಕ ಪಾವಟೆ(ಸಂ.) ಕಿತ್ತೂರು ಸಂಸ್ಥಾನ ಸಾಹಿತ್ಯ ವೀರಶೈವ ಅಧ್ಯಯನ ಸಂಸ್ಥೆ ಶ್ರೀ ತೋಂಟಧಾರ್ಯ ಸಂಸ್ಥಾನ ಮಠ, ಡಂಬಳ–ಗದಗ 1998)
6. ಜಿ.ಬಿ. ಕೊಂಗವಾಡ ಕಿತ್ತೂರು ಇತಿಹಾಸ (ಸಂ.) ಬೆಳಗಾವಿ 1998
7. ಡಾ. ಚೆನ್ನಕ್ಕ ಪಾವಟೆ ಕಿತ್ತೂರು ಕಥನ–ಕನ್ನಡ ಅಧ್ಯಯನ ವಿಭಾಗ ಕವಿವಿ ಧಾರವಾಡ ಪ್ರಕಾಶನ–ಚಿನ್ನಗಂಗ ಪ್ರಕಾಶನ ಧಾರವಾಡ
8. ಡಾ. ಸೀಗಿಹಳ್ಳಿ ಬಾಳಣ್ಣ (ಸಂ.) ಬೆಳಗಾವಿ ಜಿಲ್ಲೆಯ ವೀರಶೈವ ದೇಶಗತಿಗಳು
9. ಕಿತ್ತೂರು ನಾಡಿನ ಇತಿಹಾಸ ಹಾಗೂ ಸಂಸ್ಕೃತಿ–ಪ್ರಸಾರರಂಗ ಕವಿವಿ ಧಾರವಾಡ
10. ಎಸ್. ಶೆಟ್ಟರ–ಕಿತ್ತೂರು ಸಂಸ್ಥಾನದ ಇತಿಹಾಸ

❖❖❖

ಬದುಕು ಬವಣೆಗಳ ನಶ್ವರ ಜೀವಿತ
ಎಂಬುದು ನಿತ್ಯದ ಕೂಗು
ನಿರ್ಲೇಪದಲಿ ಬದುಕಿದ ಜೀವಕೆ
ಇಹವೆಂಬುದು ಹೂ ಹಗುರು

# ಸಂಸ್ಕೃತಿಯ ಬಿಂಬವಾಗಿ ಗಾದೆ

**ಡಾ. ಜಯಪ್ಪ ಎನ್.**
ಆಂಗ್ಲ ಭಾಷೆ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜು, ಚಾಮರಾಜಪೇಟೆ. ಬೆಂಗಳೂರು–560026

ಗಾದೆಗಳು ಜನಪದ ಸಂಸ್ಕೃತಿಯ ಜೀವಂತಿಕೆಯ ಲಕ್ಷಣ. ಬಹುಶಃ ಗಾದೆಗಳಿಲ್ಲದ ಸಂಸ್ಕೃತಿಯೇ ಇರಲಾರದು. ಯಾಕೆಂದರೆ ಭಾಷೆಯಿಲ್ಲದ ಸಂಸ್ಕೃತಿ ಇಲ್ಲ. ಆಡು ಮಾತು ಅಥವಾ ಆಡುಭಾಷೆ ಇದ್ದಲ್ಲಿ ಗಾದೆ ಇದ್ದೇ ಇರುತ್ತದೆ. ಜನಜೀವನ ಬದಲಾದಂತೆ ಆಧುನಿಕವಾಗುತ್ತ ಹೋದಂತೆ ಹೊಸಹೊಸ ಗಾದೆಗಳೂ ಸೃಷ್ಟಿಯಾಗುತ್ತವೆ! "ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ" –ಎಂಬ ಗಾದೆಮಾತಿನಂತೆ ಭಾರತೀಯ ಪರಂಪರೆಯಲ್ಲಿ ಗಾದೆಗಳಿಗೆ ಅವುಗಳದೇ ಆದ ಮಹತ್ವವಿದೆ. ಸಾಂಸ್ಕೃತಿಕ ಸ್ಥಿತ್ಯಂತರವನ್ನು ಕೂಡ ಗಾದೆಗಳು ಸೂಚಿಸುತ್ತವೆ. ಅಂದರೆ ಗಾದೆಗಳ ಬಳಕೆಯಲ್ಲಿ ಆಗುವ ಬದಲಾವಣೆಗಳು ಸಂಸ್ಕೃತಿಯಲ್ಲಿ ಮತ್ತು ಜನರ ನಂಬಿಕೆ–ದೃಷ್ಟಿಕೋನಗಳಲ್ಲಿ ಆದ ಬದಲಾವಣೆಗಳನ್ನೂ ಸೂಚಿಸುತ್ತವೆ.

ಗಾದೆಗಳ ಉಗಮ ಮತ್ತು ವಿಕಾಸವನ್ನು ಕುರಿತು ಜನಪದ ಕ್ಷೇತ್ರದಲ್ಲಿ ಅಧ್ಯಯನಗಳಾಗಿವೆ. ಗಾದೆಗಳು ಚಿಕ್ಕ ಹಾಗೂ ವಾಕ್ಚತುರ ಸಾಂಪ್ರದಾಯಿಕ ಅಭಿವ್ಯಕ್ತಿಗಳು. ದೈನಂದಿನ ಚಟುವಟಿಕೆಗಳಲ್ಲಿ ಪ್ರತಿಯೊಬ್ಬರ ಮಾತಿನಲ್ಲೂ ಅವು ಪ್ರಯೋಗಗೊಳ್ಳುತ್ತವೆ. ಮಾತಿಗೆ ಮತ್ತು ಬರಹಕ್ಕೆ ಗಾದೆಗಳು ಅಲಂಕಾರವನ್ನು ನೀಡುತ್ತವೆ. ಪಂಪನಂತಹ ಅನೇಕ ಕವಿಗಳು ಕೂಡ ಆ ಕಾಲದಲ್ಲಿ ಪ್ರಚಲಿತವಿದ್ದ ಗಾದೆಗಳನ್ನು ಕಾವ್ಯದೊಳಗೆ ಬಳಸಿದ್ದುಂಟು. ಉದಾಹರಣೆಗೆ 'ಸೆಟ್ಟಿಯ ಬಳ್ಳಂ ಕಿರಿದು' ಎಂಬ ಸಾಲು ಪಂಪಭಾರತದಲ್ಲಿ ಬರುತ್ತದೆ. ಇದು ಗಾದೆ ಮಾತೊಂದರ ಭಾಗವಾಗಿದೆ. ವ್ಯಾಪಾರದ ಬಗ್ಗೆ ಮತ್ತು ವ್ಯಾಪಾರಿಗಳ ಬಗ್ಗೆ ಜನಸಾಮಾನ್ಯರಲ್ಲಿ ಆ ಕಾಲದಲ್ಲಿ ಇದ್ದ ಭಾವನೆಯನ್ನು ಈ ಗಾದೆಮಾತು ಪ್ರತಿಬಿಂಬಿಸುತ್ತದೆ ಎನ್ನಬಹುದು.

ಸಮತೂಕ, ಪ್ರಾಸ, ಸ್ವರಾನುಪ್ರಾಸ, ಸಾರಸಂಗ್ರಹತನ ಗಾದೆಗಳಲ್ಲಿ ಮುಖ್ಯವಾದವು. ಭಾಷಿಕ ಬಗೆಗೆಗಳೆಂದೇ ಗುರುತಿಸಿರುವ ಕೆಲವು ಗಾದೆಗಳು ಕಥೆಗಳಿಂದ ಅಥವಾ ಕಥೆಗಳ ಆಧಾರದಿಂದ ಹುಟ್ಟುತ್ತವೆಂದು ಹೇಳಬಹುದು. ಭಾಗಶಃವಾಗಿಯೋ ಪೂರ್ತಿಯಾಗಿಯೋ ಕಥಾಂಶವನ್ನು ಹೊಂದಿರುವ ಗಾದೆಗಳೂ ಇವೆ. ಪುರಾಣ, ಇತಿಹಾಸಗಳು ಕೂಡ ಗಾದೆಗಳ ಉಗಮಕ್ಕೆ ಕಾರಣವಾದವು. ಬೈಬಲ್, ರಾಮಾಯಣ, ಮಹಾಭಾರತ, ಪಂಚತಂತ್ರ ಮೊದಲಾದವು ಅನೇಕ ಗಾದೆಗಳು ಉಗಮ ಹೊಂದಲು ನೆರವಾದವು ಉದಾ. ಮಣ್ಣಿನಿಂದ ಕೌರವ ಕೆಟ್ಟ, ಹೆಣ್ಣಿನಿಂದ ರಾವಣ ಕೆಟ್ಟ, ಅಳಿಲ ಭಕ್ತಿ ಮಳಲ ಸೇವೆ. ಕೆಲವು ಗಾದೆಗಳು ಕಥೆಗಳ ಬಾಲವಾಗಿ ಹುಟ್ಟಿಕೊಂಡಿವೆ. ಕುರುಡರು ಆನೆ ನೋಡಿದಂತೆ, ಸಿಕ್ಕದ ದ್ರಾಕ್ಷಿಯಲ್ಲ ಹುಳಿ–ಇವೇ ಮುಂತಾದವು ಅದಕ್ಕೆ ಒಳ್ಳೆಯ ಉದಾಹರಣೆಗಳು. ಕಥೆಗಳು, ಪುರಾಣಗಳು ಇವೆಲ್ಲ ಸಂಸ್ಕೃತಿಯೊಂದರ ಭಾಗವಾಗಿಯೇ ಹುಟ್ಟುವುದರಿಂದ ಗಾದೆಗಳೂ ಸಂಸ್ಕೃತಿಯ ಅಂಗವೇ ಆಗುತ್ತವೆ.

ತತ್ವಶಾಸ್ತ್ರಕ್ಕೂ ಗಾದೆಗೂ ಸಂಬಂಧ ಕಲ್ಪಿಸುವ ಯತ್ನಗಳೂ ಇವೆ. ಈ ಬಗೆಗೆ ಅರಿಸ್ಟಾಟಲ್ ಕೊಟ್ಟಿರುವ ವಿವರಣೆಯನ್ನು ಕುರಿತು ರಾಗೌ ಪ್ರತಿಕ್ರಿಯಿಸುವುದು ಹೀಗೆ – 'ಕ್ರಿಸ್ತಪೂರ್ವದ ಗ್ರೀಕ್ ಸಮಾಜದಲ್ಲಿ ತತ್ವಶಾಸ್ತ್ರ ಅತ್ಯಂತ ಸಾಮಾನ್ಯವಾಗಿ ಹೋಗಿದ್ದರಿಂದ ತತ್ವಶಾಸ್ತ್ರದ ಭೋಧನೆ ಚಿಂತನೆ ಶಿಕ್ಷಣಗಳಲ್ಲಿ ಪ್ರಚಲಿತ ಗಾದೆಗಳನ್ನು ಬಳಸುತ್ತಿರಬಹುದು, ಮಾತ್ರವಲ್ಲ, ಸೃಜಿಸಿ ತಾವೇ ಚಲಾವಣೆಗೆ ತಂದಿರಬಹುದು. ಅರಿಸ್ಟಾಟಲಾದಿ ಗ್ರೀಕ್ ತತ್ವಜ್ಞಾನಿಗಳಿಗೆ ಯಾವುದೇ ವಿಷಯವಾದರೂ ತಾತ್ವಿಕತೆಯ ದೃಷ್ಠಿಯಿಂದಲೇ ನೋಡುತ್ತಿದ್ದುದು ಅತ್ಯಂತ ವಾಡಿಕೆಯಾದ ವಿಷಯವಾಗಿದ್ದರಿಂದ ತತ್ವಶಾಸ್ತ್ರಕ್ಕೂ ಗಾದೆಗೂ ಸಂಬಂಧ ಕಲ್ಪಿಸುವುದಕ್ಕೆ ಕಾರಣವಿರಬಹುದೆಂದು ತೋರುತ್ತದೆ.'(ಪು. 82)

ಬಹು ಹಿಂದಿನಿಂದಲೂ ಗಾದೆಗಳು ಜನ ಬಳಕೆಯಲ್ಲಿದ್ದುದು ನಿಜ. ಪ್ರಾಚೀನ ಸಾಹಿತ್ಯ ಗ್ರಂಥಗಳಲ್ಲಿ. ಧರ್ಮಗ್ರಂಥಗಳಲ್ಲಿ ಮತ್ತು ಚರಿತ್ರ ಲೇಖನಗಳಲ್ಲಿ ಇವುಗಳ ಪ್ರಸ್ತಾಪವಿರುವುದೇ ಅದಕ್ಕೆ ಆಧಾರ. ಧರ್ಮೋಪದೇಶ ಮತ್ತು ಭಾಷಣಗಳಲ್ಲಿ ಇವುಗಳ ಉಪಯೋಗ ನಿಚ್ಚಳವಾಗಿರುವುದು ಕಂಡುಬರುತ್ತದೆ. ಭಾಷಣಕಲೆಯ ದೃಷ್ಟಿಯಿಂದ ಗಾದೆಗಳನ್ನು ಬಳಸುತ್ತಿದ್ದುದು ಸರ್ವೇಸಾಮಾನ್ಯವದ ಸಂಗತಿ. ಮಧ್ಯಕಾಲೀನ ಗ್ರಂಥಗಳಲ್ಲೂ ಗಾದೆಗಳಿವೆ; ವಿವಿಧ ಪ್ರಾಚೀನ ಪಠ್ಯಗಳಲ್ಲಿ ಗಾದೆಗಳು ಬಳಕೆಯಾಗಿವೆ.

ಸಾಮಾನ್ಯವಾಗಿ ನಾವು ಚರ್ಚಿಸುವುದಾದರೆ, ಗಾದೆಗಳಿಲ್ಲದ ದೇಶವಾಗಲಿ ಭಾಷೆಯಾಗಲಿ ಇಲ್ಲವೆಂದೇ ಹೇಳಬೇಕು. ಆದರೆ ಬೇರೆ ಬೇರೆ ದೇಶ ಹಾಗೂ ಭಾಷೆಗಳಲ್ಲಿ ಇರುವ ಗಾದೆಗಳ ನಡುವೆ ಸಾಮ್ಯತೆಯಿರುವುದು ಆಶ್ಚರ್ಯಕರವಾಗಿದೆ. ಒಂದೇ ಅರ್ಥ ಸೂಚಿಸುವ ಎಷ್ಟೋ ಸಮಾನ ಗಾದೆಗಳು ಪ್ರತೀ ಭಾಷೆಯಲ್ಲಿಯೂ ಕಾಣಸಿಗುತ್ತವೆ. ಕಾಲಾತೀತ, ಭಾಷಾತೀತವಾದ ಗುಣಾದರ್ಶಗಳು, ಆಶೋತ್ತರಗಳು, ಬಯಕೆ ಬೇಡಿಕೆಗಳು, ಜೀವನಮೌಲ್ಯಗಳು ಗಾದೆಗಳಲ್ಲಿ ಕಂಡುಬಂದ ಮಾತ್ರಕ್ಕೆ ಒಂದು ದೇಶದ ಗಾದೆ ಮತ್ತೊಂದು ದೇಶಕ್ಕೆ ಸಂಚಾರ ಕೈಗೊಂಡಿದೆ ಎಂದು ನಾವ್ಯಾರು ಭಾವಿಸುವುದು ಸಮಂಜಸವಲ್ಲ ಎಂಬುದನ್ನು ಸ್ಪಷ್ಟಪಡಿಸಲು ಗಾದೆಗಳ ವಿದ್ವಾಂಸನಾದ ಛಾಂಪಿಯನ್ ಎಂಬಾತನು ಗಾದೆಗಳ ಸಾಮ್ಯಕ್ಕೆ ಕಾರಣಗಳೇನೆಂದು ಹೀಗೆ ವಿವರಿಸಿದ್ದಾನೆ.

'ಗಾದೆಯ ಜ್ಞಾನ ಜಗತ್ತಿನಲ್ಲೆಲ್ಲ ಒಂದೆಯೇ, ಭಿನ್ನತೆಯೇನಿದ್ದರೂ ಅದರ ಪ್ರಕಟಣೆಯಲ್ಲಿ ಕಾಣುತ್ತದೆ. ಮಾನವರೆಲ್ಲಾ ಒಂದೇ ಬಣ್ಣದಿಂದ ಮಾಡಿದವರೇ. ಮೂಲಭೂತವಾಗಿ, ಪೌರಾತ್ಯ ಪಾಶ್ಚಾತ್ಯರೆನ್ನದೆ, ಬಿಳಿಯ ಕರಿಯರೆನ್ನದೆ ಮನೋವೈಜ್ಞಾನಿಕವಾಗಿ ಅವರೆಲ್ಲ ಒಂದೇ ಆಗಿದ್ದಾರೆ. ಮೂಲಭೂತ ವಿಷಯಗಳಾದ ಪ್ರೀತಿ, ಹಸಿವು ಮತ್ತು ಭಯಗಳು ಅಸಂಸ್ಕೃತ ಸುಸಂಸ್ಕೃತರೆನ್ನದೆ ಎಲ್ಲರಲ್ಲಿಯೂ ಸಮಾನವಾಗಿರುವ ಗುಣಗಳು. ವಾತಾವರಣವಾಗಲಿ ನಾಗರೀಕತೆಯಾಗಲಿ ಇವುಗಳ ಮೇಲೆ ಪ್ರಭಾವ ಬೀರಲಾರವು. ಮಾನವಕುಲದ ಈ ಮೂಲಭೂತ ಪ್ರವೃತ್ತಿಗಳನ್ನು ಯುಗ ಯುಗಗಳ ನಾಗರೀಕತೆಗಳಾವುವು ನಿವಾರಿಸಲಾರವು' (ಪುನರ್ ಉದ್ಧೃತ ಪು. 84)

ಈ ಮೇಲಿನ ಮಾತುಗಳನ್ನು ಗಮನಿಸಿದರೆ, ಸಾಮ್ಯಗಳ ಕಾರಣದಿಂದಲೇ ಒಂದು ದೇಶದಿಂದ ಮತ್ತೊಂದು ದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ಭಾಷೆಯಿಂದ

ಭಾಷೆಗೆ ಗಾದೆಗಳು ಸ್ವೀಕೃತವಾಗಿರಬೇಕೆಂಬ ಅಭಿಪ್ರಾಯ ಸರಿಯಾದುದಲ್ಲ ಎಂದು ರಾಗೌ ಕೂಡ ಹೇಳಿದ್ದಾರೆ.

ಇನ್ನು ಯಾವುದೇ ಜನಾಂಗದ ಆತ್ಮಚರಿತ್ರೆ ಗಾದೆಗಳಲ್ಲಿ ಗೋಚರಕ್ಕೆ ಬರುವುದರಿಂದ ರಾಷ್ಟ್ರದ ಜೀವನದಲ್ಲಿ ಗಾದೆಗಳು ವಹಿಸುವ ಪಾತ್ರ ಅಸಾಧಾರಣವಾದುದು. ತಲೆಮಾರುಗಳ ಸಾಮಾಜಿಕ ಚರಿತ್ರೆ ಅವುಗಳಲ್ಲಿ ತೆರೆದುಕೊಳ್ಳುವುದರಿಂದ ಕೂಡ ಗಾದೆಗಳು ಮಹತ್ವಪೂರ್ಣವೆನಿಸಿವೆ. ಇವು ಬದುಕಿನಲ್ಲಿ ಪ್ರತ್ಯಕ್ಷ ಪಾತ್ರ ವಹಿಸುವುದರಿಂದ ಅವುಗಳ ಮೌಲಿಕ ವಿವೇಚನೆ ಯಾವ ಕಾಲಕ್ಕೂ ಅತ್ಯಗತ್ಯ.

ಇನ್ನು ಗಾದೆಗಳ ಸಾಂಸ್ಕೃತಿಕ ಮೌಲ್ಯ ಅದ್ವಿತೀಯ ಎನಿಸಿದೆ. ಇಂದಿಗೂ ಜನಪದವನ್ನು ಆಳುತ್ತಿರುವುದು ಜನಪದ ಸಾಹಿತ್ಯವೇ. ಅವರ ಜೀವನ ಸಮಸ್ತವನ್ನೂ ಇನ್ನಿಲ್ಲದ ರೀತಿಯಲ್ಲಿ ಆವರಿಸಿಕೊಂಡಿರುವುದೂ ಅದುವೇ, ಜನಪರ ಸೃಷ್ಟಿ ಶಕ್ತಿಗೆ, ಅನ್ಯಾದೃಶ ಅನುಭವ ಜಗತ್ತಿಗೆ ದೀಪಸ್ತಂಭಗಳಾಗಿವೆ. ಮನುಷ್ಯನ ದೈನಿಕ ಜೀವನದಲ್ಲಿ ಬಿರಿದು ಬೆಳೆದು ನಿಂತಂತವು ಈ ಗಾದೆಗಳು. ಇವುಗಳಲ್ಲಿ ವ್ಯಕ್ತಗೊಳ್ಳುವ ಕಾವ್ಯ ಶಕ್ತಿ ಮತ್ತು ಸಂಸ್ಕೃತಿ ನಿಷ್ಠೆಯನ್ನು ಅನ್ಯಾದೃಶ ಎಂದೇ ಹೇಳಬೇಕು. ಅವುಗಳ ಸಾಹಿತ್ಯಿಕ ಮತ್ತು ಭಾಷಿಕ ಮೌಲ್ಯಗಳ ಮಹತ್ವದ ಬಗ್ಗೆ ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ಕೇವಲ ನೀತಿ ಅಥವಾ ಅನುಭವಗಳಿಗಾಗಿಯೇ ಅವುಗಳನ್ನು ಯಾರೂ ನೆನಪಿನಲ್ಲಿಟ್ಟುಳ್ಳುತ್ತಿರಲಿಲ್ಲ. ಉಕ್ತಿ ಚಮತ್ಕಾರ ಗಾದೆಗಳ ವಿಶೇಷತೆಗಳಲ್ಲಿ ಒಂದಾಗಿದೆ. ಪ್ರಾಸ, ಲಯ, ಅಲಂಕಾರ ಮೊದಲಾದ ಕಾವ್ಯ ಗುಣಗಳು ಇಲ್ಲಿ ಅಂತರ್ಗತವಾಗಿ ಬರುವುದು ಗಮನಾರ್ಹ. ಕಾಣದ ಊರಿಗೆ ನಾಲಗೆಯೇ ದಾರಿ ಎಂಬ ಗಾದೆಯಲ್ಲಿಯ ನಾಲಗೆಯೇ ದಾರಿ ಎನ್ನುವ ಉಕ್ತಿ ವಿಶೇಷ ನಮ್ಮ ಗಮನ ಸೆಳೆಯುತ್ತದೆ. ತಿಳಿದವರನ್ನು ಕೇಳಿ ತಿಳಿದುಕೊಂಡು ಹೋಗಲು ನಾಲಗೆಯೇ ದಾರಿ ತೋರಿಸಬೇಕಾಗುತ್ತದೆ. ನಾಲಗೆ ಹೇಗೆ ದಾರಿಯಾದೀತು? ಎಂದು ಮೊದಲು ಹೊಳೆಯುವ ವಿರೋದಾರ್ಥವನ್ನು ಪರಿಹರಿಸಿಕೊಂಡಾಗ ಅದರ ಸ್ವಾರಸ್ಯವೇನೆಂಬುದು ಮನಮುಟ್ಟುತ್ತದೆ. ಪನ್ನೀರಿನಂತಹ ಮಾತಿಗೆ ಕಣ್ಣೀರೇ ಬಹುಮಾನ– ವ್ಯಕ್ತಿಯೊಬ್ಬ ತನ್ನ ಬಗ್ಗೆ ತೋರಿದ ಸದ್ಭಾವನೆಗೆ, ಉದಾರ ನುಡಿಗಳಿಗೆ ಪ್ರತಿ ನಮನ ಸಲ್ಲಿಸುವುದೆಂದರೆ ಹೃದಯ ಮತ್ತು ಕಣ್ಣು ತುಂಬಿ ಬಂದ ಕೃತಜ್ಞತೆ ಸಲ್ಲಿಸುವುದೇ ಆಗಿದೆ. ಪನ್ನೀರು– ಕಣ್ಣೀರು ಹೋಲಿಕೆ ಕೂಡ ಇಲ್ಲಿ ಅನನ್ಯವಾಗಿದೆ.

ಗಾದೆಗಳಲ್ಲಿ ಎದ್ದುಕಾಣುವ ಪರಂಪರಾಗತ ನಡವಳಿಕೆ, ಸಾಮಾನ್ಯಜ್ಞಾನ ವಿಡಂಬನೆ, ಹಾಸ್ಯ ಹಾಗೂ ಗಾದೆ ಕಥೆಗಳನ್ನು ಸೋದಾಹರಣವಾಗಿ ನೋಡ ಬಹುದಾಗಿದೆ. ಸಂಪ್ರದಾಯ ಜನಜೀವನವನ್ನು ಬಂಧಿಸಿರುವ ಮಹಾ ಅಸ್ತ್ರವಾಗಿದೆ. ಹಲವಾರು ನಂಬಿಕೆಗಳು ರೂಢಿಗಳು, ವಿಧಿ ನಿಷೇಧಗಳು ಇಂದಿಗೂ ಜನಪದ ಜೀವನವನ್ನು ಆಳುತ್ತಿವೆ.

ನಿತ್ಯಜೀವನದ ಆಗುಹೋಗುಗಳನ್ನು ಅನುಭವಿಸುವುದರಿಂದಲೂ ಗಾದೆಗಳು ಒಡಮೂಡುತ್ತವೆ. ಇಂಥ ಗಾದೆಗಳಲ್ಲಿ ಪ್ರಪಂಚಜ್ಞಾನ, ಕಾವ್ಯಮಯ ಅಭಿವ್ಯಕ್ತಿಗಳು, ಸಮಾಜದ ರೀತಿ–ನೀತಿ, ಅವರ ಪ್ರಾಣಿ ವೈದ್ಯಗಳ ಬಗೆಗಿನ ತಿಳಿವಳಿಕೆ, ನಂಬಿಕೆ ಇವೆಲ್ಲ ತುಂಬಿಕೊಂಡಿರುತ್ತವೆ. ಉದಾಹರಣೆಗೆ; ದೂರದ ಬೆಟ್ಟ ನುಣ್ಣಗೆ ಹೊಳೆಯಲ್ಲಿ ಹುಣಸೇಹಣ್ಣು ತೊಳೆದಂತೆ ಬೆಣ್ಣೆಯಲ್ಲಿ ಕೂದಲು ತೆಗೆದಂತೆ, ರಾತ್ರಿಯೆಲ್ಲಾ ರಾಮಾಯಣ ಕೇಳಿ ರಾಮನಿಗೂ ಸೀತೆಗೂ ಏನು ಸಂಬಂಧ ಎಂದಂತೆ–ಹೀಗೆ

ಜನತೆಯ ಬದುಕಿನ ಬಹುಮುಖಗಳನ್ನು ಗಾದೆಗಳು ತೆರೆದಿಡುತ್ತವೆ.

ಸಂಸ್ಕೃತಿಯಲ್ಲಿ ಮತ್ತು ಜನರ ನಂಬಿಕೆ–ಆಚರಣೆಗಳಲ್ಲಿ ಆಗುವ ಬದಲಾವಣೆಗಳು ಗಾದೆಗಳ ಬಳಕೆಯ ಮೇಲೂ ಪ್ರಭಾವ ಬೀರುತ್ತವೆ. ಉದಾಹರಣೆಗೆ ನೂರು ವರ್ಷಗಳ ಹಿಂದೆ ದಿನನಿತ್ಯವೆಂಬಂತೆ ಬಳಕೆಯಾಗುತ್ತಿದ್ದ ಎಷ್ಟೋ ಗಾದೆಗಳು ಇಂದು ಬಳಕೆಯಾಗಲಾರವು. ಸಂವಿಧಾನವು ವಿಧಿಸಿರುವಂತೆ ಜಾತಿಜಾತಿಗಳ ನಡುವೆ ಭೇದವನ್ನು ಉಂಟುಮಾಡುವ ಅಥವಾ ಯಾವುದೇ ಜಾತಿಯನ್ನು ಅವಹೇಳನ ಮಾಡುವಂತಹ ಗಾದೆಗಳನ್ನು ಇಂದು ಬಳಸುವಂತಿಲ್ಲ. ಹಿಂದೆ ಗಾದೆಗಳು ರೂಪುಗೊಳ್ಳುವ ಕಾಲದಲ್ಲಿ ಅವುಗಳನ್ನು ಮೊದ;ಲು ಬಳಸಿದವರು ಯಾರನ್ನಾದರೂ ಕೀಳಾಗಿ ಕಾಣಬೇಕೆಂಬ ದುರುದ್ದೇಶವನ್ನು ಹೊಂದಿದ್ದರೋ ಅಥವಾ ಸಹಜವಾಗಿ ಅವರಿಗೆ ಅನಿಸಿದ್ದನ್ನು ಹೇಳಿದರೋ ಎಂಬುದು ಈಗ ಮುಖ್ಯವಲ್ಲ. ಏನೇ ಇದ್ದರೂ ಎಷ್ಟೋ ಗಾದೆಗಳು ವಿವಿಧ ನಿರ್ದಿಷ್ಟ ಜಾತಿಗಳನ್ನು ಕೀಳಾಗಿ ಕಾಣುವ ದೃಷ್ಟಿಕೋನವನ್ನು ಹೊಂದಿವೆ. ಹಾಗೆ ನೋಡಿದರೆ ಗಾದೆಗಳಿಂದ ಟೀಕೆಗೆ ಒಳಗಾಗದ ಜಾತಿಗಳೇ ಇಲ್ಲ ಎನ್ನಬಹುದು. ಆದರೆ ಅಂತಹ ಗಾದೆಗಳೆಲ್ಲ ಇಂದು ಮರೆಗೆ ಸರಿಯಬೇಕಿದೆ. ಎಲ್ಲ ಜಾತಿಗಳೂ ಘನತೆಯಿಂದ ಮತ್ತು ತಮ್ಮ ತಮ್ಮ ಅಸ್ಮಿತೆಯ ಪ್ರಜ್ಞೆಯೊಂದಿಗೆ ಬಾಳಬೇಕಿರುವುದರಿಂದ ಇದು ಅನಿವಾರ್ಯವಾಗಿದೆ. ಸಾರ್ವಜನಿಕವಾಗಿಯಂತೂ ಅಂತಹ ಗಾದೆಗಳು ಬಳಕೆಯಾಗುತ್ತಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಮಾತುಕತೆ–ಭಾಷಣಗಳಲ್ಲಿ ಅಷ್ಟೇ ಅಲ್ಲ, ಯಕ್ಷಗಾನ, ನಾಟಕ, ಸಿನೆಮಾ ಮುಂತಾದ ಕಲಾಪ್ರಕಾರಗಳಲ್ಲಿ ಕೂಡ ಇಂದು ಭಾಷೆಯನ್ನು ಅಲಂಕರಿಸಲು ಗಾದೆಗಳ ಬಳಕೆ ಕಡಿಮೆಯಾಗುತ್ತಲಿದೆ.

**ಪರಾಮರ್ಶನ ಗ್ರಂಥಗಳು**


1) ರಾಗೌ, ನಮ್ಮ ಗಾದೆಗಳು
2) ದೇ ಜವರೇಗೌಡ. ; ಜನಪದ ಅಧ್ಯಯನ
3) ಅಂಬಳಿಕೆ ಹಿರಿಯಣ್ಣ ; ಜಾನಪದ– ಕೆಲವು ವಿಚಾರಗಳು
4) ಅಂಬಳಿಕೆ ಹಿರಿಯಣ್ಣ ; ಜಾನಪದ ವಿವಕ್ಷೆ
5) ಸಿಂಪಿ ಲಿಂಗಣ್ಣ ; ಉತ್ತರಕರ್ನಾಟಕದ ಜಾನಪದ ಕಲೆಗಳು
6) ಜೀ. ಶಂ. ಪರಮಶಿವಯ್ಯ ; ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು


❖❖❖

# ‘ಕಥಾನಂತರ’
# ಹೊಸ ಕಾಲದ ಆಶಯಗಳನ್ನು ಹೊತ್ತ ಕಥಾಗುಚ್ಛ

**ಹನಮಂತಪ್ಪ ಬನ್ನಿ**
ಸಂಶೋಧನಾರ್ಥಿ
ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿ.ವಿ. ಜ್ಞಾನಭಾರತಿ, ಬೆಂಗಳೂರು–560056

ಪ್ರೊ. ನಟರಾಜ್ ಹುಳಿಯಾರ್ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿಗೈದಂತೆ ಸಣ್ಣ ಕಥೆಗಳಲ್ಲಿಯೂ ತಮ್ಮದೇ ಆದ ಕೃಷಿ ಮಾಡಿದ್ದಾರೆ, ಮಾಡುತ್ತಿದ್ದಾರೆ. ಈಗಾಗಲೇ ಮೂರು ಕಥಾ ಸಂಕಲನಗಳನ್ನು (ಮತ್ತೊಬ್ಬ ಸರ್ವಾಧಿಕಾರಿ, ಬಸವಲಿಂಗಪ್ಪನವರು ಮತ್ತು ಡೇವಿಡ್ ಸಾಹೇಬರು, ಮಾಯ ಕಿನ್ನರಿ) ಹೊರತಂದಿದ್ದಾರೆ. ಇವರ ನಾಲ್ಕನೇ ಕಥಾಸಂಕಲನ ‘ಕಥಾನಂತರ’. ಇದರಲ್ಲಿ ಎಂಟು ಕಥೆಗಳಿವೆ. ಇಲ್ಲಿಯ ಕಥೆಗಳಲ್ಲಿ ಅಕಾಡೆಮಿಕ್ ವ್ಯಕ್ತಿಯ ನಡೆ, ತೊಳಲಾಟ, ಭಯ ಮತ್ತು ಅಧಿಕಾರದ ದರ್ದುಗಳಿವೆ. ಹಾಗೆಯೇ ಆತನಿಗೆ ತಳುಕು ಹಾಕಿಕೊಂಡು ಸಾಮಾನ್ಯ ವರ್ಗದ ಕೌಟುಂಬಿಕ ಸಮಸ್ಯೆ ಹಾಗೂ ಹಳ್ಳಿಗಾಡಿನ ಪ್ರದೇಶದ ಜನಸಾಮಾನ್ಯರ ಸಾಮಾಜಿಕ ಚಿಂತನೆಗಳಿವೆ. ಇಲ್ಲಿಯ ಎಲ್ಲಾ ಕಥೆಗಳ ಸ್ಥಾಯಿ ಭಾವ ಮನುಷ್ಯ ಪ್ರೀತಿ. ಈ ಸಂಕಲನ ಕಥನತಂತ್ರ, ನಿರೂಪಣಾ ವಿಧಾನಗಳಿಂದ ಗಮನ ಸೆಳೆಯುತ್ತದೆ. ಹೆಚ್ಚು ಪಾತ್ರಗಳಿಲ್ಲ. ಇರುವ ಪಾತ್ರಗಳು ಅತಿಯಾದ ಆಡಂಬರದಿಂದ ಕೂಡಿಲ್ಲ. ಅತಿ ಭಾವುಕತೆ ಇಲ್ಲ. ಹಿಂಸೆ–ಕ್ರೂರತನದ ಕ್ಷುದ್ರ ಮನುಷ್ಯರಿಲ್ಲ. ಬದಲಿಗೆ, ಬದುಕಿಗೆ ವಿಶೇಷವಾಗಿ ಅಕಾಡೆಮಿಕ್ ಬದುಕಿಗೆ ಹತ್ತಿರವಾದ ವಾಸ್ತವದ ಪ್ರಜ್ಞೆಯನ್ನು ಅವು ಅನಾವರಣಗೊಳಿಸುತ್ತವೆ.

“1900 ರಿಂದ ಇಲ್ಲಿಯ ತನಕ ಕನ್ನಡದಲ್ಲಿ ವೈವಿಧ್ಯಮಯ ಸಣ್ಣ ಕಥೆಗಳು ಪ್ರಕಟವಾಗಿವೆ. ಇದೊಂದು ವೈಶಿಷ್ಟ್ಯವೇ ಸರಿ. ಇದು ನಡೆದು ಬಂದ ಹಾದಿಯಲ್ಲಿ ಎಷ್ಟೋ ಬದಲಾವಣೆಗಳು ಕಾಣಿಸಿವೆ. ನವೋದಯ ಕಾಲಘಟ್ಟದಲ್ಲಿ ರೋಮ್ಯಾಂಟಿಕ್ ಧೋರಣೆಗಳು ಗೋಚರವಾದವು. ಪ್ರಗತಿಶೀಲ ಪಂಥದಲ್ಲಿ ಮಾರ್ಕ್ಸ್‌ವಾದ ಸಾಮಾಜಿಕ ದೃಷ್ಟಿಕೋನವೇ ಪ್ರಮುಖವಾಯಿತು. ನವ್ಯ ಮಾರ್ಗದಲ್ಲಿ ಮನಶಾಸ್ತ್ರೀಯ ಹಿನ್ನೆಲೆಯ ಸಂಕೀರ್ಣ ಸಂಗತಿಗಳು ಮುನ್ನೆಲೆಗೆ ಬಂದವು. ಇದಕ್ಕೆ ತೀವ್ರ ಪ್ರತಿಕ್ರಿಯೆ ನೀಡಿದ ಹಾಗೂ ಪ್ರಗತಿಶೀಲಕ್ಕೆ ಪೂರಕವಾಗಿದ್ದ ದಲಿತ ಬಂಡಾಯದಲ್ಲಿ ಸಾಮಾಜಿಕ ಹಾಗೂ ಸಮಾಜದ ಪುನರ್ ನಿರ್ಮಾಣದ ಸಂಗತಿಗಳಿಗೆ ವಿಶೇಷ ಮಹತ್ವ ದೊರಕಿತು. ಆನಂತರವು ಸಣ್ಣಕಥೆ ಸೃಷ್ಟಿಯಾಯಿತಾದರೂ ಅದರ ದಿಕ್ಕೇ ಬದಲಾಯಿತು. ಈ ಹಾದಿಯಲ್ಲಿ ಯಾವುದೇ ಪಂಥ ಚಳುವಳಿಯಿಂದ ದೂರವಿದ್ದು ತಮ್ಮ ಪಾಡಿಗೆ ತಾವು ಬರೆದವರಿದ್ದಾರೆ. ಸಮಕಾಲೀನ ಬದುಕನ್ನು ಸೂಕ್ಷ್ಮ ನೆಲೆಯಲ್ಲಿ ವೀಕ್ಷಿಸಿ ಕಲಾತ್ಮಕತೆಯ ಎಚ್ಚರವನ್ನು ಇಟ್ಟುಕೊಂಡು ಕಥನವಾಗಿಸುವ ಸಮರ್ಥ ಕಥೆಗಾರರಿದ್ದಾರೆ. ಹಾಗಾಗಿ ಇವತ್ತಿನ ಬರಹಗಾರರು ತಮ್ಮ ಕಾಲದ ಸಮಸ್ಯೆಗಳಿಗೆ–ಸವಾಲುಗಳಿಗೆ ಮುಖಾಮುಖಿಯಾಗುತ್ತಿದ್ದಾರೆ.”[1]

ನಟರಾಜ ಹುಳಿಯಾರ್ ಮನುಷ್ಯಪರವಾದ ಚಿಂತನೆಯನ್ನು ಕತೆಗಳಲ್ಲಿ

ತಂದಿದ್ದಾರೆ. ಉದಾಹರಣೆಗೆ 'ಕಾಳವ್ವನ ಮೂಗು' ಕತೆಯಲ್ಲಿ ಬರುವ ಅಕ್ಷರ ಬಾರದ ಬಸಪ್ಪ ಮತ್ತು ಕಾಳವ್ವನನ್ನು ರಿಸರ್ಚ್ ಅಸಿಸ್ಟೆಂಟ್ ಆಗಿ ಸೇರಿಸಿದ್ದು ವಿಶೇಷವಾಗಿದೆ. ಇದರೊಂದಿಗೆ ಕಲಬುರಗಿ ಭಾಷೆಯನ್ನು ಬೆರೆಸಿ, ಅಚ್ಚುಕಟ್ಟಾಗಿ ಬಳಸಿ ಆ ಭಾಗದ ಜನಸಾಮಾನ್ಯರ ಬದುಕು ಹೇಗಿರುತ್ತದೆ ಎಂಬುದನ್ನು ಕಾಳವ್ವ ಮತ್ತು ಬಸಪ್ಪನವರ ಮಾತುಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಹಳ್ಳಿ ಜನ ಅನಕ್ಷರಸ್ಥರಾಗಿದ್ದರೂ ಅವರ ಜಾಣ್ಮೆ ಮತ್ತು ಬುದ್ಧಿ ಅಕ್ಷರಸ್ಥರಿಗಿಂತಲೂ ಕಡಿಮೆ ಇಲ್ಲ. ಹಾಗಾಗಿ ಅವರಿಗೆ ಸಿಗಬೇಕಾದ ವೇತನ ಸಿಗಲೇಬೇಕೆಂದು ರಾಮಕೃಷ್ಣ ಉಪಾಧ್ಯ ಇಪ್ಪತ್ತು ಸಾವಿರ ರೂಪಾಯಿ ಸಂಬಳ ಕೊಡಿಸಿದ್ದು ಕಥೆಯ ಘನತೆಯನ್ನು ಹೆಚ್ಚಿಸಿದೆ.

ಕಥೆ ಹೀಗಿದೆ : "ತನಗೆ ಏನೇನನ್ನೋ ಕಲಿಸುತ್ತಿರುವ ಬಸಪ್ಪ, ಕಾಳವ್ವ ಇಬ್ಬರಿಗೂ ತನ್ನ ರಿಸರ್ಚ್ ಮುಗಿಯುವ ತನಕ ಫೆಲೋಸಿಪ್ ಬರುವಂತೆ ಮಾಡಿ ಅವರ ಋಣ ತೀರಬೇಕೆನಿಸಿತು. ತಕ್ಷಣ ಲ್ಯಾಪ್‌ಟಾಪ್ ತೆಗೆದು, ಮುಂದಿನ ಐದು ವರ್ಷಗಳವರೆಗೆ ಅವರಿಬ್ಬರನ್ನೂ ರಿಸರ್ಚ್ ಅಸಿಸ್ಟೆಂಟ್‌ಗಳನ್ನಾಗಿ ನೇಮಿಸಿಕೊಳ್ಳಲು ಅನುಮತಿ ನೀಡಬೇಕೆಂದು ಯುನಿವರ್ಸಿಟಿಗೆ ಮೇಲ್ ಬರದೇಬಿಟ್ಟ. 'ಇಂಡಿಯಾ ನೈಜೀರಿಯಾದಂತ ದೇಶಗಳಲ್ಲಿ ವಿದೇಶಿ ಫಂಡುಗಳನ್ನು ಪಡೆಯುವ ಸಂಶೋಧಕರು ಹಳ್ಳಿಯ ಪ್ರತಿಭಾವಂತರನ್ನೆಲ್ಲ ಸೋರ್ಸುಗಳಾಗಿ ಬಳಸಿಕೊಂಡು, ಅವರಿಗೆ ಮೂರು ಕಾಸು ಕೊಟ್ಟು ತಾವು ಮಾತ್ರ ಲಕ್ಷಾಂತರ ರೂಪಾಯಿ ಪಡೆಯುತ್ತಿದ್ದಾರೆ; ಇಂತ ಕೆಟ್ಟ ಕಾಲದಲ್ಲಿ ನಮ್ಮಂತ ರಿಪ್ಯೂಟೆಡ್ ವಿಶ್ವವಿದ್ಯಾಲಯಗಳಾದರೂ ಎಥಿಕ್ಸ್ ಕಾಪಾಡಿಕೊಳ್ಳಬೇಕು; 'ಎಜುಕೇಟೆಡ್; 'ಇಲ್ಲಿಟರೇಟ್' ಎಂದು ಭೇದ-ಭಾವ ಮಾಡದೆ ಸೋರ್ಸ್‌ಗಳಿಗೆ ಸಮಾನವಾಗಿ ಫೆಲೋಶಿಪ್ ಕೊಡಬೇಕು' ಎಂದು ಹೊಸ ಡೀನ್ ವಿಲ್ಸನ್ ವಾದಿಸುತ್ತಿದ್ದರು. ವಿಶ್ವವಿದ್ಯಾಲಯವೂ ಅವರ ವಾದವನ್ನು ಒಪ್ಪಿ, ಹಳೆಯ ನಿಯಮಗಳನ್ನು ಬದಲಿಸಿತ್ತು. ಹೀಗಾಗಿ 'ಬಸಪ್ಪ ಹಾಗೂ ಕಾಳವ್ವ ಇಬ್ಬರನ್ನೂ ಮುಂದಿನ ಮೂರು ವರ್ಷಗಳವರೆಗೂ ರಿಸರ್ಚ್ ಅಸಿಸ್ಟೆಂಟ್‌ಗಳನ್ನಾಗಿ ನೇಮಿಸಿಕೊಳ್ಳಬಹುದು; ಅವರಿಬ್ಬರೂ ಪ್ರತಿ ತಿಂಗಳು ಇಂಡಿಯನ್ ಕರೆನ್ಸಿಯ ತಲಾ ಇಪ್ಪತ್ತು ಸಾವಿರ ರೂಪಾಯಿಗಳ ಫೆಲೋಶಿಪ್ ಪಡೆಯಬಹುದು' ಎಂಬ ಆರ್ಡರ್ ಬೆಳಿಗ್ಗೆ ಉಪಾಧ್ಯ ಏಳುವಷ್ಟರಲ್ಲಿ ಬಂದಿತ್ತು."[2] ಈ ಮಾತುಗಳೇ ಲೇಖಕರ ಮನುಷ್ಯ ಪ್ರೀತಿಯನ್ನು ತೋರಿಸಿಕೊಡುತ್ತದೆ.

'ತಯಾರಿ' ಕತೆಯಲ್ಲಿ ಅಕಾಡೆಮಿಷಿಯನ್ ಆಗಿ ಜಯರಾಂ ಅನುಭವಿಸುವ ತೊಳಲಾಟ, ಭಯ, ಸುಖಾಸುಮ್ಮನೆ ಸಹೋದ್ಯೋಗಿಗಳು ನೀಡುವ ಕಿರುಕುಳ, ಜಯರಾಂನ ಏಳ್ಗೆಯನ್ನು ತಮ್ಮ ಅವಮಾನವೆಂದು ಭಾವಿಸುವ ಭಾವನೆ, ಇತರ ವಿಜ್ಞಾನಿಗಳು ಹೇಗಾದರೂ ಮಾಡಿ ಅವನನ್ನು ಇಲ್ಲಿಂದ ಓಡಿಸಿ ಬಿಡಬೇಕೆಂಬ ಹಠ, ಜಯರಾಂನಿಗೆ ಸಿಗುವ ಸೀನಿಯರ್ ಸೈಂಟಿಸ್ಟ್ ಪ್ರಮೋಷನ್ ತಪ್ಪಿಸಲೆತ್ನಿಸುವ ಕಾಣದ ಕೈಗಳು ಇವೆಲ್ಲವೂ ಅಕಾಡೆಮಿಕ್ ವಲಯದ ಕೀಳು ಪ್ರವೃತ್ತಿಯನ್ನು ಚಿತ್ರಿಸುತ್ತವೆ. ದೊಡ್ಡ ಸ್ಥಾನದಲ್ಲಿದ್ದೇವೆ ಎಂದುಕೊಂಡವರ ಸಣ್ಣತನವನ್ನು ಈ ಕಥೆ ಸಲೀಸಾಗಿ ಬಿಚ್ಚಿಡುತ್ತದೆ. ಅಂದರೆ ಈ ಕಥೆ ಮಾನವೀಯ ಸಂಬಂಧದ ಹುಡುಕಾಟ ನಡೆಸಿ, ಮನುಷ್ಯನ ಆದರ್ಶಗಳೇನು ಎಂಬುದನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ.

ಸಂಕಲನದ ಎಲ್ಲ ಕಥೆಗಳನ್ನು ಓದಿದಾಗ ನಟರಾಜ್ ಹುಳಿಯಾರ್‌ರವರು ನವ್ಯ

ಸಣ್ಣ ಕಥೆಯ ಸಾಂದ್ರತೆ ಮತ್ತು ಕಲೆಗಾರಿಕೆಯನ್ನು ರೂಢಿಸಿಕೊಂಡಿರುವಂತೆ ಕಾಣುತ್ತದೆ. ಅದಕ್ಕೆ ಕಾರಣ ಲಂಕೇಶ್, ತೇಜಸ್ವಿ, ಅನಂತಮೂರ್ತಿ ಮುಂತಾದವರಿರಬಹುದು. 'ಇವರು ತಮ್ಮ ಕಾಲದ ಮನ್ವಂತರಗಳನ್ನ ಅರಗಿಸಿಕೊಂಡು ಒಂದೇ ಓದಿಗೆ ಬೀಳದೆ ಸಣ್ಣ ಕಥೆಯ ಪ್ರಕಾರವನ್ನು ಬೆಳೆಸಿಕೊಂಡು ಬಂದವರು'.[3] ನಟರಾಜ್ ಹುಳಿಯಾರರ ಕಥೆಗಳ ಹಿಂದೆ ಈ ಚೈತನ್ಯಶೀಲ ಪರಂಪರೆ ಇತ್ತು ಎನ್ನುವುದು ಮರೆಯುವಂತಿಲ್ಲ. ಇಂಥ ಪರಂಪರೆಯ ಮಧ್ಯೆ ಬೆಳೆದ ನಟರಾಜರು ತಮ್ಮ ಸ್ವಂತಿಕೆಯನ್ನು ಹುಡುಕಿಕೊಂಡದ್ದು ಅವರ ವೈಶಿಷ್ಟ್ಯ. ಇವರ ಕಥೆಗಳಲ್ಲಿ ಮಧ್ಯಮ ವರ್ಗದ ಬದುಕನ್ನು ಚಿತ್ರಿಸಲು ಮುಂದಾದರೂ, ಸಾಮಾಜಿಕ ಅಸಮಾನತೆಯನ್ನು ಚಿತ್ರಿಸಿದರಾದರೂ ಇವರ ವಿಶೇಷ ಗಮನವಿರುವುದು ಅಕಾಡೆಮಿಕ್ ವಲಯದತ್ತ.

ಕತೆಗಾರ/ ನಿರೂಪಕ ತನ್ನ ವೃತ್ತಿ ಬದುಕಿಗೆ ವಾಪಸ್ಸು ಹೋಗಿ ಬರೆಯುತ್ತಿದ್ದಾನೆ ಎಂದೆನಿಸುತ್ತದೆ. 'ನವ್ಯದ ಹಲವಾರು ಕಥೆಗಳಲ್ಲಿ ಬಾಲ್ಯದ ದಟ್ಟವಾದ ವಿವರಗಳ ಹಿನ್ನೆಲೆಯಲ್ಲಿ ಜೀವನ ಚಿತ್ರತವಾದರೂ ಅದನ್ನು ಈಗ ಗ್ರಹಿಸುತ್ತಿರುವ ಸಂವೇದನೆ ಅದರಿಂದ ಹೊರಬಂದು ಕಥೆಗಾರನದಾಗಿರುತ್ತದೆ. ಕೆಲವೊಮ್ಮೆ ಕಥೆ ತಾತ್ವಿಕತೆ ಕಥೆ ಒಳಗೊಳ್ಳುವ ಅನುಭವ ಲೋಕದಿಂದಲೇ ಬಂದಿದೆ ಎನಿಸುವುದಿಲ್ಲ.'[4] ಆದರೆ ಅಂತಹ ತೊಡಕು ಈ ಕಥಾಸಂಕಲನದ ಕಥೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಉದಾಹರಣೆಗೆ 'ಇತಿಹಾಸ ಚಕ್ರದ ಎದುರು' ಕಥೆಯಲ್ಲಿ ಬರುವ ಸ್ವಾಭಾವಿಕ ಮಾತುಗಳೇ ಇದಕ್ಕೆ ಸಾಕ್ಷಿ. ಅದು ಹೀಗಿದೆ:– '..... ಕಾರಿಡಾರಿನಲ್ಲೇ ಕಾಯುತ್ತಿದ್ದ ಗೈಡು, 'ಗೊತ್ತಾಯ್ತಪ್ಪಾ! ಥೂ ಏನ್ ದರಿದ್ರ ನನ್ಮಕ್ಳಯ್ಯಾ ಇವರೆಲ್ಲ! ಏನ್ ಮಾಡ್ತೀಯ' ಅಂದ. '...ಅಲ್ಲಾ ಸರ್. ಅಷ್ಟು ದೊಡ್ಡ ರೈಟರಂತೆ! ಅವರ ಮುಂದೆ ನಾನ್ಯಾವ ತೊಪ್ಪಲು ಸಾರ್! ಇದ್ಯಾಕೆ ಇವರೆಲ್ಲ ಹಿಂಗೆ ಪತರುಗುಡ್ತಾ ಇದಾರೆ! ಅವರ ಮೆಟೀರಿಯಲ್ ಇಟ್ಕೊಂಡು ಅವರು ಬರೀತಾರೆ! ನನ್ನ ಮೆಟೀರಿಯಲ್ ಇಟ್ಕೊಂಡು ನಾನು ಬರೀತೀನಿ! ನಿಮಗೇ ತೋರಿಸಿದೆನಲ್ಲ ಸಾರ್? ನಾನು ಅಥೆಂಟಿಕ್ ಡೀಟೈಲ್ಸ್ ಇಟ್ಕೊಂಡೇ ಬರೆದಿದ್ದೀನಲ್ಲ ಸಾರ್!' 'ಅದೇ ಕಣಲೇ ಈ ನನ್ಮಕ್ಕಳ ಸಮಸ್ಯೆ! ರಿಸರ್ಚರ್ ಮಾಡಿದ್ದನ್ನ ಗೈಡ್ ತಲೆಗೆ ಕಟ್ಕೋಕೆ ನೋಡ್ತಿರ್ತಾರೆ!'[5] ಈ ರೀತಿಯ ಮಾತುಗಳು ಸಹಜವಾಗಿ, ಸುಲಭವಾಗಿ ಬರುವ ಮಾತುಗಳಲ್ಲ. ಬದಲಿಗೆ, ಅನುಭವ ಲೋಕದ ಮೂಸೆಯಿಂದ ಮಾತ್ರ ಹೊರಡಲು ಸಾಧ್ಯ. ಇಲ್ಲಿ ಆದರ್ಶವಾದಿಗಳು, ನೀತಿಪರವಾದ ವ್ಯಕ್ತಿಗಳು, ಮುಗ್ಧರು, ಜವಾಬ್ದಾರಿಯಿಂದ, ನೈತಿಕ ಬಲದಿಂದ ನಡೆದುಕೊಂಡರೆ ಸ್ವಾರ್ಥ ಹಾಗೂ ದೌರ್ಬಲ್ಯಗಳಿಂದಾಗಿ ದುಷ್ಟರಾಗುವವರನ್ನು ಸರಿ ಮಾಡಬಹುದು ಎಂದು ನಂಬಿದ ಪಾತ್ರಗಳೆ ಅಧಿಕ. ನಮ್ಮ ತಿಳುವಳಿಕೆ, ನಮ್ಮ ಕ್ರಿಯೆಗಳು, ಮನುಷ್ಯ ಸ್ವಭಾವದ ಅನಿರೀಕ್ಷಿತವಾದ ಗೋಜುಗಳು ಇವೆಲ್ಲವುಗಳ ಸೀಮಿತತೆಯ ಬಗ್ಗೆ 'ತಯಾರಿ', 'ಇತಿಹಾಸ ಚಕ್ರದ ಎದುರು', 'ಒಂದು ಚೋಟಾ ಬ್ರೇಕ್ ನಂತರ' ಕಥೆಗಳು ಸ್ಪಷ್ಟವಾಗಿ ಚಿತ್ರಿಸುತ್ತವೆ.

ಜಾತಿಪದ್ಧತಿಯಿಂದಾಗಿ ಬೇರೆ ಧರ್ಮಕ್ಕೆ ಸೇರಿದ ಖುಶ್ವಂತ್ ಸಿಂಗ್‌ನ ಕಳವಳವನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ' ಕಥೆ ಚಿತ್ರಿಸಿದರೆ, ಸಮಾಜದಲ್ಲಿ ಭ್ರಷ್ಟಾಚಾರ ಎನ್ನುವುದು ಎಷ್ಟರಮಟ್ಟಿಗೆ ಆಳವಾಗಿ ಬೇರೂರಿದೆ ಎಂಬುದನ್ನು 'ಪ್ರಭುದೇವಸ್ವಾಮಿಗಳು ಕನಸಿನಲ್ಲಿ ಬಂದು' ಎನ್ನುವ ಕಥೆ ಚಿತ್ರಿಸುತ್ತದೆ. ಸಾಮಾಜಿಕ ವಲಯದ ಹಿಂಸೆ, ಪ್ರಕ್ಷುಬ್ಧತೆ, ಇಲ್ಲವೇ ಶೋಷಣೆಯ ರೂಪಗಳನ್ನು

ಒಂದು ಸಂವೇದನೆಯ ಚೌಕಟ್ಟಿನಲ್ಲಿ ಅಡಕಗೊಳಿಸಿ, ನಮ್ಮ ದೈನಂದಿನ ಲೋಕದ ಅನುಭವದ ಜೊತೆಗೆ ತಾಳೆಹಾಕಿ ನೋಡುವ ಹಾಗೂ ಒರೆಗೆ ಹಚ್ಚಿ ನೋಡುವ ಕೆಲಸ ಈ ಎರಡೂ ಕಥೆಗಳಲ್ಲಿ ನಡೆದಿದೆ. ಸಮಾಜದಲ್ಲಿ ಏರ್ಪಡುವ ಅನುಭವ, ನೋವು, ಸಂಕಟ, ಕ್ರೌರ್ಯ ಮತ್ತು ಸಂವೇದನಾ ಪೂರ್ಣ ತಿಳುವಳಿಕೆ ಹೆಚ್ಚು ತೀವ್ರವಾಗಿರುತ್ತದೆ. ಸಾಂದ್ರವಾಗಿರುತ್ತದೆ. ಮತ್ತು ಅಷ್ಟೇ ದಟ್ಟವಾಗಿರುತ್ತದೆ. ಎರಡೂ ಕಥೆಗಳು ಇಂತಹ ತೀವ್ರ ಭಾವಕ್ಕೆ ಸಾಕ್ಷಿಯಾಗಿರುವುದನ್ನು ಒಂದು ನೆಲೆಯಲ್ಲಿ ನಾವು ನೋಡಬಹುದು. ಸಾಮಾಜಿಕ ಐಕ್ಯತೆ ಹಾಗೂ ಸಮಾನತೆ ಹದಗೆಡುವುದಕ್ಕೆ ಈ ನಿಲುವುಗಳು ಹೇಗೆ ಪರಿಣಾಮ ಬೀರಿವೆ ಎಂಬುದನ್ನು ಈ ಕಥೆಗಳಲ್ಲಿ ಕಾಣುತ್ತೇವೆ. ಅಂದರೆ ರೋಗಗ್ರಸ್ತ ಮನಸ್ಸುಗಳು ರೂಪಗೊಳ್ಳುವ ಬಗೆಗಳ ಹಿಂದಿನ ಹುನ್ನಾರವನ್ನು ಅತ್ಯಂತ ನಿಚ್ಚಳವಾಗಿ ಕಾಣಿಸುತ್ತವೆ. ರೋಗಗ್ರಸ್ತ ಮನಸ್ಸಿನ ಅಂತರಾಳದಲ್ಲಿ ಅಡಗಿರುವ ಅಧಿಕಾರ ಕೇಂದ್ರೀತ ವಿನ್ಯಾಸಗಳನ್ನು ಧ್ವಂಸಗೊಳಿಸುವ ಇರಾದೆಯನ್ನು ಈ ಕಥೆಗಳು ಹೊಂದಿವೆ.

'ಪ್ರಸ್ತುತ ದಿನಮಾನಗಳಲ್ಲಿ ಆಗುತ್ತಿರುವ ಪಲ್ಲಟಗಳು ಹಲವಾರು. ಇದಕ್ಕೆ ಲೋಕಗ್ರಹಿಕೆಯಲ್ಲಿ ಆದ ಬದಲಾವಣೆಗಳು ಕಾರಣವಾಗಿರಬಹುದು. ಆದರೆ ನಿರ್ದಿಷ್ಟ ಲೋಕಗ್ರಹಿಕೆಯ ಕ್ರಮಕ್ಕೆ ಬದಲಾಗಿ ಬಹುಮಾದರಿಯ ಕಥನ ಕ್ರಮಗಳನ್ನು ಅನುಸರಿಸುತ್ತಿರುವುದೂ ಗೋಚರವಾಗುವ ಅಂಶವಾಗಿದೆ. ಆ ಮೂಲಕ ಸಾಹಿತ್ಯದ ಅನನ್ಯತೆಯನ್ನು ಕಾಪಾಡಿಕೊಳ್ಳುವ ಅಗತ್ಯ ಮತ್ತು ಆತುರ ಕಥೆಗಾರರಲ್ಲಿ ಕಾಣುವ ಮಹತ್ವದ ಗುಣವಾಗಿದೆ'.[6] ಇಂತಹ ಗುಣವನ್ನು ಲೇಖಕರು/ ನಿರೂಪಕರು ಸ್ತ್ರೀ ಪಾತ್ರಗಳಲ್ಲಿ ತಂದಿದ್ದಾರೆ. ಏನೆಂದರೆ, 'ಕಾಳವ್ವನ ಮೂಗು' ಕಥೆಯಲ್ಲಿ ಬರುವ ಕಾಳವ್ವ ಮತ್ತು 'ಒಂದು ಚೋಟಾ ಬ್ರೇಕ್ ನಂತರ' ಕಥೆಯಲ್ಲಿ ಬರುವ ಮಲ್ಲಿಕಾ ಈ ಪಾತ್ರಗಳನ್ನು ಸಂಪ್ರದಾಯದ ಚೌಕಟ್ಟಿನೊಳಗೆ ಚಿತ್ರಿಸಿದಂತಾಗಲಿ, ಯಜಮಾನಿಕೆಯ ಭಯದಲ್ಲಿ ಮಾತನಾಡಿದಂತಾಗಲಿ, ಎಲ್ಲಿಯೂ ಕಾಣುವದೇ ಇಲ್ಲ. ಏಕೆಂದರೆ ಬಸಪ್ಪ ತನ್ನ ಹೆಂಡತಿಯ ಅನಾದರವನ್ನು ಉಪಾಧ್ಯನ ಬಳಿ ಹೇಳುವಾಗ ಅದು ದೊಡ್ಡ ಸಂಗತಿಯೇ ಅಲ್ಲ ಎನ್ನುವ ರೀತಿಯಲ್ಲಿ ಮಾತನಾಡುತ್ತಾನೆ. ಇದರಿಂದ ಕಥೆಯಲ್ಲಿ ಗಂಡಿನಷ್ಟೇ ಹೆಣ್ಣಿಗೂ ಸ್ವಾತಂತ್ರ್ಯ ಇದೆ ಎಂಬ ಅಂಶ ಕಂಡುಬರುತ್ತದೆ.

ಒಟ್ಟಾರೆಯಾಗಿ ಕನ್ನಡದ ಬಹುಪಾಲು ಕತೆಗಾರರು ಮನುಷ್ಯ ಜೀವನದ ಕಾಮ–ಪ್ರೇಮ, ರಾಗ–ದ್ವೇಷ, ಜಾತಿ–ಧರ್ಮ ಮುಂತಾದ ಸಮಸ್ಯೆಗಳಲ್ಲಿ ತೊಡಗಿಕೊಂಡಿದ್ದರೆ, ನಟರಾಜ್ ಹುಳಿಯಾರ್ ಮಾತ್ರ ಇದಕ್ಕೂ ಮೀರಿ ಬೇರೊಂದು ಪ್ರಪಂಚವನ್ನು ಪರಿಚಯಿಸಿದ್ದಾರೆ. "ಲೇಖಕರು ಪ್ರತಿಯೊಂದು ಕತೆಯಲ್ಲೂ ಭಿನ್ನ ವಸ್ತುಗಳನ್ನಿಟ್ಟುಕೊಂಡು ಬದುಕಿನ ಅನೇಕ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತಲೇ ಅವುಗಳಿಗೆ ನೇರವಾಗಿಯೋ ಅಥವಾ ಪರೋಕ್ಷವಾಗಿಯೋ ಪರಿಹಾರಗಳ ಸುಳಿವುಗಳನ್ನೂ ನೀಡಿರುವುದು ಕಥನಗಾರಿಕೆಯಲ್ಲಿ ವಿಶೇಷವಾಗಿ ಕಾಣುತ್ತದೆ."[7] ಒಟ್ಟಾರೆಯಾಗಿ ಸಂಕಲನದ ಎಂಟೂ ಕಥೆಗಳ ಪಾತ್ರಚಿತ್ರಣ, ವಸ್ತು–ವಿಷಯಗಳಿಂದ ಪ್ರತಿಯೊಂದು ಕಥೆ ಓದಿಸಿಕೊಂಡು ಹೋಗುತ್ತವೆ.

**ಕೊನೆ ಟಿಪ್ಪಣಿಗಳು**

1. ಜಿ.ಆರ್. ತಿಪ್ಪೇಸ್ವಾಮಿ: 'ಸಣ್ಣಕಥೆ', ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2022, ಪು. 298.

2. ನಟರಾಜ್ ಹುಳಿಯಾರ್: 'ಕಥಾನಂತರ', ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ, 2023, ಪು. 26,27.
3. ಜಿ.ಆರ್. ತಿಪ್ಪೇಸ್ವಾಮಿ : 'ಸಣ್ಣಕಥೆ', ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2022, ಪು. 45
4. ಡಾ. ರಾಜಶೇಖರ್ ನೀರಮಾನ್ವಿ: 'ಸಮಗ್ರ ಕಥೆಗಳು', ಗಾಂಧಿನಗರ್, ಬಳ್ಳಾರಿ, ಮೊದಲ ಮುದ್ರಣ – 2012, ಮುನ್ನುಡಿ, ಪು. 04.
5 ನಟರಾಜ್ ಹುಳಿಯಾರ್: 'ಕಥಾನಂತರ', ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ, 2023, ಪು. 41.
6. ಜಿ.ಆರ್. ತಿಪ್ಪೇಸ್ವಾಮಿ : 'ಸಣ್ಣಕಥೆ', ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2022, ಪು. 301.
7. ಟಿ.ಡಿ. ರಾಜಣ್ಣ ತಗ್ಗಿ: 'ಸಿರಿಗನ್ನಡಿ', ಶ್ರೀ ಅನ್ನಪೂರ್ಣ ಪಬ್ಲಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಭಾರತಿಪುರ, ನೆಲಮಂಗಲ, ಬೆಂಗಳೂರು, 2021, ಪು.247.

**ಪರಾಮರ್ಶನ ಗ್ರಂಥಗಳು**

1. ಜಿ.ಆರ್. ತಿಪ್ಪೇಸ್ವಾಮಿ: 'ಸಣ್ಣಕಥೆ', ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, 2022.
2. ಟಿ. ಡಿ. ರಾಜಣ್ಣ ತಗ್ಗಿ: 'ಸಿರಿಗನ್ನಡಿ', ಶ್ರೀ ಅನ್ನಪೂರ್ಣ ಪಬ್ಲಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಭಾರತಿಪುರ, ನೆಲಮಂಗಲ, ಬೆಂಗಳೂರು, 2021.
3. ಶತಮಾನದ ಕನ್ನಡ ಸಾಹಿತ್ಯ ಸಂಪುಟ–1; ಸಂ. ಜಿ.ಎಚ್. ನಾಯಕ, ಅಭಿನವ ಪ್ರಕಾಶನ, ಮಾರೇನಹಳ್ಳಿ, ಬೆಂಗಳೂರು, ಪರಿಷ್ಕೃತ ಮೊದಲ ಮುದ್ರಣ–2021.
4. ವಿಮರ್ಶೆಯ ಪರಿಭಾಷೆ; ಓ.ಎಲ್. ನಾಗಭೂಷಣ ಸ್ವಾಮಿ, ಅಭಿನವ ಪ್ರಕಾಶನ, ಮಾರೇನಹಳ್ಳಿ, ಬೆಂಗಳೂರು, ಒಂಬತ್ತನೇ ಮುದ್ರಣ–2017.
5. ಸ್ತ್ರೀವಾದಿ ಚಿಂತನೆ; (ಪ್ರ.ಸಂ) ನಾಡೋಜ ಡಾ. ಮನು ಬಳಿಗಾರ್, (ಸಂ) ಡಾ. ಮಲ್ಲಿಕಾ ಘಂಟಿ, ಕನ್ನಡ ಸಾಹಿತ್ಯ ಪರಿಷತ್, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು. 2020.
6. ಸಾಹಿತ್ಯ ವಿಮರ್ಶೆ; (ಮಾ. ಸಂ) ಆರ್. ತಾರಿಣಿ ಶುಭದಾಯಿನಿ, (ಸಂ) ಸುಮಿತ್ರಾಬಾಯಿ ಬಿ. ಎನ್. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು 560056, 2019.

❖❖❖

**RNI Reg No. : KARKAN /2012/49251**

**CHINTHANA BAYALU** **A Peer Reviewed Journal** **ISSN 2278-2192**
**Kannada Quarterly, Volume 12, Issue 4, April-June 2024**
Included in UGC - CARE List
Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574 219
chinthanabayalu@gmail.com
**www.chinthanabayalu.in**
Printed at
**Aakrithi Prints**
Light House Hill Road, Mangaluru - 575 001

**Pages : 128**

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ಣಾಟಕ ಬ್ಯಾಂಕ್**

ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC : KARB0000071**

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.co